ಗುರುವಾರ, ಜುಲೈ 14, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗುರು ಪೂರ್ಣಿಮಾ

ಬೆಂಗಳೂರಿನ ಮಹಾ ಬೋಧಿ ಸೊಸೈಟಿಯಲ್ಲಿ ಬುಧವಾರ ಗುರು ಪೂರ್ಣಿಮಾ ನಿಮಿತ್ತ ಬೌದ್ಧ ಸನ್ಯಾಸಿಯೊಬ್ಬರು ಬುದ್ಧನಿಗೆ ನಮನ ಸಲ್ಲಿಸಿದರು

18–59 ವರ್ಷ ವಯಸ್ಸಿನವರಿಗೆ ಮುನ್ನೆಚ್ಚರಿಕೆ ಡೋಸ್ ಉಚಿತ

ನವದೆಹಲಿ: ಜುಲೈ 15ರಿಂದ ಪ್ರಾರಂಭವಾಗುವ 75 ದಿನಗಳ ವಿಶೇಷ ಅಭಿಯಾನದಲ್ಲಿ ಎಲ್ಲ ಸರ್ಕಾರಿ ಲಸಿಕಾ ಕೇಂದ್ರಗಳಲ್ಲಿ 18ರಿಂದ 59 ವರ್ಷ ವಯಸ್ಸಿನವರಿಗೆ ಉಚಿತವಾಗಿ ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆಯ ಡೋಸ್‌ಗಳನ್ನು ನೀಡಲಾಗುವುದು ಎಂದು ಅಧಿಕೃತ ಮೂಲಗಳು ಬುಧವಾರ ತಿಳಿಸಿವೆ.

‘ಮುನ್ನೆಚ್ಚರಿಕೆ ಡೋಸ್ ಅನ್ನು ಹೆಚ್ಚಿನ ಜನರಿಗೆ ನೀಡುವ ಗುರಿಯನ್ನು ಈ ಅಭಿಯಾನವು ಹೊಂದಿದೆ. ಸ್ವಾತಂತ್ರ್ಯದ 75ನೇ ವರ್ಷದ ನಿಮಿತ್ತ ಸರ್ಕಾರವು ಆಚರಿಸಲಿರುವ ಅಮೃತ ಮಹೋತ್ಸವದ ಭಾಗವಾಗಿ ಈ ಅಭಿಯಾನ ನಡೆಯಲಿದೆ’ ಎಂದೂ ಮೂಲಗಳು ಹೇಳಿವೆ.

‘ದೇಶದ ಒಟ್ಟು ಜನಸಂಖ್ಯೆಯಲ್ಲಿ ಬಹುಪಾಲು ಜನರು ಒಂಬತ್ತು ತಿಂಗಳ ಹಿಂದೆಯೇ ಕೋವಿಡ್‌ನ ಎರಡನೇ ಡೋಸ್ ಪಡೆದಿದ್ದಾರೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಮತ್ತು ಇತರ ಅಂತರ ರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳ ಪ್ರಕಾರ, ಕೋವಿಡ್ ಲಸಿಕೆಯ ಮೊದಲ ಮತ್ತು ಎರಡನೇ ಡೋಸ್ ಪಡೆದ ಆರು ತಿಂಗಳ ನಂತರ ಪ್ರತಿಕಾಯಗಳ ಮಟ್ಟವು ಕಡಿಮೆಯಾಗುತ್ತದೆ. ಬೂಸ್ಟರ್ ಡೋಸ್ ನೀಡುವುದರಿಂದ ಪ್ರತಿಕಾಯಗಳ ಮಟ್ಟವು ಹೆಚ್ಚಾಗಲಿದೆ’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಇದುವರೆಗೆ 18ರಿಂದ 59 ವರ್ಷ ವಯೋಮಾನದ ಒಟ್ಟು 77 ಕೋಟಿ ಜನಸಂಖ್ಯೆಯಲ್ಲಿ ಶೇ 1ಕ್ಕಿಂತ ಕಡಿಮೆ ಜನರಿಗೆ ಮಾತ್ರ ಮುನ್ನೆಚ್ಚರಿಕೆಯ ಡೋಸ್‌ಗಳನ್ನು ನೀಡಲಾಗಿದೆ. ಆದಾಗ್ಯೂ, 60 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ವಯಸ್ಸಿನ ಅಂದಾಜು 16 ಕೋಟಿ ಜನಸಂಖ್ಯೆಯಲ್ಲಿ ಶೇ 26ರಷ್ಟು ಜನರು ಬೂಸ್ಟರ್ ಡೋಸ್‌ಗಳನ್ನು ಪಡೆದಿದ್ದಾರೆ. ಇದರಲ್ಲಿ ಆರೋಗ್ಯ ಸಿಬ್ಬಂದಿ ಮತ್ತು ಇತರ ಮುಂಚೂಣಿ ಕಾರ್ಯಕರ್ತರು ಸೇರಿದ್ದಾರೆ.

ಬಾಡಿಗೆ ಶಿಕ್ಷಕರ ದಂಧೆಗೆ ಕಡಿವಾಣ: ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಪ್ರಸ್ತಾಪ

ಶಾಲೆಗಳಲ್ಲಿ ಶಿಕ್ಷಕರ ಭಾವಚಿತ್ರ

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕರ ವಿವರ ಸಹಿತ ಭಾವಚಿತ್ರಗಳನ್ನು ಆಯಾ ಶಾಲೆಯಲ್ಲಿ ಪ್ರದರ್ಶಿಸಲು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಕೆಲವು ಶಿಕ್ಷಕರು ಸರ್ಕಾರದಿಂದ ಉತ್ತಮ ವೇತನ ಪಡೆದರೂ, ತರಗತಿಗಳಿಗೆ ಹಾಜರಾಗದೆ ತಮಗೆ ಸಿಗುವ ವೇತನದಲ್ಲಿ ಸ್ವಲ್ಪ ಭಾಗವನ್ನು ನಿರೋದ್ಯೋಗಿ ಪ್ರತಿಭಾವಂತರಿಗೆ ನೀಡಿ (ಬಾಡಿಗೆ ಶಿಕ್ಷಕರು) ಮಕ್ಕಳಿಗೆ ಪಾಠ ಮಾಡಿಸುತ್ತಿರುವ ಹಲವು ಪ್ರಕರಣಗಳು ಪತ್ತೆಯಾಗಿವೆ. ಇದಾದ ಬಳಿಕ ಕೇಂದ್ರ ಸರ್ಕಾರ ಇಂತಹ ನಿರ್ಧಾರ ತೆಗೆದುಕೊಂಡಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೆಹಲಿಯಲ್ಲಿ ಇತ್ತೀಚೆಗೆ ನಡೆದ ವಿವಿಧ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ಇನ್‌ಇಪಿ ಅನುಷ್ಠಾನ ಕುರಿತು ನಡೆದ ಚರ್ಚೆ ನಡೆಯಿತು. ಈ ಸಭೆಯಲ್ಲಿ ಶಿಕ್ಷಕರ ನಿರಂತರ ಗೈರು ಹಾಜರಿ, ಬಾಡಿಗೆ ಶಿಕ್ಷಕರ ನೆರವಿನ ವಿಷಯವೂ ಪ್ರಸ್ತಾಪವಾಗಿದೆ. ಶಾಲೆಗಳಿಗೆ ನೇಮಕವಾದ ಶಿಕ್ಷಕರನ್ನು ಸ್ಥಳೀಯ ಪೋಷಕರು ಗುರುತಿಸಲು, ಅವರ ನಿರಂತರ ಹಾಜರಾತಿ ಖಚಿತಪಡಿಸಿಕೊಳ್ಳಲು ಪ್ರತಿ ಶಿಕ್ಷಕರ ಭಾವಚಿತ್ರಗಳನ್ನು ಹಾಕಬೇಕೆಂಬ ನಿರ್ಧಾರಕ್ಕೆ ಬರಲಾಗಿದೆ.

ದೇಶದ ಸರ್ಕಾರಿ, ಅನುದಾನಿತ ಶಾಲೆಗಳಲ್ಲಿ 9.68 ಕೋಟಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರಲ್ಲಿ ಶೇ 8ರಿಂದ 10ರಷ್ಟು ಶಿಕ್ಷಕರು ಕರ್ತವ್ಯಕ್ಕೆ ಹಾಜರಾಗದೆ ತಮಗೆ ಬರುವ ವೇತನದಲ್ಲಿ ಒಂದಷ್ಟು ಹಣ ನೀಡಿ ಬಾಡಿಗೆ ಶಿಕ್ಷಕರನ್ನು ನೇಮಿಸಿಕೊಂಡು ಪಾಠ ಮಾಡಿಸುವ ಪ್ರಕರಣಗಳನ್ನು ಮಾನವ ಸಂಪನ್ಮೂಲ ಇಲಾಖೆ ನಡೆಸಿದ ಪರಿಶೀಲನೆಯಲ್ಲಿ ಪತ್ತೆ ಮಾಡಲಾಗಿತ್ತು. ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲೂ ಇಂತಹ ಪ್ರಕರಣಗಳು ಕಂಡು ಬಂದಿದ್ದವು.

ದಕ್ಷತೆ ಇದ್ದರೆ ಬಡ್ತಿ, ವೇತನ ಹೆಚ್ಚಳ

ಜ್ಯೇಷ್ಠತೆಯ ಆಧಾರದ ಬಡ್ತಿ, ವೇತನ ಹೆಚ್ಚಳ ಮತ್ತಿತರ ಸೌಲಭ್ಯಗಳನ್ನು ಕೈಬಿಡಲು ಎನ್‌ಇಪಿ ಒಲವು ತೋರಿದೆ.

ಶಿಕ್ಷಕರ ವೇತನ ಹೆಚ್ಚಳ, ಬಡ್ತಿಗಳು ಮತ್ತು ಇತರ ಮಾನ್ಯತೆಗಳು ಸೇರಿದಂತೆ ಶಿಕ್ಷಕರ ವೃತ್ತಿ ನಿರ್ವಹಣೆಯ ಎಲ್ಲಾ ಅಂಶಗಳನ್ನು ಇದುವರೆಗೂ ಸೇವಾ ಹಿರಿತನದ ಆಧಾರದ ಮೇಲೆ ನೀಡಲಾಗುತ್ತಿತ್ತು. ಇದರ ಬದಲು ನಿರಂತರ ಮೌಲ್ಯಮಾಪನಗಳ ಆಧಾರದ ಮೇಲೆ ಪ್ರತಿಭೆ, ಕೆಲಸದ ದಕ್ಷತೆ ಪರಿಗಣಿಸಿ ವೇತನ, ಬಡ್ತಿ, ಸ್ಥಾನಮಾನಗಳನ್ನು ನೀಡಲು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಅಧ್ಯಾಯ 5ರಲ್ಲಿ ಪ್ರಸ್ತಾಪಿಸಲಾಗಿದೆ. ಪ್ರತಿ ಹತ್ತು ವರ್ಷಗಳಿಗೆ ಒಮ್ಮೆ ಕಠಿಣ ಪ್ರಾಯೋಗಿಕ ವಿಶ್ಲೇಷಣೆಯ ಆಧಾರದ ಮೇಲೆ ಪುನರ್ ವಿಮರ್ಶೆಗೆ ಒಳಪಡಿಸಲು ಸಮ್ಮತಿಸಲಾಗಿದೆ.

ಸರ್ಕಾರಿ ಶಿಕ್ಷಕರು ಇತರೆ ಬಾಡಿಗೆ ಶಿಕ್ಷಕರನ್ನು ನೇಮಿಸಿಕೊಳ್ಳುವುದು ಅಪರಾಧ. ತಪ್ಪಿತಸ್ಥರನ್ನು ಗುರುತಿಸಿ ಕಠಿಣ ಶಿಕ್ಷೆ ನೀಡುವುದೇ ಇದಕ್ಕೆ ಪರಿಹಾರ.

ಜೆ.ಎಸ್.ಸದಾನಂದ
ನಿವೃತ್ತ ಪ್ರಾಧ್ಯಾಪಕ, ಕುವೆಂಪು ವಿ.ವಿ

ಸುದ್ದಿ 2 ನಿಮಿಷ

‘1,500 ಮಾದರಿ ಶಾಲೆಗಳ ಸ್ಥಾಪನೆ’

ಶಿರಸಿ: ‘ವಿದ್ಯಾರ್ಥಿಗಳಿಗೆ ಮಾತೃಭಾಷೆ ಶಿಕ್ಷಣದೊಂದಿಗೆ ಇಂಗ್ಲಿಷ್ ಕಲಿಕೆಗೂ ಪೂರಕವಾಗುವಂತೆ ಸ್ಪೋಕನ್ ಇಂಗ್ಲಿಷ್ ತರಗತಿ ಸಹಿತ ಸುಸಜ್ಜಿತ ಸೌಕರ್ಯಗಳುಳ್ಳ 1,500 ಮಾದರಿ ಶಾಲೆಗಳನ್ನು ರೂಪಿಸಲಾಗುವುದು’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದರು.

ಇಲ್ಲಿ ಬುಧವಾರ ಮಾಧ್ಯಮದವರ ಜತೆ ಮಾತನಾಡಿದ ಅವರು, ‘ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಈ ಸೌಲಭ್ಯ ಜಾರಿಯಾಗಲಿದೆ. ಆಯ್ದ ಶಾಲೆಗಳನ್ನು ಗುರುತಿಸಿ ಅವುಗಳನ್ನು ಮೇಲ್ದರ್ಜೆಗೇರಿಸುತ್ತೇವೆ’ ಎಂದರು.

‘ಪಠ್ಯಪುಸ್ತಕ ವಿತರಣೆ ಶೇ 92ರಷ್ಟಾಗಿದೆ. ಪಠ್ಯದಲ್ಲಿ ರಾಷ್ಟ್ರೀಯತೆಯ ವಿಚಾರ ತುಂಬುವ ಪ್ರಯತ್ನ ಮಾಡಿದ್ದು ಕೆಲವರ ಕಣ್ಣು ಕೆಂಪಾಗಿಸಿದೆ. ಮಾತೃಭೂಮಿಯ ಬಗ್ಗೆ ಸ್ವಾಭಿಮಾನ ಮೂಡಿಸುವ ವಿಷಯ ಪುಸ್ತಕದಲ್ಲಿದ್ದರಿಂದ ವಿರೋಧ ವ್ಯಕ್ತವಾಗಿದೆ. ಈ ಅಂಶಗಳನ್ನು ವಿರೋಧಿಸಲಾಗದೆ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷರನ್ನು ಗುರಿಯಾಗಿಸಿ ವಿರೋಧಿಗಳು ಟೀಕಿಸಿದ್ದಾರೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಇಲ್ಲಿನ ಮಾರಿಕಾಂಬಾ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿ ಅವರು ವಿದ್ಯಾರ್ಥಿಗಳ ಜತೆ ಸಂವಾದ ನಡೆಸಿದರು.



ಫಲಿತಾಂಶದ ಬಳಿಕ ಪದವಿ ಪ್ರವೇಶಕ್ಕೆ ದಿನಾಂಕ ನಿಗದಿ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 12ನೇ ತರಗತಿಯ ಫಲಿತಾಂಶ ಪ್ರಕಟಿಸಿದ ಬಳಿಕವೇ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅಂತಿಮ ದಿನಾಂಕ ನಿಗದಿಪಡಿಸುವಂತೆ ವಿಶ್ವವಿದ್ಯಾಲಯಗಳಿಗೆ ಸೂಚಿಸಲಾಗಿದೆ ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಜಗದೀಶ್ ಕುಮಾರ್ ಬುಧವಾರ ತಿಳಿಸಿದ್ದಾರೆ.

ಸಿಬಿಎಸ್‌ಇ 12ನೇ ತರಗತಿಯ ಫಲಿತಾಂಶ ಪ್ರಕಟಿಸದಿದ್ದರೂ ಕೆಲ ವಿಶ್ವವಿದ್ಯಾಲಯಗಳು ಪ್ರವೇಶ ಪ್ರಕ್ರಿಯೆ ಆರಂಭಿಸಿವೆ. ಇದನ್ನು ಪ್ರಸ್ತಾಪಿಸಿರುವ ಅವರು, ಮಂಡಳಿಯು ಫಲಿತಾಂಶ ಪ್ರಕಟಿಸುವ ಮೊದಲೇ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅಂತಿಮ ದಿನಾಂಕ ನಿಗದಿಪಡಿಸಿದರೆ ಕೆಲ ವಿದ್ಯಾರ್ಥಿಗಳು ಅವಕಾಶ ವಂಚಿತರಾಗಬಹುದು ಎಂದು ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಮುಂದಿನ ವಾರ ‘ಸುಪ್ರೀಂ’ ವಿಚಾರಣೆ

ಹಿಜಾಬ್: ಕರ್ನಾಟಕ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಪದವಿಪೂರ್ವ ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿ ಅಲ್ಲಿನ ಸರ್ಕಾರ ಹೊರಡಿಸಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿದ್ದ ಅರ್ಜಿಯನ್ನು ವಜಾಗೊಳಿಸಿರುವ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿರುವ ಮೇಲ್ಮನವಿಗಳ ವಿಚಾರಣೆಯನ್ನು ಮುಂದಿನ ವಾರ ನಡೆಸಲು ಸುಪ್ರೀಂ ಕೋರ್ಟ್ ಬುಧವಾರ ಸಮ್ಮತಿ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ತ್ರಿಸದಸ್ಯ ಪೀಠದ ಎದುರು ಹಿರಿಯ ವಕೀಲ ಪ್ರಶಾಂತ್ ಭೂಷಣ್ ವಿಷಯ ಪ್ರಸ್ತಾಪಿಸಿ, ‘ಮೇಲ್ಮನವಿಯನ್ನು ಮೂರು ತಿಂಗಳ ಹಿಂದೆಯೇ ಸಲ್ಲಿಸಲಾಗಿದೆ. ಆದರೆ, ಈವರೆಗೆ ವಿಚಾರಣೆಗೆ ಕೈಗೆತ್ತಿಕೊಂಡಿಲ್ಲ. ಇದರಿಂದಾಗಿ, ವಿದ್ಯಾರ್ಥಿನಿಯರು ತಮ್ಮ ಶಿಕ್ಷಣವನ್ನು ಕಳೆದುಕೊಳ್ಳುತ್ತಿದ್ದಾರೆ ಹಾಗೂ ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾರೆ’ ಎಂದರು.

ಆಗ ಮುಖ್ಯ ನ್ಯಾಯಮೂರ್ತಿಯವರು ಮೇಲ್ಮನವಿಯನ್ನು ಮುಂದಿನ ವಾರ ಸೂಕ್ತ ಪೀಠದಲ್ಲಿ ವಿಚಾರಣೆಗೆ ಕೈಗೆತ್ತಿಕೊಳ್ಳಲಾಗುವುದು ಎಂದರು. ಹಲವು ಮೇಲ್ಮನವಿದಾರರ ಪರವಾಗಿ ಪ್ರಶಾಂತ್ ಭೂಷಣ್ ಅವರು ಈ ವಿಚಾರ ಪ್ರಸ್ತಾಪಿಸಿದರು.

ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಮೇಲ್ಮನವಿಯ ತುರ್ತು ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ಮಾರ್ಚ್ 24ರಂದು ನಿರಾಕರಿಸಿತ್ತು.

‘ಮಾರ್ಚ್ 28ರಿಂದ ಪರೀಕ್ಷೆಗಳು ಆರಂಭಗೊಳ್ಳುತ್ತವೆ. ಶಾಲೆ ಪ್ರವೇಶಿಸದಂತೆ ವಿದ್ಯಾರ್ಥಿನಿಯರನ್ನು ತಡೆಯಲಾಗುತ್ತಿದೆ. ಹೀಗಾಗಿ ಮೇಲ್ಮನವಿಯನ್ನು ವಿಚಾರಣೆ ಪಟ್ಟಿಗೆ ಸೇರಿಸಿ, ತುರ್ತು ವಿಚಾರಣೆ ನಡೆಸಬೇಕು’ ಎಂದು ಹಿರಿಯ ವಕೀಲ ದೇವದತ್ತ ಕಾಮತ್ ಅವರು ನ್ಯಾಯಪೀಠಕ್ಕೆ ಮನವಿ ಮಾಡಿದ್ದರು. ‘ಪರೀಕ್ಷೆಗಳಿಗೂ, ಈ ವಿಷಯಕ್ಕೂ ಯಾವುದೇ ಸಂಬಂಧ ಇಲ್ಲ. ವಿಷಯವನ್ನು ಸೂಕ್ಷ್ಮಗೊಳಿಸಬೇಡಿ’ ಎಂದು ಕಾಮತ್ ಅವರಿಗೆ ಹೇಳಿದ್ದ ನ್ಯಾಯಪೀಠ, ಅರ್ಜಿಯ ತುರ್ತು ವಿಚಾರಣೆ ನಡೆಸಲು ದಿನಾಂಕ ನಿಗದಿಗೊಳಿಸುವುದಕ್ಕೆ ನಿರಾಕರಿಸಿತ್ತು.

‘ಸರ್ಕಾರಿ ಕಾಲೇಜುಗಳ ತರಗತಿಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವಂತೆ ನಿರ್ದೇಶಿಸಬೇಕು' ಎಂದು ಕೋರಲಾಗಿದ್ದ ಎಲ್ಲಾ ವೈಯಕ್ತಿಕ ಹಾಗೂ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮಾರ್ಚ್ 15ರಂದು ಸಾರಾಸಗಟಾಗಿ ತಿರಸ್ಕರಿಸಿದ್ದ ಹೈಕೋರ್ಟ್‌ನ ತ್ರಿಸದಸ್ಯ ಪೀಠ, ‘ಈ ವಿಷಯವನ್ನು ದೇಶದಾದ್ಯಂತ ವಿವಾದದ ವಿಷಯವನ್ನಾಗಿ ಮಾಡಿರುವ ಹಿಂದೆ ಕಾಣದ ಕೈಗಳು ಅಡಗಿವೆ’ ಎಂಬ ಸಂಶಯ ವ್ಯಕ್ತಪಡಿಸಿತ್ತು.

‘ಹಿಜಾಬ್ ಇಸ್ಲಾಂನ ಅತ್ಯಾವಶ್ಯಕ ಧಾರ್ಮಿಕ ಆಚರಣೆ ಎಂಬುದನ್ನು ಸಾಬೀತುಪಡಿಸುವಲ್ಲಿ ಅರ್ಜಿದಾರರು ವಿಫಲವಾಗಿದ್ದಾರೆ. ಅಂತೆಯೇ ಇಸ್ಲಾಂ ಧರ್ಮದ ಅನುಸಾರ ಹಿಜಾಬ್ ಅತ್ಯಾವಶ್ಯಕ ಆಚರಣೆ ಎಂಬ ಉಲ್ಲೇಖಕ್ಕೆ ಕುರಾನಿನಲ್ಲಿ ಯಾವುದೇ ಅಧಿಕೃತ ಆಧಾರವಿಲ್ಲ’ ಎಂದು ನ್ಯಾಯಪೀಠ ಅಭಿಪ್ರಾಯ ವ್ಯಕ್ತಪಡಿಸಿತ್ತು.

ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ ಅರ್ಜಿದಾರರು, ‘ವಿದ್ಯಾರ್ಥಿಗಳಿಗೆ ಕಡ್ಡಾಯವಾದ ಸಮವಸ್ತ್ರ ರೂಪಿಸಿ ಕರ್ನಾಟಕ ಸರ್ಕಾರ ಕಾಯ್ದೆ ಅಥವಾ ನಿಯಮ ಜಾರಿಗೊಳಿಸಿಲ್ಲ. ಹಾಗಾಗಿ, ಹಿಜಾಬ್ ಧರಿಸುವುದನ್ನು ನಿಷೇಧಿಸಿ ಆದೇಶಿಸಿರುವುದು ಸರಿಯಲ್ಲ. ಹಿಜಾಬ್ ಧರಿಸುವುದನ್ನು ಸಂವಿಧಾನದ ಅಡಿ ಖಾತರಿಪಡಿಸಲಾದ ಗೋಪ್ಯತೆ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಆತ್ಮಸಾಕ್ಷಿಯ ಮೂಲಭೂತ ಹಕ್ಕುಗಳ ಅಡಿಯಲ್ಲಿ ರಕ್ಷಿಸಲಾಗಿದೆ. ಆದರೆ, ಅದನ್ನು ಅರಿಯದೇ ಹೈಕೋರ್ಟ್ ಪ್ರಮಾದವೆಸಗಿದೆ’ ಎಂದು ಅರ್ಜಿಯಲ್ಲಿ ತಿಳಿಸಿದ್ದರು.

‘ಪಾರಂಪರಿಕ ಶಿಕ್ಷಣ ಸಮನ್ವಯದ ದಾರಿ’

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ವಿಜ್ಞಾನವು ಪ್ರತಿಯೊಂದನ್ನು ಪ್ರತ್ಯೇಕಿಸಿದ ಕಾರಣ ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಿದೆ. ಆದರೆ ಭಾರತದ ಪಾರಂಪರಿಕ ಶಿಕ್ಷಣಕ್ಕೆ ಪ್ರತಿಯೊಂದನ್ನು ಜೋಡಿಸಿ ಸಮನ್ವಯಗೊಳಿಸುವ ಶಕ್ತಿ ಇದೆ ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ಹೇಳಿದರು.

ತಾಲ್ಲೂಕಿನ ಮುದ್ದೇನಹಳ್ಳಿಯ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯದಲ್ಲಿ ಬುಧವಾರ ನಡೆದ ವಿ.ವಿಯ ಪ್ರಥಮ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

‘ಶರೀರ-ಮನಸ್ಸು ಬುದ್ಧಿಯನ್ನು ಜೋಡಿಸುವುದು ನಮ್ಮ ಪಾರಂಪರಿಕ ಶಿಕ್ಷಣದ ಜೀವಾಳ. ಧರ್ಮದ ಆಚರಣೆಯಿಂದ ಮಾನವ ಉನ್ನತಿಗೆ ಏರುತ್ತಾನೆ. ತನ್ನ ಉನ್ನತಿಯ ಜತೆಗೆ ಸಮಾಜದ ಉನ್ನತಿಯನ್ನು ಬಯಸುವುದೇ ಮಾನವೀಯತೆ’ ಎಂದರು.

‘ಬದುಕಿನಲ್ಲಿ ಮಾನವೀಯತೆ ಮೇಳೈಸಬೇಕು. ಪರಿಶ್ರಮದಿಂದ ಫಲ ದೊರೆಯುತ್ತದೆ. ಕರ್ಮದ ಜೊತೆಗೆ ಜೀವನದ ಮರ್ಮವನ್ನು ಅರಿತು ಕಾರ್ಯಪ್ರವೃತ್ತರಾದಾಗ ಬದುಕು ಸಾರ್ಥಕವಾಗುತ್ತದೆ’ ಎಂದು ಅವರು ಹೇಳಿದರು.

6 ಮಂದಿಗೆ ಡಾಕ್ಟರೇಟ್: ಘಟಿಕೋತ್ಸವದಲ್ಲಿ ಪರಮಾಣು ವಿಜ್ಞಾನಿ ಆರ್.ಚಿದಂಬರಂ, ಇಸ್ರೊ ಮಾಜಿ ಮುಖ್ಯಸ್ಥ ಕೆ.ಕಸ್ತೂರಿರಂಗನ್, ಕ್ರಿಕೆಟಿಗ ಸುನೀಲ್ ಗವಾಸ್ಕರ್, ಸಂಗೀತ ವಿದ್ವಾಂಸ ಎಂ.ವೆಂಕಟೇಶ್ ಕುಮಾರ್, ಪರಿಸರವಾದಿ ಪೂರ್ಣಿಮಾ ದೇವಿ ಬರ್ಮನ್, ಉಚಿತ ವೈದ್ಯಕೀಯ ಸೇವೆ ನೀಡುತ್ತಿರುವ ಡಾ.ಸಿ.ಶ್ರೀನಿವಾಸ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಉತ್ತರ ಪತ್ರಿಕೆ ಪಡೆಯಲು ನಾಳೆ ಕೊನೆ ದಿನ

ಬೆಂಗಳೂರು: ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಯ ಉತ್ತರ ಪ್ರತಿಗಳನ್ನು ಸ್ಕ್ಯಾನ್ಡ್ ಪ್ರತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಜುಲೈ 15 ಕೊನೆಯ ದಿನ.

ವಿದ್ಯಾರ್ಥಿಗಳು ಪುಟಗಳನ್ನು ಡೌನ್‌ಲೋಡ್ ಮಾಡಿಕೊಂಡ ನಂತರ ನ್ಯೂನತೆಗಳು ಕಂಡುಬಂದರೆ jdexam.dpue@gmail.com ಗೆ ಮನವಿ ಕಳುಹಿಸಬಹುದು. 080-23083860, 23083864ಗೆ ಸಂಪರ್ಕಿಸಬಹುದು.

ಸಭೆಗೆ ಡಿಕೆಶಿ, ಹರಿಪ್ರಸಾದ್ ಗೈರು: ಸಿದ್ದರಾಮಯ್ಯ ಮುಂದಿನ ಸಿ.ಎಂ —ಮೊಳಗಿದ ಘೋಷಣೆ

‘ಸಿದ್ದರಾಮೋತ್ಸವ’ಕ್ಕೆ ಪೂರ್ವದಲ್ಲೇ ಭಿನ್ನ ಧ್ವನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷದ ಚೌಕಟ್ಟಿನಲ್ಲಿಯೇ ದಾವಣಗೆರೆಯಲ್ಲಿ ಆಗಸ್ಟ್ 3ರಂದು ‘ಸಿದ್ದರಾಮಯ್ಯ- 75’ ಅಮೃತ ಮಹೋತ್ಸವ ನಡೆಯಲಿದೆ ಎಂದು ಕಾಂಗ್ರೆಸ್ ನಾಯಕರು ಹೇಳಿಕೊಂಡಿದ್ದರೂ, ವ್ಯಕ್ತಿ ಸೀಮಿತವಾಗಿ ‘ಸಿದ್ದರಾಮೋತ್ಸವ’ವೆಂದು ಕರೆಸಿಕೊಂಡಿರುವುದು ‘ಕೈ’ ಬಳಗದಲ್ಲಿ ಭಿನ್ನ ಧ್ವನಿಗೆ ಕಾರಣವಾಗಿದೆ.

ಅಮೃತ ಮಹೋತ್ಸವ ಸಮಾವೇಶದ ಪೂರ್ವಭಾವಿ ಸಭೆ ಅರಮನೆ ಮೈದಾನದಲ್ಲಿ ಬುಧವಾರ ನಡೆಯಿತು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಸಭೆಗೆ ಗೈರಾಗಿದ್ದರು.

ಸಭೆಯಲ್ಲಿ ಮಾತನಾಡಿದ ಸಂಸದ ಡಿ.ಕೆ. ಸುರೇಶ್, ‘ಸಿದ್ದರಾಮಯ್ಯ ಅವರಿಗೆ ಇಷ್ಟ ಇದೆಯೋ? ಇಲ್ಲವೋ? ಬೇರೆಯವರು ಅವರ ವ್ಯಕ್ತಿ ಪೂಜೆ ಮಾಡುತ್ತಿದ್ದಾರೆ’ ಎಂದರು.

ತಮ್ಮ ಮನೆಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಡಿ.ಕೆ. ಶಿವಕುಮಾರ್, ‘ಪಕ್ಷದ ಅಧ್ಯಕ್ಷನಾಗಿ ಅಧಿಕಾರ ತೆಗೆದುಕೊಂಡ ದಿನವೇ, ಯಾರೂ ನನ್ನ ಪೂಜೆ ಮಾಡಬೇಡಿ, ಪಕ್ಷ ಪೂಜೆ ಮಾಡಿ ಎಂದು ಹೇಳಿದ್ದೇನೆ’ ಎಂದರು. ಇದು ಕೂಡ, ‘ವ್ಯಕ್ತಿ’ ಕೇಂದ್ರಿತವಾಗಿ ಸಿದ್ದರಾಮಯ್ಯ ಅಮೃತ ಮಹೋತ್ಸವ ಸರಿಯಲ್ಲ ಎನ್ನುವುದನ್ನೇ ಧ್ವನಿಸಿದೆ ಎಂಬ ಚರ್ಚೆ ಕಾಂಗ್ರೆಸ್ ಪಾಳಯದಲ್ಲಿದೆ.

ಆದರೆ, ಅಮೃತ ಮಹೋತ್ಸವ ಸಮಿತಿಯ ಮಹಾ ಪ್ರಧಾನ ಕಾರ್ಯದರ್ಶಿ ಬಸವರಾಜ ರಾಯರಡ್ಡಿ, ‘ನಾವು ಸಿದ್ದರಾಮೋತ್ಸವ ಎಂದು ಹೇಳಿಲ್ಲ. ಹಾಗೆಂದು, ಮಾಧ್ಯಮದಲ್ಲಿ ಬಂದಿದೆಯೋ ಗೊತ್ತಿಲ್ಲ. ಯಾರು ಏನೇ ಹೇಳಿದರೂ ಸಿದ್ದರಾಮೋತ್ಸವ ಎಂಬುದನ್ನು ನಾವು ಒಪ್ಪುವುದಿಲ್ಲ. ಒಬ್ಬ ವ್ಯಕ್ತಿಯನ್ನು ವೈಭವೀಕರಿಸುವುದಿಲ್ಲ’ ಎಂದರು. ‘ಸ್ವಾತಂತ್ರ್ಯೋತ್ಸವದ 75ನೇ ಅಮೃತ ಮಹೋತ್ಸವ ಹಾಗೂ ಸಿದ್ದರಾಮಯ್ಯ ಅವರ ಹುಟ್ಟುಹಬ್ಬವನ್ನು ಜೊತೆಯಾಗಿ ಬಿಂಬಿಸುತ್ತಾ ಕಾರ್ಯಕ್ರಮ ಮಾಡುವುದು ಸೂಕ್ತ’ ಎಂದೂ ಡಿ.ಕೆ. ಸುರೇಶ್ ಹೇಳಿದರು. ಆರಂಭದಲ್ಲಿ ಮಾತನಾಡಿದ ಬಿ.ಎಲ್. ಶಂಕರ್, ‘ಡಿ.ಕೆ. ಶಿವಕುಮಾರ್ ಗೈರಾಗಿರುವ ಬಗ್ಗೆ ಅನ್ಯತಾ ಭಾವಿಸ ಬೇಡಿ. ಪ್ರಧಾನ ಭಾಷಣಕಾರರಾಗಿ ಅವರು ಭಾಗವಹಿಸಲಿದ್ದಾರೆ’ ಎಂದರು. ಜಿ. ಪರಮೇಶ್ವರ, ಈ ಸಮಾವೇಶದ ಮೂಲಕ ಕಾಂಗ್ರೆಸ್ ಬಗೆಗಿನ ಬದ್ಧತೆ ತೋರಿಸಬೇಕು ಎಂದರು.

ಜಮೀರ್ ಅಹಮ್ಮದ್, ಭೈರತಿ ಸುರೇಶ್ ಜೊತೆ ಸಿದ್ದರಾಮಯ್ಯ ಅವರು ಸಭೆಗೆ ಬರುತ್ತಿದ್ದಂತೆ, ‘ಮುಂದಿನ ಮುಖ್ಯಮಂತ್ರಿ’ ಎಂದು ಕೆಲವರು ಘೋಷಣೆ ಕೂಗಿದರು. ಆರ್.ವಿ. ದೇಶಪಾಂಡೆ, ಎಂ.ಬಿ. ಪಾಟೀಲ, ಈಶ್ವರ ಖಂಡ್ರೆ, ಸಲೀಂ ಅಹಮ್ಮದ್, ಸತೀಶ ಜಾರಕಿಹೊಳಿ, ಆರ್. ಧ್ರುವ ನಾರಾಯಣ್, ಕೆ.ಎನ್. ರಾಜಣ್ಣ, ಅಮರೇಗೌಡ ಬಯ್ಯಾಪುರ, ಕೆ.ಜೆ. ಜಾರ್ಜ್, ವೆಂಕಟರಮಣಪ್ಪ, ಯು.ಟಿ. ಖಾದರ್, ಸತೀಶ ಜಾರಕಿಹೊಳಿ, ರಮಾನಾಥ ರೈ, ಅಲ್ಲಂ ವೀರಭದ್ರಪ್ಪ, ಕಿಮ್ಮನೆ ರತ್ನಾಕರ್, ಎಚ್. ಆಂಜನೇಯ, ಯತೀಂದ್ರ ಸಿದ್ದರಾಮಯ್ಯ ಇದ್ದರು.

ಸಭೆಯಲ್ಲಿ ಸಿದ್ದರಾಮಯ್ಯ ಮತ್ತು ಜಿ. ಪರಮೇಶ್ವರ ಮಾತುಕತೆ ನಡೆಸುತ್ತಿದ್ದ ವೇಳೆ ಆರ್.ವಿ. ದೇಶಪಾಂಡೆ, ರಮಾನಾಥ ರೈ, ಎಂ.ಬಿ. ಪಾಟೀಲ ಇದ್ದರು

ನನ್ನ ಉತ್ಸವ ಬೇಡ–ಡಿಕೆಶಿ

‘ನನಗೆ ಯಾವ ಉತ್ಸವವೂ ಬೇಡ. ಪಕ್ಷವನ್ನು ಗೆಲ್ಲಿಸಿ ಅಧಿಕಾರಕ್ಕೆ ತರಬೇಕು. ಅದೇ ನನ್ನ ಗುರಿ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಡಿ.ಕೆ. ಶಿವಕುಮಾರ್ ಅವರ ‘ಶಿವಕುಮಾರೋತ್ಸವ-23’ ಹಮ್ಮಿಕೊಳ್ಳುವಂತೆ ನಾಗಮಂಗಲದ ಹೊಣಕೆರೆ ಗ್ರಾಮ ಪಂಚಾಯಿತಿ ಕಾಂಗ್ರೆಸ್ ಸದಸ್ಯ ಜಿ.ಸಿ. ರಾಜು ಅವರು ಸಿದ್ದರಾಮಯ್ಯ ಅಮೃತ ಮಹೋತ್ಸವ ಸಮಿತಿಗೆ ಪತ್ರ ಬರೆದಿದ್ದಾರೆ. ಅದಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಅಭಿಮಾನಿಗಳು ಅಭಿಮಾನದಿಂದ ಏನು ಮಾತನಾಡುತ್ತಾರೋ ಅದು ನನಗೆ ಬೇಡ. ನನ್ನ ಹುಟ್ಟುಹಬ್ಬದ ಸಮಯದಲ್ಲಿ ಅಭಿಮಾನಿಗಳು ಜಾಹೀರಾತು ನೀಡುತ್ತೇವೆ ಎಂದಾಗಲೂ ನಿರಾಕರಿಸಿದ್ದೆ’ ಎಂದರು. ‘ಸಿದ್ದರಾಮಯ್ಯ ಅಮೃತ ಮಹೋತ್ಸವದಲ್ಲಿ ಅತಿಥಿಯಾಗಿ ಭಾಗವಹಿಸುತ್ತೇನೆ’ ಎಂದರು.

ಪಿಇಎಸ್ ವಿ.ವಿ ವಿದ್ಯಾರ್ಥಿನಿಯರಿಂದ ಆವಿಷ್ಕಾರ

ಸಾಕು ಪ್ರಾಣಿಗಳ ನಿಗಾಕ್ಕೆ ಸ್ಮಾರ್ಟ್ ಬೆಲ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಕು ಪ್ರಾಣಿಗಳ ಆರೋಗ್ಯ ಹಾಗೂ ಚಲನವಲನದ ಮೇಲೆ ನಿಗಾ ಇಡಲು ಪಿಇಎಸ್ ವಿಶ್ವವಿದ್ಯಾಲಯದ ಮೂವರು ವಿದ್ಯಾರ್ಥಿನಿಯರು ಸ್ಮಾರ್ಟ್ ಬೆಲ್ಟ್ ಅಭಿವೃದ್ಧಿಪಡಿಸಿದ್ದಾರೆ.

ವಿಶ್ವವಿದ್ಯಾಲಯದ ಎಲೆಕ್ಟ್ರಾನಿಕ್ ಆ್ಯಂಡ್ ಕಮ್ಯುನಿಕೇಷನ್ ವಿಭಾಗದ ಬಿ.ಎನ್. ವಿಸ್ಮಯಾ, ಪಲ್ಲವಿ ಗೋಪಿನಾಥ್ ಹಾಗೂ ಪ್ರಾರ್ಥನಾ ಭಟ್ ಅವರು ‘ಫಾಂಡ್ ಪ್ಲೂಪಿಟ್ ಸ್ಮಾರ್ಟ್ ಬೆಲ್ಟ್’ ನಿರ್ಮಾಣದ ರೂವಾರಿಗಳು. ಇವರು ‘ಫಾಂಡ್’ ಹೆಸರಿನಲ್ಲಿ ನವೋದ್ಯಮ ಸ್ಥಾಪಿಸಿದ್ದು, ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸುರೇಶ್ ಎನ್. ಅವರ ಮಾರ್ಗದರ್ಶನದಲ್ಲಿ ತಮ್ಮ ಯೋಜನೆಯನ್ನು ಕಾರ್ಯಗತ ಮಾಡಿದ್ದಾರೆ.

ಈ ಬೆಲ್ಟ್ ಸ್ಮಾರ್ಟ್ ಬ್ಯಾಂಡ್ ಮಾದರಿ ಕಾರ್ಯನಿರ್ವಹಿಸಲಿದೆ. ನಾಯಿ, ಬೆಕ್ಕು ಸೇರಿದಂತೆ ವಿವಿಧ ಸಾಕು ಪ್ರಾಣಿಗಳಿಗೆ ಈ ಬೆಲ್ಟ್ ಅಳವಡಿಸಬಹುದಾಗಿದೆ. ಬೆಲ್ಟ್‌ನಲ್ಲಿ ಅಳವಡಿಸಿರುವ ಸ್ಮಾರ್ಟ್ ಸಾಧನಕ್ಕೆ ಮೊಬೈಲ್ ಆ್ಯಪ್ ಮೂಲಕ ಸಂಪರ್ಕ ಸಾಧಿಸಬಹುದಾಗಿದೆ. ಬೆಲ್ಟ್‌ನಲ್ಲಿರುವ ಸಾಧನಕ್ಕೆ ಒಮ್ಮೆ ಚಾರ್ಜ್ ಮಾಡಿದರೆ 57 ಗಂಟೆಗಳು ಕಾರ್ಯನಿರ್ವಹಿಸಲಿದೆ. ಬೆಲ್ಟ್ ಹೊಂದಿದ ಪ್ರಾಣಿಯ ದೇಹದ ತಾಪಮಾನ, ಸೇವಿಸಿದ ಆಹಾರದ ಪ್ರಮಾಣ ಸೇರಿದಂತೆ ವಿವಿಧ ಮಾಹಿತಿಗಳು ಆ್ಯಪ್ ಮೂಲಕ ಲಭ್ಯವಾಗಲಿವೆ.

‘ಸಮಯಕ್ಕೆ ಸರಿಯಾಗಿ ಗುಣಮಟ್ಟದ ಆಹಾರ ಸಿಗದಿದ್ದರಿಂದ ಕೆಲ ಸಾಕು ಪ್ರಾಣಿಗಳು ಅನಾರೋಗ್ಯಕ್ಕೆ ಒಳಗಾಗಿ, ಅವಧಿಗೆ ಮುನ್ನವೇ ಮೃತಪಡುತ್ತಿವೆ. ಇನ್ನೊಂದೆಡೆ ಮನೆಯ ಮಾಲೀಕರು ಹೊರಗಡೆ ತೆರಳಿದಾಗ ಸಾಕು ಪ್ರಾಣಿಗಳ ಮೇಲೆ ನಿಗಾ ಇರಿಸಲು ಸಾಧ್ಯವಿಲ್ಲ. ಅವುಗಳ ಆರೋಗ್ಯದಲ್ಲಾಗುವ ಏರುಪೇರುಗಳೂ ತಿಳಿಯುವುದಿಲ್ಲ. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ವಿದ್ಯಾರ್ಥಿನಿಯರು ಸ್ಮಾರ್ಟ್ ಬೆಲ್ಟ್ ಸಿದ್ಧಪಡಿಸಿದ್ದಾರೆ. ಇದು ಪ್ರಾಯೋಗಿಕವಾಗಿ ಯಶಸ್ವಿಯಾಗಿದೆ’ ಎಂದು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸುರೇಶ್ ಎನ್. ತಿಳಿಸಿದರು.

‘ಆಹಾರ ಒದಗಿಸುವ ಸಮಯ ಬಂದಾಗ ಮೊಬೈಲ್‌ಗೆ ಎಚ್ಚರಿಕೆಯ ಸಂದೇಶ ಬರಲಿದೆ. ಸಾಕು ಪ್ರಾಣಿಗಳ ಆರೋಗ್ಯ ವೃದ್ಧಿಗೆ ಈ ಬೆಲ್ಟ್ ಸಹಕಾರಿ. ಸದ್ಯ ಸೀಮಿತ ಸಂಖ್ಯೆಯಲ್ಲಿ ಬೆಲ್ಟ್‌ಗಳನ್ನು ತಯಾರಿಸಿ, ಮಾರಾಟ ಮಾಡಲಾಗುತ್ತಿದೆ. ಇದೇ 21ಕ್ಕೆ ಅಧಿಕೃತವಾಗಿ ಲೋಕಾರ್ಪಣೆ ಮಾಡಲಾಗುವುದು’ ಎಂದು ವಿವರಿಸಿದರು.

ಈ ಬೆಲ್ಟ್‌ಗೆ ವಿದ್ಯಾರ್ಥಿನಿಯರು ₹2,999 ನಿಗದಿಪಡಿಸಿದ್ದಾರೆ. thefond.co ಮೂಲಕ ಖರೀದಿಸಬಹುದಾಗಿದೆ.



ವಿದ್ಯಾರ್ಥಿನಿಯರು ಅಭಿವೃದ್ಧಿಪಡಿಸಿರುವ ಸ್ಮಾರ್ಟ್ ಬೆಲ್ಟ್ ನಾಯಿಯ ಕತ್ತಿಗೆ ಅಳವಡಿಸಿರುವುದು



EXAM DH ಪ್ರಜಾವಾಣಿ MASTERMIND

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನಿಮ್ಮ ಸಿದ್ದತೆಯ ಮಾರ್ಗವನ್ನು ಆರಿಸಿಕೊಳ್ಳಿ.

ಯು.ಪಿ.ಎಸ್.ಸಿ, ಕೆ.ಪಿ.ಎಸ್.ಸಿ, ಪಿ.ಎಸ್.ಐ, ಎಫ್.ಡಿ.ಎ ಮತ್ತು ಬ್ಯಾಂಕ್ ಪಿ.ಓ ಗಳಂತ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಾಸ್ಟರ್‌ಮೈಂಡ್ ಮಾರ್ಗದರ್ಶಿಯಾಗಿದೆ.
ನಿಮ್ಮ ಭವಿಷ್ಯವನ್ನು ಉತ್ತಮವಾಗಿ ರೂಪಿಸಲು ಮಾಸ್ಟರ್‌ಮೈಂಡ್ ಈಗ ಮೂರು ಬಗೆಯ ಯೋಜನೆಗಳನ್ನು ನಿಮಗೆ ಅರ್ಪಿಸುತ್ತಿದೆ.

₹479 ~~₹728~~ 34% ಉಳಿತಾಯ ಉತ್ತಮ ಮೌಲ್ಯ
ವಾರ್ಷಿಕ + ಆರ್ಕೈವ್ ಯೋಜನೆ
ಒಂದು ವರ್ಷದ ವರೆಗೂ ಪ್ರಚಲಿತ ಸುದ್ದಿಗಳು ಹಾಗೂ ಕಳೆದ 6 ತಿಂಗಳ ಸಂಗ್ರಹಿತ ವಿಷಯಗಳನ್ನು ಆಲಿಸಲು ಅನಿಯಮಿತ ಅವಕಾಶ

₹399 ~~₹599~~ 33% ಉಳಿತಾಯ
ವಾರ್ಷಿಕ ಯೋಜನೆ
ನೀವು ಚಂದಾದಾರರಾದ ದಿನದಿಂದ 1 ವರ್ಷದವರೆಗೂ ಪ್ರಚಲಿತ ಸುದ್ದಿಗಳನ್ನು ಓದಿ ತಿಳಿದುಕೊಳ್ಳಲು ಅವಕಾಶ

₹129
ಸಂಗ್ರಹಿತ ಯೋಜನೆ
ಕಳೆದ 6 ತಿಂಗಳ ವಿಷಯ ಮತ್ತು ಅಧ್ಯಯನ ಸಾಮಗ್ರಿಗಳನ್ನು ಆಲಿಸಿ

ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ WWW.EXAMMASTERMIND.COMಗೆ ಭೇಟಿ ಕೊಡಿ

ದೇವನೂರದ್ದು ಕೃತಿಯಲ್ಲ, ವಿಕೃತಿ: ಪ್ರತಾಪ ಸಿಂಹ ಟೀಕೆ

ಮೈಸೂರು: ‘ಸಾಹಿತಿ ದೇವನೂರ ಮಹಾದೇವ ಅವರು ಆರ್‌ಎಸ್‌ಎಸ್ ಕುರಿತು ರಚಿಸಿರುವ ‘ಆರ್‌ಎಸ್‌ಎಸ್ ಆಳ ಮತ್ತು ಅಗಲ’ ಕೃತಿಯಲ್ಲ, ವಿಕೃತಿ’ ಎಂದು ಸಂಸದ ಪ್ರತಾಪ ಸಿಂಹ ಕಿಡಿಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್‌ಗೆ ಆಳಾಗಿ ಬರೆಯುವವರಿಗೆ ಆರ್‌ಎಸ್‌ಎಸ್‌ನ ಆಳ-ಅಗಲ ತಿಳಿದುಕೊಳ್ಳಲು ಸಾಧ್ಯವಿಲ್ಲ. ದೇವನೂರ ಮಹಾದೇವ ಒಂದು ಪಕ್ಷದ ಆಳಾಗಿ ಬರೆದಿದ್ದಾರೆ’ ಎಂದು ಟೀಕಿಸಿದರು.

‘ಕುಸುಮಬಾಲೆ’ ನಂತರ ದೇವನೂರ ಅವರಲ್ಲಿ ಒಂದಷ್ಟು ಸೃಜನಶೀಲತೆ ಉಳಿದುಕೊಂಡಿದೆ ಎಂದುಕೊಂಡಿದ್ದೆ. ಆದರೆ, ಆರ್‌ಎಸ್ ಎಸ್ ಆಳ-ಅಗಲ ಪುಸ್ತಕ ಬರೆಯಲು ಹೋಗಿ ಘನತೆಯನ್ನು ಕಳೆದುಕೊಂಡಿದ್ದಾರೆ. ಚಾತುರ್ವರ್ಣ ಪದ್ಧತಿ ಬಗ್ಗೆ ಬರೆಯಲು ಹೋಗಿದ್ದಾರೆ. ಒಂದು ಧರ್ಮ, ಒಬ್ಬ ನಾಯಕ, ಒಂದು ದೇಶವನ್ನು ಆರ್‌ಎಸ್‌ಎಸ್ ಪ್ರತಿಪಾದಿಸುತ್ತದೆ ಎಂದು ಬರೆದಿದ್ದಾರೆ. ಆದರೆ, ಒಬ್ಬ ವ್ಯಕ್ತಿ, ಒಂದು ಪುಸ್ತಕ, ಒಂದು ದೇಶದಿಂದ, ಇಡೀ ಪ್ರಪಂಚದಲ್ಲಿ ಭಯೋತ್ಪಾದನೆ ಹೆಚ್ಚಾಗಿದೆ. ಈ ಬಗ್ಗೆಅವರು ಮಾತನಾಡುವುದಿಲ್ಲ ಏಕೆ’ ಎಂದು ಪ್ರಶ್ನಿಸಿದರು.

ಆರೋಪಿಗಳ ಆಸ್ತಿ ನೆಲಸಮ ತಡೆಯಾಜ್ಞೆಗೆ ‘ಸುಪ್ರೀಂ’ ನಕಾರ

ನವದೆಹಲಿ (ಪಿಟಿಐ): ಹಿಂಸೆ, ಗಲಭೆ ಕೃತ್ಯಗಳಲ್ಲಿ ಭಾಗಿಯಾಗಿದ್ದವರ ಆಸ್ತಿ ನೆಲಸಮಕ್ಕೆ ವಿವಿಧ ರಾಜ್ಯಗಳಲ್ಲಿ ನಡೆಯುತ್ತಿರುವ ಕಾರ್ಯಾಚರಣೆ ತಡೆಗೆ ಮಧ್ಯಂತರ ತಡೆಯಾಜ್ಞೆ ನೀಡಲು ಸುಪ್ರೀಂ ಕೋರ್ಟ್ ಬುಧವಾರ ನಿರಾಕರಿಸಿತು.

ಕಾನೂನುಬಾಹಿರ ನಿರ್ಮಾಣಗಳಿದ್ದಲ್ಲಿ ಅದರ ವಿರುದ್ಧ ಕ್ರಮಕೈಗೊಳ್ಳುವ ಅಧಿಕಾರ ಸ್ಥಳೀಯ ಸಂಸ್ಥೆಗಳಿಗೆ ಇರುತ್ತದೆ. ಈ ಬಗ್ಗೆ ಸಾರಾಸಗಟಾಗಿ ಆದೇಶ ನೀಡುವುದು ಹೇಗೆ ಸಾಧ್ಯ ಎಂದೂ ಸುಪ್ರೀಂ ಕೋರ್ಟ್ ಪ್ರಶ್ನಿಸಿತು.

‘ಕಾನೂನು ನಿಯಮಗಳ ಪಾಲನೆಯನ್ನು ಯಾರೂ ಆಕ್ಷೇಪಿಸಲಾಗದು. ಈ ಕುರಿತು ಮಧ್ಯಂತರ ಆದೇಶ ನೀಡಲು ಸಾಧ್ಯವೇ? ಹಾಗೆ ಆದೇಶವನ್ನು ನೀಡಿದರೆ ಕಾನೂನು ಕ್ರಮಕೈಗೊಳ್ಳದಂತೆ ಸ್ಥಳೀಯ ಆಡಳಿತವನ್ನು ತಡೆದಂತಾಗುವುದಿಲ್ಲವೇ’ ಎಂದು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಪಿ.ಎಸ್.ನರಸಿಂಹ ಅವರಿದ್ದ ನ್ಯಾಯಪೀಠ ಪ್ರಶ್ನಿಸಿತು.

ಹಿಂಸೆ, ಗಲಭೆ ಕೃತ್ಯಗಳ ಆರೋಪಿಗಳ ಆಸ್ತಿ ನೆಲಸಮ ಕುರಿತಂತೆ ಉತ್ತರ ಪ್ರದೇಶ ಮತ್ತು ಇತರೆ ಕೆಲ ರಾಜ್ಯಗಳಲ್ಲಿ ನಡೆಯುತ್ತಿರುವ ಕಾರ್ಯಾಚರಣೆ ವಿರುದ್ಧ ಸ್ಪಷ್ಟ ನಿರ್ದೇಶನ ನೀಡಬೇಕು ಎಂದು ಕೋರಿ ಜಮಾಯತ್ ಉಲಮಾ–ಐ–ಹಿಂದ್ ಅರ್ಜಿ ಸಲ್ಲಿಸಿತ್ತು.

ಗುರುವಾರ, ಜುಲೈ 14, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪ್ರಚಾರ

ರಾಜಸ್ಥಾನದ ಜೈಪುರದಲ್ಲಿ ಬುಧವಾರ 'ಹಿಟ್: ದ ಫಸ್ಟ್ ಕೇಸ್' ಸಿನಿಮಾದ ಪ್ರಚಾರದ ಅಂಗವಾಗಿ ನಡೆದ ಪತ್ರಿಕಾಗೋಷ್ಠಿಯಲ್ಲಿ ನಟ ಸಾನ್ಯಾ ಮಲ್ಹೋತ್ರ ಪಾಲ್ಗೊಂಡಿದ್ದರು

Aakash + BYJU'S

JEE (MAIN) 2022
Session-I

ಆಕಾಶಿಯನ್ಸ್‌ರಿಂದ ಭಾರತದಾದ್ಯಂತ ಅತ್ಯುತ್ತಮ ಪ್ರದರ್ಶನ!

8 State Toppers | 63 Subject# Toppers | 628 99+ Percentilers & Counting | 2157 95+ Percentilers (Including Classroom + Distance & Digital)

ಕರ್ನಾಟಕದ ಶಾಖೆಗಳಿಂದ ಉನ್ನತ ಪ್ರದರ್ಶಕರು

99.99 Percentile
Apoorv Tandon
2 Year Classroom

99.94 Percentile
Pavitra Gupta
2 Year Classroom

99.91 Percentile
Sanjana Garai
1 Year Classroom

99.91 Percentile
Pranav Choukse
2 Year Classroom

99.86 Percentile
Hrishikesh N Gangule
2 Year Classroom


99.83 Percentile
Dinesh Chandu B V
2 Year Classroom

99.80 Percentile
S Pon Adithi
2 Year Classroom

99.77 Percentile
Aditya Bhagwat
1 Year Classroom

99.74 Percentile
Gobind Singh
2 Year Classroom

99.70 Percentile
Sayan Das
2 Year Classroom

99.68 Percentile
Sanjay Bhat
2 Year Classroom

99.59 Percentile
U Shriram
2 Year Classroom

99.56 Percentile
V Abhiram
2 Year Classroom

99.49 Percentile
Srijan S Bhat
2 Year Classroom

99.45 Percentile
Dhyan
2 Year Classroom

and many more...

Though every care has been taken to publish the result correctly, yet Aakash Educational Services Ltd. shall not be responsible for inadvertent error, if any.
#100 Marks in Physics or Chemistry or Maths.

ಪ್ರವೇಶಗಳು ಪ್ರಾರಂಭವಾಗಿವೆ

ಪುನರಾವರ್ತಿತ/XII ತೇರ್ಗಡೆಯಾದ ಬ್ಯಾಚ್‌ಗಳು
for JEE / NEET 2023
Hurry! Batches begin soon.

> 50% ವರೆಗಿನ ವಿದ್ಯಾರ್ಥಿವೇತನವನ್ನು ಪಡೆಯಿರಿ
ಪ್ರವೇಶ ಮತ್ತು ಸ್ಕಾಲರ್‌ಶಿಪ್ ಪರೀಕ್ಷೆಗೆ ಹಾಜರಾಗಿ
ಉಚಿತವಾಗಿ ನೋಂದಾಯಿಸಲು iacst.aakash.ac.in ಗೆ
ಭೇಟಿ ನೀಡಿ ಅಥವಾ ಈ ಕೋಡ್ ಅನ್ನು ಸ್ಕ್ಯಾನ್ ಮಾಡಿ

25 Branches in Karnataka

BENGALURU
HSR Layout: 8800013044
Hebbal: 8800013045
WhiteField: 8800013049
Banaswadi: 9311476789
Rajarajeshwari Nagar: 7836999994
Indira Nagar: 8800013046
Jaya Nagar: 8800013047
Rajaji Nagar: 8800013048
Banerghatta Road: 8800013043
T. Dasarahalli: 8800878217
Seegehalli: 8800902396
MYSORE
(Kuvempunagar): 8800013052
(Near Suburban Bus Stand): 7428899148
BELGAUM: 8800012965
HUBBALLI: 8800013051
Mangaluru: 8800012964
Bellary: 8800898251
Davanagere: 8800898210
Dharwad: 8800909381
Gulbarga: 8800901459
Hassan: 8800897304
Kolar: 8800876124
Mandya: 8800901164
Shimoga: 8800898692
Udupi: 8800898735

Scan code to locate the nearest centre

Download Aakash App
GET IT ON Google Play | Download on the App Store

CALL (TOLL-FREE)
1800-102-2727

VISIT
aakash.ac.in

Aakash + BYJU'S

ಸತತ ಮಳೆ: ಮತ್ತೆ 380 ಮನೆಗಳಿಗೆ ಹಾನಿ • ಬೆಂಗಳೂರಿನಲ್ಲಿ ಗೋಡೆ ಕುಸಿದು ಇಬ್ಬರು ಸಾವು

ಜಮೀನು ಜಲಾವೃತ, ಸ್ಮಾರಕಗಳು ಮುಳುಗಡೆ

ಪ್ರಜಾವಾಣಿ ವಾರ್ತೆ

ಮಂಗಳೂರು/ಕಲಬುರಗಿ/ಮೈಸೂರು: ರಾಜ್ಯದ ಚಿಕ್ಕಮಗಳೂರು, ಶಿವಮೊಗ್ಗ, ಕೊಡಗು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಬುಧವಾರ ಮಳೆಯ ಬಿರುಸು ತುಸು ತಗ್ಗಿದೆ. ಗೋಡೆ ಕುಸಿದು ಇಬ್ಬರು ಮೃತಪಟ್ಟಿದ್ದರೆ, ಕಾವೇರಿ ನದಿಯಲ್ಲಿ ಇಬ್ಬರು ಯುವಕರು ಕೊಚ್ಚಿ ಹೋಗಿದ್ದಾರೆ. ವಿವಿಧೆಡೆ 380 ಮನೆಗಳಿಗೆ ಹಾನಿಯಾಗಿದೆ. ಈ ಪೈಕಿ 29 ಮನೆಗಳು ಪೂರ್ಣವಾಗಿ ಕುಸಿದಿವೆ.

ಮಂಡ್ಯ ಜಿಲ್ಲೆಗೆ ಪ್ರವಾಸಕ್ಕೆ ಬಂದಿದ್ದ ಇಬ್ಬರು ಯುವಕರು ಕಾವೇರಿ ನದಿ ನೀರಿಗೆ ಸಿಲುಕಿ ಕೊಚ್ಚಿ ಹೋಗಿದ್ದಾರೆ. ಶೋಧ ಕಾರ್ಯ ನಡೆದಿದೆ. ಬೆಂಗಳೂರಿನ ಯಲಹಂಕದ ನಿವಾಸಿ ಅಶೋಕ್ (26) ಕುಟುಂಬ ಸದಸ್ಯರ ಸಮ್ಮುಖದಲ್ಲೇ ನೀರಿನ ಸೆಳೆತಕ್ಕೆ ಸಿಕ್ಕು ಕೊಚ್ಚಿಹೋದರು. ಮೈಸೂರಿನ ವಿದ್ಯಾವರ್ಧಕ ಕಾಲೇಜಿನ ವಿದ್ಯಾರ್ಥಿ ಸೃಜನ್ (20) ಜಲಾಶಯದ ಬಳಿ ನದಿಗೆ ಮಂಗಳವಾರ ಸಂಜೆ ಹಾರಿದ್ದಾರೆ. ಇದು, ಆಕಸ್ಮಿಕವೋ, ಆತ್ಮಹತ್ಯೆ ಯತ್ನವೊ ಎಂಬುದು ಗೊತ್ತಾಗಿಲ್ಲ.

ಬೆಂಗಳೂರಿನ ದೀಪಾಂಜಲಿ ನಗರದಲ್ಲಿ ಶಿಥಿಲಗೊಂಡಿದ್ದ ಕಾಂಪೌಂಡ್ ಕುಸಿದು ವಾಲ್ಮೀಕಿನಗರದ 10ನೇ ಕ್ರಾಸ್‌ನ ನಿವಾಸಿಗಳಾದ ರಾಜಮಣಿ (35), ಬಾಲು(30) ಮೃತಪಟ್ಟಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು ವ್ಯಾಪ್ತಿಯಲ್ಲಿ ತೋಟ, ಜಮೀನುಗೆ ನೀರು ನುಗ್ಗಿದೆ. ಮೂಡಿಗೆರೆ, ಹೆಸಗಲ್, ಕಳಸ, ತನುಡಿ, ಬಕ್ಕಿಯಲ್ಲಿ ತಲಾ ಮನೆ ಕುಸಿದಿದೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಮಳೆ ತಗ್ಗಿದ್ದರೂ ಕಡಲ್ಕೊರೆತದ ತೀವ್ರತೆ ಕಡಿಮೆ ಆಗಿಲ್ಲ.

ಬಳ್ಳಾರಿ ಜಿಲ್ಲೆಯ ಗಂಗಾವತಿ–ಕಂಪ್ಲಿ ಸೇತುವೆ ಬುಧವಾರ ಜಲಾವೃತವಾಗಿರುವುದು

ಮಳೆಹಾನಿ ಪರಿಹಾರದ ದರ (₹ಗಳಲ್ಲಿ)

ವಿಷಯ	ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಮಾರ್ಗಸೂಚಿ ದರ	ರಾಜ್ಯದ ಹೆಚ್ಚುವರಿ ಮೊತ್ತ	ಒಟ್ಟು ಪರಿಷ್ಕೃತ ಮೊತ್ತ
ಮಾನವ ಜೀವಹಾನಿ	4 ಲಕ್ಷ	1 ಲಕ್ಷ	5 ಲಕ್ಷ
ಗೃಹೋಪಯೋಗಿ ವಸ್ತುಗಳ ಹಾನಿ	3,800	6,200	10,000
ಶೇ 75ಕ್ಕಿಂತ ಹೆಚ್ಚಿನ ಮನೆಹಾನಿ	95,100	4,04,900	5 ಲಕ್ಷ
ಶೇ 25ರಿಂದ ಶೇ 75ರಷ್ಟು ತೀವ್ರವಾದ ಮನೆಹಾನಿ	95,100	4,04,100	5 ಲಕ್ಷ
ಶೇ 25ರಿಂದ ಶೇ 75ರಷ್ಟು ಮನೆಹಾನಿ (ದುರಸ್ತಿ)	95,100	2,04,900	3 ಲಕ್ಷ
ಶೇ 15ರಿಂದ 25ರಷ್ಟು ಮನೆಹಾನಿ	5,200	44,800	50,000

ಪುತ್ತೂರು ತಾಲ್ಲೂಕಿನ ಸಂಟ್ಯಾರ್ ಸೇತುವೆ ಬಳಿ ಮಾಣಿ-ಮೈಸೂರು ರಾಷ್ಟ್ರೀಯ ಹೆದ್ದಾರಿ ಬಳಿ ತಿರುವಿನಲ್ಲಿ ಕಾರಿನ ಮೇಲೆ ಮರ ಉರುಳಿದ್ದು, ಕಾರಿನಲ್ಲಿದ್ದ ಮಗು ಸಹಿತ ಐವರು ಅಪಾಯದಿಂದ ಪಾರಾಗಿದ್ದಾರೆ. ವಿದ್ಯುತ್ ತಂತಿ ತಗುಲಿ ಹೋರಿ ಮೃತಪಟ್ಟಿದೆ.

ಕಲ್ಯಾಣ ಕರ್ನಾಟಕದ ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ ಜಿಲ್ಲೆಯಲ್ಲಿ ಮಳೆ ತಗ್ಗಿದೆ.

ಮಳೆ: ಎಲ್ಲಿ, ಎಷ್ಟು?

	ಸೆಂಟಿಮೀಟರ್‌ಗಳಲ್ಲಿ
ಆಗುಂಬೆ (ಶಿವಮೊಗ್ಗ)	20.1
ಬೆಟ್ಟದಹಳ್ಳಿ (ಕೊಡಗು)	20
ಚಕ್ರಾ (ಶಿವಮೊಗ್ಗ)	15.3
ಕಿಗ್ಗಾ (ಚಿಕ್ಕಮಗಳೂರು)	14
ಹೊಸಕೆರೆ (ಚಿಕ್ಕಮಗಳೂರು)	13.6
ಗಾಳಿಬೀಡು (ಕೊಡಗು)	10
ಗೇರುಸೊಪ್ಪ (ಶಿವಮೊಗ್ಗ)	7.7
ಸೂಪಾ (ಉತ್ತರ ಕನ್ನಡ)	7.7
ಶಿರಸಿ (ಉತ್ತರ ಕನ್ನಡ)	7
ಮಡಿಕೇರಿ (ಕೊಡಗು)	5
ಭಾಗಮಂಡಲ (ಕೊಡಗು)	5

4 ದಿನ ಮಳೆ

ಬೆಂಗಳೂರು: ಕರಾವಳಿ, ಮಲೆನಾಡು ಭಾಗದಲ್ಲಿ ಇನ್ನೂ ನಾಲ್ಕು ದಿನ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ.

ತುಂಗಭದ್ರಾ ಜಲಾಶಯದಿಂದ ನದಿಗೆ ನೀರು ಹರಿಸಿದ್ದು, ಕೊಪ್ಪಳ ಜಿಲ್ಲೆ ಆನೆಗೊಂದಿಯಲ್ಲಿರುವ ಕೃಷ್ಣದೇವರಾಯರ ಸಮಾಧಿ, ಹಂಪಿ ಮಾರ್ಗದಲ್ಲಿರುವ 64 ಸಾಲಿನ ಕಂಬಗಳ ದೇಗುಲ, ಗಂಗಾವತಿ–ಕಂಪ್ಲಿ ನಡುವಿನ ಸೇತುವೆ ಮುಳುಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	123.50	60,413	33,607
ಹಾರಂಗಿ	2,859	2,854	13,140	15,000
ಕಬಿನಿ	2284.00	2,283	34,200	38,000
ಹೇಮಾವತಿ	2,922	2,920.50	25,075	26,000
ಲಿಂಗನಮಕ್ಕಿ	1,819	1,784.8	53,412	-
ಸೂಪಾ (ಮೀ)	564	533.40	28,722	-
ಮಾಣಿ	595	579.90	7,168	-
ತುಂಗಭದ್ರಾ	1,633	1,631.54	1,13,656	1,03,174
ಮಲಪ್ರಭಾ	2079.5	2,059.70	8,400	194
ಘಟಪ್ರಭಾ	2,175	2,124.30	19,963	114
ಭದ್ರಾ	186	180.2	40,920	156
ಆಲಮಟ್ಟಿ (ಮೀ)	519.6	517.32	1,04,305	1,25,000
ನಾರಾಯಣಪುರ (ಮೀ)	492.25	491.29	1,15,000	1,35,188

* ನೆಲಮಟ್ಟದಿಂದ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಹಂಪಿಯಲ್ಲಿ ಪುರಂದರ ಮಂಟಪ, ವಿಜಯನಗರ ಕಾಲದ ಕಾಲು ಸೇತುವೆ, ಚಕ್ರತೀರ್ಥ, ಸ್ನಾನಘಟ್ಟ, ರಾಮ–ಲಕ್ಷ್ಮಣ ದೇವಸ್ಥಾನದ ಅಂಗಳ ಮುಳುಗಿದೆ.

ಕಂಪ್ಲಿ ಬಳಿ ಗಂಗಾವತಿ–ಕಂಪ್ಲಿ ಸೇತುವೆಗೆ ಸಮನಾಗಿ ನೀರು ಹರಿಯುತ್ತಿದ್ದು, ಸಂಚಾರ ಬಂದ್ ಆಗಿದೆ.

ಶಿವಮೊಗ್ಗದಲ್ಲಿ 291 ಮನೆಗಳು, ಬೀದರ್ ಜಿಲ್ಲೆಯಲ್ಲಿ 68 ಮನೆಗಳು, ಹಾಸನ ಜಿಲ್ಲೆಯಲ್ಲಿ ಆರು, ಕೊಡಗು ಜಿಲ್ಲೆಯಲ್ಲಿ 7 ಮನೆಗಳಿಗೆ ಹಾನಿಯಾಗಿದೆ.

ಹಾಸನ ಜಿಲ್ಲೆಯ ಹೇಮಾವತಿ ಜಲಾಶಯ ಭರ್ತಿಗೆ ಎರಡು ಅಡಿಯಷ್ಟೇ ಬಾಕಿ ಇದೆ. ಬೆಳಗಾವಿ ಜಿಲ್ಲೆ ವ್ಯಾಪ್ತಿಯಲ್ಲಿ ಕೃಷ್ಣಾ ನದಿಯ ಹರಿವಿನ ಮಟ್ಟ ಇನ್ನಷ್ಟು ಏರಿದ್ದರೂ ಸದ್ಯ, ಪ್ರವಾಹ ಸ್ಥಿತಿ ತಗ್ಗಿದೆ.

ಮುಂಬೈನ ದಾದರ್ ಸಮುದ್ರ ದಂಡೆಯಲ್ಲಿ ಬುಧವಾರ ದಡಕ್ಕೆ ದೈತ್ಯ ಅಲೆಗಳು ಅಪ್ಪಳಿಸಿದವು –ಪಿಟಿಐ ಚಿತ್ರ

ಗುಜರಾತ್‌ನಲ್ಲಿ 14 ಮಂದಿ ಸಾವು

ಅಹಮದಾಬಾದ್/ಮುಂಬೈ (ಪಿಟಿಐ): ಗುಜರಾತ್ ಹಾಗೂ ಮಹಾರಾಷ್ಟ್ರದಲ್ಲಿ 'ಮಹಾ' ಮಳೆ ಮುಂದುವರಿದಿದ್ದು, ನದಿ ಹಾಗೂ ಕಾಲುವೆಗಳು ಉಕ್ಕಿ ಹರಿಯುತ್ತಿವೆ. ನದಿ ತಟದ ಗ್ರಾಮಗಳು ಹಾಗೂ ತಗ್ಗು ಪ್ರದೇಶದ ಬಡಾವಣೆಗಳು ಜಲಾವೃತಗೊಂಡಿವೆ. ಪ್ರವಾಹದಿಂದಾಗಿ ಅನೇಕರು ಸಾವಿಗೀಡಾಗಿದ್ದಾರೆ.

'ದಕ್ಷಿಣ ಗುಜರಾತ್ ಮತ್ತು ಸೌರಾಷ್ಟ್ರದ ವಿವಿಧೆಡೆ ಬುಧವಾರ 14 ಮಂದಿ ಮೃತಪಟ್ಟಿದ್ದಾರೆ. ನೆರೆಪೀಡಿತ ಪ್ರದೇಶಗಳಿಂದ 31 ಸಾವಿರಕ್ಕೂ ಅಧಿಕ ಮಂದಿಯನ್ನು ಸ್ಥಳಾಂತರಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಮಳೆ ಬಾಧಿತ ಜಿಲ್ಲೆಗಳ ಸಮೀಕ್ಷೆ ನಡೆಸಿ ಕೂಡಲೇ ವರದಿ ನೀಡುವಂತೆ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ' ಎಂದು ಸಚಿವ ರಾಜೇಂದ್ರ ತ್ರಿವೇದಿ ಹೇಳಿದ್ದಾರೆ.

'ದಕ್ಷಿಣ ಗುಜರಾತ್ ಹಾಗೂ ಸೌರಾಷ್ಟ್ರದ ಹಲವು ಜಿಲ್ಲೆಗಳಲ್ಲಿ ಮುಂದಿನ 24 ಗಂಟೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಹೀಗಾಗಿ ಈ ಜಿಲ್ಲೆಗಳಲ್ಲಿ 'ರೆಡ್ ಅಲರ್ಟ್' ಘೋಷಿಸಲಾಗಿದೆ. ರಕ್ಷಣಾ ಕಾರ್ಯಕ್ಕಾಗಿ ಎನ್‌ಡಿಆರ್‌ಎಫ್‌ನ 18 ತಂಡಗಳನ್ನು ನಿಯೋಜಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಹಾರಾಷ್ಟ್ರದ ಚಂದ್ರಾಪುರ ಜಿಲ್ಲೆಯ ಸೇತುವೆಯೊಂದರ ಮಧ್ಯೆ ಸಿಲುಕಿದ್ದ ಬಸ್‌ನಿಂದ 35 ಪ್ರಯಾಣಿಕರನ್ನು ಪೊಲೀಸರು ರಕ್ಷಿಸಿದ್ದಾರೆ.

'ನಾಲ್ಕು ದಿನಗಳಿಂದ ಅಡುಗೆ ಮಾಡಿಲ್ಲ'

ಔರಂಗಬಾದ್ (ಪಿಟಿಐ): ಮಹಾರಾಷ್ಟ್ರದ ಹಿಂಗೋಲಿ ಜಿಲ್ಲೆಯ ಕುರುಂದಾ ಗ್ರಾಮದಲ್ಲಿ ನೆಲೆಸಿರುವ ಸುಮಾರು 300 ಕುಟುಂಬಗಳು ನಾಲ್ಕು ದಿನಗಳಿಂದ ಮನೆಯಲ್ಲಿ ಅಡುಗೆಯನ್ನೇ ಮಾಡಿಲ್ಲ!

'ಆಹಾರ ಪದಾರ್ಥ ಹಾಗೂ ಇತರೆ ಅಗತ್ಯ ವಸ್ತುಗಳು ಕೊಚ್ಚಿ ಹೋಗಿವೆ. ಸುಮಾರು 150 ಮನೆಗಳು ಕುಸಿದು ಬಿದ್ದಿವೆ' ಎಂದು ಕುರುಂದಾ ಗ್ರಾಮದ ಮುಖ್ಯಸ್ಥ ರಾಜು ಇಂಗೋಳೆ ಅಳಲು ತೋಡಿಕೊಂಡಿದ್ದಾರೆ.

'ಮಿಲಿಟರಿ ಹೋಟೆಲ್'ಗೆ ಮರಾಠ ಅಭಿವೃದ್ಧಿ ನಿಗಮದ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮರಾಠ ಅಭಿವೃದ್ಧಿ ನಿಗಮವು ರಾಜ್ಯದಾದ್ಯಂತ ಮರಾಠ ಶೈಲಿಯ 40 ಮಿಲಿಟರಿ ಹೋಟೆಲ್‌ಗಳ ಆರಂಭಕ್ಕೆ ಆರ್ಥಿಕ ನೆರವು ನೀಡಲು ನಿರ್ಧರಿಸಿದೆ.

ಬುಧವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಿಗಮದ ಅಧ್ಯಕ್ಷ ಮಾರುತಿ ರಾವ್ ಮುಳೆ ಮತ್ತು ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್ ಪಾಗೋಜಿ, 'ಬೆಂಗಳೂರು ನಗರದಲ್ಲಿ 10 ಮತ್ತು ಉಳಿದ 30 ಜಿಲ್ಲೆಗಳಲ್ಲಿ ತಲಾ ಒಂದು ಮರಾಠ ಶೈಲಿಯ ಮಿಲಿಟರಿ ಹೋಟೆಲ್‌ಗಳನ್ನು ತೆರೆಯಲು ನೆರವು ನೀಡಲಾಗುವುದು' ಎಂದು ತಿಳಿಸಿದರು.

ಪ್ರತಿ ಹೋಟೆಲ್‌ಗೆ ತಲಾ ₹ 5 ಲಕ್ಷ ಸಹಾಯಧನ ಮತ್ತು ₹ 2.5 ಲಕ್ಷ ಸಾಲವನ್ನು ನಿಗಮದಿಂದ ನೀಡಲಾಗುವುದು. ಈ ಯೋಜನೆ ಅನುಷ್ಠಾನಕ್ಕೆ ಅನುಮತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಒಪ್ಪಿಗೆ ದೊರೆತ ತಕ್ಷಣ ಯೋಜನೆಯನ್ನು ಜಾರಿಗೊಳಿಸಲಾಗುವುದು ಎಂದು ಮಾಹಿತಿ ನೀಡಿದರು.

ನಿಗಮಕ್ಕೆ ₹ 100 ಕೋಟಿ ಅನುದಾನ ಒದಗಿಸಲಾಗಿದೆ. ಇದೇ 19ರಂದು ನಗರದ ಅರಮನೆ ಮೈದಾನದಲ್ಲಿ ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮರಾಠ ಅಭಿವೃದ್ಧಿ ನಿಗಮವನ್ನು ಉದ್ಘಾಟಿಸುವರು. ಬೆಂಗಳೂರಿನ ಗವಿಪುರದ ಭವಾನಿ ದತ್ತ ಪೀಠದ ಗೋಸಾಯಿ ಮಠದ ವೇದಾಂತಾಚಾರ್ಯ, ಮಂಜುನಾಥ ಭಾರತಿ ಸ್ವಾಮೀಜಿ, ಬಿಜೆಪಿ ಶಾಸಕ ಬಿ.ಎಸ್.ಯಡಿಯೂರಪ್ಪ, ಹಿಂದುಳಿದ ವರ್ಗಗಳ ಅಭಿವೃದ್ಧಿ ಖಾತೆ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ್ ನಾರಾಯಣ ಭಾಗವಹಿಸುವರು ಎಂದು ಮುಳೆ ತಿಳಿಸಿದರು.

ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಮರಾಠ ಸಮುದಾಯದ ವಿದ್ಯಾರ್ಥಿಗಳಿಗೆ ಐದು ವರ್ಷಗಳ ಕಾಲ ತಲಾ ₹ 1 ಲಕ್ಷ ಪ್ರೋತ್ಸಾಹಧನವನ್ನು ನಿಗಮದಿಂದ ನೀಡಲಾಗುವುದು. ಮರಾಠ ಅಭಿವೃದ್ಧಿ ನಿಗಮದಲ್ಲೂ ಗಂಗಾ ಕಲ್ಯಾಣ ಯೋಜನೆ ಅನುಷ್ಠಾನಕ್ಕೆ ಚಾಲನೆ ನೀಡಲಾಗಿದೆ ಎಂದರು.

'ಭಾಷಾ ಹೋರಾಟಕ್ಕೆ ಸಂಬಂಧವಿಲ್ಲ'

'ಮಹಾರಾಷ್ಟ್ರ ಗಡಿ ಪ್ರದೇಶದಲ್ಲಿ ಮರಾಠಿ ಭಾಷಿಕರು ಭಾಷೆಗೆ ಸಂಬಂಧಿಸಿದಂತೆ ನಡೆಸುವ ಹೋರಾಟಕ್ಕೂ ಮರಾಠಿ ಸಮುದಾಯಕ್ಕೂ ಸಂಬಂಧವಿಲ್ಲ' ಎಂದು ನಿಗಮದ ಅಧ್ಯಕ್ಷ ಮಾರುತಿರಾವ್ ಮುಳೆ ಹೇಳಿದರು.

'ಮರಾಠ ಸಮುದಾಯ ಮತ್ತು ಮರಾಠಿ ಭಾಷಿಕರು ಎರಡೂ ಒಂದೇ ಅಲ್ಲ. ಮರಾಠರು, ಬ್ರಾಹ್ಮಣರು, ಲಿಂಗಾಯತರು ಸೇರಿದಂತೆ ಅನೇಕ ಸಮುದಾಯಗಳ ಜನರು ಮರಾಠಿ ಭಾಷೆ ಮಾತನಾಡುತ್ತಾರೆ. ನಾವು ಇಲ್ಲಿನ ಮೂಲ ನಿವಾಸಿಗಳು' ಎಂದರು.

ಇಂದಿನಿಂದ 2 ದಿನ ಬಿಜೆಪಿ ಚಿಂತನಾ ಶಿಬಿರ

ಅವಧಿಪೂರ್ಣ ಚುನಾವಣೆ, ಕಾಂಗ್ರೆಸ್ ತಂತ್ರಕ್ಕೆ ಪ್ರತಿತಂತ್ರ ರೂಪಿಸುವ ಕುರಿತು ಸಭೆಯಲ್ಲಿ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಭರ್ಜರಿಯಾಗಿ ತಯಾರಿ ನಡೆಸುತ್ತಿರುವ ಬೆನ್ನಲ್ಲೇ ಬಿಜೆಪಿಯೂ ತನ್ನ ಪಕ್ಷದ ಶಾಸಕರು ಮತ್ತು ಸಚಿವರ ಚಿಂತನಾ ಸಭೆಯನ್ನು ಹಮ್ಮಿಕೊಂಡಿದೆ. ಅವಧಿಪೂರ್ಣ ಚುನಾವಣೆ ಮತ್ತು ಇತರ ಮಹತ್ವದ ವಿಷಯಗಳ ಬಗ್ಗೆ ಸಭೆಯಲ್ಲಿ ಚಿಂತನ–ಮಂಥನ ನಡೆಯಲಿದೆ.

ದೇವನಹಳ್ಳಿಯ ರೆಸಾರ್ಟ್‌ವೊಂದರಲ್ಲಿ ನಡೆಯಲಿದ್ದು, ವಿಧಾನಸಭಾ ಚುನಾವಣೆಯ ಸಿದ್ಧತೆಯ ಬಗ್ಗೆ ಚರ್ಚೆ ನಡೆಸಲು ಆಯ್ದ ಶಾಸಕರು ಮತ್ತು ಸಚಿವರನ್ನು ಈ ಸಭೆಗೆ ಆಹ್ವಾನಿಸಲಾಗಿದೆ. 14 ರಂದು ಶಾಸಕರ ಸಭೆ ಮತ್ತು 15 ರಂದು ಸಚಿವರ ಸಭೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಈ ಸಭೆಯಲ್ಲಿ ವಿಧಾನಸಭಾ ಚುನಾವಣೆ ದೃಷ್ಟಿಯಿಂದ ಮುಂದಿನ ಎಂಟು ತಿಂಗಳಲ್ಲಿ ಪಕ್ಷ ಅನುಸರಿಸಬೇಕಾದ ನಡೆಯ ಬಗ್ಗೆ ವಿಸ್ತೃತವಾದ ಚರ್ಚೆ ನಡೆಯಲಿದೆ. ಅಲ್ಲದೆ, ಅವಧಿಪೂರ್ವ ಚುನಾವಣೆ ನಡೆಸಿದರೆ ಪಕ್ಷಕ್ಕೆ ಲಾಭವಾಗುವುದೇ ಅಥವಾ ಅವಧಿ ಪೂರ್ಣವಾಗುವರೆಗೂ ಕಾಯಬೇಕೆ ಎಂಬ ಬಗ್ಗೆಯೂ ಚರ್ಚೆ ನಡೆಯಲಿದೆ.

ಮುಖ್ಯವಾಗಿ, ಶೇ 40 ಕಮಿಷನ್, ಹಿಜಾಬ್, ಪಠ್ಯ ಪುಸ್ತಕ ಪರಿಷ್ಕರಣೆ ವಿವಾದ ಸೇರಿದಂತೆ ಹಲವು ವಿಷಯಗಳನ್ನು ಕಾಂಗ್ರೆಸ್ ಚುನಾವಣಾ ಅಸ್ತ್ರವಾಗಿ ಬಳಸಿಕೊಳ್ಳುವ ಸಾಧ್ಯತೆ ಇರುವುದರಿಂದ, ಅದಕ್ಕೆ ಹೇಗೆ ತಿರುಗೇಟು ನೀಡಬೇಕು ಎಂಬ ಬಗ್ಗೆಯೂ ಪ್ರಸ್ತಾವ ಆಗಲಿದೆ ಎಂದು ಮೂಲಗಳು ಹೇಳಿವೆ.

ಬೂತ್ ಮಟ್ಟದಲ್ಲಿ ಸಂಘಟನೆಯನ್ನು ಚುರುಕುಗೊಳಿಸುವ ಬಗ್ಗೆ ಮತ್ತು ಪಕ್ಷದ ಶಾಸಕರ ಅಥವಾ ಸಂಭಾವ್ಯ ಅಭ್ಯರ್ಥಿಗಳ ಶಕ್ತಿ– ಸಾಮರ್ಥ್ಯವನ್ನು ಒರೆಗೆ ಹಚ್ಚುವ ಕೆಲಸವೂ ಆಗಲಿದೆ. ವಿಧಾನಸಭಾ ಕ್ಷೇತ್ರಗಳಲ್ಲಿ ಶಾಸಕರು ಮತ್ತು ಸರ್ಕಾರದ ಮಟ್ಟದಲ್ಲಿ ಸಚಿವರು ಪರಿಣಾಮಕಾರಿಯಾಗಿ ಕೆಲಸ ಮಾಡುವ ಮೂಲಕ ಉಳಿದಿರುವ ಅವಧಿಯಲ್ಲಿ ಜನರ ಮನಸ್ಸು ಗೆಲ್ಲುವ ಬಗ್ಗೆ ಸೂಚನೆ ನೀಡಲಾಗುವುದು.

ಆರ್‌ಎಸ್‌ಎಸ್ ಮೇಲೆ ಟೀಕಾ ಪ್ರಹಾರ ನಡೆಸುವ ಮೂಲಕ ಮುಸ್ಲಿಂ ಮತ್ತು ಕ್ರೈಸ್ತ ಮತಗಳ ಕ್ರೋಡೀಕರಣಕ್ಕೆ ಕಾಂಗ್ರೆಸ್ ಪ್ರಯತ್ನಿಸುತ್ತಿದ್ದು, ಇದಕ್ಕೆ ಯಾವ ರೀತಿ ಪ್ರತ್ಯುತ್ತರ ನೀಡಬೇಕು ಅಥವಾ ಈ ಟೀಕೆಗಳಿಗೆ ನಿರ್ಲಕ್ಷ್ಯ ಮಾಡಬೇಕೆ ಎಂಬ ಬಗ್ಗೆಯೂ ಚರ್ಚೆ ನಡೆಯಲಿದೆ ಎಂದು ಮೂಲಗಳು ಹೇಳಿವೆ.

ನಿಷ್ಠಾವಂತರಿಗೆ ನಿಗಮ–ಮಂಡಳಿ ಅಧ್ಯಕ್ಷ ಸ್ಥಾನ

ವಿಧಾನಸಭೆ ಚುನಾವಣೆಗೆ ಕಾರ್ಯಕರ್ತರನ್ನು ಅಣಿಗೊಳಿಸಲು ನಿಗಮ–ಮಂಡಳಿಗಳ ನೇಮಕದಲ್ಲಿ ನಿಷ್ಠಾವಂತ ಕಾರ್ಯಕರ್ತರು ಮತ್ತು ಶಾಸಕರಿಗೆ ಆದ್ಯತೆ ನೀಡಲಾಗಿದೆ. ಇದಕ್ಕೆ ಪೂರಕವಾಗಿಯೇ ಪಟ್ಟಿಯನ್ನು ರಚಿಸಲಾಗಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಈ ಹಿಂದೆ ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಪಕ್ಷ ಮತ್ತು ಆರ್‌ಎಸ್‌ಎಸ್ ನೀಡಿದ್ದ ಪಟ್ಟಿಗೆ ಹೆಚ್ಚಿನ ಮಾನ್ಯತೆ ನೀಡಿರಲಿಲ್ಲ ಎಂಬ ಆರೋಪವೂ ಕೇಳಿ ಬಂದಿತ್ತು. ತಮ್ಮ ಬೆಂಬಲಿಗರಿಗೆ ಮತ್ತು ಪ್ರಭಾವಿಗಳಿಗೆ ಅಧ್ಯಕ್ಷ ಸ್ಥಾನ ನೀಡಲಾಗಿತ್ತು. ಆದ್ದರಿಂದ ಈ ಬಾರಿ ಆ ರೀತಿ ಲೋಪ ಆಗದಂತೆ ಎಚ್ಚರವಹಿಸಲಾಗಿದೆ. ಈ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಕೆಲವು ದಿನಗಳ ಹಿಂದೆ ಆರ್‌ಎಸ್‌ಎಸ್ ಮುಖಂಡರ ಜತೆಗೆ ಮಾತುಕತೆ ನಡೆಸಿದ್ದರು.

ಇನ್ನೂ ಕೆಲವು ಅಧ್ಯಕ್ಷರನ್ನು ಕೈಬಿಟ್ಟ ಬಳಿಕ ಹೊಸ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಆಗಸ್ಟ್‌ನಲ್ಲಿ ಅಧ್ಯಕ್ಷರ ಬದಲಾವಣೆ?

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರ ಅವಧಿ ಆಗಸ್ಟ್‌ನಲ್ಲಿ ಪೂರ್ಣಗೊಳ್ಳಲಿದ್ದು, ಆ ಬಳಿಕ ಹೊಸ ಅಧ್ಯಕ್ಷರ ನೇಮಕ ಆಗಲಿದೆ. ಯಾರನ್ನು ಈ ಸ್ಥಾನಕ್ಕೆ ಕೂರಿಸಬಹುದು ಎಂಬ ಚರ್ಚೆ ಬಿಜೆಪಿಯಲ್ಲಿ ಆರಂಭವಾಗಿದೆ. ಚುನಾವಣೆ ಸಂದರ್ಭದಲ್ಲಿ ಹೆಚ್ಚು ಶ್ರಮವಹಿಸಿ ಕೆಲಸ ಮಾಡಬಲ್ಲ ಉತ್ಸಾಹಿ ಯುವ ನಾಯಕರಿಗೆ ಅಧ್ಯಕ್ಷ ಪಟ್ಟಕಟ್ಟುವ ಸಾಧ್ಯತೆ ಇದೆ ಎಂದೂ ಮೂಲಗಳು ತಿಳಿಸಿವೆ.

'ಪ್ರತಿಪಕ್ಷಗಳದ್ದು ನಿದ್ರಿಸುವ ಸಿಂಹ ನಂಬುವ ಸಂಸ್ಕೃತಿ'

ಪ್ರಜಾವಾಣಿ ವಾರ್ತೆ

ಉಡುಪಿ: 'ವಿರೋಧ ಪಕ್ಷಗಳು ನಿದ್ರೆ ಮಾಡುತ್ತಿರುವ ಸಿಂಹವನ್ನು ನಂಬುವ ಸಂಸ್ಕೃತಿ ಪಾಲಿಸಿಕೊಂಡು ಬಂದರೆ, ಬಿಜೆಪಿಯು ಪ್ರಧಾನಿ ನರೇಂದ್ರ ಮೋದಿ ಅವರ ಕ್ರಿಯಾಶೀಲತೆಗೆ ತಕ್ಕಂತೆ ಸಶಕ್ತ ಹಾಗೂ ಘರ್ಜನಾ ರೂಪದಲ್ಲಿರುವ ಸಿಂಹವನ್ನು ನಂಬಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಅವರು, 'ರಾಷ್ಟ್ರಲಾಂಛನವನ್ನು ವಿರೋಧ ಪಕ್ಷಗಳು ಹಾಗೂ ಬಿಜೆಪಿ ನೋಡುವ ದೃಷ್ಟಿಕೋನಗಳು ಬೇರೆ. ಸಾರಾನಾಥದಲ್ಲಿರುವ ಅಶೋಕ ಸ್ತಂಭದ ಮೇಲಿರುವ ಸಿಂಹದ ಮಾದರಿಯಂತೆಯೇ ರಾಷ್ಟ್ರಲಾಂಛನ ನಿರ್ಮಿಸಿದ್ದರೂ ವಿರೋಧ ಪಕ್ಷಗಳು ರಾಜಕೀಯ ಮಾಡುತ್ತಿವೆ. ಸಿಂಹ ಉಗ್ರವಾಗಿದೆ, ವ್ಯಗ್ರವಾಗಿದೆ ಎಂದು ಹೇಳಿಕೆ ನೀಡುತ್ತ ಮೊಸರಲ್ಲಿ ಕಲ್ಲು ಹುಡುಕುತ್ತಿವೆ' ಎಂದು ಟೀಕಿಸಿದರು.

ಸಂಸದ, ಶಾಸಕರ ಮನೆಗೆ ಮುತ್ತಿಗೆ

ಆರ್ಯ ಈಡಿಗ ಸಮಾಜದ ಬೇಡಿಕೆ ಈಡೇರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಕಲಬುರಗಿ: ಆರ್ಯ ಈಡಿಗ ಸಮುದಾಯದ ವಿವಿಧ ಬೇಡಿಕೆಗಳನ್ನು ಸರ್ಕಾರಕ್ಕೆ ಮನಗಾಣಿಸಿ, ಈಡೇರಿಸುವಲ್ಲಿ ಜಿಲ್ಲೆಯ ಬಿಜೆಪಿಯ ಸಂಸದರು ಮತ್ತು ಶಾಸಕರು ವಿಫಲವಾಗಿದ್ದಾರೆ ಎಂದು ಆರೋಪಿಸಿ ಅವರ ಮನೆಗಳಿಗೆ, ಆರ್ಯ ಈಡಿಗ ರಾಷ್ಟ್ರೀಯ ಮಹಾಮಂಡಳಿ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ನೇತೃತ್ವದಲ್ಲಿ ಸಮುದಾಯದವರು ಬುಧವಾರ ಮುತ್ತಿಗೆ ಹಾಕಿದರು.

ಸಂಸದ ಡಾ. ಉಮೇಶ ಜಾಧವ, ಶಾಸಕರಾದ ದತ್ತಾತ್ರೇಯ ಪಾಟೀಲ ರೇವೂರ, ಬಸವರಾಜ ಮತ್ತಿಮೂಡ, ರಾಜಕುಮಾರ ಪಾಟೀಲ ತೇಲ್ಕೂರ ಸೇರಿ ಮತ್ತಿತರರ ಮನೆ ಎದುರು ಅವರು ಪ್ರತಿಭಟನೆ ನಡೆಸಿದರು. ಬೇಡಿಕೆಗಳನ್ನು ಈಡೇರಿಸಬೇಕೆಂದು ಪಟ್ಟು ಹಿಡಿದರು. ಜಿಲ್ಲಾ ಉಸ್ತುವಾರಿ ಸಚಿವ ಮುರಗೇಶ ನಿರಾಣಿ ಅಧ್ಯಕ್ಷತೆಯಲ್ಲಿ ಸಭೆಯಿದ್ದ ಕಾರಣ, ಸಂಸದ ಹಾಗೂ ಶಾಸಕರು ಪ್ರತಿಭಟನಕಾರರನ್ನು ಭೇಟಿ ಆಗಲಿಲ್ಲ.

'ಸೇಂದಿ ಮಾರಾಟಕ್ಕೆ ಅನುಮತಿ ಸೇರಿ ಇತರ ಬೇಡಿಕೆಗಳನ್ನು ಈಡೇರಿಸುವ ಕುರಿತು ಸಂಸದರು ಮುಖ್ಯಮಂತ್ರಿಯವರ ಜೊತೆ ಚರ್ಚಿಸುವುದಾಗಿ ಸಂಸದರು ಭರವಸೆ ನೀಡಿದ್ದಾರೆ. ಸರ್ಕಾರದ ಮೇಲೆ ಇನ್ನಷ್ಟು ಒತ್ತಡ ಹೇರಲು ಜುಲೈ 27ರಂದು ಬೀದರ್ ಜಿಲ್ಲೆಯ ಬಸವಕಲ್ಯಾಣದ ಬೆಟ್ಟದ ಬಾಲಕುಂದ ಗ್ರಾಮದಿಂದ ಕಲಬುರಗಿವರೆಗೆ ಪಾದಯಾತ್ರೆ ನಡೆಸಿ, ಜಿಲ್ಲಾಧಿಕಾರಿ ಕಚೇರಿ ಎದುರು ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತೇವೆ' ಎಂದು ಪ್ರಣವಾನಂದ ಸ್ವಾಮೀಜಿ ತಿಳಿಸಿದರು.

ಕಲಬುರಗಿಯಲ್ಲಿ ಬುಧವಾರ ಸಂಸದ ಡಾ. ಉಮೇಶ ಜಾಧವ ಅವರ ನಿವಾಸದ ಎದುರು ಆರ್ಯ ಈಡಿಗ ರಾಷ್ಟ್ರೀಯ ಮಹಾಮಂಡಳಿ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು

'ಪಿಎಸ್‌ಐ ಅಕ್ರಮ: ಸಿದ್ದರಾಮಯ್ಯ ಸಿಕ್ಕಿಬೀಳ್ತಾರೆ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಪಿಎಸ್‌ಐ ನೇಮಕಾತಿ ಪ್ರಕರಣದ ಮೂಲ ಹುಡುಕುತ್ತಾ ಹೊರಟರೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರೇ ಸಿಕ್ಕಿ ಬೀಳುತ್ತಾರೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಬುಧವಾರ ಆರೋಪಿಸಿದರು.

ಮೇಲುಕೋಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಡಿವೈಎಸ್‌ಪಿ ಶಾಂತಾರಾಂ ಅಕ್ರಮ ನೇಮಕಾತಿ ಪ್ರಕರಣ ನಡೆದಿತ್ತು, ಅವರು ತನಿಖೆ ಮಾಡಿದರಾ? ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಕಾತಿ ಅಕ್ರಮದ ತನಿಖೆ ಆಯಿತಾ? ಹಗರಣಗಳನ್ನು ಮುಚ್ಚಿ ಹಾಕುವುದೇ ಅವರ ಕೆಲಸವಾಗಿತ್ತು' ಎಂದು ಕಿಡಿಕಾರಿದರು.

'75 ವರ್ಷ ವಯಸ್ಸಾದರೂ ಅವರು ಕೀಳುಮಟ್ಟದ ರಾಜಕಾರಣ ಮಾಡುತ್ತಿದ್ದಾರೆ. ಅಂಥವರು ಇರುವುದೇ ದುರಂತ.' ಎಂದರು.

ಸಂಕ್ಷಿಪ್ತ ಸುದ್ದಿ

ಬಿಎಸ್‌ವೈ ಭೇಟಿಯಾದ ಲಕ್ಷ್ಮೀ ಹೆಬ್ಬಾಳ್ಕರ

ಬೆಂಗಳೂರು: ಕಾಂಗ್ರೆಸ್ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ ಅವರು ಬಿಜೆಪಿ ಶಾಸಕ ಬಿ.ಎಸ್.ಯಡಿಯೂರಪ್ಪ ಅವರನ್ನು ಬುಧವಾರ ಭೇಟಿ ಮಾಡಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಯಡಿಯೂರಪ್ಪ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಹೆಬ್ಬಾಳ್ಕರ್, 'ವಿಧಾನಮಂಡಲ ಸಮಿತಿಯ ಸಭೆ ಇತ್ತು. ಹೀಗಾಗಿ ಬೆಂಗಳೂರಿಗೆ ಬಂದಿದ್ದೆ. ಸಾಮಾನ್ಯವಾಗಿ ಬೆಂಗಳೂರಿಗೆ ಬಂದಾಗ ಅವರನ್ನು ಭೇಟಿ ಮಾಡುತ್ತೇನೆ. ಅವರು ನಮ್ಮ ಸಮಾಜದ ಹಿರಿಯರು. ಇವತ್ತು ಗುರುಪೂರ್ಣಿಮಾ ಆಗಿದ್ದರಿಂದ ಯಡಿಯೂರಪ್ಪ ಆಶೀರ್ವಾದ ಪಡೆಯಲು ಭೇಟಿಯಾಗಿದ್ದೆ. ಆದರೆ ರಾಜಕಾರಣ ಕುರಿತು ಚರ್ಚೆ ನಡೆಸಿಲ್ಲ' ಎಂದು ಹೇಳಿದರು.

'ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿ ಕೊಡಬೇಕು ಎಂಬ ಬಯಕೆ ಯಡಿಯೂರಪ್ಪ ಅವರಿಗಿತ್ತು. ಆದರೆ ಅವರ ಅವಧಿಯಲ್ಲಿ ಸಾಧ್ಯವಾಗಲಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮೇಲೆ ವಿಶ್ವಾಸವಿದೆ. ಮೀಸಲಾತಿ ಸಿಗುವ ನಂಬಿಕೆ ಇದೆ ಎಂದು ತಿಳಿಸಿದರು.

ಪರಿಸರ ಸೂಕ್ಷ್ಮ ಪ್ರದೇಶ: ಸಚಿವ ಜ್ಞಾನೇಂದ್ರ ವಿರೋಧ

ಬೆಂಗಳೂರು: ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ ಪಶ್ಚಿಮಘಟ್ಟದ ಪರಿಸರ ಸೂಕ್ಷ್ಮ ಪ್ರದೇಶವನ್ನು ಗುರುತಿಸಿ ಹೊಸದಾಗಿ ಹೊರಡಿಸಿರುವ ಅಧಿಸೂಚನೆ, ಮಲೆನಾಡು ಭಾಗದ ಜನರ ಭವಿಷ್ಯಕ್ಕೆ ಮಾರಕವಾಗಲಿದೆ ಎಂದು ದೂರಿರುವ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು, ಈ ಬಗ್ಗೆ ಚರ್ಚಿಸಲು ಇದೇ 18 ರಂದು ಮಲೆನಾಡು ಪ್ರದೇಶದ ಶಾಸಕರ ಸಭೆ ಕರೆದಿದ್ದಾರೆ.

ಕಳೆದ ವಾರ ಪರಿಸರ ಮತ್ತು ಅರಣ್ಯ ಸಚಿವಾಲಯ ಕರ್ನಾಟಕವೂ ಸೇರಿ ಒಟ್ಟು 56,823 ಚದರ ಕಿ.ಮೀ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಅಧಿಸೂಚನೆ ಹೊರಡಿಸಿದೆ. ಆಕ್ಷೇಪಣೆ ಸಲ್ಲಿಸಲು ಎರಡು ತಿಂಗಳ ಗಡುವನ್ನೂ ನೀಡಿದೆ. ಒಂದು ವೇಳೆ ಈ ಅಧಿಸೂಚನೆ ಅನುಷ್ಠಾನಗೊಂಡರೆ ಮಲೆನಾಡಿಗರ ಬದುಕು ಮಸುಕಾಗುತ್ತದೆ. ಅಭಿವೃದ್ಧಿ ಕುಂಟುತ್ತದೆ, ತೀವ್ರ ಆರ್ಥಿಕ ಹಾನಿಗೆ ತುತ್ತಾಗಬೇಕಾಗುತ್ತದೆ ಎಂದು ಜ್ಞಾನೇಂದ್ರ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ ಈ ಹಿಂದೆ ಡಾ.ಕಸ್ತೂರಿರಂಗನ್ ಸಮಿತಿ ವರದಿಯನ್ನು ತಿರಸ್ಕರಿಸಿದೆ ಹಾಗೂ ತನ್ನ ನಿಲುವಿನ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನೂ ತಿಳಿಸಿದೆ. ಸರ್ಕಾರ ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಮಾಡಬಾರದೆಂಬುದು ಈ ಭಾಗದ ಶಾಸಕರ ಆಗ್ರಹವಾಗಿದೆ. ಸೋಮವಾರದ ಸಭೆಯಲ್ಲಿ ಅಧಿಸೂಚನೆಯನ್ನು ವಿರೋಧಿಸಿ, ಗೊತ್ತುವಳಿಯನ್ನು ಮಂಡನೆ ಮಾಡಲಾಗುವುದು ಎಂದಿದ್ದಾರೆ.

'ಸ್ವಾಮೀಜಿಗಳ ಗಮನಕ್ಕೆ ತಂದು ನೈತಿಕ ಶಿಕ್ಷಣ ಪಠ್ಯಕ್ರಮ'

ಶಿರಸಿ: 'ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ರಾಜ್ಯದಲ್ಲಿ ನೈತಿಕ ಶಿಕ್ಷಣ ವಿಷಯ ಕಲಿಸುವ ವ್ಯವಸ್ಥೆ ಜಾರಿಗೆ ಬರಲಿದೆ. ಪ್ರಮುಖ ಸ್ವಾಮೀಜಿಗಳ ಗಮನಕ್ಕೆ ತಂದು ಪಠ್ಯಕ್ರಮ ರೂಪಿಸಲಾಗುವುದು' ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದರು.

ತಾಲ್ಲೂಕಿನ ಸ್ವರ್ಣವಲ್ಲಿ ಮಠದಲ್ಲಿ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಅವರ 32ನೇ ಚಾತುರ್ಮಾಸ ಆರಂಭದ ಅಂಗವಾಗಿ ಬುಧವಾರ ಆಯೋಜಿಸಿದ್ದ ಧರ್ಮಸಭೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನೈತಿಕ ಶಿಕ್ಷಣ ಪಠ್ಯದಲ್ಲಿ ಭಗವದ್ಗೀತೆಯೂ ಸೇರಿದಂತೆ ಭಾರತೀಯ ಸಂಸ್ಕೃತಿಯ ಕುರಿತ ಹಲವು ವಿಚಾರಗಳಿರಲಿವೆ' ಎಂದು ಅವರು ಹೇಳಿದರು.

ಗುರುವಾರ, ಜುಲೈ 14, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 194 | ಪುಟ 16 • www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಹೊಸದಾಗಿ ಬ್ಯಾಂಕಿಂಗ್ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗಾಗಿ ಪರೀಕ್ಷೆಯ ಸ್ವರೂಪ, ಸಿದ್ಧತೆ ಕುರಿತ ಮಾಹಿತಿ ಇಲ್ಲಿದೆ

ಸೆನ್ಸೆಕ್ಸ್ 53,514 | ನಿಫ್ಟಿ 15,966 | ಚಿನ್ನ (Std. 10g) ₹52,300 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹57,600 (ಬೆಂಗಳೂರು) | ₹/$ 79.81

ಸಂಖ್ಯೆ-ಸುದ್ದಿ

ಮುಂಗಾರು ಹಂಗಾಮು ಆಹಾರ ಧಾನ್ಯ ಬಿತ್ತನೆಗೆ ನಿರಾಸಕ್ತಿ

ಮಸ್ಕ್ ವಿರುದ್ಧ ಟ್ವಿಟರ್ ಕಾನೂನು ಸಮರ 8

ಸಂತ್ರಸ್ತರಿಗೆ ಆಹಾರದ ಕಿಟ್ • ಮುಖ್ಯಮಂತ್ರಿ ಬೊಮ್ಮಾಯಿ ಘೋಷಣೆ

ತುರ್ತು ನೆರವಿಗೆ ₹ 500 ಕೋಟಿ

ಪ್ರಜಾವಾಣಿ ವಾರ್ತೆ

ಉಡುಪಿ: ರಾಜ್ಯದಲ್ಲಿ ಭಾರಿ ಮಳೆಯಿಂದ ಹಾನಿಗೊಂಡಿರುವ ರಸ್ತೆಗಳ ಅಭಿವೃದ್ಧಿ, ವಿದ್ಯುತ್ ಸಂಪರ್ಕ, ಸಣ್ಣ ಸೇತುವೆಗಳ ದುರಸ್ತಿ, ತುರ್ತು ಕಾರ್ಯಗಳಿಗೆ ತಕ್ಷಣ ₹ 500 ಕೋಟಿ ಬಿಡುಗಡೆ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಪ್ರವಾಹ ಪರಿಸ್ಥಿತಿ ಮತ್ತು ಮಳೆ ಹಾನಿ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರಸ್ತೆಗಳು ಹದಗೆಟ್ಟಿವೆ. ಮೂಲಸೌಕರ್ಯ ಹಾಳಾಗಿವೆ. ತಕ್ಷಣ ಮೂಲಸೌಕರ್ಯ ಮರುಸ್ಥಾಪನೆಗೆ ₹ 500 ಕೋಟಿ ಬಿಡುಗಡೆ ಮಾಡಲಾಗುವುದು. ಜಿಲ್ಲಾವಾರು ಹಾನಿವರದಿ ತರಿಸಿಕೊಂಡು ಎನ್‌ಡಿಆರ್‌ಎಫ್ ಅಡಿಯಲ್ಲಿ ಕೇಂದ್ರದಿಂದ ಪರಿಹಾರ ಕಾರ್ಯಗಳಿಗಾಗಿ ಹೆಚ್ಚಿನ ನೆರವನ್ನು ಕೋರಲಾಗುವುದು ಎಂದು ಅವರು ತಿಳಿಸಿದರು.

ಕಾಳಜಿ ಕೇಂದ್ರಗಳಲ್ಲಿ ಮೊಟ್ಟೆ: ನೆರೆ ಪೀಡಿತ ಸಂತ್ರಸ್ತರಿಗಾಗಿ ತೆರೆಯುವ ಕಾಳಜಿ ಕೇಂದ್ರಗಳಲ್ಲಿ ಸಂತ್ರಸ್ತರಿಗೆ ಪೌಷ್ಟಿಕ ಆಹಾರದ ಜತೆಗೆ ಮೊಟ್ಟೆಯನ್ನು ನೀಡಲಾಗುವುದು. ಸಂಬಂಧಿಗಳ ಮನೆಯಲ್ಲಿ ಉಳಿದಿರುವ ಸಂತ್ರಸ್ತರಿಗೂ ಆಹಾರದ ಕಿಟ್ ನೀಡಲಾಗುವುದು ಎಂದರು.

ಅಧ್ಯಯನ: ಕೊಡಗು, ಕರಾವಳಿ ಜಿಲ್ಲೆಗಳಲ್ಲಿ ಸಂಭವಿಸಿರುವ ಭೂಕಂಪನದ ಅಧ್ಯಯನ ನಡೆಸಿ, ಪರಿಹಾರ ಕ್ರಮಗಳ ಕುರಿತು ವರದಿ ಸಲ್ಲಿಸಲು ಜಿಯೋಗ್ರಾಫಿಕಲ್ ಸರ್ವೇ ಆಫ್ ಇಂಡಿಯಾ, ಬೆಂಗಳೂರು, ಮೈಸೂರು ವಿಶ್ವವಿದ್ಯಾಲಯಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಭೂಕುಸಿತ ತಡೆಗೆ ಅಮೃತ ವಿಶ್ವವಿದ್ಯಾಲಯದಿಂದ ಕೊಡಗು ಜಿಲ್ಲೆಯಲ್ಲಿ ಅಧ್ಯಯನ ನಡೆದಿದೆ. ಕರಾವಳಿ ಜಿಲ್ಲೆಗಳು, ಪಶ್ಚಿಮ ಘಟ್ಟಗಳಲ್ಲೂ ಅಧ್ಯಯನಕ್ಕೆ ಆದೇಶಿಸಲಾಗಿದೆ. ವರದಿ ಶಿಫಾರಸುಗಳ ಅನುಷ್ಠಾನಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ಕೃಷ್ಣಾ ನದಿಯ ಸಂಭವನೀಯ ಪ್ರವಾಹ ಪೀಡಿತ ಪ್ರದೇಶಗಳಿಗೆ ಜಿಲ್ಲಾಧಿಕಾರಿ ನೇತೃತ್ವದ ತಂಡ ಪರಿಸ್ಥಿತಿ ಪರಿಶೀಲನೆಗೆ ಬುಧವಾರ ಯಾಂತ್ರೀಕೃತ ಬೋಟ್‌ನಲ್ಲಿ ತೆರಳಿತು —ಪ್ರಜಾವಾಣಿ ಚಿತ್ರ

32 ಮಂದಿ ಸಾವು: 14 ಕಾಳಜಿ ಕೇಂದ್ರ

ಉಡುಪಿ: ಈ ಮುಂಗಾರು ಹಂಗಾಮಿನಲ್ಲಿ ಭಾರಿ ಮಳೆ ಸಂಬಂಧಿತ ಅವಘಡಗಳಲ್ಲಿ ರಾಜ್ಯದಲ್ಲಿ ಇದುವರೆಗೂ 32 ಮಂದಿ ಮೃತಪಟ್ಟಿದ್ದಾರೆ. ಐವರು ಕಣ್ಮರೆಯಾಗಿದ್ದಾರೆ. 34 ಜನರಿಗೆ ಗಾಯಗಳಾಗಿವೆ.

‘ಪ್ರವಾಹದಲ್ಲಿ ಸಿಲುಕಿದ್ದ 300ಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದೆ. ಸಂತ್ರಸ್ತರಿಗಾಗಿ ಒಟ್ಟು 14 ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ತಿಳಿಸಿದರು.

ಪರಿಹಾರ ಕಾರ್ಯಗಳಿಗೆ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್‌ನ ನಾಲ್ಕು ತಂಡಗಳು ಕಾರ್ಯನಿರ್ವಹಿಸುತ್ತಿವೆ. 355 ಹೆಕ್ಟೇರ್ ಕೃಷಿ, ತೋಟಗಾರಿಕಾ ಬೆಳೆಗಳಿಗೆ ಹಾನಿಯಾಗಿದೆ ಎಂದು ತಿಳಿಸಿದರು.

ಕರಾವಳಿಯ ಮೂರು ಜಿಲ್ಲೆಗಳಲ್ಲಿಯೇ 2,187 ಕಿ.ಮೀ ನಷ್ಟು ಲೋಕೋಪಯೋಗಿ, ಗ್ರಾಮೀಣ ರಸ್ತೆಗಳು ಹಾನಿಗೊಳಗಾಗಿವೆ. 1062 ಮನೆಗಳು ಕುಸಿದಿವೆ. 168 ಸೇತುವೆಗಳಿಗೆ ಹಾನಿಯಾಗಿದ್ದು, 5,595 ವಿದ್ಯುತ್ ಕಂಬಗಳು ಬಿದ್ದಿವೆ. 422 ಟ್ರಾನ್ಸ್‌ಫಾರ್ಮರ್‌ಗಳು ಹಾಳಾಗಿವೆ ಎಂದು ವಿವರ ನೀಡಿದರು.

ಪರಿಹಾರ ಮೊತ್ತ ₹1 ಲಕ್ಷ ಹೆಚ್ಚಳ

ಬೆಂಗಳೂರು: ಅತಿವೃಷ್ಟಿ ಮತ್ತು ಪ್ರವಾಹದಿಂದ ಸಂಭವಿಸುವ ಮಾನವ ಜೀವಹಾನಿ, ಮನೆ ಕುಸಿತ ಹಾಗೂ ಗೃಹಬಳಕೆ ವಸ್ತುಗಳ ಹಾನಿಗಳಿಗೆ ನೀಡುವ ಪರಿಹಾರದ ಮೊತ್ತವನ್ನು ಹೆಚ್ಚಳ ಮಾಡಿ ಕಂದಾಯ ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ.

ಮಾನವ ಜೀವಹಾನಿ ಹಾಗೂ ಶೇ 75ರಷ್ಟು ಹಾನಿಯಾಗುವ ಮನೆಗಳಿಗೆ ನೀಡುವ ಪರಿಹಾರದ ಮೊತ್ತವನ್ನು ₹ 4 ಲಕ್ಷದಿಂದ ₹ 5 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಗೃಹ ಬಳಕೆ ವಸ್ತುಗಳ ಹಾನಿಗೆ ನೀಡುವ ಪರಿಹಾರದ ಮೊತ್ತವನ್ನು ₹ 10 ಸಾವಿರಕ್ಕೆ ಹೆಚ್ಚಿಸಲಾಗಿದೆ. ಅತಿವೃಷ್ಟಿ ಮತ್ತು ಪ್ರವಾಹದಿಂದ ಹಾನಿಯಾಗಿರುವ ಪ್ರಕರಣಗಳಲ್ಲಿ ಪರಿಷ್ಕೃತ ದರದಲ್ಲೇ ಪರಿಹಾರ ನೀಡುವಂತೆ ಆದೇಶಿಸಲಾಗಿದೆ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ, ಮತ್ತು ರಾಜ್ಯ ವಿಪತ್ತು ಪರಿಹಾರ ನಿಧಿ ಮಾರ್ಗಸೂಚಿಯಂತೆ ಇದುವರೆಗೆ ಪರಿಹಾರ ನೀಡಲಾಗುತ್ತಿತ್ತು. ಈಗ ರಾಜ್ಯ ಸರ್ಕಾರ ಹೆಚ್ಚುವರಿ ಪರಿಹಾರ ನೀಡಲು ನಿರ್ಧರಿಸಿದೆ. ಮಳೆಹಾನಿಯಿಂದ ಸಂತ್ರಸ್ತರಾಗುವ ಎಲ್ಲ ಕುಟುಂಬಗಳಿಗೂ ತಲಾ ₹ 10 ಸಾವಿರವನ್ನು ಬಟ್ಟೆ, ದಿನಬಳಕೆ ವಸ್ತುಗಳ ಖರೀದಿಗೆ ತುರ್ತು ಪರಿಹಾರದ ರೂಪದಲ್ಲಿ ಅವರ ಬ್ಯಾಂಕ್ ಖಾತೆಗಳಿಗೆ ತಕ್ಷಣ ವರ್ಗಾಯಿಸುವಂತೆಯೂ ಸೂಚಿಸಲಾಗಿದೆ.

ಅಮ್ರಿತ್ ಪೌಲ್ ಸೂಚಿಸಿದ ಖಾತೆಗಳಿಗೆ ₹ 1.36 ಕೋಟಿ

ಬೆಂಗಳೂರು: ಪಿಎಸ್‌ಐ ನೇಮಕಾತಿ ಪರೀಕ್ಷಾ ಅಕ್ರಮದಲ್ಲಿ ಭಾಗಿಯಾದ ಆರೋಪದಡಿ ಬಂಧನದಲ್ಲಿರುವ ನೇಮಕಾತಿ ವಿಭಾಗದ ಹಿಂದಿನ ಎಡಿಜಿಪಿ ಅಮ್ರಿತ್ ಪೌಲ್ ಸೂಚಿಸಿದ್ದ ಖಾತೆಗಳಿಗೆ ಅವರ ಅಧೀನದಲ್ಲಿ ಡಿವೈಎಸ್‌ಪಿ ಯಾಗಿದ್ದ ಶಾಂತಕುಮಾರ್ ಒಟ್ಟು ₹ 1.36 ಕೋಟಿ ಸಂದಾಯ ಮಾಡಿರುವುದು ಸಿಐಡಿ ಪೊಲೀಸರ ತನಿಖೆಯಲ್ಲಿ ಪತ್ತೆಯಾಗಿದೆ.

ಅಮ್ರಿತ್ ಪೌಲ್

ನೇಮಕಾತಿ ಪರೀಕ್ಷೆಯ ಒಎಂಆರ್ ಪ್ರತಿಗಳನ್ನು ಇರಿಸಿದ್ದ ಭದ್ರತಾ ಕೊಠಡಿಯ ಬೀಗದ ಕೀಯನ್ನು ತನ್ನ ಕೈಕೆಳಗಿನ ನೌಕರರಿಗೆ ನೀಡಿ, ಅವರ ಮೂಲಕವೇ ಉತ್ತರ ಪತ್ರಿಕೆಗಳನ್ನು ತಿದ್ದಿಸಿದ್ದ ಕೃತ್ಯವು ದೃಢಪಟ್ಟ ಬಳಿಕ ಪೌಲ್ ಅವರನ್ನು ಬಂಧಿಸಲಾಗಿತ್ತು. ಈ ಬೆಳವಣಿಗೆಗಳು ನಡೆದಿರುವಾಗಲೇ ದೊಡ್ಡ ಮೊತ್ತದ ಹಣವೂ ವರ್ಗಾವಣೆ ಆಗಿರುವುದನ್ನು ತನಿಖಾಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ಪೌಲ್ ಸೂಚಿಸಿದ್ದ ವ್ಯಕ್ತಿಗಳ ವಿವಿಧ ಬ್ಯಾಂಕ್ ಖಾತೆಗಳಿಗೆ ಶಾಂತಕುಮಾರ್ ಹಣ ಸಂದಾಯ ಮಾಡಿರುವುದಕ್ಕೆ ತನಿಖಾ ತಂಡಕ್ಕೆ ಸಾಕ್ಷ್ಯಗಳು ಲಭಿಸಿವೆ.

8ನೇ ಪುಟ ನೋಡಿ

ಶ್ರೀಲಂಕಾದಲ್ಲಿ ತುರ್ತು ಪರಿಸ್ಥಿತಿ: ಅಧ್ಯಕ್ಷ ಪರಾರಿ

ಕೊಲಂಬೊ (ಪಿಟಿಐ): ಶ್ರೀಲಂಕಾದ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ಮಂಗಳವಾರ ತಡರಾತ್ರಿ ಮಾಲ್ದೀವ್ಸ್‌ಗೆ ಪರಾರಿಯಾಗಿದ್ದಾರೆ. ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರನ್ನು ಪ್ರಭಾರಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ. ಬುಧವಾರ ಈ ಸುದ್ದಿ ಬಹಿರಂಗವಾಗು ತ್ತಿದ್ದಂತೆ, ದೇಶದಾದ್ಯಂತ ತೀವ್ರ ಪ್ರತಿಭಟನೆ ನಡೆದಿದೆ. ಪ್ರತಿಭಟನೆಯನ್ನು ನಿಯಂತ್ರಿಸಲು, ಪ್ರಧಾನಿ ರಾಷ್ಟ್ರೀಯ ತುರ್ತು ಪರಿಸ್ಥಿತಿ ಘೋಷಿಸಿದ್ದಾರೆ.

ದೇಶದೆಲ್ಲೆಡೆ ಪ್ರತಿಭಟನೆ ತೀವ್ರ ಸ್ವರೂಪ ಪಡೆದು ಬುಧವಾರ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಹೀಗಾಗಿ ಗುರುವಾರ ಬೆಳಿಗ್ಗೆ 5 ಗಂಟೆಯ ವರೆಗೆ ಕರ್ಫ್ಯೂ ಹೇರಲಾಗಿದೆ. ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರುವ ಹೊಣೆಯನ್ನು ಸೇನೆಗೆ ನೀಡಲಾಗಿದೆ. ‘ಕಾನೂನು ಮತ್ತು ಸುವ್ಯವಸ್ಥೆಯನ್ನು ಮರಳಿ ತರಲು ಏನು ಅಗತ್ಯವಿದೆಯೋ, ಅದೆಲ್ಲವನ್ನೂ ಮಾಡಿ’ ಎಂದು ಪ್ರಭಾರಿ ಅಧ್ಯಕ್ಷ ಮತ್ತು ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರು ಸೇನೆ ಮತ್ತು ಪೊಲೀಸರಿಗೆ ಆದೇಶಿಸಿದ್ದಾರೆ. ‘ಅಧ್ಯಕ್ಷ ಗೊಟಬಯ ಮತ್ತು ಪ್ರಧಾನಿ ರಾನಿಲ್ ಅವರು ತಕ್ಷಣವೇ ರಾಜೀನಾಮೆ ನೀಡಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದ್ದಾರೆ.

9ನೇ ಪುಟ ನೋಡಿ

ಒಳ ಪುಟಗಳು

2002ರ ಗಲಭೆ ಪ್ರಕರಣ: ಸಂಜೀವ್ ಭಟ್ ಬಂಧನ 8

ಆರ್ಥಿಕ ಸಂಕಷ್ಟದ ಭೀತಿಯಲ್ಲಿ ಪಾಕಿಸ್ತಾನ 9

ಜುಬೈರ್ ವಿರುದ್ಧದ ಪ್ರಕರಣ ತನಿಖೆಗೆ ಎಸ್‌ಐಟಿ ರಚನೆ 8

ಚಿನ್ನ ಜಯಿಸಿದ ಮೆಹುಲಿ-ಮಾನೆ 10

ಚಿನಕುರಳಿ

ಪ್ರಕಾಶ್ ಶೆಟ್ಟಿ



IN THE HIGH COURT OF KARNATAKA AT BENGALURU
(SUBSTITUTED SERVICE OF NOTICE TO THE RESPONDENT Nos. 1, 2 AND 5 BY WAY OF PAPER PUBLICATION VIDE COURT ORDER DATED: 17.06.2022)
CMP No.10/2019
(VIDEO CONFERENCING/PHYSICAL HEARING)
PETITIONER/S : M/S BHUMI SANDS & AGGREGATES PVT, LTD.,
V/S
RESPONDENT/S :
SRI. T.M.GANGADHARA AND OTHERS
TO, RESPONDENT No's 1, 2 & 5
R1. Sri. T.M.Gangadhara,
S/o Sri. Muniyappa, Aged about 36 years, Residing at Byraveshwara Nilaya, Harohalli Village, Harohalli Hobli, Kanakapura Taluk,
R2. Sri. S.B. Umesh Babu,
S/o Dr. Bheemappa, Aged about 49 years, Residing at No.113, 4th Cross, R.K.Layout, Padmanabhanagara, bangalore-560070.
R5. M/s. Mahalakshmi Enterprises,
Represented by its Partners, No.9, First Floor, 62/2, Anchepalya, kumbalgodu, Kengeri Hobli, Bangalore-560060. ... Respondent/s
Whereas the above named petitioner has filed a CMP on this Court Under Section 11 (5) & 11(6) of Arbitration and Conciliation Act, as the copy annexed hereunto.
Emergent Notice is hereby given to you to appear in this court in person or through an advocate duly instructed or through some one authorized by law to act for you, in this matter on **16.08.2022 at 10.30 AM**, in case you intend to contest the Petition. If you fail to appear, the petition will be dealt with, heard and decided in your absence.
Given under my ad and seal of the Court, this the 17th day of June 2022.
BY ORDER OF THE COURT
ASSISTANT REGISTRAR

BEFORE THE HON'BLE XXV ADDITIONAL CITY CIVIL & SESSIONS JUDGE, AT BENGALURU
G & WC No. 49/2022 (CCH-23)
BETWEEN: 1. Kum. Avika,
Aged about 12 years, D/o Anil Kumar
2. Mas. Avyan, Aged about 7 years D/o Anil Kumar
Petitioner No.1 & 2 are Minors,
Rep by Mother And Natural Guardian
Smt. Sneha Prakash, Aged about 39 years
R/at Svasa Homes, Tower 1, Apt No.1501, 67/P, 6th Cross, Mahantra Layout, Kempegowda Layout, Bengaluru-560019 ...Petitioners
AND
NIL ... Respondents
DRAFT PUBLIC NOTICE
Whereas the petitioners above named represented by their mother/natural guardian has filed the petitioner under section 8 of the Hindu Minority & Guardianship Act, praying to permit her to sell the schedule property for the welfare and future prospectus of her minor children. That it is hereby informed to the public in general that any interested person/s claiming/ having right over the schedule property may appear before the XXV Addl. Hon'ble City Civil Court, at Bengaluru (CCH-23) on **12.08.2022 at 11.00 AM**, through person or through their pleader duly instructed to show cause the notice against the petitioners failing which the matter will be heard and determined exparte.
SCHEDULE PROPERTY
All that piece and parcel of the industrial site bearing No.22, Municipal No.24, Old BBMP Ward No.11, New BBMP Ward No.38, PID No.11-59-24, 3rd Main Road, Yeshwanthapura, Industrial Suburb (Ring Road), 2nd Stage, Tumkur Road, Bengaluru-560022, measuring East to West 127 feet and North to South 119 feet in all measuring 15,113 sqft out of total extent on 34,510 sqft bounded on
East by : Road
West by : Remaining portion of the same property belongs to N.SShashidhar
North by : Road
South by : Remaining portion of the same property belongs to N.K.Ashwatharaman and K Satyanarayana.
By Order of the Court Assistant Registrar
City Civil Court Bangalore
Address for Service
Sri. V.Ravi Prakash, Sri. H.S.Kiran
Advocates, VRP Associates, Opp. To Kanishka Grand, 4th Floor, 5th Cross, Gandhinagar, Bengaluru-560009 Mob No:9986492315
Email: vrpassociates02@gmail.com

ಪದವಿಪೂರ್ವ ಶಿಕ್ಷಣ ಇಲಾಖೆ ನಡೆಗೆ ಬೋಧಕ, ಬೋಧಕೇತರ ವಲಯದ ಆಕ್ಷೇಪ

30 ಎಸ್‌ಒ ಹುದ್ದೆಗಾಗಿ 61 ಎಸ್‌ಡಿಎ ರದ್ದು!

• ರಾಜೇಶ್ ರೈ ಚಟ್ಲ

ಬೆಂಗಳೂರು: ಪದವಿಪೂರ್ವ ಶಿಕ್ಷಣ ಇಲಾಖೆ 30 ಸೂಪರಿಂಟೆಂಡೆಂಟ್ ಹುದ್ದೆಗಳನ್ನು ಶಾಖಾಧಿಕಾರಿ (ಎಸ್‌ಒ) ಹುದ್ದೆಗಳಾಗಿ ಪರಿವರ್ತಿಸಲು, 61 ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ಹುದ್ದೆಗಳನ್ನು ರದ್ದುಪಡಿಸಲು ನಿರ್ಧರಿಸಿದೆ. ಇಲಾಖೆಯ ಈ ನಡೆಗೆ ಬೋಧಕ ಮತ್ತು ಬೋಧಕೇತರ ವಲಯದಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಪದವಿಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರ ಕಚೇರಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಇಲಾಖೆಯ ಹಿಂದಿನ ನಿರ್ದೇಶಕರು 52 ಉಪನ್ಯಾಸಕ ಹುದ್ದೆಗಳನ್ನು ಅನುಪಯುಕ್ತ ಹುದ್ದೆಗಳೆಂದು ಗುರುತಿಸಿ, ಅವುಗಳಲ್ಲಿ 44 ಹುದ್ದೆಗಳನ್ನು ಎಸ್‌ಒ ಹುದ್ದೆಗಳನ್ನಾಗಿ ಪರಿವರ್ತಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಈ ಪ್ರಸ್ತಾವನೆಯ ಕಾರಣ ಇಲಾಖೆಯ 30 ಜಿಲ್ಲಾ ಉಪನಿರ್ದೇಶಕರ ಕಚೇರಿಗಳಲ್ಲಿನ 30 ಸೂಪರಿಂಟೆಂಡೆಂಟ್ ಹುದ್ದೆಗಳನ್ನು 30 ಎಸ್‌ಒ ಹುದ್ದೆಗೆ ಕೆಲವು ಷರತ್ತುಗಳ ಮೇಲೆ ಉನ್ನತೀಕರಿಸಿ, ಜುಲೈ 6ರಂದು ಆದೇಶ ಹೊರಡಿಸಲಾಗಿದೆ.

ಪದವಿಪೂರ್ವ ಶಿಕ್ಷಣ ಇಲಾಖೆಗೆ 956 (ಈ ಪೈಕಿ 546 ಹುದ್ದೆಗಳು ಖಾಲಿ ಇವೆ) ಎಸ್‌ಡಿಎ, 253 ಎಫ್‌ಡಿಎ (ಪ್ರಥಮ ದರ್ಜೆ ಸಹಾಯಕ), 60 ಸೂಪರಿಂಟೆಂಡೆಂಟ್ ಮತ್ತು 15 ಎಸ್‌ಒ ಹುದ್ದೆ ಮಂಜೂರಾಗಿದೆ. ಈ 60 ಸೂಪರಿಂಟೆಂಡೆಂಟ್ ಹುದ್ದೆಗಳಲ್ಲಿ 30 ಹುದ್ದೆಗಳನ್ನು ಎಸ್‌ಒ ಹುದ್ದೆಗಳಾಗಿ ಪರಿವರ್ತಿಸಿ ಆದೇಶಿಸಲಾಗಿದೆ. ಇದರಿಂದಾಗಿ ಎಸ್‌ಒ ಹುದ್ದೆಗಳ ಸಂಖ್ಯೆ 15ರಿಂದ 45ಕ್ಕೆ ಏರಿಕೆ ಆಗಲಿದೆ. ಸೂಪರಿಂಟೆಂಡೆಂಟ್ ಹುದ್ದೆಗಳ ಸಂಖ್ಯೆ 30ಕ್ಕೆ ಇಳಿಯಲಿದೆ.

'ಯಾವುದೇ ಇಲಾಖೆಯಲ್ಲಿ ಹುದ್ದೆಗಳ ಪ್ರಮಾಣವು ಕೆಳಗಿನ ಹಂತದಿಂದ ಮೇಲಿನ ಹಂತಕ್ಕೆ 'ಪಿರಮಿಡ್' ಆಕೃತಿಯಲ್ಲಿರಬೇಕು ಎನ್ನುವುದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ನಿಯಮ. ಆದರೆ, ಇಲಾಖೆಯ ಈ ನಡೆ ನಿಯಮಕ್ಕೆ ವಿರುದ್ಧವಾಗಿದೆ. ಕೆಲವರ ಸ್ವಾರ್ಥಕ್ಕಾಗಿ ಈ ರೀತಿ ಮಾಡಲಾಗುತ್ತಿದೆ. ಸೂಪರಿಂಟೆಂಡೆಂಟ್ ಹುದ್ದೆಗಳ ಸಂಖ್ಯೆ ಕಡಿಮೆ ಆಗುವುದರಿಂದ, ಆ ಹುದ್ದೆಗೆ ಎಫ್‌ಡಿಎ ನೌಕರರು ಬಡ್ತಿ ಹೊಂದುವ ಅವಕಾಶಗಳಿಂದ ವಂಚಿತರಾಗಲಿದ್ದಾರೆ' ಎಂದು ಇಲಾಖೆಯ ಎಫ್‌ಡಿಎ ಆರ್. ಎನ್. ರಂಗನಾಥ್ ತಿಳಿಸಿದರು.

'ಇಲಾಖೆಯ ನಿರ್ದೇಶಕ ರಾಮಚಂದ್ರನ್ ಅವರನ್ನು ಭೇಟಿ ಮಾಡಿ ಈ ಬಗ್ಗೆ ಮನವಿ ಸಲ್ಲಿಸಿದ್ದೇವೆ. ಯಾವುದೇ ಹುದ್ದೆಗಳನ್ನು ಯಾವುದೇ ಕಾರಣಕ್ಕೂ ರದ್ದುಪಡಿಸುವುದಿಲ್ಲವೆಂದು ಅವರು ಭರವಸೆ ನೀಡಿದ್ದಾರೆ' ಎಂದರು.

'ಉಪನ್ಯಾಸಕರ ಹುದ್ದೆಗಳನ್ನು ಎಸ್‌ಒ ಹುದ್ದೆಗಳಾಗಿ ಪರಿವರ್ತಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಹಿಂದಿನಿಂದಲೂ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘವು ಯಾವುದೇ ಕಾರಣಕ್ಕೂ ಬೋಧಕ ಹುದ್ದೆಗಳನ್ನು ಬೋಧಕೇತರ ಹುದ್ದೆಗೆ ಪರಿವರ್ತಿಸದಂತೆ ಮನವಿ ಸಲ್ಲಿಸುತ್ತಲೇ ಬರುತ್ತಿದೆ. ಖಾಲಿ ಇರುವ ಉಪನ್ಯಾಸಕರ ಹುದ್ದೆಗಳ ಭರ್ತಿಗೆ ಆದ್ಯತೆ ನೀಡಬೇಕೇ ಹೊರತು, ಹುದ್ದೆಗಳನ್ನು ಪರಿವರ್ತಿಸುವುದು ಎಷ್ಟು ಸರಿ' ಎಂದು ಉಪನ್ಯಾಸಕರ ಸಂಘದ ಖಜಾಂಚಿ ಎಂ. ಜಯಣ್ಣ ಪ್ರಶ್ನಿಸಿದರು.

'ಎಸ್‌ಡಿಎ ಹುದ್ದೆಗಳನ್ನು ರದ್ದುಪಡಿಸಿದರೆ ದೊಡ್ಡ ದೊಡ್ಡ ಕಾಲೇಜುಗಳಲ್ಲಿ ಉಪನ್ಯಾಸಕರೇ ಕ್ಲರ್ಕ್ ಕೆಲಸ ಮಾಡಬೇಕಾಗುತ್ತದೆ. ಈಗಾಗಲೇ ಎಸ್‌ಡಿಎ ಹುದ್ದೆಗಳು ಖಾಲಿ ಇರುವುದರಿಂದ ಉಪನ್ಯಾಸಕರು ಮತ್ತು ಪ್ರಾಂಶುಪಾಲರು ದ್ವಿಪಾತ್ರ ನಿರ್ವಹಿಸಬೇಕಾಗಿದೆ. ಹೀಗಾಗಿ, ಎಸ್‌ಡಿಎ ಹುದ್ದೆಗಳನ್ನು ರದ್ದುಪಡಿಸುವ ಬದಲು, ಖಾಲಿ ಇರುವ ಹುದ್ದೆಗಳಿಗೆ ತಕ್ಷಣ ನೇಮಕಾತಿ ಮಾಡಬೇಕು' ಎಂದು ಸಂಘದ ಕಾರ್ಯಾಧ್ಯಕ್ಷ ಎಸ್. ಆರ್. ವೆಂಕಟೇಶ್ ಒತ್ತಾಯಿಸಿದರು.

ಇಲಾಖೆಯ ನಿರ್ದೇಶಕ ರಾಮಚಂದ್ರನ್ ಅವರನ್ನು ಸಂಪರ್ಕಕ್ಕೆ ಹಲವು ಬಾರಿ ಯತ್ನಿಸಿದರೂ, ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

'ಆರ್ಥಿಕ 'ಹೊರೆ' ತಪ್ಪಿಸಲು ಹುದ್ದೆ ರದ್ದು'

ಪದವಿಪೂರ್ವ ಶಿಕ್ಷಣ ಇಲಾಖೆಯ 30 ಜಿಲ್ಲಾ ಉಪ ನಿರ್ದೇಶಕರ ಕಚೇರಿಗಳಲ್ಲಿ (ಮಂಗಳೂರು ಮತ್ತು ಕಲಬುರಗಿ ಹೊರತುಪಡಿಸಿ) 30 ಸೂಪರಿಂಟೆಂಡೆಂಟ್ (ವೇತನ ಶ್ರೇಣಿ ₹ 37,900– ₹ 70,850) ಹುದ್ದೆಗಳನ್ನು 30 ಶಾಖಾಧಿಕಾರಿ (ವೇತನ ಶ್ರೇಣಿ ₹ 43,100– ₹ 83,900) ಹುದ್ದೆಗಳಾಗಿ ಪರಿವರ್ತಿಸಲು ನಿರ್ಧರಿಸಲಾಗಿದೆ. ಈ ಉದ್ದೇಶಕ್ಕೆ ಇಲಾಖೆಗೆ ಮಂಜೂರಾಗಿ ಖಾಲಿ ಇರುವ 61 ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳನ್ನು ಗುರುತಿಸಿ ಕೂಡಲೇ ರದ್ದು ಮಾಡಬೇಕು. ಜಿಲ್ಲಾ ಉಪ ನಿರ್ದೇಶಕರ ಕಚೇರಿಗಳಲ್ಲಿ ಉನ್ನತೀಕರಿಸಿದ ಶಾಖಾಧಿಕಾರಿಗಳನ್ನು ಸ್ಥಳಾಂತರ ಮಾಡಬಾರದು ಎಂದೂ ಆದೇಶದಲ್ಲಿ ವಿವರಿಸಲಾಗಿದೆ. ಶಾಖಾಧಿಕಾರಿ ಹುದ್ದೆಗಳಾಗಿ ಪರಿವರ್ತಿಸುವುದರಿಂದ ಉಂಟಾಗುವ ಆರ್ಥಿಕ ಹೊರೆ ಸರಿದೂಗಿಸಲು ಎಸ್‌ಡಿಎ ಹುದ್ದೆಗಳನ್ನು ರದ್ದುಪಡಿಸಲಾಗುತ್ತಿದೆ ಎಂದು ಇಲಾಖೆಯ ಸಿಬ್ಬಂದಿ ಆರೋಪಿಸಿದ್ದಾರೆ.

ನಗರದಲ್ಲಿ ಇಂದು

ಡಿ.ಎಸ್ ವಿಶ್ವನಾಥ್ ಅವರ ಮೂರು ಪುಸ್ತಕಗಳು ಬಿಡುಗಡೆ: ನಿರ್ಮಲಾ ಎಲಿಗಾರ್, ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಮನು ಬಳಿಗಾರ್, ಆಯೋಜನೆ: ಗಣೇಶ್ ಪಬ್ಲಿಕೇಷನ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 9

ಇನ್ಫೊಸಿಸ್ ವಿಜ್ಞಾನ ಪ್ರತಿಷ್ಠಾನದ ನೂತನ ಕಚೇರಿ ಉದ್ಘಾಟನೆ: ಉಪಸ್ಥಿತಿ: ನಾರಾಯಣ ಮೂರ್ತಿ, ಕ್ರಿಸ್ ಗೋಪಾಲಕೃಷ್ಣನ್, ಸ್ಥಳ: ಇನ್ಫೊಸಿಸ್ ವಿಜ್ಞಾನ ಪ್ರತಿಷ್ಠಾನ, ಸೌತ್ ಎಂಡ್ ಸರ್ಕಲ್, ಜಯನಗರ, ಬೆಳಿಗ್ಗೆ 11

ತಿಂಗಳ ಮಾತುಕತೆ: 'ನಾ ಅಲೆಯ ಉಬ್ಬರವಾದೆ' ಪುಸ್ತಕದ ಬಗ್ಗೆ, ಪುಸ್ತಕ ಪರಿಚಯ: ರವಿಕುಮಾರ್ ಬಾಗಿ, ಉಪಸ್ಥಿತಿ: ಗೀತಾ ಹರಿಹರನ್, ಎನ್. ಗಾಯತ್ರಿ, ಎಚ್ ಜಿ. ಜಯಲಕ್ಷ್ಮಿ, ಆಯೋಜನೆ ಹಾಗೂ ಸ್ಥಳ: ಪುಸ್ತಕ ಪ್ರೀತಿ ಮಳಿಗೆ, ಸುಬ್ಬರಾಮಚೆಟ್ಟಿ ರಸ್ತೆ, ನೆಟ್ಟಕಲ್ಲಪ್ಪ ಸರ್ಕಲ್, ಬಸವನಗುಡಿ, ಸಂಜೆ 5

ವೀಣಾ ವಾದನ: ಪ್ರಸ್ತುತಿ: ಮೀನಾ ಮೂರ್ತಿ, ಶ್ರೀವಿದ್ಯಾ, ಮೃದಂಗ: ನರಸಿಂಹನ್, ಖಂಜೀರ: ಸುಬ್ರಹ್ಮಣ್ಯ ಮೋಹಿತೆ, ಆಯೋಜನೆ: ರಾಘವೇಂದ್ರ ಸ್ವಾಮಿಗಳ ಮಠ, ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 7.30

ಭಜನೆ, ಪ್ರವಚನ ಮತ್ತು ಹರಿನಾಮ ಸಂಕೀರ್ತನೆ: ಗಾಯನ: ಮಾನಸಾ ಕುಲಕರ್ಣಿ, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಶ್ರೀನಿವಾಸ ಕಾಖಂಡಕಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂ ಧರ್ಮಪ್ರಚಾರ ಪರಿಷತ್, ಬೆಂಗಳೂರು ಕಾಶಿ ಮಠ, ಸ್ಥಳ: ಬೆಂಗಳೂರು ಕಾಶಿಮಠ, ಮಲ್ಲೇಶ್ವರ, ಸಂಜೆ 6.30

ಎಫ್‌ಕೆಸಿಸಿಐನಿಂದ ಹೂಡಿಕೆದಾರರ ಸಮಾವೇಶ

ಬೆಂಗಳೂರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು (ಎಫ್‌ಕೆಸಿಸಿಐ) ಹುಬ್ಬಳ್ಳಿಯಲ್ಲಿ ಶನಿವಾರ ಮತ್ತು ಭಾನುವಾರ 'ಜಿಲ್ಲಾ ಮಟ್ಟದ ವಾಣಿಜ್ಯ ಮತ್ತು ಕೈಗಾರಿಕಾ ಸಂಘಗಳ ಸಮ್ಮೇಳನ, ಬಂಡವಾಳ ಹೂಡಿಕೆದಾರರ ಸಮಾವೇಶ'ವನ್ನು ಆಯೋಜಿಸಲಿದೆ.

ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಸಹಭಾಗಿತ್ವದಲ್ಲಿ ಈ ಸಮಾವೇಶ ನಡೆಯಲಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸುವರು. ಹುಬ್ಬಳ್ಳಿಯ ಡೆನಿಸನ್ ಹೋಟೆಲ್‌ನಲ್ಲಿ ಇದು ನಡೆಯಲಿದೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ಆರ್. ನಿರಾಣಿ, ಇಂಧನ ಸಚಿವ ವಿ. ಸುನೀಲ್ ಕುಮಾರ್ ಅವರು ಪಾಲ್ಗೊಳ್ಳಲಿದ್ದಾರೆ ಎಂದು ಎಫ್‌ಕೆಸಿಸಿಐ ಅಧ್ಯಕ್ಷ ಡಾ.ಐ.ಎಸ್. ಪ್ರಸಾದ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯದ ಕೈಗಾರಿಕಾ ನೀತಿ, ಬಂಡವಾಳ ಹೂಡಿಕೆಗೆ ಇರುವ ಸಾಧ್ಯತೆಗಳ ಬಗ್ಗೆ, ಒಂದು ಜಿಲ್ಲೆ ಒಂದು ಉತ್ಪನ್ನ ವಿಚಾರ ಕುರಿತು ಭಾಷಣಗಳು ಇರಲಿವೆ ಎಂದು ಪ್ರಸಾದ್ ಹೇಳಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ಕಾರ್ಯಪಾಲಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,ಚಿಕ್ಕಬಳ್ಳಾಪುರ
E-mail ID:eerdwsd.ckb2@gmail.com ದೂರವಾಣಿ ಸಂಖ್ಯೆ:08156-270058
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: ಕಾಅ/ಗ್ರಾ.ಕು.ನೀ.& ನೈ.ವಿ/ಚಿ.ಪುರ/ಟೆಂಡರ್/ಸ.ಇಂ/2/2022-23/Call-3 ದಿನಾಂಕ:08.07.2022
ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ: 04/Call-3/2022-23 ದಿನಾಂಕ: 08.07.2022
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ JJM-2215-SVS ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ಶಿಡ್ಲಘಟ್ಟ ತಾಲ್ಲೂಕಿನ 5 ಗ್ರಾಮಗಳಲ್ಲಿ ನಲ್ಲಿ ನೀರು ಸಂಪರ್ಕ ಕಾಮಗಾರಿಗಳನ್ನು ನಿರ್ವಹಿಸಲು ಐಟಂವಾರು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ್ದು, ಕರ್ನಾಟಕ ಸರ್ಕಾರ ಇಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ದಾಖಲೆ ಗಳಿಗಾಗಿ ಇಲಾಖಾ ವೆಬ್‌ಸೈಟ್: **www.eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) ಇ-ಪ್ರೊಕ್ಯೂರ್ ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ:15.07.2022ರಂದು ಸಂಜೆ 5.30 ಗಂಟೆವರೆಗೆ.** (2) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 17.07.2022 ಸಂಜೆ 4.30 ಗಂಟೆಯ ವರೆಗೆ** (3) ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ:18.07.2022 ಸಂಜೆ 4.35 ಗಂಟೆಯ ವರೆಗೆ.** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನ ಟೆಂಡರ್ ತೆರೆಯಲಾಗುವುದು.
ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ181/ಎಂ.ಸಿ.ಎ/2022-23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ADMISSION CORNER ಕ್ಲಾಸಿಫೈಡ್ಸ್

2nd PU Failed?
Don't be left behind!
A golden opportunity to study degree under Bangalore University this academic year and save one precious year of your life.
BBA B.Com BCA BA
Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
7846000222

SVR PU & DEGREE COLLEGE

ADMISSIONS OPEN 2022-23
PUC - Science & Commerce
B.Com, BCA, MBA & M.Com
With Value Added Certificates & Placement Assistance
For Admission Contact
+9194488 83586
+9197397 17000
080 - 41442121
080 - 42229348
www.svrinstitutions.com
E-Mail : svrinstitution@gmail.com
KEY HIGHLIGHTS
- Internships
- University Ranks
- Industrial Visits
- ICT Enabled Classrooms
- Highly Qualified Teaching Staff
- State of the art computing Facility
- Library & NSS Unit
Samasandrapalya, HSR Layout, 2nd Sector, Bangalore - 560102
Bengaluru's Emerging Experiential College
Affiliated to BANGALORE UNIVERSITY
Approved by AICTE & MHRD, New Delhi
20 years of excellence

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Marketing & Sales

ASB DEVELOPERS & PROMOTERS
★ WE ARE ★ HIRING
Needs Talented Yongster's For The Post of
- Sr. Sales Executive
- Sales Executive
- Telecallers
Freshers and experienced
Male & Female with an aptitude for Real Estate selling,
1- 5 Yearsof Experience in selling properties
Fresher's can apply for Entry Level Positions.
Salary Best in the Industry
Send your resume along with recent Photo
info@asbgroups.com
ASB DEVELOPERS & PROMOTERS
154-159, ASB Plaza, Magadi Main Road, Sunkadakatte, Bengaluru - 560091
99000 76360

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

WANTED BUSINESS Partner Non Veg Hotel 10 Lakhs Investment Monthly Income 1 Lakhs: 8892501007/ 9606701007

REAL ESTATE SELLING

Sites

Sarjapur Road

30 X 40 site Chikka thirupathi,18 Lakhs SBI approved.Call 9686055163

PERSONAL

Announcements

I, SATISH. M s/o. Muniraj residing at #577/1, Madhuranagara 3rd stage, Varthur, Bangalore- 560087. Wrongly mentioned my caste in my TC as VONNIKULA GOWDA instead of VONNIKULA. Hereby declaring that I belong to VONNIKULA Caste only, vide affidavit dated 11/07/2022 before notary A.M. Rajasekar., Bangalore.

Change of Name

I, SUJATAKUMARI have changed my name to SUJATADEVI vide affidavit dated:7/7/2022 Before Notary Manohar Jeerige Bangalore.

MONIKA DAS, Wife/o, 6496714F SEP/ASH, GOUTAM DAS, Vill-Dubrajpur, Suri Birbhum, West Bengal changed name from MONIKA DAS to MONIKA RUIDAS, 13/07/2022, Notary K.V. Mani, Bangalore

I, VIJI MANIYAN, Spouse of Balasubramaniyan M.L. (296845-IAF), resident of #150/1, 1st cross Bazaar Street, behind Tin Factory, Udayanagar, Bangalore-560016 have changed my name from VIJI MANIYAN to VIJAYALAKSHMI as per affidavit dated 12.07.2022

I, BALASUBRAMANYAN M.L. (296845-IAF), Son of Late Loganathan, resident of #150/1, 1st cross Bazaar Street, behind Tin Factory, Udayanagar, Bangalore-560016 have changed my name from BALASUBRAMANYAN M.L. to BALASUBRAMANIYAN M.L. as per affidavit dated 12.07.2022

I, JHANSIRANI RAMESH W/o Mr. G. Ramesh Residing at No.157, 4th Main, Shabarinagar Layout, Hegde Nagar, Bangalore -560077 have changed my name to S.JHANSI RAMESH vide affidavit dated 13.07.2022 Sworn before Notary Y.R.Chandrasekar, Bangalore.

SHAKUNTALA UPADHYAY, Mother/o, 6498588Y SEP, RATNESH KUMAR UPADHYAY, Vill-Rishra, Pravashnagar Hooghly, West Bengal, changed name from SHAKUNTALA UPADHYAY to SAKUNTALA DEVI UPADHYAY, 13/07/2022 Notary K.V. Mani, Bangalore

AYESHA KHATOON W/o 14842653A SEP/MT Abdur Rahim, R/a Madhabpur Gulandar Raiganj, Uttar Dinajpur, WB, my name AYESHA KHATOON to AYESHA KHATUN BIBI, Notary KV Mani

A CAREER AFTER 10th
HEA POLYTECHNIC Bangalore
Placement Assistance provided
(Approved by DTE & AICTE)
DIPLOMA
Courses that prepare you for a successful career.
- Aeronautical Engineering
- Computer Science Engg.
- Mechanical Engineering
- Automobile Engineering
Eligibility: 10th Std. Pass
Classes will begin on 1st of August
12th/PUC in Science or ITI completed students have direct entry into 2nd year Diploma
OTHER COURSES
AME • B.Sc. (Hons) Aircraft Maintenance • MBA Aviation
BBA Aviation • M.Com • B.Com • BBA • BCA
Contact
PB No. 3776, Ashwathanagar, Marathahalli, Bangalore-37
Email: admissions@hindustanacademy.edu.in
Ph: 080-25238650, 25232217 Toll free: 18004258650
9740037853 / 8971404357
www.hindustanacademy.edu.in

I, SAPHALI BHATTACHARYYA W/o 6375680W- Ex.NK/SHT-BISWANATH BHATTACHARYA R/a Tejhati, Birbhum, WB changed my name from SAPHALI BHATTACHARYYA to SHEFALI BHATTACHARYA vide affidavit Dt 02-07-2022.

I, PRASHANT PATIL, residing at 73/1 3rd main, Map Enclave B304, Vignan Nagar, Bangalore 560075, have changed my name to PRASHANT V PATIL vide affidavit dated 13.07.2022 before Notary L. Gopalakrishna, Bangalore.

I, PUJITA KALAHASTI W/o Kalahasti Pramodh Gurunath Baba aged 31 years residing at T-6, 3rd floor, Maruthi Priyanka Presidency, 29th Cross, Kaggadasapura, C.V Raman Nagar, Bangalore-93. have changed my name to PUJITA KARODI KALAHASTI vide affidavit dated 04.07.2022. Before notary B.K.R. Krishnamurthy, Bangalore

I, VIGNESH KUNDAPURVENKATESH VENKATESH S/o Kundapur Umeshwar Venkatesh, residing at No. 228, KHB Colony, 4th Cross, Koramangala, Bangalore-560095, have changed my name to VIGNESH KUNDAPUR VENKATESH, vide affidavit dated 12.07.2022, sworn before notary B.M Chandrashekar, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD ಪ್ರಜಾವಾಣಿ
Classifieds EDUCATION SPECIAL
SPECIAL RATES FOR
Admission Notice,
Education Success
Congratulation Ads
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in

ಪ್ರಜಾವಾಣಿ
ಜನಸ್ಪಂದನ
ಸಿಟಿಜ಼ನ್ಸ್ ಫಾರ್ ಚೇಂಜ್
ನೀವು ಶಿವಾಜಿನಗರ ವಿಧಾನಸಭಾ ಕ್ಷೇತ್ರದ ನಿವಾಸಿಯೇ?

ಶ್ರೀ ರಿಜ್ವಾನ್
ನಿಮ್ಮ ಸಮಸ್ಯೆಗಳಿಗೆ ದನಿ ನೀಡಲು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಆಯೋಜಿಸಿರುವ ಜನಸ್ಪಂಧನ ಕಾರ್ಯಕ್ರಮದಲ್ಲಿ ಭಾಗವಹಿಸಿ. ನಿಮ್ಮ ಕ್ಷೇತ್ರದ ಶಾಸಕರೊಂದಿಗೆ, ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ, ಪೊಲೀಸ್ ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗಳೂ ಉಪಸ್ಥಿತರಿದ್ದು, ನಿಮ್ಮ ಅಹವಾಲುಗಳಿಗೆ ಕಿವಿಯಾಗಲಿದ್ದಾರೆ. ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ.
- ಟ್ರಾಫಿಕ್
- ಕಸ ವಿಲೇವಾರಿ
- ನೀರು ಸರಬರಾಜು
- ರಸ್ತೆ ಗುಂಡಿಗಳು
ಕಾರ್ಯಕ್ರಮದ ದಿನಾಂಕ: 16-07-2022, ಶನಿವಾರ
ಸಮಯ: 10:00 ರಿಂದ ಮಧ್ಯಾಹ್ನ 1:00 ರವರೆಗೆ
(ನೊಂದಣಿ ಬೆಳಿಗ್ಗೆ 9:00 ರಿಂದ, ಪ್ರವೇಶ ಉಚಿತ)
ಸ್ಥಳ: ಬಂಜಾರ ಭವನ, ತಿಮ್ಮಯ್ಯ ರಸ್ತೆ, ಕಾವೇರಪ್ಪ ಲೇಔಟ್, ವಸಂತನಗರ, ಬೆಂಗಳೂರು - 51
ಸಂಪರ್ಕಕ್ಕೆ: ಗಿರೀಶ್ - 9916667466

ಪಿಸ್ಯಾಟ್: ನಗರದ 7 ಮಂದಿ ಟಾಪರ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಟೆಕ್ ಕೋರ್ಸ್‌ಗಳ ಪ್ರವೇಶಕ್ಕೆ ಪಿಇಎಸ್ ವಿಶ್ವವಿದ್ಯಾಲಯ ನಡೆಸಿದ 'ಪಿಸ್ಯಾಟ್-2022' ಪರೀಕ್ಷೆಯನ್ನು 20 ಸಾವಿರ ಅಭ್ಯರ್ಥಿಗಳು ಎದುರಿಸಿದ್ದು, ಮೊದಲ ಹತ್ತು ಸ್ಥಾನ ಪಡೆದ ಅಭ್ಯರ್ಥಿಗಳಲ್ಲಿ ಏಳು ಮಂದಿ ಬೆಂಗಳೂರಿನವರೇ ಆಗಿದ್ದಾರೆ.

ಎಂ.ಆರ್. ದೊರೆಸ್ವಾಮಿ

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ. ಆರ್. ದೊರೆಸ್ವಾಮಿ ಅವರು 'ಪಿಸ್ಯಾಟ್-2022' ಪರೀಕ್ಷೆಯ ರ್‍ಯಾಂಕ್ ಪಟ್ಟಿ ಬಿಡುಗಡೆ ಮಾಡಿ, ಮೊದಲ ಹತ್ತು ಸ್ಥಾನ ಪಡೆದ ಅಭ್ಯರ್ಥಿಗಳನ್ನು ಅಭಿನಂದಿಸಿದರು.

'ದೇಶದಾದ್ಯಂತ 44 ಕೇಂದ್ರಗಳಲ್ಲಿ ಈ ಪರೀಕ್ಷೆ ನಡೆಸಲಾಗಿತ್ತು. ಪರೀಕ್ಷೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಎಂಟು ವರ್ಷಗಳಿಂದ ನಡೆಸಲಾಗುತ್ತಿರುವ ಈ ಪರೀಕ್ಷೆಯನ್ನು ಈ ಬಾರಿ ಗರಿಷ್ಠ ಅಭ್ಯರ್ಥಿಗಳು ಎದುರಿಸಿದ್ದರು. ತೆಲಂಗಾಣದ ನಂದನ್ ಮಂಜುನಾಥ್ ಇಮ್ಮಡಿಸೆಟ್ಟಿ ಮೊದಲ ರ್‍ಯಾಂಕ್, ಬೆಂಗಳೂರಿನ ಆತ್ಮಕುರಿ ವೆಂಕಟ ಮಾಧವನ್ ಶ್ರೀರಾಮ್ ದ್ವಿತೀಯ ರ್‍ಯಾಂಕ್, ತನಯ್ ಗಾಡ್ ತೃತೀಯ ರ್‍ಯಾಂಕ್, ನಿತಿನ್ ವೆಚಾ ನಾಲ್ಕನೆ ರ್‍ಯಾಂಕ್ ಹಾಗೂ ಗುವಾಹಟಿಯ ಮಾರುಪುದ್ದೀನ್ ಅಹ್ಮದ್ ಐದನೇ ರ್‍ಯಾಂಕ್ ಪಡೆದಿದ್ದಾರೆ' ಎಂದು ಹೇಳಿದರು.

'ಪರೀಕ್ಷೆ ಎದುರಿಸಿದ ಎಲ್ಲ ವಿದ್ಯಾರ್ಥಿಗಳಿಗೂ ರ್‍ಯಾಂಕ್ ನೀಡಲಿದ್ದು, ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಲು ಅರ್ಹತೆ ಪಡೆದಿದ್ದಾರೆ. 1,200 ಸೀಟ್‌ಗಳು ಲಭ್ಯವಿರುತ್ತವೆ. ಪಿಸ್ಯಾಟ್ ಮೊದಲ ಸುತ್ತಿನ ಕೌನ್ಸೆಲಿಂಗ್ ಇದೇ 23 ಮತ್ತು 24ರಂದು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಲಿದೆ' ಎಂದು ತಿಳಿಸಿದರು.

ವಿದ್ಯಾರ್ಥಿಗಳಿಗೆ ಪ್ರೋತ್ಸಾಹ: 'ವಿಶ್ವವಿದ್ಯಾಲಯದಲ್ಲಿ ಹೊಸ ಆಲೋಚನೆ ಹಾಗೂ ಯೋಜನೆಗಳಿಗೆ ಪ್ರೋತ್ಸಾಹ ನೀಡಲಾಗುತ್ತದೆ. ನವೋದ್ಯಮಕ್ಕೆ ₹ 1.25 ಕೋಟಿವರೆಗೂ ಆರ್ಥಿಕ ನೆರವು ನೀಡಲಾಗುತ್ತಿದೆ. ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದಿಂದ ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಉತ್ತೀರ್ಣ ಅಥವಾ ಅನುತ್ತೀರ್ಣರಾದ ಅಭ್ಯರ್ಥಿಗಳಿಗೆ ಮೂರು ತಿಂಗಳ ತರಬೇತಿ ಕಾರ್ಯಕ್ರಮ ನಡೆಸಲಾಗುತ್ತಿದೆ. ಟಿ.ವಿ, ಮೊಬೈಲ್ ಸೇರಿದಂತೆ ವಿವಿಧ ಎಲೆಕ್ಟ್ರಾನಿಕ್ ಸಾಧನಗಳ ರಿಪೇರಿ ಬಗ್ಗೆ ತರಬೇತಿ ನೀಡಲಾಗುತ್ತದೆ. ಬೇಸಿಕ್ ಕಂಪ್ಯೂಟರ್ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಪ್ರಾಯೋಗಿಕ ಕಲಿಕೆ ಇರಲಿದೆ. ವಿಶ್ವವಿದ್ಯಾಲಯದ ಸುತ್ತಮುತ್ತಲಿನ ಕೊಳೆಗೇರಿ ಕುಟುಂಬಗಳ ಮಕ್ಕಳಿಗೆ ಈ ತರಬೇತಿ ನೀಡಲಾಗುವುದು' ಎಂದು ಹೇಳಿದರು.

'ಎಲೆಕ್ಟ್ರಾನಿಕ್ ಆ್ಯಂಡ್ ಕಮ್ಯೂನಿಕೇಷನ್ ವಿಭಾಗದ ಸಜೇಲ್ ಜೈನ್ ಎಂಬ ವಿದ್ಯಾರ್ಥಿಯು ಬಾಹ್ಯಕಾಶ ಸಂಶೋಧನೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದು, 'ಡಾ.ಕಲ್ಪನಾ ಚಾವ್ಲಾ ವಿದ್ಯಾರ್ಥಿ ವೇತನ' ಪಡೆಯಲಿದ್ದಾರೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಜೆ.ಸೂರ್ಯಪ್ರಸಾದ್ ತಿಳಿಸಿದರು.

1,751 ವಿದ್ಯಾರ್ಥಿಗಳಿಗೆ ಉದ್ಯೋಗ

'2022ರಲ್ಲಿ ವಿಶ್ವವಿದ್ಯಾಲಯದಲ್ಲಿ ಎಂಜಿನಿಯರಿಂಗ್-ಟೆಕ್ನಾಲಜಿ, ಮ್ಯಾನೇಜ್‌ಮೆಂಟ್, ಕಾಮರ್ಸ್, ಫಾರ್ಮಸಿ ವಿಷಯದಲ್ಲಿ 2,267 ವಿದ್ಯಾರ್ಥಿಗಳು ಉದ್ಯೋಗವಕಾಶ ಪಡೆಯಲು ಅರ್ಹತೆ ಪಡೆದಿದ್ದರು. ಅವರಲ್ಲಿ 1,751 ವಿದ್ಯಾರ್ಥಿಗಳಿಗೆ ಉದ್ಯೋಗ ಸಿಕ್ಕಿದೆ. 584 ವಿದ್ಯಾರ್ಥಿಗಳಿಗೆ ಒಂದಕ್ಕಿಂತ ಹೆಚ್ಚಿನ ಉದ್ಯೋಗವಕಾಶದ ಆಯ್ಕೆಗಳಿದ್ದವು. 468 ಕಂಪನಿಗಳು ಕ್ಯಾಂಪಸ್ ಸಂದರ್ಶನಕ್ಕೆ ಹಾಜರಾಗಿದ್ದವು. ಮುಂದಿನ 15 ದಿನಗಳಲ್ಲಿ ಮತ್ತೊಂದು ಬ್ಯಾಚ್ ವಿದ್ಯಾರ್ಥಿಗಳಿಗೆ ಪ್ಲೇಸ್‌ಮೆಂಟ್ ಪ್ರಕ್ರಿಯೆ ಆರಂಭವಾಗಲಿದೆ' ಎಂದು ವಿಶ್ವವಿದ್ಯಾಲಯದ ಕುಲಸಚಿವ ಡಾ.ಕೆ.ಎಸ್. ಶ್ರೀಧರ್ ತಿಳಿಸಿದರು.

ಮೊದಲ ಸುತ್ತು: ಅಗ್ರಸ್ಥಾನದಲ್ಲಿ ಸುನಕ್

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ಸ್ಥಾನದ ಆಕಾಂಕ್ಷಿಗಳನ್ನು ಆಯ್ಕೆ ಮಾಡುವ ನಿಟ್ಟಿನಲ್ಲಿ ಬುಧವಾರ ಕನ್ಸರ್ವೇಟಿವ್ ಪಕ್ಷದ ಸಂಸದರಿಂದ ಮೊದಲ ಸುತ್ತಿನ ಮತದಾನ ನಡೆದಿದ್ದು, ಭಾರತೀಯ ಮೂಲದ ರಿಷಿ ಸುನಕ್ ಅವರು 88 ಮತಗಳೊಂದಿಗೆ ಮುಂಚೂಣಿಯಲ್ಲಿದ್ದಾರೆ.

ಮೊದಲ ಸುತ್ತಿನಲ್ಲಿ ಗರಿಷ್ಠ ಎಂಟು ಮಂದಿ ಕಣದಲ್ಲಿದ್ದರು. ಭಾರತೀಯ ಮೂಲದ ಇನ್ನೊಬ್ಬ ಆಕಾಂಕ್ಷಿಯಾಗಿದ್ದ ಅಟಾರ್ನಿ ಜನರಲ್ ಸುವೆಲಾ ಬ್ರೇವರ್‌ಮನ್ ಕೇವಲ 32 ಮತಗಳನ್ನು ಗಳಿಸುವುದರೊಂದಿಗೆ ಸ್ಪರ್ಧೆಯಿಂದ ಬಹುತೇಕ ಹೊರಬಿದ್ದಿದ್ದಾರೆ.

ರಿಷಿ ಸುನಕ್

ವಾಣಿಜ್ಯ ಸಚಿವರಾದ ಪೆನ್ನಿ ಮಾರ್ಡೆಂಟ್ ಅವರು 67 ಮತಗಳನ್ನು ಗಳಿಸುವ ಮೂಲಕ ಪ್ರಧಾನಿ ಸ್ಪರ್ಧೆಯ ಆಕಾಂಕ್ಷಿಗಳ ಪೈಕಿ ಎರಡನೇ ಸ್ಥಾನದಲ್ಲಿದ್ದರೆ, ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ 50, ಮಾಜಿ ಸಚಿವರಾದ ಕೆಮಿ ಬಡೆನಾಚ್ 40 ಹಾಗೂ ಟಾಮ್ ಟುಗೆಂಧತ್ 37 ಸಂಸದರ ಬೆಂಬಲ ಗಳಿಸಿದ್ದಾರೆ.

ಪ್ರಧಾನಿ ಕುರ್ಚಿಯ ಮೇಲೆ ಕಣ್ಣಿಟ್ಟವರಲ್ಲಿ ಪ್ರಮುಖರಾಗಿದ್ದ ನೂತನ ಛಾನ್ಸಲರ್ ನದೀಂ ಜಹಾವಿ ಅವರು ಕೇವಲ 25 ಮತಗಳನ್ನು ಹಾಗೂ ಮಾಜಿ ಸಚಿವರಾದ ಜೆರೆಮಿ ಹಂಟ್ ಅವರು 18 ಮತಗಳನ್ನು ಗಳಿಸಿದ್ದಾರೆ. ಸ್ಪರ್ಧೆಯಲ್ಲಿ ಇರಲು ಕನಿಷ್ಠ 30 ಮತಗಳು ಅಗತ್ಯವಾಗಿರುವುದರಿಂದ ಇವರಿಬ್ಬರೂ ಇದೀಗ ಆಕಾಂಕ್ಷಿಗಳ ಪಟ್ಟಿಯಿಂದ ಹೊರಬೀಳುವಂತಾಗಿದೆ.

ರಿಷಿ ಸುನಕ್ ಅವರು ಕಳೆದ ವಾರವೇ ಪಕ್ಷದ ಸಂಸದರಿಗೆ ತಮ್ಮ ಆದ್ಯತೆಯನ್ನು ತಿಳಿಸಿದ್ದರು. ಆರ್ಥಿಕ ಪುನಶ್ಚೇತನ ಹಾಗೂ ಹಣದುಬ್ಬರ ನಿಯಂತ್ರಿಸುವುದಕ್ಕೆ ಅವರು ಆದ್ಯತೆ ನೀಡುವ ವಾಗ್ದಾನ ನೀಡಿದ್ದರು. ಗುರುವಾರ ಎರಡನೇ ಸುತ್ತಿನ ಮತದಾನ ನಡೆಯಲಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಕನಕಶ್ರೀ ಚಾರಿಟಬಲ್ ಟ್ರಸ್ಟ್ ವತಿಯಿಂದ 2021–22ನೇ ಸಾಲಿನ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿಯಲ್ಲಿ ಶೇಕಡ 95ಕ್ಕಿಂತ ಹೆಚ್ಚು ಹಾಗೂ ಪಿಯುಸಿಯಲ್ಲಿ ಶೇಕಡಾ 90ಕ್ಕೂ ಹೆಚ್ಚು ಅಂಕ ಗಳಿಸಿದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಕುರುಬ ಸಮಾಜದ ವಿದ್ಯಾರ್ಥಿಗಳು ಜುಲೈ 25ರೊಳಗೆ ಅರ್ಜಿ ಸಲ್ಲಿಸಬಹುದು.

ವಿಳಾಸ: ಕನಕಶ್ರೀ ಚಾರಿಟಬಲ್ ಟ್ರಸ್ಟ್, ಕೆಎಚ್‌ಬಿ ಕಾಲೊನಿ, ಬಸವೇಶ್ವರನಗರ, ಬೆಂಗಳೂರು. ಮಾಹಿತಿಗಾಗಿ 9845572609 ಮತ್ತು 9448514217 ಸಂಪರ್ಕಿಸಬಹುದು.

ಬೆಂಗಳೂರು– ವಿಯೆಟ್ನಾಂ: ಹೊಸ ವಿಮಾನಯಾನ ಸೇವೆ

ಬೆಂಗಳೂರು: ವಿಯೆಟ್‌ಜೆಟ್ ಏರ್ ವಿಮಾನಯಾನ ಕಂಪನಿಯು ಭಾರತದಲ್ಲಿ ತನ್ನ ಸೇವೆಯನ್ನು ಇನ್ನಷ್ಟು ವಿಸ್ತರಿಸುತ್ತಿದ್ದು, ವಿಯೆಟ್ನಾಂನ ಪ್ರಮುಖ ನಗರಗಳಿಂದ ಬೆಂಗಳೂರಿಗೆ ಹೊಸ ಸೇವೆ ಆರಂಭಿಸುವುದಾಗಿ ಬುಧವಾರ ತಿಳಿಸಿದೆ.

ವಿಯೆಟ್ನಾಂನ ವಾಣಿಜ್ಯ ಮತ್ತು ಪ್ರವಾಸಿ ನಗರಗಳಾದ ಹನೋಯ್, ಡಾ ನಾಗ್ ಮತ್ತು ಹೊ ಚಿ ಮಿನ್ಹ್ ಸಿಟಿಗೆ ಬೆಂಗಳೂರನ್ನು ಸಂಪರ್ಕಿಸುವ ಹೊಸ ವಿಮಾನ ಸೇವೆಗಳನ್ನು ಆರಂಭಿಸಲಾಗುವುದು. ಡಿಸೆಂಬರ್ ಒಳಗಾಗಿ ಹೊಸ ಮಾರ್ಗಗಳಲ್ಲಿ ಸೇವೆ ಆರಂಭವಾಗಲಿದೆ ಎಂದು ಕಂಪನಿಯ ವಾಣಿಜ್ಯ ವಿಭಾಗದ ನಿರ್ದೇಶಕ ಜಯ್ ಎಲ್. ಲಿಂಗೇಶ್ವರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವರ್ಷಾಂತ್ಯದ ಒಳಗೆ ಭಾರತದ ಇತರ ಪ್ರಮುಖ ನಗರಗಳಿಗೆ ನೇರ ವಿಮಾನ ಸೇವೆ ಆರಂಭಿಸುವ ಯೋಜನೆ ಹೊಂದಿರುವುದಾಗಿಯೂ ಅವರು ಹೇಳಿದರು.

ಕಂಪನಿಯು ನವದೆಹಲಿ, ಮುಂಬೈನಿಂದ ಹನೋಯ್ ಮತ್ತು ಹೊ ಚಿ ಮಿನ್ ಸಿಟಿಗೆ ನೇರ ವಿಮಾನ ಸೇವೆಯನ್ನು ಈಚೆಗೆ ಆರಂಭಿಸಿದೆ. ಮುಂಬೈ ಮತ್ತು ದೆಹಲಿಯಿಂದ ಆಗ್ನೆಯ ಏಷ್ಯಾದ ನೆಚ್ಚಿನ ಬೀಚ್ ತಾಣ ಫು ಕ್ವೋಕ್ ದ್ವೀಪಗಳಿಗೆ ನೇರ ವಿಮಾನ ಸೇವೆಗಳನ್ನು ಸೆಪ್ಟೆಂಬರ್‌ನಲ್ಲಿ ಆರಂಭಿಸಲಿದೆ.

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ A Government of India Undertaking
ಸಿಂಡಿಕೇಟ್ Syndicate

ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310039/25310038

ಸ್ಥಳಾವಕಾಶ ಬೇಕಾಗಿದೆ

ಕೆಳಗಿನ ಸ್ಥಳಗಳಲ್ಲಿ ಶಾಖೆ / ಕಛೇರಿಗಾಗಿ ವಾಣಿಜ್ಯ ಸ್ಥಳವನ್ನು ಹೊಂದಿರುವ ಮಾಲೀಕರಿಂದ ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ :

ಕ್ರ	ಸ್ಥಳ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
1	ಕನ್ನಮಂಗಲ, ಬೆಂಗಳೂರು ಗ್ರಾಮೀಣ	1500 ಚ.ಅಡಿಗಳಲ್ಲಿ
2	ತಾವರೆಕೆರೆ, ಬೆಂಗಳೂರು	1500 ಚ.ಅಡಿಗಳಲ್ಲಿ

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ http://www.canarabank.com ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ **Announcement → Tenders** ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : **04–08–2022 ರಂದು ಸಂಜೆ 3.00 ಗಂಟೆಯವರೆಗೆ.** ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. "ಮಧ್ಯವರ್ತಿಗಳಿಗೆ ಅವಕಾಶವಿಲ್ಲ"

ಸ್ಥಳ : ಬೆಂಗಳೂರು
ದಿನಾಂಕ : 14–07–2022
ಸಹಿ/–
ಸಹಾಯಕ ಮಹಾ ಪ್ರಬಂಧಕರು

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಕಾಶಿ ಯಾತ್ರೆಯ ನಿಮ್ಮ ಅಪೇಕ್ಷೆಗೆ ಸರ್ಕಾರದಿಂದ ಸಹಾಯಧನ

ಕಾಶಿ ಯಾತ್ರೆ ಸಹಾಯಧನ ಯೋಜನೆ

ಸಹಾಯಧನ ವಿತರಣೆ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ದಿನಾಂಕ 14-7-2022
ಮಧ್ಯಾಹ್ನ 1.30ಕ್ಕೆ
ವಿಧಾನಸೌಧ ಸಮ್ಮೇಳನ ಸಭಾಂಗಣ, ಬೆಂಗಳೂರು

ಕಾಶಿ ಯಾತ್ರೆ ಸಹಾಯಧನ ಪಡೆಯಲು ಅನುಸರಿಸಬೇಕಾದ ಮಾರ್ಗಸೂಚಿಗಳು

- ಕರ್ನಾಟಕ ರಾಜ್ಯದಿಂದ ಕಾಶಿ ಯಾತ್ರೆ ಕೈಗೊಂಡ ಅರ್ಹ ಯಾತ್ರಾರ್ಥಿಗಳಿಗೆ ತಲಾ ರೂ.5,000/-ಗಳನ್ನು ಸಹಾಯ ಧನವಾಗಿ ನೀಡಲಾಗುವುದು.
- ಕರ್ನಾಟಕದ ನಿವಾಸಿಗಳು ಮಾತ್ರ ಅರ್ಹರು.
- **ಸಲ್ಲಿಸಬೇಕಾದ ದಾಖಲೆಗಳು** : ಚುನಾವಣಾ ಆಯೋಗದ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ಅಥವಾ ಪಡಿತರ ಚೀಟಿ.
- ಏಪ್ರಿಲ್ 1, 2022 ಕ್ಕೆ 18 ವರ್ಷಕ್ಕೆ ಮೇಲ್ಪಟ್ಟವರಾಗಿರತಕ್ಕದ್ದು.
- ಯಾತ್ರಾರ್ಥಿಗಳ ಬ್ಯಾಂಕ್ ಖಾತೆಯು ಕಡ್ಡಾಯವಾಗಿ ಆಧಾರ್ ಲಿಂಕ್ ಆಗಿರತಕ್ಕದ್ದು.

ರಾಜ್ಯ ಧಾರ್ಮಿಕ ದಿನಾಚರಣೆಯಂದು ಮಾನ್ಯ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರಾದ **ಶ್ರೀಮತಿ ಶಶಿಕಲಾ ಅ ಜೊಲ್ಲೆ**ಯವರು ಗೋ ಪೂಜೆಯನ್ನು ನೆರವೇರಿಸುತ್ತಿರುವುದು

ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ **https://itms.kar.nic.in/hrcehome** ಗೆ ಭೇಟಿ ನೀಡಿ

ಎಸ್. ಉಮಾ ಶಂಕರ್, ಭಾ. ಆ. ಸೇ.
ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ಇಲಾಖೆ)

ರೋಹಿಣಿ ಸಿಂಧೂರಿ, ಭಾ. ಆ. ಸೇ.
ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

PUBLIC CAUTION NOTICE

Our client, S. S. Pandian & Sons., having their registered office at, No. 148, 3rd Main Road, Rajajinagar Industrial Town, Rajajinagar, Bengaluru, Karnataka – 560010, hereby bring to the notice of the General Public, that our client is the absolute owner of the following trademarks amongst many others, several of which are registered:

SSP® ASAFOETIDA
Regd. TM No. 204345

Regd. TM No. 2812070

Regd. TM No. 2246069

Regd. TM No. 5081226

Regd. TM No. 2828572

Regd. TM No. 5081228

Regd. TM No. 5081227

Regd. TM No. 1521718

Regd. TM No. 1072490

SSP CONTAINER COLOURS
Regd. TM No. 1479032
Regd. TM No. 1479033
Regd. TM No. 1479034

Regd. TM No. 5081229

The trademark(s) shown above are well known marks in relation to our client's goods namely asafoetida (hing) and allied and cognate products and services. By virtue of our client's original adoption, first and prior use, and exclusive registrations of the trademark(s) shown above, our client has the exclusive right to use the aforesaid mark(s) and also prevent the use of any identical or deceptively similar trademark(s) in respect of any same or similar goods or services.

It has come to our client's attention that certain unscrupulous manufacturers, traders, service providers and other enterprises are attempting to take undue advantage of our client's effort and investment in establishing and registering the trademarks shown above and infringe our client's registrations and also illegally ride on the reputation and goodwill of the above brands by adopting identical and deceptively similar trademarks, for identical goods with a view to confuse members of the trade and public into the mistaken belief that the same originate from our client.

Our client hereby cautions and warns members of the trade and the general public that use of the trademarks shown above, or of any mark, name or label which is identical with or deceptively/confusingly similar to our client's trademark(s), in respect of any same or similar goods or services, will be liable for Civil and Criminal action in accordance with the applicable Trade Mark Laws.

Our client also strongly cautions vendors, service providers, customers, other stakeholders and members of the general public against providing personal information, sending money or disclosing bank details or any other detail(s) to any person claiming to be authorised to use any identical or deceptively similar trademark as that of our client. Our client will have no liability whatsoever for any and all losses/damages suffered by anyone who falls victim to such deceptive uses of our client's trademarks. It is strongly advised to seek information/clarifications by contacting our client directly at aforementioned address or call us directly to our customer service at 099004 55100. It is our client's constant endeavour to provide the best and unparalleled support to all customers and stakeholders.

Our client also calls upon the members of the trade and public to alert us of any instances of misuse of our client's aforesaid trademarks at the below-mentioned address/phone numbers.

S. S. PANDIAN & SONS
By their Counsels
A.V. NATHAN ASSOCIATES
Advocates & Attorneys
No. 451, 2nd Cross, 3rd Block, 3rd Stage, Basaveshwaranagar, Bengauru – 560079
Ph: 080-2322-7817 • eMail: office@avnathan.in

ಹಲವು ಕೋಟಿ ವೆಚ್ಚ ಮಾಡಿದ್ದರೂ ಕಾಣದ ಶುಚಿತ್ವ: ಆರೋಪ • ರಾಜಕಾಲುವೆಯಿಂದಲೂ ಕೆರೆ ಸೇರುವ ತ್ಯಾಜ್ಯ

ಹಲಸೂರು ಕೆರೆಗೆ ನಿರಂತರ ಹರಿವ ಕಲ್ಮಶ

ಪ್ರಜಾವಾಣಿ ವಾರ್ತೆ

ಹಲಸೂರು ಕೆರೆಯಲ್ಲಿ ಅಳವಡಿಸಿರುವ ಸೋಲಾರ್ ಪ್ಯಾನಲ್ ಹಾಳಾಗಿದ್ದು, ತ್ಯಾಜ್ಯ ತುಂಬಿಕೊಂಡಿರುವುದು

ಬೆಂಗಳೂರು: ನಗರದ ಪ್ರಸಿದ್ಧ ತಾಣಗಳಲ್ಲಿ ಒಂದಾಗಿರುವ ಹಲಸೂರು ಕೆರೆಯನ್ನು ಹಲವು ವರ್ಷಗಳಿಂದ ಹಲವಾರು ಕೋಟಿಗಳನ್ನು ವೆಚ್ಚ ಮಾಡಿ ಅಭಿವೃದ್ಧಿಪಡಿಸಲಾಗಿದೆ. ಈಗಲೂ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ಇಷ್ಟಾದರೂ ಕೆರೆಗೆ ಹರಿಯುತ್ತಿರುವ ಕಲ್ಮಶಕ್ಕೆ ತಡೆಯೇ ಇಲ್ಲದಂತಾಗಿದೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

'ಕೆರೆ ಅಭಿವೃದ್ಧಿ ಅಥವಾ ಅದರ ನಿರ್ವಹಣೆ ಒಬ್ಬರ ಬಳಿ ಇಲ್ಲ. ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ ಆ್ಯಂಡ್ ಸೆಂಟರ್ (ಎಂಇಜಿ), ಬಿಬಿಎಂಪಿ, ಜಲಮಂಡಳಿ ಎಂದೆಲ್ಲ ಒಬ್ಬೊಬ್ಬರು ಒಂದು ರೀತಿಯ ಕೆಲಸ ಮಾಡುತ್ತಿದ್ದಾರೆ. ನಿರ್ವಹಣೆಯಂತೂ ಹೇಳತೀರದಂತಾಗಿದೆ. ಕೆರೆಯಲ್ಲಿರುವ ಪ್ಲಾಸ್ಟಿಕ್ ಅನ್ನು ತೆಗೆದು ಏರಿ ಮೇಲೆ ಹಾಕುತ್ತಾರೆ. ಅದನ್ನು ಅಲ್ಲಿಂದ ತೆಗೆದುಕೊಂಡು ಹೋಗುವ ವೇಳೆಗೆ ಅರ್ಧದಷ್ಟು ಮತ್ತೆ ಕೆರೆಗೇ ಬೀಳುತ್ತಿದೆ' ಎಂದು ಹಲಸೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಮೋಹನ್ ರಾಜ್ ಆರೋಪಿಸಿದರು.

'ಹಲಸೂರು ಕೆರೆಗೆ ಮೂರು ರಾಜಕಾಲುವೆಯಿಂದ ನೀರು ಬರುತ್ತಿತ್ತು. ಅದರಲ್ಲಿ ಬ್ರಾಡ್‌ವೇ ಕಡೆಯಿಂದ ಬರುತ್ತಿದ್ದ ರಾಜಕಾಲುವೆಯನ್ನು ಮುಚ್ಚಿ, ಬೇರೆಡೆಗೆ ಮಾರ್ಗ ಬದಲಿಸಲಾಗಿದೆ. ಬಾಣಸವಾಡಿ, ಕಮ್ಮನಹಳ್ಳಿ ಹಾಗೂ ಚಿನ್ನಪ್ಪ ಗಾರ್ಡನ್ ಕಡೆಯಿಂದ ರಾಜಕಾಲುವೆಗಳಿವೆ. ಇವುಗಳಿಂದಲೇ ಕೆರೆಗೆ ನೀರು ಬರುತ್ತದೆ. ಕೆರೆಗೆ ಬರುವ ಮುನ್ನ ತ್ಯಾಜ್ಯ ಹಳ್ಳದ ಮೂಲಕ ನೀರು ಬರಬೇಕು. ಅಲ್ಲಿ ತ್ಯಾಜ್ಯ ಉಳಿಯಬೇಕು. ಆದರೆ ಆ ಹಳ್ಳ ತುಂಬಿಹೋಗಿದೆ' ಎಂದರು.

'ಕೆರೆಗಾಗಿಯೇ ಒಂದು ಎಸ್‌ಟಿಪಿ ನಿರ್ಮಾಣವಾಗಿದೆ. ರಾಜಕಾಲುವೆ ಇರುವುದಕ್ಕೂ ಎಸ್‌ಟಿಪಿ ಇರುವುದಕ್ಕೂ ಸಂಬಂಧ ಇಲ್ಲ. ಚರಂಡಿಯಲ್ಲಿ ಬರುವ ಮಳೆ ನೀರು, ಎಂಇಜಿ ಒಳಭಾಗದಿಂದ ಬರುವ ನೀರು ಎಸ್‌ಟಿಪಿ ಮೂಲಕ ಬರುತ್ತಿದೆ. ಆದರೆ ಇದರಿಂದ ಏನು ಉಪಯೋಗವಿಲ್ಲ. ಎರಡು ರಾಜಕಾಲುವೆಗಳಿಂದ ಹೆಚ್ಚು ನೀರು ಬರುತ್ತದೆ. ಅಲ್ಲೇ ಹೆಚ್ಚು ಕಲ್ಮಶ ಇರುವುದು. ಇದಕ್ಕೆ ಎಸ್‌ಟಿಪಿ ಇಲ್ಲ. ಆದ್ದರಿಂದ ಕಲ್ಮಶ ಕೆರೆಯನ್ನೇ ತಲುಪುತ್ತಿದೆ' ಎಂದರು.

'ನಾವು ಸ್ಥಳೀಯರೆಲ್ಲ ಸೇರಿಕೊಂಡು ಕಾರ್ಪೊರೇಟ್, ಶಾಸಕರ ನೆರವಿನೊಂದಿಗೆ ಕೆರೆಯ ಸ್ವಚ್ಛತೆ ಕಾರ್ಯ ಕೈಗೊಂಡಿದ್ದೆವು. ರಾಜಕಾಲುವೆಯಲ್ಲಿ ಬಿಸಾಡುವ ತ್ಯಾಜ್ಯವೂ ನೇರವಾಗಿ ಕೆರೆ ಪ್ರವೇಶಿಸುತ್ತಿದೆ. ಶೋಲ್ಡರ್ ಡ್ರೈನ್‌ಗಳೂ ಸರಿಯಾಗಿಲ್ಲ. ಹೀಗಾಗಿ ಮಳೆ ಹೆಚ್ಚಾಗಿ ಬಂದಾಗ ನೀರು ಹೊರಭಾಗದಲ್ಲೇ ಹರಿಯುತ್ತಿದೆ' ಎಂದು ನಿವಾಸಿಗಳು ಅಸಮಾಧಾನ ವ್ಯಕ್ತಪಡಿಸಿದರು.

ಶಿವಾಜಿನಗರ: 'ಜನಸ್ಪಂದನ' ಶನಿವಾರ

ಜನಸ್ಪಂದನ ಸಿಟಿಜನ್ಸ್ ಫಾರ್ ಚೇಂಜ್

ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ 'ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹವು ಶನಿವಾರ (ಇದೇ 16) ವಸಂತ ನಗರದ ತಿಮ್ಮಯ್ಯ ರಸ್ತೆಯ ಕಾವೇರಪ್ಪ ಬಡಾವಣೆಯ ಬಂಜಾರ ಭವನದಲ್ಲಿ 'ಜನಸ್ಪಂದನ' ಕಾರ್ಯಕ್ರಮ ಏರ್ಪಡಿಸಿದೆ.

ಈ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್ ಹಾಗೂ ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಗಳ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ.

ಆಸಕ್ತರು ಬೆಳಿಗ್ಗೆ 9ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ.

ಸುದ್ದಿ 2 ನಿಮಿಷ

'ರಾಜ್ಯದಲ್ಲಿ ವಾಟರ್ ಏರೋಡ್ರೋಮ್'

ಬೆಂಗಳೂರು: 'ನಾಗರಿಕ ವಿಮಾನ ಯಾನ ಸಂಪರ್ಕದ ಮೂಲಕ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುವ ಜತೆಗೆ ಆರ್ಥಿಕ ಪುನಶ್ಚೇತನದ ಉದ್ದೇಶದಿಂದ ಒಂಬತ್ತು ಕಡೆ ವಾಟರ್ ಏರೋಡ್ರೋಮ್ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ' ಎಂದು ವಸತಿ ಹಾಗೂ ಮೂಲಸೌಕರ್ಯ ಸಚಿವ ವಿ. ಸೋಮಣ್ಣ ಹೇಳಿದರು.

ನಗರದಲ್ಲಿ ಬುಧವಾರ ನಡೆದ 'ಕರ್ನಾಟಕದ ಸಮಗ್ರ ನಾಗರಿಕ ವಿಮಾನಯಾನ ನೀತಿ ರೂಪಣೆ' ಕುರಿತ ರಾಜ್ಯಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, 'ಕಾಳಿ ನದಿ, ಬೈಂದೂರು, ಮಲ್ಪೆ, ಮಂಗಳೂರು, ತುಂಗಭದ್ರಾ, ಕೆಆರ್‌ಎಸ್, ಲಿಂಗನಮಕ್ಕಿ, ಆಲಮಟ್ಟಿ ಮತ್ತು ಹಿಡಕಲ್ ಜಲಾಶಯಗಳಲ್ಲಿ ವಾಟರ್ ಏರೋಡ್ರೋಮ್ ಅಭಿವೃದ್ಧಿಪಡಿಸಲು ಗುರುತಿಸಲಾಗಿದೆ' ಎಂದರು.

'ಮಡಿಕೇರಿ, ಚಿಕ್ಕಮಗಳೂರು ಮತ್ತು ಹಂಪಿಯಲ್ಲಿ ಹೆಲಿಪೋರ್ಟ್‌ಗಳನ್ನು ಸ್ಥಾಪಿಸಲು ಕಾರ್ಯಸಾಧ್ಯತೆ ಮತ್ತು ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಚಿಕ್ಕಮಗಳೂರು, ಹರಿಹರ, ಕುಶಾಲನಗರ ಮತ್ತು ಅಥಣಿಯಲ್ಲಿ ಕಿರು ವಿಮಾನ ನಿಲ್ದಾಣ ಸ್ಥಾಪಿಸುವ ಚಿಂತನೆ ಇದೆ' ಎಂದರು.

'ರಾಜ್ಯದ ವಿಮಾನ ಯಾನ ಯೋಜನೆಗಳಿಗೆ ಕೇಂದ್ರದ ನೆರವು ಒದಗಿಸಲಾಗುವುದು' ಎಂದು ಕೇಂದ್ರ ವಿಮಾನಯಾನ ಸಚಿವಾಲಯದ ಜಂಟಿ ಕಾರ್ಯದರ್ಶಿ ಉಷಾ ಪಡಿ ಭರವಸೆ ನೀಡಿದರು.

ದೇಶದಲ್ಲಿ ವಿಪಕ್ಷಗಳು ಕಣ್ಮರೆಯಾಗಲಿವೆ: ಆರ್. ಅಶೋಕ

ಪೀಣ್ಯ ದಾಸರಹಳ್ಳಿ: ಮುಂದಿನ ಎಲ್ಲ ಚುನಾವಣೆಗಳಲ್ಲೂ ವಿರೋಧ ಪಕ್ಷಗಳು ದೂಳೀಪಟ ಆಗಲಿವೆ ಎಂದು ಕಂದಾಯ ಸಚಿವ ಆರ್.ಅಶೋಕ ಅಭಿಪ್ರಾಯಪಟ್ಟರು.

ಹೆಗ್ಗನಹಳ್ಳಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪ್ರಧಾನಿ ನರೇಂದ್ರ ಮೋದಿ ಸಮರ್ಥ ನಾಯಕತ್ವ, ಜನಪರ ಆಡಳಿತದ ಪರಿಣಾಮ ದೇಶದಾದ್ಯಂತ ಬಿಜೆಪಿ ಪರ ಅಲೆ ಇದ್ದು, ಮುಂದೆ ನಡೆಯುವ ಎಲ್ಲಾ ಚುನಾವಣೆಗಳಲ್ಲಿ ಕಾಂಗ್ರೆಸ್, ಜೆಡಿಎಸ್ ಸೇರಿ ವಿರೋಧ ಪಕ್ಷಗಳು ನೆಲಕಚ್ಚಲಿವೆ. ಈ ನಿಟ್ಟಿನಲ್ಲಿ ವಿಪಕ್ಷಗಳನ್ನು ತೊರೆದು ಸಂಸದರು, ಶಾಸಕರು ಒಳಗೊಂಡಂತೆ ಲಕ್ಷಾಂತರ ಕಾರ್ಯಕರ್ತರು ಮುಖಂಡರು ಬಿಜೆಪಿಗೆ ಸೇರುತ್ತಿದ್ದಾರೆ' ಎಂದರು.

ಪಾಲಿಕೆ ಮಾಜಿ ಸದಸ್ಯ ಎಚ್.ಎನ್. ಗಂಗಾಧರ್ ಮಾತನಾಡಿ, 'ಬಿಜೆಪಿಯಿಂದ ಹಿಂದೆ ಪಾಲಿಕೆ ಸದಸ್ಯನಾಗಿ ಚುನಾಯಿತನಾಗಿದ್ದೆ. ಸಣ್ಣಪುಟ್ಟ ಭಿನ್ನಾಭಿಪ್ರಾಯಗಳಿಂದ ಬಿಜೆಪಿ ತೊರೆದು ಜೆಡಿಎಸ್‌ಗೆ ಸೇರಿಕೊಂಡಿದ್ದೆ. ಆದರೆ, ಹೆಗ್ಗನಹಳ್ಳಿ ಭಾಗದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಜೆಡಿಎಸ್ ಶಾಸಕರಿಂದ ನಿರೀಕ್ಷಿತ ಮಟ್ಟದಲ್ಲಿ ಸಹಕಾರ ಸಿಗಲಿಲ್ಲ. ಹಾಗಾಗಿ ಅಭಿವೃದ್ಧಿ ಹಾಗೂ ಬದಲಾವಣೆಗಾಗಿ ಬಿಜೆಪಿಗೆ ಮರಳಿದ್ದೇನೆ. ಜಿದ್ದಿಗಾಗಿ ರಾಜಕೀಯ ಮಾಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ಮಾಜಿ ಶಾಸಕ ಎಸ್.ಮುನಿರಾಜು, ದಾಸರಹಳ್ಳಿ ಮಂಡಲ ಬಿಜೆಪಿ ಅಧ್ಯಕ್ಷ ಎನ್.ಲೋಕೇಶ್‌ಗೌಡ, ಜಿ. ಮರಿಸ್ವಾಮಿ, ಗಂಗರಾಜು, ಕೃಷ್ಣಮೂರ್ತಿ, ಸಪ್ತಗಿರಿ ಆನಂದ್ ಹಾಜರಿದ್ದರು.

ಎಸ್ಟಿ ಮೀಸಲಾತಿ ಕಲ್ಪಿಸಲು ವಿಶ್ವಕರ್ಮ ಮಹಾಸಭಾ ಒತ್ತಾಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಬೀದರ್‌ನಿಂದ ಬೆಂಗಳೂರಿನವರೆಗೆ ಪಾದಯಾತ್ರೆ
- ಜುಲೈ 15ರಂದು ಅರಮನೆ ಮೈದಾನದಲ್ಲಿ ಸಮಾವೇಶ

ಬೆಂಗಳೂರು: ಸಾಮಾಜಿಕ ನ್ಯಾಯದಿಂದ ವಂಚಿತವಾಗಿರುವ ವಿಶ್ವಕರ್ಮ ಸಮಾಜಕ್ಕೆ ಪರಿಶಿಷ್ಟ ಪಂಗಡ ಮೀಸಲಾತಿ ಕಲ್ಪಿಸಬೇಕು ಎಂದು ವಿಶ್ವಕರ್ಮ ಮಹಾಸಭಾ ಒತ್ತಾಯಿಸಿದೆ.

'ವಿಶ್ವಕರ್ಮ ಸಮಾಜಕ್ಕೆ ಈಗಾಗಲೇ 2(ಎ) ಮೀಸಲಾತಿ ಕಲ್ಪಿಸಲಾಗಿದೆ. ಆದರೆ ಬಹುಸಂಖ್ಯಾತರ ಜೊತೆಯಲ್ಲಿ ನಮಗೆ ಈ ಮೀಸಲಾತಿಯ ಪ್ರಯೋಜನ ದೊರೆಯುತ್ತಿಲ್ಲ. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ವಿಶ್ವಕರ್ಮ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಬೇಕೆಂದು ಒತ್ತಾಯಿಸಲು ರಾಜ್ಯದಾದ್ಯಂತ ಹೋರಾಟ ಆರಂಭಿಸಲಾಗುವುದು. ಈ ಬಗ್ಗೆ ನಮ್ಮ ಸಮಾಜ ಬಾಂಧವರಿಗೆ ಜಾಗೃತಿ ಮೂಡಿಸಲು ಬೀದರ್‌ನಿಂದ ಬೆಂಗಳೂರಿನವರೆಗೆ ಪಾದಯಾತ್ರೆ ನಡೆಸಲಾಗುವುದು' ಎಂದು ವಿಧಾನ ಪರಿಷತ್ ಸದಸ್ಯ ಹಾಗೂ ವಿಶ್ವಕರ್ಮ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಕೆ.ಪಿ. ನಂಜುಂಡಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಜುಲೈ 15ರಂದು ಅರಮನೆ ಮೈದಾನದ ವೈಟ್ ಪೆಟಲ್ಸ್‌ನಲ್ಲಿ ರಾಜ್ಯಮಟ್ಟದ ವಿಶ್ವಕರ್ಮ ಸಮಾಜದ ಮುಖಂಡರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮಾವೇಶ ಉದ್ಘಾಟಿಸಲಿದ್ದಾರೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಉತ್ತರಾಖಂಡ ರಾಜ್ಯದಿಂದ ಪರಿಶಿಷ್ಟ ಜಾತಿಯಲ್ಲಿ ಸಂಸದರಾಗಿ ಆಯ್ಕೆಯಾಗಿರುವ ವಿಶ್ವಕರ್ಮ ಸಮುದಾಯದ ಅಜಯ್ ತಮಟಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯತ್ವ ಪಡೆದ ಕೆನಡಾ ಸಂಸದ ಚಂದ್ರ ಆರ್ಯ

'ಮಾತೃಭಾಷೆಗೆ ಜನರನ್ನು ಒಗ್ಗೂಡಿಸುವ ಶಕ್ತಿ'

ಪ್ರಜಾವಾಣಿ ವಾರ್ತೆ

ಚಂದ್ರ ಆರ್ಯ ಅವರಿಗೆ ಮಹೇಶ ಜೋಶಿ ಅವರು ಸದಸ್ಯತ್ವ ಪತ್ರ ಹಸ್ತಾಂತರಿಸಿದರು. ಪರಿಷತ್ತಿನ ಗೌರವ ಕೋಶಾಧ್ಯಕ್ಷ ಪಟೇಲ್‌ಪಾಂಡು, ಸಂಗೀತಾ ಗಾಯತ್ರಿ, ಶ್ರೀನಿವಾಸ್ ಹಾಗೂ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗಶೆಟ್ಟಿ ಇದ್ದಾರೆ.

ಬೆಂಗಳೂರು: 'ಜಾತಿ, ಮತ, ಪಂಥ ಹಾಗೂ ಧರ್ಮಗಳ ಕಟ್ಟುಪಾಡುಗಳನ್ನು ಮೀರಿ, ಏಕಸೂತ್ರದಲ್ಲಿ ಎಲ್ಲರನ್ನೂ ಒಗ್ಗೂಡಿಸುವ ಶಕ್ತಿ ಮಾತೃಭಾಷೆಗಿದೆ' ಎಂದು ಕೆನಡಾ ಸಂಸದ ಚಂದ್ರ ಆರ್ಯ ತಿಳಿಸಿದರು.

ಇತ್ತೀಚೆಗೆ ಕೆನಡಾ ಸಂಸತ್ತಿನಲ್ಲಿ ಕನ್ನಡ ಭಾಷಣ ಮಾಡಿದ್ದ ಅವರು, ಕನ್ನಡಿಗರ ಮೆಚ್ಚುಗೆಗೆ ಪಾತ್ರರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಕೇಂದ್ರ ಕಚೇರಿಗೆ ಬುಧವಾರ ಭೇಟಿ ನೀಡಿದ ಅವರು, ಪರಿಷತ್ತಿನ ಸದಸ್ಯತ್ವ ಪಡೆದುಕೊಂಡರು. ಅವರ ಪತ್ನಿ ಸಂಗೀತಾ ಗಾಯತ್ರಿ ಹಾಗೂ ಸಹೋದರ ಶ್ರೀನಿವಾಸ್ ಅವರಿಗೂ ಸದಸ್ಯತ್ವ ನೀಡಲಾಯಿತು.

ಇಲ್ಲಿನ ಪಂಪ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರು ಪರಿಷತ್ತಿನ ಕಾರ್ಯಚಟುವಟಿಕೆಗಳ ಬಗ್ಗೆ ಚಂದ್ರ ಆರ್ಯ ಅವರಿಗೆ ಮಾಹಿತಿ ನೀಡಿದರು.

ಬಳಿಕ ಮಾತನಾಡಿದ ಚಂದ್ರ ಆರ್ಯ, 'ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆಯುತ್ತಿರುವ ಎಲ್ಲ ಕಾರ್ಯಚಟುವಟಿಕೆಗಳು ಕನ್ನಡ-ಕನ್ನಡಿಗ-ಕರ್ನಾಟಕವನ್ನು ಗಟ್ಟಿಗೊಳಿಸುವಂತಹದ್ದಾಗಿದೆ. ತಂದೆಯವರು ಸರ್ಕಾರಿ ಸೇವೆಯಲ್ಲಿದ್ದಾಗ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ರೂಪಿಸುವಲ್ಲಿ ಕಾರ್ಯಯೋಜನೆ ಕೈಗೊಂಡಿದ್ದರು. ಕೆನಡಾದಲ್ಲಿರುವ ಕನ್ನಡಿಗರನ್ನು ಒಟ್ಟುಗೂಡಿಸಿ, ಪರಿಷತ್ತಿನ ಘಟಕವನ್ನು ರಚಿಸಿ, ಅದನ್ನು ಮುನ್ನಡೆಸುವ ಮಹತ್ವದ ಜವಾಬ್ದಾರಿಯನ್ನು ಮಹೇಶ ಜೋಶಿ ನೀಡಿದ್ದಾರೆ. ಇದನ್ನು ನನ್ನ ಕರ್ತವ್ಯ ಎಂದು ನಿಭಾಯಿಸುತ್ತೇನೆ' ಎಂದು ತಿಳಿಸಿದರು.

ಮಹೇಶ ಜೋಶಿ, 'ಕೆನಡಾ ಸಂಸತ್ತಿನಲ್ಲಿ ಕನ್ನಡ ಮಾತನಾಡುವ ಮೂಲಕ ಎಲ್ಲರ ಮನಸ್ಸನ್ನು ಗೆದ್ದ ಚಂದ್ರ ಆರ್ಯ ಅವರು, ಪರಿಷತ್ತಿನ ಸದಸ್ಯತ್ವ ಪಡೆದುಕೊಂಡಿರುವುದು ಹಾಗೂ ಕೆನಡಾದಲ್ಲಿ ಪರಿಷತ್ತಿನ ಘಟಕದ ಮುಂದಾಳತ್ವ ವಹಿಸಿಕೊಂಡಿರುವುದು ಶ್ಲಾಘನೀಯ. ಹಾವೇರಿಯಲ್ಲಿ ನಡೆಯಲಿರುವ ಸಾಹಿತ್ಯ ಸಮ್ಮೇಳನಕ್ಕೆ ಮುಖ್ಯ ಅತಿಥಿಗಳಾಗಿ ಭಾಗವಹಿಸುವುದಕ್ಕೆ ಅವರು ಒಪ್ಪಿಗೆ ನೀಡಿದ್ದಾರೆ' ಎಂದರು.

ಕೋವಿಡ್: ನಗರದಲ್ಲಿ ಪ್ರಕರಣ ಹೆಚ್ಚಳ

ಬೆಂಗಳೂರು: ನಗರದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗಿದ್ದು, ಬುಧವಾರ 1,124 ಮಂದಿಗೆ ಕೋವಿಡ್ ದೃಢಪಟ್ಟಿದೆ.

ರಾಜ್ಯದಲ್ಲಿ ಒಂದು ದಿನದ ಅವಧಿಯಲ್ಲಿ 25,743 ಪರೀಕ್ಷೆಗಳನ್ನು ನಡೆಸಲಾಗಿದೆ. 1,231 ಮಂದಿ ಸೋಂಕಿತರಾಗಿದ್ದಾರೆ. ಸೋಂಕು ದೃಢ ಪ್ರಮಾಣ ಶೇ 4.78 ರಷ್ಟಿದೆ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ 953 ಮಂದಿ ಸೇರಿದಂತೆ ರಾಜ್ಯದಲ್ಲಿ 1,047 ಮಂದಿ ಹೊಸದಾಗಿ ಚೇತರಿಸಿಕೊಂಡಿದ್ದಾರೆ.

ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 6,603ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ 6,158 ಸೋಂಕಿತರಿದ್ದಾರೆ. ರಾಜ್ಯದಲ್ಲಿ ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 39.81 ಲಕ್ಷಕ್ಕೆ ಏರಿಕೆಯಾಗಿದೆ. 39.35 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ.

ಬೆಂಗಳೂರಿನಲ್ಲಿ ಒಟ್ಟು ಸೋಂಕಿತರ ಸಂಖ್ಯೆ 18.15 ಲಕ್ಷಕ್ಕೆ ತಲುಪಿದೆ. ಸೋಂಕಿತರಲ್ಲಿ 17.92 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ.

ಪದವಿ ಪಠ್ಯಕ್ರಮಕ್ಕೆ ಹಣಕಾಸು ಶಿಕ್ಷಣ ಕಡ್ಡಾಯ: ಸಚಿವ

ಪ್ರಜಾವಾಣಿ ವಾರ್ತೆ

ಒಪ್ಪಂದದ ಪ್ರತಿಯನ್ನು ರಾಜ್ಯ ಉನ್ನತ ಶಿಕ್ಷಣ ಪರಿಷತ್ ಕಾರ್ಯನಿರ್ವಾಹಕ ನಿರ್ದೇಶಕ ಪ್ರೊ. ಗೋಪಾಲಕೃಷ್ಣ ಜೋಶಿ ಮತ್ತು ಎನ್‌ಎಸ್‌ಇ ಅಕಾಡೆಮಿ ಸಿಇಒ ಅಭಿಲಾಷ್ ಮಿಶ್ರ ವಿನಿಮಯ ಮಾಡಿಕೊಂಡರು. ಪರಿಷತ್ ಉಪಾಧ್ಯಕ್ಷ ಪ್ರೊ.ಬಿ. ತಿಮ್ಮೇಗೌಡ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್ ಅಶ್ವತ್ಥ ನಾರಾಯಣ, ಎನ್‌ಎಸ್‌ಇ ಅಕಾಡೆಮಿ ಪ್ರಧಾನ ಆರ್ಥಿಕ ತಜ್ಞ ಡಾ. ತೀರ್ಥಂಕರ ಪಟ್ನಾಯಕ್ ಇದ್ದರು

ಬೆಂಗಳೂರು: ಪದವಿ ಕೋರ್ಸ್‌ಗಳ ಎರಡನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ ಹಣಕಾಸು ಶಿಕ್ಷಣ ಮತ್ತು ಹೂಡಿಕೆ ಜಾಗೃತಿ ಕುರಿತು ಬೋಧಿಸಲು ರಾಜ್ಯ ಉನ್ನತ ಶಿಕ್ಷಣ ಪರಿಷತ್ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್‌ನ ಅಂಗ ಸಂಸ್ಥೆಯಾದ ಎನ್‌ಎಸ್‌ಇ ಅಕಾಡೆಮಿ ಲಿಮಿಟೆಡ್ (ಎನ್‌ಎಎಲ್) ಜತೆ ಒಪ್ಪಂದ ಮಾಡಿಕೊಂಡಿದೆ.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಸಮ್ಮುಖದಲ್ಲಿ ಎರಡೂ ಸಂಸ್ಥೆಗಳು ಬುಧವಾರ ಒಪ್ಪಂದದ ಪತ್ರವನ್ನು ವಿನಿಮಯ ಮಾಡಿಕೊಂಡವು. ರಾಜ್ಯದ 20 ವಿಶ್ವವಿದ್ಯಾಲಯಗಳ ಜತೆಗೂ ಎನ್‌ಎಸ್‌ಇ ಅಕಾಡೆಮಿ ಲಿಮಿಟೆಡ್ ಒಪ್ಪಂದಗಳಿಗೆ ಸಹಿಹಾಕಿತು. 20 ವಿಶ್ವವಿದ್ಯಾಲಯಗಳ ಕುಲಪತಿಗಳು ಮತ್ತು ಕುಲಸಚಿವರು ಹಾಜರಿದ್ದು, ಒಪ್ಪಂದ ಪತ್ರಗಳನ್ನು ವಿನಿಮಯ ಮಾಡಿಕೊಂಡರು.

ನಂತರ ಮಾತನಾಡಿದ ಸಚಿವರು, 'ನಮ್ಮ ವಿದ್ಯಾರ್ಥಿಗಳು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆ ಎದುರಿಸಬೇಕಿದೆ. ಇದಕ್ಕಾಗಿ ಹಣಕಾಸು ಶಿಕ್ಷಣ ಮತ್ತು ಹೂಡಿಕೆ ಜಾಗೃತಿ ಎರಡನ್ನೂ ಕಲಿಯಬೇಕಿದೆ. ರಾಜ್ಯ ಉನ್ನತ ಶಿಕ್ಷಣ ಪರಿಷತ್ ಎನ್‌ಎಸ್‌ಇ ಅಕಾಡೆಮಿ ಜತೆ ಮಾಡಿಕೊಂಡಿರುವ ಒಪ್ಪಂದದಿಂದ ಐದು ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ' ಎಂದರು.

'ಎಲ್ಲ ಪದವಿ ಕಾಲೇಜುಗಳೂ ಈ ಕೋರ್ಸ್ ಅನ್ನು ತಮ್ಮ ಪಠ್ಯಕ್ರಮದ ಭಾಗವನ್ನಾಗಿ ಮಾಡಿಕೊಳ್ಳುವುದು ಕಡ್ಡಾಯ. ಈ ಕುರಿತು ಎಲ್ಲ ಕಾಲೇಜುಗಳಿಗೂ ಸೂಚನೆ ನೀಡಲಾಗಿದೆ. ವಿದ್ಯಾರ್ಥಿಗಳಲ್ಲಿ ಉಳಿತಾಯ, ಹೂಡಿಕೆ, ಆರ್ಥಿಕ ತಿಳಿವಳಿಕೆ, ಬಂಡವಾಳ ಹೂಡಿಕೆಗೆ ಇರುವ ಅವಕಾಶಗಳ ಕುರಿತು ಅರಿವು ಮೂಡಿಸಲಾಗುವುದು' ಎಂದು ವಿವರಿಸಿದರು.

ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ಬಿ.ತಿಮ್ಮೇಗೌಡ, ಕಾರ್ಯನಿರ್ವಾಹಕ ನಿರ್ದೇಶಕ ಡಾ.ಗೋಪಾಲಕೃಷ್ಣ ಜೋಶಿ, ಎನ್‌ಎಸ್‌ಇ ಇಂಡಿಯಾ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಭಿಲಾಷ್ ಮಿಶ್ರ, ಪ್ರಧಾನ ಆರ್ಥಿಕ ತಜ್ಞ ಡಾ.ತೀರ್ಥಂಕರ್ ಪಟ್ನಾಯಕ್, ಮುಖ್ಯ ವ್ಯವಸ್ಥಾಪಕ ಎಸ್. ರಂಗನಾಥನ್ ಉಪಸ್ಥಿತರಿದ್ದರು.

ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಪೂರ್ಣಾನಂದ ಪುರಿ ಶ್ರೀಗಳಿಗೆ ಪುಷ್ಪಾಭಿಷೇಕ ನೆರವೇರಿಸಿ ಭಕ್ತರು ಆಶೀರ್ವಾದ ಪಡೆದರು.

'ಅಂಧಕಾರ ದೂರ ಮಾಡುವ ಗುರುವಿಗೆ ಕೃತಜ್ಞರಾಗಿರಬೇಕು'

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ವ್ಯಾಸ ಮಹರ್ಷಿಯು ವೇದಗಳನ್ನು ರಚಿಸಿ ವೇದವ್ಯಾಸನಾದ ದಿನವನ್ನು ಗುರುಪೌರ್ಣಿಮೆಯನ್ನಾಗಿ ಆಚರಿಸುತ್ತೇವೆ. ಅಂಧಕಾರವನ್ನು ದೂರ ಮಾಡುವ ಗುರುವಿಗೆ ಎಲ್ಲರೂ ಕೃತಜ್ಞರಾಗಿರಬೇಕು' ಎಂದು ತೈಲೇಶ್ವರ ಗಾಣಿಗ ಮಹಾ ಸಂಸ್ಥಾನಮಠದ ಪೂರ್ಣಾನಂದ ಪುರಿ ಶ್ರೀಗಳು ತಿಳಿಸಿದರು.

ಸಮೀಪದ ನಗರೂರಿನ ತೈಲೇಶ್ವರ ಗಾಣಿಗ ಮಹಾ ಸಂಸ್ಥಾನ ಮಠದಲ್ಲಿ ಗುರುಪೌರ್ಣಿಮೆ ಪ್ರಯುಕ್ತ ಹಮ್ಮಿಕೊಂಡಿದ್ದ ವಿಶೇಷ ಪೂಜೆಯಲ್ಲಿ ಭಕ್ತರಿಂದ ಗುರುವಂದನೆ ಸ್ವೀಕರಿಸಿ ಮಾತನಾಡಿದ ಅವರು, 'ಬ್ರಹ್ಮಜ್ಞಾನವನ್ನು ಪಡೆಯುವ, ಆಚರಿಸುವವರೆಲ್ಲರೂ ಬ್ರಾಹ್ಮಣರಾಗುತ್ತಾರೆ. ಅದರಂತೆ ಗಾಣಿಗ ಜನಾಂಗದವರೇ ಹೋಮ ಹವನ ನೆರವೇರಿಸಿ ಶೂದ್ರರೂ ಬ್ರಹ್ಮಜ್ಞಾನ ಪಡೆದು ಬ್ರಾಹ್ಮಣರಾಗಬಹುದು ಎಂಬುದನ್ನು ಸಾಕ್ಷೀಕರಿಸಿದ್ದಾರೆ' ಎಂದರು.

'ಶಿಕ್ಷಣ, ಜೀವನಪಾಠಗಳೊಂದಿಗೆ ಮಾರ್ಗದರ್ಶನ ನೀಡಿ ಸನ್ಮಾರ್ಗದಲ್ಲಿ ನಡೆಸುತ್ತಾರೋ ಅವರು ಗುರುವಾಗುತ್ತಾರೆ' ಎಂದರು.

ಶ್ರೀಗಳನ್ನು ನಾದಸ್ವರ, ಪೂರ್ಣಕುಂಭ ಕಳಶಗಳೊಂದಿಗೆ ಮೆರವಣಿಗೆ ಮಾಡಲಾಯಿತು. ಪುಷ್ಪಾಭಿಷೇಕ ನೆರವೇರಿಸಿ ಭಕ್ತರು ಆಶೀರ್ವಾದ ಪಡೆದರು.

ಗುರು ಪೂರ್ಣಿಮೆ ವಿಶೇಷ



ಗುರುಪೂರ್ಣಿಮೆ ಅಂಗವಾಗಿ ಜೆ.ಪಿ. ನಗರದ ಸತ್ಯಗಣಪತಿ ಶಿರಡಿ ಸಾಯಿ ದೇವಸ್ಥಾನದಲ್ಲಿ ಲಕ್ಷ ಆಟಿಕೆಗಳಿಂದ ವಿಶೇಷವಾಗಿ ಅಲಂಕರಿಸಲ್ಪಟ್ಟ ಶಿರಡಿ ಸಾಯಿಬಾಬಾಗೆ ಬುಧವಾರ ವಿಶೇಷ ಪೂಜೆ ನೆರವೇರಿಸಲಾಯಿತು – ಪ್ರಜಾವಾಣಿ ಚಿತ್ರ

ಕೆ.ಆರ್‌ಪುರ ಸಮೀಪದ ಸೀಗೆಹಳ್ಳಿಯ ಸಾಯಿ ಮಂದಿರದಲ್ಲಿ ಗುರು ಪೂರ್ಣಿಮಾ ಅಂಗವಾಗಿ ಅದ್ವಿತ ಜಯಪ್ರಕಾಶ್ ಫೌಂಡೇಶನ್ ವತಿಯಿಂದ ಅನ್ನ ಸಂತರ್ಪಣೆ ಮಾಡಲಾಯಿತು. ಪಾಲಿಕೆ ಮಾಜಿ ಸದಸ್ಯರಾದ ಜಯಪ್ರಕಾಶ್, ಶ್ರೀಕಾಂತ್, ಮುಖಂಡ ರಾಕೇಶ್, ಉದಯ್ ಕುಮಾರ್ ಇದ್ದರು.

'ಸಸ್ಯಗಳ ಔಷಧ ಗುಣ ತಿಳಿಯಿರಿ'

ಪ್ರಜಾವಾಣಿ ವಾರ್ತೆ

ವಿಚಾರಸಂಕಿರಣದಲ್ಲಿ ಕುಲಪತಿ ಪ್ರೊ.ಲಿಂಗರಾಜ ಗಾಂಧಿ, ಕರ್ನಾಟಕ ಜೀವವೈವಿಧ್ಯ ಮಂಡಳಿ ಸದಸ್ಯ ಕಾರ್ಯದರ್ಶಿ ಅನಿತಾ ಎಸ್ ಅರೇಕಲ್ ಅವರು ಔಷಧಿ ಸಸ್ಯಗಳನ್ನು ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಸಸ್ಯಗಳಲ್ಲಿನ ಬಹು ಔಷಧ ಗುಣಗಳ ಮಹತ್ವ ತಿಳಿದುಕೊಳ್ಳುವ ಅಗತ್ಯವಿದೆ' ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಡಾ.ಲಿಂಗರಾಜ ಗಾಂಧಿ ಹೇಳಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ(ಬಿಸಿಯು) ಸಸ್ಯ ವಿಜ್ಞಾನ ವಿಭಾಗ, ಕರ್ನಾಟಕ ರಾಜ್ಯ ಔಷಧಿ ಗಿಡ ಮೂಲಿಕಾ ಪ್ರಾಧಿಕಾರ ಮತ್ತು ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ 'ಸ್ಥಳೀಯ ಔಷಧೀಯ ಸಸ್ಯಗಳ ಸಂರಕ್ಷಣೆ' ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ವಿದ್ಯಾರ್ಥಿಗಳು ಪ್ರಸ್ತುತ ಹಣಕಾಸು, ವ್ಯವಹಾರಕ್ಕೆ ಸಂಬಂಧಿಸಿದಂತೆ ವಿವಿಧ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡುತ್ತಿದ್ದಾರೆ. ಆದರೆ, ಔಷಧಿ ಸಸ್ಯಗಳ ಕುರಿತು ಅಧ್ಯಯನ ಮಾಡಲು ಆಸಕ್ತಿ ತೋರಿಸುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಔಷಧಿ ಗಿಡ ಮೂಲಿಕಾ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುದರ್ಶನ್.ಜಿ.ಎ ಮಾತನಾಡಿ, 'ದೈನಂದಿನ ಜೀವನದಲ್ಲಿ ಔಷಧೀಯ ಸಸ್ಯಗಳ ಬಳಕೆ ಮಾಡಲಾಗುತ್ತದೆ. ಆಯುರ್ವೇದ, ಯುನಾನಿ ಮತ್ತು ಸಿದ್ಧ ಸೇರಿದಂತೆ ವಿವಿಧ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಗಳಲ್ಲಿ ಇವುಗಳ ಬಳಕೆ ಹೆಚ್ಚಿನ ಪ್ರಮಾಣದಲ್ಲಿ ಮಾಡಲಾಗುತ್ತದೆ' ಎಂದು ಮಾಹಿತಿ ನೀಡಿದರು.

ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸದಸ್ಯೆ ಅನಿತಾ ಎಸ್ ಅರೇಕಲ್ ಇದ್ದರು.

ಬಂಗಾರಪೇಟೆ-ವೈಟ್‌ಫೀಲ್ಡ್ ಚತುಷ್ಪಥ ರೈಲು ಮಾರ್ಗ: ಜಿಲ್ಲೆಯ ಪ್ರಯಾಣಿಕರಿಗೆ ಅನುಕೂಲ

ಸ್ಥಳ ಸಮೀಕ್ಷೆಗೆ ಟೆಂಡರ್: 6 ತಿಂಗಳಲ್ಲಿ ವರದಿ

• ಕೆ.ಓಂಕಾರ ಮೂರ್ತಿ

ಬಂಗಾರಪೇಟೆ–ವೈಟ್‌ಫೀಲ್ಡ್ ನಡುವಿನ ಜೋಡಿ ರೈಲು ಮಾರ್ಗ (ಸಂಗ್ರಹ ಚಿತ್ರ)

ಮುಖ್ಯಾಂಶಗಳು
- ಸಂಚಾರ ದಟ್ಟಣೆ ತಗ್ಗಿಸಲು ನೆರವಾಗಲಿರುವ ಯೋಜನೆ
- 47 ಕಿ.ಮೀ. ಉದ್ದದ ಮಾರ್ಗ
- ಮೇಲ್ದರ್ಜೆಗೇರಿಸಲು ಅಂತಿಮ ಸ್ಥಳ ಸಮೀಕ್ಷೆ

ಕೋಲಾರ: ಬೆಂಗಳೂರಿನ ವೈಟ್‌ಫೀಲ್ಡ್ ಹಾಗೂ ಕೋಲಾರ ಜಿಲ್ಲೆಯ ಬಂಗಾರಪೇಟೆ ನಡುವಿನ ಜೋಡಿ ರೈಲು ಮಾರ್ಗವನ್ನು ಚತುಷ್ಪಥ ಮಾರ್ಗವಾಗಿ (3 ಮತ್ತು 4ನೇ ಟ್ರ್ಯಾಕ್) ಮೇಲ್ದರ್ಜೆಗೇರಿಸಲು ಅಂತಿಮ ಸ್ಥಳ ಸಮೀಕ್ಷೆಗೆ (ಫೈನಲ್ ಲೊಕೇಷನ್ ಸರ್ವೆ) ನೈರುತ್ಯ ರೈಲ್ವೆ ಟೆಂಡರ್ ಕರೆದಿದ್ದು, ವರದಿ ಸಲ್ಲಿಸಲು ಆರು ತಿಂಗಳ ಗಡುವು ನೀಡಿದೆ.

ಉದ್ಯೋಗ ಹಾಗೂ ಇತರೆ ಕೆಲಸ ನಿಮಿತ್ತ ನಿತ್ಯ ಬೆಂಗಳೂರಿಗೆ ಹೋಗಿ ಬರುವ ಜಿಲ್ಲೆಯ 25 ಸಾವಿರಕ್ಕೂ ಅಧಿಕ ಪ್ರಯಾಣಿಕರಲ್ಲಿ ಈ ನಿರ್ಧಾರ ಖುಷಿ ಮೂಡಿಸಿದೆ. ಚತುಷ್ಪಥ ರೈಲು ಮಾರ್ಗ ನಿರ್ಮಾಣವಾದರೆ ಹೆಚ್ಚಿನ ಸಂಖ್ಯೆಯ ರೈಲುಗಳ ಕಾರ್ಯಾಚರಣೆ, ವೇಗ ಸಾಮರ್ಥ್ಯ ಕಾಯ್ದುಕೊಳ್ಳಲು ಹಾಗೂ ಸರಕು ಸಾಗಣೆ ರೈಲು ಸಂಚಾರಕ್ಕೆ ಅನುಕೂಲವಾಗಲಿದೆ.

47 ಕಿ.ಮೀ ಉದ್ದದ ವೈಟ್‌ಫೀಲ್ಡ್ ಹಾಗೂ ಬಂಗಾರಪೇಟೆ ರೈಲು ನಿಲ್ದಾಣ ನಡುವೆ ಸದ್ಯ ಜೋಡಿ ಮಾರ್ಗ ಇದ್ದು, ಚತುಷ್ಪಥ ಮಾರ್ಗ ನಿರ್ಮಿಸಲು ಅಂತಿಮ ಸ್ಥಳ ಸಮೀಕ್ಷೆ ನಡೆಸಲಾಗುತ್ತದೆ. ಅದಕ್ಕಾಗಿ ₹ 1.8 ಕೋಟಿ ಮೀಸಲಿರಿಸಲಾಗಿದೆ. ಎಲ್ಲಿ ಸೇತುವೆ ನಿರ್ಮಾಣ ಅಗತ್ಯವಿದೆ? ಎಲ್ಲಿ, ಎಷ್ಟು ಭೂಸ್ವಾಧೀನ ಮಾಡಬೇಕಿದೆ? ಎಲ್ಲೆಲ್ಲಿ ತಿರುವು ಇರಲಿದೆ ಎಂಬುದರ ಬಗ್ಗೆ ವರದಿ ಸಿದ್ಧಪಡಿಸಲಾಗುತ್ತದೆ.

'ಸಮೀಕ್ಷೆಗೆ ಟೆಂಡರ್ ಕರೆಯಲಾಗಿದ್ದು, ಪ್ರಕ್ರಿಯೆ ನಡೆಯುತ್ತಿದೆ. ಸಮೀಕ್ಷೆ ನಡೆಸಲು 6 ತಿಂಗಳು ಬೇಕು. ಬಳಿಕ ರೈಲ್ವೆ ಸಚಿವಾಲಯಕ್ಕೆ ವರದಿ ಕಳುಹಿಸಲಾಗುವುದು. ಆ ನಂತರ ಕಾಮಗಾರಿಗೆ ಬೇಕಾಗುವ ಅನುದಾನ ಹಾಗೂ ಇತರ ಪ್ರಕ್ರಿಯೆ ಬಗ್ಗೆ ಸಚಿವಾಲಯ ನಿರ್ಧರಿಸಲಿದೆ' ಎಂದು ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಈಗಾಗಲೇ ಕಂಟೋನ್ಮೆಂಟ್ ರೈಲು ನಿಲ್ದಾಣದಿಂದ ವೈಟ್‌ಫೀಲ್ಡ್‌ವರೆಗೆ ಚತುಷ್ಪಥ ರೈಲು ಮಾರ್ಗ ನಿರ್ಮಾಣ ಕಾರ್ಯ ಚಾಲ್ತಿಯಲ್ಲಿದೆ.

'ಯೋಜನೆಯನ್ನು ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಈಗ ಸಮೀಕ್ಷೆ ನಡೆಸಲು ಟೆಂಡರ್ ಕರೆದಿರುವುದು ಸ್ವಾಗತಾರ್ಹ ನಿರ್ಧಾರ. ವೈಟ್‌ಫೀಲ್ಡ್–ಬಂಗಾರಪೇಟೆ ಮಾರ್ಗದ ಈಗಿರುವ ರೈಲುಗಳಲ್ಲಿ ನಿತ್ಯ ಬೆಳಿಗ್ಗೆ ಹಾಗೂ ಸಂಜೆ ಕಾಲಿಡಲು ಸಾಧ್ಯವಾಗದ ಪರಿಸ್ಥಿತಿ ಇದೆ. ಕೆಜಿಎಫ್‌ನಿಂದ ಬಸ್ಸಿನಲ್ಲಿ ಬೆಂಗಳೂರಿಗೆ ಸುತ್ತು ಬಳಸಿ ಪ್ರಯಾಣಿಸಬೇಕಿದ್ದು, ಹೆಚ್ಚು ಸಮಯ ಹಿಡಿಯುತ್ತಿದೆ' ಎಂದು ರೈಲ್ವೆ ಹೋರಾಟಗಾರ, ಕರ್ನಾಟಕ ರೈಲು ಬಳಕೆದಾರರ ವೇದಿಕೆಯ ಕೆ.ಎನ್. ಕೃಷ್ಣಪ್ರಸಾದ್ ಹೇಳಿದರು.

'ಮೂರು ಮತ್ತು ನಾಲ್ಕನೇ ಮಾರ್ಗ ನಿರ್ಮಾಣವಾದರೆ ವಿವಿಧ ರಾಜ್ಯಗಳಿಗೂ ಹೆಚ್ಚು ರೈಲುಗಳು ಕಾರ್ಯಾಚರಣೆ ಮಾಡಲು ಅನುಕೂಲವಾಗುತ್ತದೆ. ಎರಡು ಮಾರ್ಗವನ್ನು ಪ್ರಯಾಣಿಕರ ರೈಲಿಗೂ, ಇನ್ನೆರಡು ಮಾರ್ಗವನ್ನು ಸರಕು ಸಾಗಣೆ ರೈಲು ಕಾರ್ಯಾಚರಣೆಗೂ ಬಳಸಬಹುದು' ಎಂದರು.

ಕೋಲಾರ ಜಿಲ್ಲೆಯ ಮಾರಿಕುಪ್ಪಂ, ಕೆಜಿಎಫ್, ಬಂಗಾರಪೇಟೆ, ಕೋಲಾರ, ಮಾಲೂರಿನ ಪ್ರಯಾಣಿಕರು ಉದ್ಯೋಗ ಹಾಗೂ ಇನ್ನಿತರ ವಿಚಾರಗಳಿಗೆ ಉದ್ಯಾನ ನಗರಿಯನ್ನೇ ಅವಲಂಬಿಸಿದ್ದಾರೆ. ಗಣಿ ಮುಚ್ಚಿದ ಬಳಿಕ ಈ ಸಂಖ್ಯೆ ಮತ್ತಷ್ಟು ಹೆಚ್ಚಿದೆ.

> ನಿತ್ಯ ಸಾವಿರಾರು ದಿನಗೂಲಿ ನೌಕರರು ಕೋಲಾರದ ವಿವಿಧೆಡೆಯಿಂದ ಬೆಂಗಳೂರಿಗೆ ಬರುತ್ತಾರೆ. ಮತ್ತಷ್ಟು ರೈಲು ಅಗತ್ಯವಿದ್ದು, ಚತುಷ್ಪಥ ಮಾರ್ಗದಿಂದ ಅನುಕೂಲವಾಗಲಿದೆ
>
> **ಕೆ.ಎನ್. ಕೃಷ್ಣಪ್ರಸಾದ್,** ರೈಲ್ವೆ ಹೋರಾಟಗಾರ

ಪೆರಿಫೆರಲ್ ಹೊರವರ್ತುಲ ರಸ್ತೆ • 'ಕಡಿಯಬೇಡಿ, ಬೇರೆಡೆ ನೆಡಿ': ಪರಿಸರಪ್ರೇಮಿಗಳ ಆಗ್ರಹ

36 ಸಾವಿರ ಮರಗಳಿಗೆ ಕೊಡಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರಕ್ಕೆ ಬಹಳಷ್ಟು ಮಾರಕವಾಗಿರುವ ಹಾಗೂ ರೈತರಿಗೆ ಹಲವು ರೀತಿಯಲ್ಲಿ ತೊಂದರೆ ನೀಡುತ್ತಿರುವ ಪೆರಿಫೆರಲ್ ಹೊರವರ್ತುಲ ರಸ್ತೆ ಯೋಜನೆಯನ್ನು ಕೈಬಿಡಬಹುದಾಗಿದೆ ಎಂದು ಪರಿಸರ ಪ್ರೇಮಿಗಳು ಅಭಿಪ್ರಾಯಪಟ್ಟರು.

ಪೆರಿಫೆರಲ್ ಹೊರವರ್ತುಲ ರಸ್ತೆ ಯೋಜನೆ ಬಗ್ಗೆ ಪರಿಸರ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಬುಧವಾರ ಅಭಿಪ್ರಾಯ ಸಂಗ್ರಹಕ್ಕೆ ಯಲಹಂಕದಲ್ಲಿ ಸಭೆ ನಡೆಸಲಾಯಿತು. ಈ ಸಂದರ್ಭದಲ್ಲಿ ಪರಿಸರ ಪ್ರೇಮಿಗಳು ರೈತರು ಪ್ರತಿಭಟನೆ ನಡೆಸುತ್ತಿರುವ ಸಮಯದಲ್ಲಿ ಅವರನ್ನು ದೂರವಿಟ್ಟು ಸಭೆ ನಡೆಸುತ್ತಿರುವುದು ಸರಿಯಲ್ಲ ಎಂದರು.

ನಗರದ ವಾಹನದಟ್ಟಣೆ ನಿವಾರಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸುತ್ತಿರುವ 73.50 ಕಿ.ಮೀ ಪೆರಿಫೆರಲ್ ಹೊರವರ್ತುಲ ರಸ್ತೆ ಯೋಜನೆಗೆ 36 ಸಾವಿರಕ್ಕೂ ಹೆಚ್ಚು ಮರಗಳನ್ನು ತೆರವು ಮಾಡಬೇಕು. ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದ ಆರು ಕೆರೆಗಳ ವ್ಯಾಪ್ತಿಯನ್ನು ಬಳಸಿಕೊಳ್ಳಲಾಗುತ್ತದೆ ಎಂದು ಸಭೆಯಲ್ಲಿ ಬಿಡಿಎ ಮತ್ತು ಮಾಲಿನ್ಯ ಮಂಡಳಿ ಅಧಿಕಾರಿಗಳು ವಿವರಿಸಿದರು.

ಯೋಜನೆ ಪ್ರಕಾರ, ಈ ರಸ್ತೆ ನಿರ್ಮಾಣದ ಪ್ರದೇಶದಲ್ಲಿ 36,824 ಮರಗಳಿವೆ. ಇದರಲ್ಲಿ 14,306 ಮರಗಳು ನೆಡುತೋಪಾಗಿವೆ. 13,542 ಮರಗಳು ನೀಲಗಿರಿ, 10,138 ಮರಗಳು ಇತರೆ ಜಾತಿಯದ್ದಾಗಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪರಿಸರಪ್ರೇಮಿಗಳು, 'ಪರಿಸರಕ್ಕೆ ಮಾರಕವಾಗಿರುವ ಈ ಯೋಜನೆ ಅಗತ್ಯವಿದೆಯೇ ಎಂಬುದನ್ನು ಮತ್ತೆ ಆಲೋಚಿಸಬೇಕಾಗಿದೆ. ಮರಗಳನ್ನು ಕಡಿಯಬೇಡಿ. ಬೇರೆಡೆ ನೆಡಬೇಕು. ಅಲ್ಲದೆ ನೀವು ಹೇಳಿರುವ ಸಂಖ್ಯೆಗಳನ್ನು ಮತ್ತೆ ಪರಿಶೀಲಿಸಬೇಕಾಗಿದೆ. ಇದರ ವಾಸ್ತವ ವರದಿಯನ್ನು ಸಾರ್ವಜನಿಕರಿಗೆ ಸಿಗುವಂತೆ ಮಾಡಬೇಕು' ಎಂದು ಆಗ್ರಹಿಸಿದರು.

'ರೈತರಿಗೆ ಮಾರಕವಾಗದಂತೆ ಕ್ರಮ ಕೈಗೊಳ್ಳಬೇಕು. 36 ಸಾವಿರ ಮರಗಳನ್ನು ಕಡಿಯಬೇಕಾಗಿರುವುದರಿಂದ ಈ ಬಗ್ಗೆ ನಗರದ ಕೇಂದ್ರ ಭಾಗದಲ್ಲಿ ಮತ್ತೆ ಸಭೆ ನಡೆಸಿ. ರಸ್ತೆ ವಿರುದ್ಧ ರೈತರು ಹೋರಾಟ ಮಾಡುತ್ತಿರುವ ಸಂದರ್ಭದಲ್ಲಿ ಅವರನ್ನು ಹೊರತುಪಡಿಸಿ ಸಭೆ ಮಾಡುವುದು ಸರಿಯಲ್ಲ. ಎಲ್ಲರ ಜೊತೆ ಸಭೆ ನಡೆಸಿ ಯೋಜನೆಯ ಎಲ್ಲ ವಿವರಗಳನ್ನು ನೀಡಿ ಮುಂದುವರಿಯಿರಿ' ಎಂದು ಪರಿಸರ ರಕ್ಷಣೆ ಹೋರಾಟಗಾರ ವಿಜಯ್ ನಿಶಾಂತ್ ಆಗ್ರಹಿಸಿದರು.

ಮುಖ್ಯಮಂತ್ರಿ ಭೇಟಿಯ ಭರವಸೆ

ಮುಂದಿನ ನಾಲ್ಕೈದು ದಿನಗಳಲ್ಲಿ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿಸಿ, ಮಾತುಕತೆ ನಡೆಸಲು ಅನುವು ಮಾಡಿಕೊಡಲಾಗುತ್ತದೆ ಎಂಬ ಜಿಲ್ಲಾಡಳಿತದ ಭರವಸೆಯಿಂದ ಪಿ.ಆರ್.ಆರ್. ಭೂಸ್ವಾಧೀನ ರೈತರ ಹೋರಾಟ ಸಮಿತಿ ಸದಸ್ಯರು ನಡೆಸುತ್ತಿದ್ದ ಹೋರಾಟವನ್ನು ಬುಧವಾರ ಕೈಬಿಟ್ಟಿದ್ದಾರೆ.

'ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ನಮ್ಮ ಬೇಡಿಕೆ ಈಡೇರಿಸಲು ಮನವಿ ಮಾಡಿಕೊಳ್ಳುತ್ತೇವೆ' ಎಂದು ಸಮಿತಿ ಸದಸ್ಯ ರಘು ತಿಳಿಸಿದರು.

ಪೆರಿಫೆರಲ್ ಹೊರವರ್ತುಲ ರಸ್ತೆ ಯೋಜನೆ ಭೂಸ್ವಾಧೀನಕ್ಕೆ '2013ರ ಭೂ-ಸ್ವಾಧೀನ ಮತ್ತು ಪುನರ್ವಸತಿ ಕಾಯ್ದೆ ಪ್ರಕಾರ ಪರಿಹಾರ ನೀಡಬೇಕು. ಇಲ್ಲವೇ ಯೋಜನೆ ರದ್ದುಗೊಳಿಸಿ ಎನ್‌ಒಸಿ ನೀಡಲು ಆಗ್ರಹಿಸಿ ಮಂಗಳವಾರ ಬಿಡಿಎ ಮುಂದೆ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಿದ್ದರು. ಆ ಸಂದರ್ಭದಲ್ಲಿ ಅವರನ್ನು ಪೊಲೀಸರು ವಶಕ್ಕೆ ಪಡೆದು ಪೊಲೀಸರು, ಆಡುಗೋಡಿ ಸಿಎಆರ್ ಮೈದಾನದಲ್ಲಿ ಇರಿಸಿದ್ದರು. ಅಲ್ಲಿಯೂ ರೈತರು ಪ್ರತಿಭಟನೆ ನಡೆಸುತ್ತಿದ್ದರು.

ದಾಸನಪುರ ಹೋಬಳಿಯ ಮಾದನಾಯಕನಹಳ್ಳಿಯಲ್ಲಿ ನಡೆದ ಸಮಾರಂಭದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಚೊಕ್ಕನಹಳ್ಳಿ ವೆಂಕಟೇಶ್, ಸೀನಪ್ಪ, ಆಲೂರು ರವಿಕುಮಾರ್ ಸೇರಿದಂತೆ ನೂರಾರು ಕಾರ್ಯಕರ್ತರು ಬಿಜೆಪಿ ಸೇರಿದರು

ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿಗೆ

ಯಲಹಂಕ: 'ದೇಶದಲ್ಲಿ ಕಾಂಗ್ರೆಸ್ ಮುಳುಗುತ್ತಿರುವ ಹಡಗು. ಅಲ್ಲಿನ ಮುಖಂಡರು ಹಾಗೂ ಕಾರ್ಯಕರ್ತರು ತಮ್ಮ ಮುಂದಿನ ಭವಿಷ್ಯ ಕಟ್ಟಿಕೊಳ್ಳಲು ಬಿಜೆಪಿ ಸೇರುತ್ತಿದ್ದಾರೆ' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ದಾಸನಪುರ ಹೋಬಳಿಯ ಮಾದ ನಾಯಕನಹಳ್ಳಿಯಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿ, 'ಈ ಎಲ್ಲ ನಾಯಕರು ಹಲವಾರು ವರ್ಷಗಳಿಂದ ಕಾಂಗ್ರೆಸ್‌ನಲ್ಲಿ ದುಡಿದು ತಮ್ಮ ಅಸ್ತಿತ್ವ ಉಳಿಸಿಕೊಳ್ಳಬೇಕೆಂದು ಪ್ರಾಮಾಣಿಕ ಪ್ರಯತ್ನ ಮಾಡಿದರು. ಆದರೆ, ತಮ್ಮ ಶ್ರಮಕ್ಕೆ ತಕ್ಕಂತೆ ಬೆಲೆ ಮತ್ತು ಗೌರವ ಸಿಗದಿದ್ದಾಗ, ತಾವು ಪಕ್ಷದಲ್ಲಿ ಮೂಲೆಗುಂಪಾಗಿ ಉಳಿಯುತ್ತೇವೆಂಬ ಕಾರಣದಿಂದ ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ' ಎಂದು ತಿಳಿಸಿದರು.

ರಾಜ್ಯಸಭೆ ಸದಸ್ಯ ಜಗ್ಗೇಶ್ ಮಾತನಾಡಿ, 'ಇಡೀ ವಿಶ್ವವೇ ಭಾರತವನ್ನು ತಿರುಗಿ ನೋಡುವ ರೀತಿಯಲ್ಲಿ ದೇಶವನ್ನು ಪ್ರಗತಿಪಥದತ್ತ ಪ್ರಧಾನಿ ಕೊಂಡೊಯ್ಯುತ್ತಿದ್ದಾರೆ' ಎಂದರು.

ಶಾಸಕ ಎಸ್.ಆರ್.ವಿಶ್ವನಾಥ್, ರಾಜ್ಯಸಭೆ ಸದಸ್ಯ ಜಗ್ಗೇಶ್, ಶಾಸಕಕುಮಾರ್ ಬಂಗಾರಪ್ಪ, ಜಿಲ್ಲಾಪಂಚಾಯಿತಿ ಮಾಜಿಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್, ಬಿಜೆಪಿ ಮುಖಂಡರಾದ ಹನುಮಯ್ಯ, ದಿಬ್ಬೂರು ಜಯಣ್ಣ, ಎಸ್.ಎನ್.ರಾಜಣ್ಣ, ಸತೀಶ್ ಕಡತನಮಲೆ ಇದ್ದರು.

ಕಾರಾಗೃಹಗಳಲ್ಲಿ ನೇಮಕಾತಿ; ವರದಿಗೆ ಕೋರ್ಟ್ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಕಾರಾಗೃಹಗಳಲ್ಲಿ ವೈದ್ಯರು, ವೈದ್ಯಕೀಯ ಸಿಬ್ಬಂದಿ ಹಾಗೂ ಮನೋರೋಗ ಚಿಕಿತ್ಸಕರ ನೇಮಕಾತಿ ಕುರಿತಂತೆ ವಸ್ತುಸ್ಥಿತಿಯ ವರದಿ ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಗೌರಿ ಲಂಕೇಶ್ ಹತ್ಯೆ ಪ್ರಕರಣದ ಆರೋಪಿ ಅಮೋಲ್ ಕಾಳೆ, ರಾಜ್ಯದ ಕಾರಾಗೃಹಗಳಲ್ಲಿನ ಮೂಲ ಸೌಕರ್ಯಗಳ ಕೊರತೆಯ ವಿಚಾರಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ಸಾರ್ವನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯ ಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಜೈಲುಗಳಲ್ಲಿನ ವೈದ್ಯಕೀಯ ಸೌಲಭ್ಯಗಳು, ವೈದ್ಯರು, ವೈದ್ಯಕೀಯ ಸಿಬ್ಬಂದಿ ಹಾಗೂ ಮನೋರೋಗ ಚಿಕಿತ್ಸಕರ ನೇಮಕಾತಿ ಬಗ್ಗೆ 2020ರಲ್ಲಿ ಹೈಕೋರ್ಟ್ ನಿರ್ದೇಶನ ನೀಡಿದೆ. ಆದರೆ, ಈ ಬಗ್ಗೆ ಕ್ರಮ ಕೈಗೊಂಡಿಲ್ಲ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಸರ್ಕಾರಿ ವಕೀಲರು, 'ಜೈಲುಗಳಲ್ಲಿನ ಸುಧಾರಣೆಗೆ ರಾಜ್ಯ ಸರ್ಕಾರ ಮುಂದಾಗಿದೆ. ರಾಜ್ಯ ಕಾನೂನು ಸೇವಾ ಪ್ರಾಧಿಕಾರ 2021ರ ಜುಲೈ 14ರಂದು ಸಲ್ಲಿಸಿರುವ ಶಿಫಾರಸುಗಳ ಅನ್ವಯ ಹಲವು ಕ್ರಮ ಕೈಗೊಂಡಿದೆ' ಎಂದರು.

ಇದಕ್ಕೂ ಮುನ್ನ ಅಮೋಲ್ ಕಾಳೆ ಪರ ವಕೀಲ ಎನ್.ಪಿ ಅಮೃತೇಶ್, 'ಜೈಲುಗಳಲ್ಲಿ ಇಂಟರ್‌ನೆಟ್ ಸೌಲಭ್ಯ ಒದಗಿಸಿಲ್ಲ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದಕ್ಕೆ ನ್ಯಾಯಪೀಠ, 'ಕಾನೂನು ಸೇವಾ ಪ್ರಾಧಿಕಾರದ ಶಿಫಾರಸುಗಳ ಅನ್ವಯ ಕೈಗೊಂಡಿರುವ ಕ್ರಮಗಳ ಜೊತೆಗೆ ಜೈಲುಗಳಲ್ಲಿ ಇಂಟರ್‌ನೆಟ್ ಸೌಲಭ್ಯ ಕಲ್ಪಿಸುವ ಸಾಧ್ಯತೆಗಳ ಬಗೆಗಿನ ಮಾಹಿತಿಯನ್ನೂ ಸಲ್ಲಿಸಿ' ಎಂದು ಸರ್ಕಾರಿ ವಕೀಲರಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ಉದ್ಯಾನದಲ್ಲಿ ಈಜುಕೊಳ, ಜಿಮ್: ತಡೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಿರ್ಬಂಧ ವಿಧಿಸಿದ ಹೈಕೋರ್ಟ್

ಬೆಂಗಳೂರು: 'ರಾಜಾಜಿನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಪ್ರಕಾಶ್ ನಗರದ ವಾರ್ಡ್ ಸಂಖ್ಯೆ 98ರ ಗಾಯತ್ರಿ ಪಾರ್ಕ್‌ನಲ್ಲಿ ಈಜುಕೊಳ, ಮಲ್ಟಿ ಜಿಮ್ ನಿರ್ಮಾಣ ಮಾಡಬಾರದು' ಎಂದು ಹೈಕೋರ್ಟ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ನಿರ್ಬಂಧ ವಿಧಿಸಿದೆ.

ಈ ಸಂಬಂಧ ಪ್ರಕಾಶ್ ನಗರದ ನಿವಾಸಿಗಳಾದ ಜೆ. ಶ್ರೀನಿವಾಸ್ ಹಾಗೂ ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್, 'ಕರ್ನಾಟಕ ಉದ್ಯಾನ, ಆಟದ ಮೈದಾನಗಳು, ತೆರೆದ ಸ್ಥಳಗಳ ಸಂರಕ್ಷಣೆ ಮತ್ತು ನಿಯಂತ್ರಣ ಕಾಯ್ದೆಯ ಕಲಂ 8 ಹಾಗೂ 1985ರ ಅಧಿನಿಯಮದ ನಿಯಮ 6ರ ಅನ್ವಯ ಪಾರ್ಕ್‌ಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ನಿರ್ಬಂಧವಿದೆ' ಎಂಬ ಅಂಶವನ್ನು ನ್ಯಾಯಪೀಠಕ್ಕೆ ವಿವರಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯ ಪೀಠ, ಗಾಯತ್ರಿದೇವಿ ಪಾರ್ಕ್ ನಲ್ಲಿ ಉದ್ದೇಶಿತ ಈಜುಕೊಳ, ಮಲ್ಟಿ

ಜಿಮ್ ನಿರ್ಮಾಣಕ್ಕೆ ನಿರ್ಬಂಧ ವಿಧಿಸಿ ಆದೇಶಿತು.

ಪ್ರಕರಣವೇನು?: 'ಕಾಯ್ದೆಯ ಅನ್ವಯ ಪಾರ್ಕ್‌ಗಳಲ್ಲಿ ಬಾವಿ, ಪಂಪ್ ಹೌಸ್, ಸಾರ್ವಜನಿಕರಿಗೆ ಕುಳಿತುಕೊಳ್ಳಲು ಬೆಂಚ್, ವಾಚ್ ಮೆನ್ ವಾಸಿಸಲು ಮನೆ ನಿರ್ಮಾಣಕ್ಕೆ ಮಾತ್ರವೇ ಅವಕಾಶವಿದೆ. ಆದರೆ, ಗಾಯತ್ರಿ ದೇವಿ ಪಾರ್ಕ್‌ನಲ್ಲಿ ಕಾಯ್ದೆಗೆ ವಿರುದ್ಧವಾಗಿ ಭೂ ಮಾಫಿಯಾ ಸಲ್ಲಿಸಿದ ಪ್ರಸ್ತಾವನೆ ಆಧರಿಸಿ ₹6 ಕೋಟಿ ವೆಚ್ಚದಲ್ಲಿ ಈಜುಕೊಳ, ಮಲ್ಟಿ ಜಿಮ್ ನಿರ್ಮಿಸಲಾಗುತ್ತಿದೆ' ಎಂಬುದು ಅರ್ಜಿದಾರರ ಆರೋಪ.

'ಈಜುಕೊಳ, ಮಲ್ಟಿ ಜಿಮ್ ನಿರ್ಮಾಣ ವಿರೋಧಿಸಿ ಸಲ್ಲಿಸಲಾಗಿರುವ ಮನವಿ ಪರಿಗಣಿಸುವಂತೆ ಬಿಬಿಎಂಪಿಗೆ ನಿರ್ದೇಶಿಸಬೇಕು. ಅರ್ಜಿ ಇತ್ಯರ್ಥವಾಗುವವರೆಗೆ ನಿರ್ಮಾಣ ಕಾಮಗಾರಿ ನಡೆಸದಂತೆ ಬಿಬಿಎಂಪಿಗೆ ನಿರ್ಬಂಧ ವಿಧಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಐಎಎಸ್ ಅಧಿಕಾರಿ ಮಂಜುನಾಥ್ ಅರ್ಜಿ ವಿಚಾರಣೆ ಮುಂದೂಡಿಕೆ

ಬೆಂಗಳೂರು: ಕಂದಾಯ ವ್ಯಾಜ್ಯವೊಂದರಲ್ಲಿ ಅನುಕೂಲಕರ ಆದೇಶ ನೀಡುವುದಕ್ಕಾಗಿ ₹ 5 ಲಕ್ಷ ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ವಿರುದ್ಧ ಎಸಿಬಿ ದಾಖಲಿಸಿರುವ ಪ್ರಕರಣ ರದ್ದುಗೊಳಿಸಲು ಕೋರಿರುವ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಎರಡು ವಾರಗಳ ಕಾಲ ಮುಂದೂಡಿದೆ.

ಈ ಕುರಿತಂತೆ ಜೆ.ಮಂಜುನಾಥ್ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ಬುಧವಾರ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ನಿಗದಿಯಾಗಿತ್ತು.

ವಿಚಾರಣೆ ವೇಳೆ ಮಂಜುನಾಥ್ ಪರ ವಕೀಲರು, 'ನಾನು ಸಿಬಿಐ ಅನ್ನೂ ಪ್ರತಿನಿಧಿಸುತ್ತಿದ್ದೇನೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಮತ್ತೊಂದು ನ್ಯಾಯಪೀಠದಲ್ಲೂ ವಿಚಾರಣೆ ನಡೆಯುತ್ತಿದೆ. ಅದರಲ್ಲಿ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಇಂದಿನ ಎಡಿಜಿಪಿ ಸೀಮಂತ್ ಕುಮಾರ್ ಸಿಂಗ್ ಬಳ್ಳಾರಿ ಜಿಲ್ಲಾ ಎಸ್ಪಿಯಾಗಿದ್ದ ಕಾಲದಲ್ಲಿ ಅಕ್ರಮ ಗಣಿಗಾರಿಕೆ ಆರೋಪಗಳಲ್ಲಿ ಅವರ ಪಾತ್ರವೇನಾದರೂ ಇತ್ತೇ, ಇದ್ದರೆ ಆ ಬಗೆಗಿನ ವಿವರಗಳನ್ನು ಸಲ್ಲಿಸಿ ಎಂದು ನ್ಯಾಯಪೀಠ ಹೇಳಿದೆ. ಹೀಗಾಗಿ, ಮಂಜುನಾಥ್ ಪರ ಇಲ್ಲಿಯೂ ಹಾಜರಾಗುವುದು ಎಷ್ಟು ಸೂಕ್ತ ಎಂಬ ಬಗ್ಗೆ ಕಾನೂನಾತ್ಮಕ ಜಿಜ್ಞಾಸೆ ಇದೆ. ಅಂತೆಯೇ, ಈ ನ್ಯಾಯಪೀಠದ ಮುಂದಿರುವ ಅರ್ಜಿಯನ್ನು ಪ್ರತಿನಿಧಿಸಲು ಬೇರೆ ವಕೀಲರನ್ನು ನೇಮಕ ಮಾಡಿಕೊಳ್ಳುವಂತೆ ಮಂಜುನಾಥ್ ಅವರಿಗೆ ಸೂಚಿಸಲಾಗಿದೆ. ಅದಕ್ಕಾಗಿ ಒಂದಷ್ಟು ಕಾಲಾವಕಾಶ ಬೇಕಿದ್ದು ಅಲ್ಲಿಯವರೆಗೆ ವಿಚಾರಣೆ ಮುಂದೂಡಬೇಕು' ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಎರಡು ವಾರಗಳ ಕಾಲ ಮುಂದೂಡಿದೆ.

ಕಾಮಗಾರಿ ನಡುವೆ ನೂಡಲ್ಸ್

ಸ್ಮಾರ್ಟ್‌ಸಿಟಿ ಯೋಜನೆಯಡಿ ಶಿವಾಜಿನಗರದಲ್ಲಿ ನಡೆಯುತ್ತಿರುವ ಕಾಮಗಾರಿ ಸ್ಥಳದಲ್ಲಿ ಕಾರ್ಮಿಕರೊಬ್ಬರು ಮಕ್ಕಳೊಂದಿಗೆ ಇಟ್ಟಿಗೆಯಲ್ಲೇ ಒಲೆ ನಿರ್ಮಿಸಿಕೊಂಡು ನೂಡಲ್ಸ್ ಸಿದ್ಧಪಡಿಸಿದರು

– ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

154 ಕೆ.ಜಿ. ಏಕ ಬಳಕೆಯ ಪ್ಲಾಸ್ಟಿಕ್ ಜಪ್ತಿ

ಬೆಂಗಳೂರು: ನಗರದಾದ್ಯಂತ ಏಕ ಬಳಕೆಯ ಪ್ಲಾಸ್ಟಿಕ್ ಮಾರಾಟ ಮಾಡುತ್ತಿದ್ದ ಮಳಿಗೆಗಳು, ಉತ್ಪಾದಿಸುತ್ತಿರುವ ಘಟಕಗಳ ಮೇಲೆ ಬುಧವಾರ 98 ಕಡೆ ಅನಿರೀಕ್ಷಿತ ತಪಾಸಣೆ ನಡೆಸಿದ ಬಿಬಿಎಂಪಿ ಅಧಿಕಾರಿಗಳು, 154.2 ಕೆ.ಜಿ ಪ್ಲಾಸ್ಟಿಕ್ ಜಪ್ತಿ ಮಾಡಿ ₹1,02,500 ದಂಡ ವಿಧಿಸಿದ್ದಾರೆ.

ಜುಲೈ 1ರಿಂದ 13ರವರೆಗೆ ಒಟ್ಟು 1,319 ಕಡೆ 1,926.8 ಕೆ.ಜಿ ಪ್ಲಾಸ್ಟಿಕ್ ಉತ್ಪನ್ನ ಜಪ್ತಿ ಮಾಡಿ ₹8,36,300 ದಂಡ ವಿಧಿಸಲಾಗಿದೆ.

ಪತ್ರಕರ್ತರು ನಿಷ್ಪಕ್ಷಪಾತದಿಂದ ಕೆಲಸ ಮಾಡಬೇಕು: ಸುಧೀಂದ್ರ ರಾವ್

ಬೆಂಗಳೂರು: 'ಪತ್ರಕರ್ತರು ಮತ್ತು ನ್ಯಾಯಾಧೀಶರು ನಿಷ್ಪಕ್ಷಪಾತರಾಗಿ ಕೆಲಸ ಮಾಡಬೇಕು' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಕೆ. ಸುಧೀಂದ್ರ ರಾವ್ ಅಭಿಪ್ರಾಯಪಟ್ಟರು.

ನ್ಯಾಷನಲ್ ಕಾಲೇಜಿನ ಪತ್ರಿಕೋದ್ಯಮ ವಿಭಾಗದಲ್ಲಿ ಬುಧವಾರ ನಡೆದ 'ನ್ಯಾಯಾಂಗ ಮತ್ತು ಮಾಧ್ಯಮ' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಸಮಾಜದಲ್ಲಿ ನ್ಯಾಯಾಂಗ ಮತ್ತು ಪತ್ರಿಕೋದ್ಯಮದ ಪಾತ್ರ ಹಿರಿದಾಗಿದ್ದು, ಅದನ್ನು ಅರಿತು ನಾವು ಕೆಲಸ ಮಾಡಬೇಕು' ಎಂದು ಸಲಹೆ ನೀಡಿದರು.

ಸಂವಾದದಲ್ಲಿ ಮಾಧ್ಯಮ ಮತ್ತು ನ್ಯಾಯಾಂಗದ ಕುರಿತ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಅವರು ಉತ್ತರ ನೀಡಿದರು.

ಪತ್ರಿಕೋದ್ಯಮ ವಿದ್ಯಾರ್ಥಿಗಳ ಸಂಪಾದಕತ್ವದಲ್ಲಿ ಹೊರತರುವ ಕಾಲೇಜಿನ ಪತ್ರಿಕೆ 'ದಿ ಎನ್ ಸಿಜೆ ಟೈಮ್ಸ್' ಹಾಗೂ ಚನ್ನಪಟ್ಟಣ ಗೊಂಬೆಗಳ ಕುರಿತ ಸಾಕ್ಷ್ಯಚಿತ್ರವನ್ನು ಬಿಡುಗಡೆಗೊಳಿಸಲಾಯಿತು.

ನ್ಯಾಷನಲ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಪ್ರೊ.ಎಸ್ ಎನ್. ನಾಗರಾಜ ರೆಡ್ಡಿ, ಪ್ರಾಂಶುಪಾಲರಾದ ಡಾ.ವೈ.ಸಿ.ಕಮಲ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಡಾ.ಎಸ್. ಜಯಸಿಂಹ, ಡಾ. ವೈಶಾಲಿ ಎಚ್.ಬಿ. ಇದ್ದರು.

ನೆಡುತೋಪು ಯೋಜನೆ ಜಾರಿಗೆ ಗಡುವು

ಬೆಂಗಳೂರು: 'ರಸ್ತೆ ಅಭಿವೃದ್ಧಿ ಯೋಜನೆಗೆ ಅಡ್ಡಿಯಾಗುವ ಮರಗಳನ್ನು ಕತ್ತರಿಸಿದರೆ ಅದಕ್ಕೆ ಪರ್ಯಾಯವಾಗಿ ಸಸಿ ನೆಡುವ ಯೋಜನೆಯನ್ನು ಆರು ವಾರಗಳಲ್ಲಿ ಜಾರಿಗೆ ತರಬೇಕು' ಎಂದು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಡಿಸಿಎಲ್) ಹೈಕೋರ್ಟ್ ನಿರ್ದೇಶಿಸಿದೆ.

ಮೆಟ್ರೊ ಯೋಜನೆಗೆ ಮರ ಕಡಿಯುವುದನ್ನು ಪ್ರಶ್ನಿಸಿ ಪರಿಸರವಾದಿ ಟಿ.ದತ್ತಾತ್ರೇಯ ದೇವರೆ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ, 'ಪ್ರಕರಣಕ್ಕೆ ಸಂಬಂಧಿಸಿದಂತೆ ರಸ್ತೆ ಅಭಿವೃದ್ಧಿ ಯೋಜನೆಗಾಗಿ ಕತ್ತರಿಸುವ 91 ಬೃಹತ್ ಮರಗಳಿಗೆ ಪರ್ಯಾಯವಾಗಿ 2,693 ಸಸಿಗಳನ್ನು ನೆಡುವ ನೆಡುತೋಪು ಯೋಜನೆಯನ್ನು 6 ವಾರಗಳಲ್ಲಿ ಜಾರಿ ಗೊಳಿಸಬೇಕು ಮತ್ತು ಈ ಕುರಿತ ವರದಿಯನ್ನು ಕೋರ್ಟ್‌ಗೆ ಸಲ್ಲಿಸಬೇಕು' ಎಂದು ಹೇಳಿತು.

ಅನುಮತಿ: ಸಿಲ್ಕ್ ಬೋರ್ಡ್ ಸಿಗ್ನಲ್ ಮತ್ತು ಕಾಡುಬೀಸನಹಳ್ಳಿ ಜಂಕ್ಷನ್ ನಡುವೆ ಮೆಟ್ರೊ ರೈಲು ಯೋಜನೆಗಾಗಿ 14 ಮರಗಳನ್ನು ಮತ್ತು ವೆಲ್ಲರಾ ಜಂಕ್ಷನ್ ಮತ್ತು ರಾಷ್ಟ್ರೀಯ ಸೈನಿಕ ಶಾಲೆ ಪ್ರದೇಶದಲ್ಲಿ 7 ಮರಗಳನ್ನು ಕತ್ತರಿಸಲು ಮರ ಅಧಿಕಾರಿ (ಟ್ರೀ ಆಫೀಸರ್) ನೀಡಿರುವ ಅನುಮತಿ ಜಾರಿಗೊಳಿಸಲು ನ್ಯಾಯಪೀಠವು ಬಿಎಂಆರ್‌ಸಿಎಲ್‌ಗೆ ಅಸ್ತು ಎಂದಿದೆ.

ಬೆಂಗಳೂರು ಕೃಷಿ ವಿವಿ ಶಿಫಾರಸು ಮಾಡಿರುವ 'ಬಿಎಂಆರ್‌ಸಿಎಲ್ ಪರಿಹಾರ ಪ್ಲಾಂಟೇಶನ್ ಯೋಜನೆ ಯನ್ನೂ ಜಾರಿಗೊಳಿಸಬೇಕು' ಎಂದು ಕೋರ್ಟ್ ಬಿಎಂಆರ್‌ಸಿಎಲ್‌ಗೆ ನಿರ್ದೇಶಿಸಿದೆ.

ದೇವನಹಳ್ಳಿಯಲ್ಲಿ ಇಫ್ಕೊದಿಂದ ಸ್ಥಾವರ ಸ್ಥಾಪನೆ

ಇನ್ನು ನ್ಯಾನೊ ಯೂರಿಯಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಫ್ಕೊ ಸಂಸ್ಥೆಯು ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಇಫ್ಕೊ ನ್ಯಾನೊ ಯೂರಿಯಾ (ದ್ರವ) ಸ್ಥಾವರವನ್ನು ಸ್ಥಾಪಿಸಲಿದೆ.

ದೇವನಹಳ್ಳಿ ತಾಲ್ಲೂಕಿನ ನಾಗನಾಯಕನಹಳ್ಳಿಯ 'ಏರೋಸ್ಪೇಸ್ ಪಾರ್ಕ್'ನಲ್ಲಿ ಸ್ಥಾವರ ನಿರ್ಮಿಸಲು ಉದ್ದೇಶಿಸಲಾಗಿದೆ. ಒಟ್ಟು ₹550 ಕೋಟಿ ಯೋಜನೆ ಇದಾಗಿದ್ದು, ಸ್ಥಾವರ ನಿರ್ಮಾಣವನ್ನು 15 ತಿಂಗಳಲ್ಲಿ ಮುಕ್ತಾಯಗೊಳಿಸುವ ಕಾಲಮಿತಿ ಹಾಕಿಕೊಳ್ಳಲಾಗಿದೆ.

'ಈ ಸ್ಥಾವರವು ವಾರ್ಷಿಕ 5 ಕೋಟಿ ಬಾಟಲಿಗಳ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಇದು 5 ಕೋಟಿ ಚೀಲ (22.5 ಲಕ್ಷ ಮೆಟ್ರಿಕ್ ಟನ್) ಸಾಮಾನ್ಯ ಯೂರಿಯಾಕ್ಕೆ ಸಮನಾಗಿರುತ್ತದೆ. ರಾಜ್ಯ ಸರ್ಕಾರವು ದೇವನಹಳ್ಳಿ ಬಳಿ 12 ಎಕರೆ ಕೆಐಎಡಿಬಿ ಜಮೀನನ್ನು ಘಟಕ ಸ್ಥಾಪಿಸಲು ಮಂಜೂರು ಮಾಡಿದೆ' ಎಂದು ಇಫ್ಕೊ ರಾಜ್ಯ ಮಾರುಕಟ್ಟೆ ವ್ಯವಸ್ಥಾಪಕ ಡಾ. ಸಿ. ನಾರಾಯಣಸ್ವಾಮಿ ಬುಧವಾರ ತಿಳಿಸಿದರು.

'ಇಫ್ಕೊ ಈಗ 36 ಸಾವಿರ ಸದಸ್ಯ ಸಹಕಾರ ಸಂಘಗಳನ್ನು ಹೊಂದಿದ್ದು, ವಾರ್ಷಿಕ ₹33 ಸಾವಿರ ಕೋಟಿಗೂ ಹೆಚ್ಚು ವಹಿವಾಟು ನಡೆಸುತ್ತಿದೆ. ಇಫ್ಕೊ ತಯಾರಿಸುತ್ತಿರುವ ನ್ಯಾನೊ ಯೂರಿಯಾಗೆ ದೇಶ ಮತ್ತು ವಿದೇಶಗಳಲ್ಲಿ ಬೇಡಿಕೆ ಇದೆ. ಗುಜರಾತ್‌ನ ಕಲೋಲ್‌ನಲ್ಲಿ ಆರಂಭಿಸಿದ ವಿಶ್ವದ ಮೊದಲ ನ್ಯಾನೊ ಯೂರಿಯಾ ಸ್ಥಾವರವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಿದ್ದರು. ಕಲೋಲ್ ಸ್ಥಾವರದಲ್ಲಿ ಇದುವರೆಗೆ 4.5 ಕೋಟಿ ನ್ಯಾನೊ ಯೂರಿಯಾ ಬಾಟಲಿಗಳನ್ನು ಉತ್ಪಾದಿಸಲಾಗಿದೆ' ಎಂದು ವಿವರಿಸಿದರು.

'500 ಮಿಲಿ ಲೀಟರ್ ಬಾಟಲ್ ನ್ಯಾನೊ ಯೂರಿಯಾ 45 ಕೆ.ಜಿ. ಯೂರಿಯಾಗೆ ಸಮನಾಗಿದೆ. ಇದರ ಬೆಲೆಯು ಒಂದು ಯೂರಿಯಾ ಚೀಲಕ್ಕಿಂತ ಶೇ 10ರಷ್ಟು ಕಡಿಮೆಯಾಗಿದೆ. ನ್ಯಾನೊ ಯೂರಿಯಾ ಬಳಕೆಯಿಂದ ಬೆಳೆಗಳ ಉತ್ಪಾದನೆ ಹೆಚ್ಚಲಿದ್ದು, ಮಣ್ಣಿನ ಆರೋಗ್ಯದ ಗುಣಮಟ್ಟ ಕಾಪಾಡಿಕೊಳ್ಳಲು ಸಹಕಾರಿಯಾಗಲಿದೆ' ಎಂದು ತಿಳಿಸಿದರು.

'ನಾಗನಾಯಕನಹಳ್ಳಿಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೂತನ ಸ್ಥಾವರಕ್ಕೆ ಜುಲೈ 14ರಂದು ಭೂಮಿ ಪೂಜೆ ನೆರವೇರಿಸಲಿದ್ದಾರೆ. ಕೇಂದ್ರ ಕೃಷಿ ಸಚಿವ ನರೇಂದ್ರ ತೋಮರ್, ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಸಚಿವ ಮಾನ್ಸುಖ್ ಮಾಂಡವೀಯ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದು ತಿಳಿಸಿದರು.

ಉಪ ತಹಶೀಲ್ದಾರ್ ಜಾಮೀನು: ವಿಚಾರಣೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂ ವ್ಯಾಜ್ಯವೊಂದರ ಮೇಲ್ಮನವಿ ವಿಚಾರಣೆಗೆ ಸಂಬಂಧಿಸಿದಂತೆ ₹5 ಲಕ್ಷ ಲಂಚ ಪಡೆದ ಆರೋಪದಲ್ಲಿ ಜೈಲಿನಲ್ಲಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯ ಉಪ ತಹಶೀಲ್ದಾರ್ ಪಿ.ಎಸ್. ಮಹೇಶ್ ಸಲ್ಲಿಸಿರುವ ಜಾಮೀನು ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಇದೇ 18ಕ್ಕೆ ಮುಂದೂಡಿದೆ.

ಈ ಕುರಿತ ಅರ್ಜಿಯ ವಿಚಾರಣೆ ಬುಧವಾರ ನ್ಯಾಯಮೂರ್ತಿ ಎಚ್. ಪಿ. ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಬಂದಾಗ ನ್ಯಾಯಾಂಗ ರಿಜಿಸ್ಟ್ರಾರ್ ಅವರು ಈ ಕುರಿತಂತೆ ಸುಪ್ರೀಂಕೋರ್ಟ್‌ನಲ್ಲಿ ಎಸ್‌ಎಲ್‌ಪಿ (ವಿಶೇಷ ಮೇಲ್ಮನವಿ) ದಾಖಲಾಗಿದೆ ಎಂಬ ಸಂಗತಿಯನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಎಸಿಬಿ ಮತ್ತು ಅದರ ಮುಖ್ಯಸ್ಥ ಎಡಿಜಿಪಿ ಸೀಮಂತ್ ಕುಮಾರ್ ಸಿಂಗ್ ಸಲ್ಲಿಸಿರುವ ಎಸ್‌ಎಲ್‌ಪಿ ಸಂಬಂಧ ಸುಪ್ರೀಂಕೋರ್ಟ್ ಮಂಗಳವಾರವಷ್ಟೇ (ಜುಲೈ 12) ನೀಡಿರುವ ಆದೇಶವನ್ನು ಅವರು ನ್ಯಾಯಪೀಠಕ್ಕೆ ಅರುಹಿದರು.

ಸುಪ್ರೀಂಕೋರ್ಟ್ ಎಸ್‌ಎಲ್‌ಪಿಯನ್ನು ಶುಕ್ರವಾರ (ಜುಲೈ 15) ವಿಚಾರಣೆಗೆ ಕೈಗೆತ್ತಿಕೊಳ್ಳಲಿದ್ದು, ಅಲ್ಲಿಯವರೆಗೆ ಹೈಕೋರ್ಟ್ ಈ ಪ್ರಕರಣದ ವಿಚಾರಣೆ ಮುಂದೂಡುವಂತೆ ಆದೇಶಿಸಿರುವುದನ್ನು ನ್ಯಾಯಪೀಠಕ್ಕೆ ವಿವರಿಸಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿ ಆದೇಶಿಸಿತು.

ಸ್ಮಾರ್ಟ್‌ಸಿಟಿ ಯೋಜನೆಯಡಿ ನಿರ್ಮಿಸಿರುವ ಸೈಕಲ್ ಪಥಕ್ಕೆ ಬಳಿದಿದ್ದ ಬಣ್ಣ ಒಂದೇ ಮಳೆಗೆ ತೊಳೆದು ಹೋಗಿದೆ. ಮಿನ್ಸ್ಕ್ ಸ್ಕ್ವೇರ್‌ನಲ್ಲಿ ಸೈಕಲ್ ಪಥ ಬುಧವಾರ ಕಂಡಿದ್ದು ಹೀಗೆ – ಪ್ರಜಾವಾಣಿ ಚಿತ್ರ

ಇ.ಡಿ ಅಧಿಕಾರ: ವಿಚಾರಣೆಗೆ 'ಸುಪ್ರೀಂ' ಅಸ್ತು

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ನಿರ್ದೇಶಕ ಸಂಜಯ್ ಕುಮಾರ್ ಮಿಶ್ರಾ ಅವರ ಅಧಿಕಾರಾವಧಿಯನ್ನು ಮತ್ತೊಂದು ವರ್ಷ ಮುಂದುವರಿಸಿದ್ದ ಕೇಂದ್ರ ಸರ್ಕಾರದ ತೀರ್ಮಾನವನ್ನು ಪ್ರಶ್ನಿಸಿ ವಕೀಲರೊಬ್ಬರು ಅರ್ಜಿ ಸಲ್ಲಿಸಿದ್ದು, ಇದರ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸಮ್ಮತಿ ಸೂಚಿಸಿದೆ.

ಮುಂಗಾರು ಅಧಿವೇಶನ: ಸರ್ವಪಕ್ಷ ಸಭೆ

ನವದೆಹಲಿ: ಜುಲೈ 18ರಿಂದ ಪ್ರಾರಂಭವಾಗಲಿರುವ ಸಂಸತ್ತಿನ ಮುಂಗಾರು ಅಧಿವೇಶನವನ್ನು ಸುಗಮವಾಗಿ ನಡೆಸಲು ಕೇಂದ್ರ ಸರ್ಕಾರವು ಭಾನುವಾರ (ಜುಲೈ 17) ಬೆಳಿಗ್ಗೆ ಸರ್ವಪಕ್ಷಗಳ ಸಭೆಯನ್ನು ಕರೆದಿದೆ.

ಸರ್ವಪಕ್ಷಗಳ ಸಭೆಯಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಹಾಜರಿರುವರು. ಪ್ರಧಾನಿ ನರೇಂದ್ರ ಮೋದಿ ಅವರು ಕೂಡಾ ಸಭೆಗೆ ಹಾಜರಾಗುವ ಸಾಧ್ಯತೆ ಇದೆ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಶನಿವಾರ ಸಂಜೆ 4 ಗಂಟೆಗೆ ಉಭಯ ಸದನಗಳ ನಾಯಕರ ಸಭೆ ಕರೆದಿದ್ದಾರೆ. ರಾಜ್ಯಸಭೆಯ ಸಭಾಪತಿ ಎಂ. ವೆಂಕಯ್ಯ ನಾಯ್ಡು ಅವರು ಭಾನುವಾರ ಸಂಜೆ 6 ಗಂಟೆಗೆ ಉಭಯ ಸದನಗಳ ವಿವಿಧ ಪಕ್ಷಗಳ ನಾಯಕರ ಸಭೆಯನ್ನು ಕರೆದಿದ್ದಾರೆ.

ಬಿಜೆಪಿ ದಲಿತ ನಾಯಕರಿಂದ ಆತ್ಮವಂಚನೆ

ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಬಿಜೆಪಿ ಸರ್ಕಾರದಿಂದ ಪರಿಶಿಷ್ಟರಿಗೆ ಅನ್ಯಾಯವಾಗುತ್ತಿದ್ದು, ದಲಿತರು ಅನಾಥ ಶಿಶುಗಳಂತಾಗಿದ್ದಾರೆ. ಇದರ ವಿರುದ್ಧ ಧ್ವನಿ ಎತ್ತದ ಆ ಪಕ್ಷದ ದಲಿತ ನಾಯಕರಿಗೆ ಕಾಂಗ್ರೆಸ್ ವಿರುದ್ಧ ಮಾತನಾಡುವ ನೈತಿಕತೆ ಇಲ್ಲ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಬಿಜೆಪಿಯಲ್ಲಿರುವ ದಲಿತ ನಾಯಕರು, ಶಾಸಕರು ತಮಗೆ ತಾವೇ ಆತ್ಮವಂಚನೆ ಮಾಡಿಕೊಳ್ಳುತ್ತಿದ್ದಾರೆ' ಎಂದರು.

ಆರ್. ಧ್ರುವ ನಾರಾಯಣ

'ಬಿಜೆಪಿಯ ದಲಿತ ನಾಯಕರು ಕೈಗೊಂಬೆಗಳಂತೆ ಕೆಲಸ ಮಾಡುತ್ತಿದ್ದಾರೆ. ಛಲವಾದಿ ನಾರಾಯಣ ಸ್ವಾಮಿ ಚಡ್ಡಿಯನ್ನು ಕೈಯಲ್ಲಿ ಹಿಡಿದದ್ದೇ ಉದಾಹರಣೆ. ಅನ್ಯಾಯದ ವಿರುದ್ಧ ಸೊಲ್ಲೆತ್ತದ ಆ ಪಕ್ಷ ಪ್ರತಿನಿಧಿಸುವ ದಲಿತ ಸಚಿವರು ಹಾಗೂ ಶಾಸಕರಿಗೆ ತಾಕತ್ತಿದ್ದರೆ ಪರಿಶಿಷ್ಟರ ಕಲ್ಯಾಣಕ್ಕೆ ಅನುದಾನ ಬಿಡುಗಡೆ ಮಾಡಲಿ' ಎಂದು ಸವಾಲು ಹಾಕಿದರು.

'ಪರಿಶಿಷ್ಟರಿಗೆ ಮೀಸಲಿಟ್ಟ ಅನುದಾನದಲ್ಲಿಯೂ ಸರ್ಕಾರ ಶೇ 40 ಕಮಿಷನ್ ಪಡೆಯುತ್ತಿದೆ. ಗಂಗಾ ಕಲ್ಯಾಣ ಯೋಜನೆ ಹಗರಣ ಇದಕ್ಕೊಂದು ನಿದರ್ಶನ. ಹಲವು ಯೋಜನೆಗಳನ್ನು ಕೈಬಿಟ್ಟಿರುವ ಸರ್ಕಾರ, ಸಹಾಯಧನಗಳನ್ನು ನಿಲ್ಲಿಸಿವೆ. ಬಡವರಿಗೆ ಕೊಟ್ಟ ಹಣವನ್ನು ಲೂಟಿ ಹೊಡೆಯಲಾಗುತ್ತಿದೆ' ಎಂದ ಅವರು, 'ಬಜೆಟ್ ಗಾತ್ರದಲ್ಲಿ ಜನಸಂಖ್ಯೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡದಿದ್ದರೆ ಹೋರಾಟ ಮಾಡುತ್ತೇವೆ' ಎಂದು ಎಚ್ಚರಿಕೆ ನೀಡಿದರು.

ಆನೇಕಲ್ ತಾಲ್ಲೂಕಿನ ಬನ್ನೇರುಘಟ್ಟ ಜೈವಿಕ ಉದ್ಯಾನದ ಮಿಥುನ್ ಎಂಬ ಹುಲಿಯನ್ನು ಬೆಂಗಳೂರಿನ ಬಿಟಿಎಂ ಬಡಾವಣೆಯ ಆರ್ಕಿಡ್ಸ್ ಇಂಟರ್‌ನ್ಯಾಷನಲ್ ಶಾಲೆಯ ವಿದ್ಯಾರ್ಥಿಗಳು ದತ್ತು ಪಡೆದರು

ಬನ್ನೇರುಘಟ್ಟ : ಬೆಂಗಾಲ್ ಹುಲಿ ದತ್ತು ಪಡೆದ ಆರ್ಕಿಡ್ಸ್ ಶಾಲೆ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಆನೇಕಲ್ : ಬನ್ನೇರುಘಟ್ಟ ಜೈವಿಕ ಉದ್ಯಾನದ ಮಿಥುನ್ ಎಂಬ ಎಂಟು ವರ್ಷದ ಹುಲಿಯನ್ನು ಬೆಂಗಳೂರಿನ ಬಿಟಿಎಂ ಬಡಾವಣೆಯ ಆರ್ಕಿಡ್ಸ್ ಇಂಟರ್‌ನ್ಯಾಷನಲ್ ಶಾಲೆಯ ವಿದ್ಯಾರ್ಥಿಗಳು ದತ್ತು ಪಡೆಯುವ ಮೂಲಕ ಪ್ರಾಣಿಗಳ ಬಗೆಗಿನ ಪ್ರೀತಿಯನ್ನು ತೋರಿದ್ದಾರೆ.

ಶಾಲೆಯ ವಿದ್ಯಾರ್ಥಿಗಳು ಹಣ ಸಂಗ್ರಹಿಸಿ ₹ 1,16,794ಗೆ ಹುಲಿ ದತ್ತು ಯೋಜನೆಗೆ ನೀಡುವ ಮೂಲಕ ರಾಷ್ಟ್ರೀಯ ಪ್ರಾಣಿ ಹುಲಿಯ ಸಂರಕ್ಷಣೆಯ ಬಗ್ಗೆ ಕಾಳಜಿಯನ್ನು ತೋರಿದ್ದಾರೆ. ವನ್ಯಜೀವಿಗಳ ಸಂರಕ್ಷಣೆ ಮತ್ತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ಪ್ರೇರಣೆ ಉಂಟು ಮಾಡಲು ಸಂಸ್ಥೆಯು ಈ ಕಾರ್ಯಕ್ರಮವನ್ನು ಕೈಗೊಂಡಿದೆ ಎಂದು ಶಾಲೆಯ ಪ್ರಾಚಾರ್ಯೆ ಬಿ.ಮಂಜುಳ ತಿಳಿಸಿದರು.

ಶಾಲೆಯ ಸುಮಾರು ಎರಡು ಸಾವಿರ ವಿದ್ಯಾರ್ಥಿಗಳು ಎರಡು ವಾರಗಳ ಕಾಲ ತಮ್ಮ ಪಾಕೆಟ್ ಮನಿಯನ್ನು ಸಂಗ್ರಹಿಸಿ ಹುಲಿ ದತ್ತು ಯೋಜನೆಗೆ ನೀಡುವ ಮೂಲಕ ಪ್ರಾಣಿಪ್ರೀತಿಯನ್ನು ಮೆರೆದಿದ್ದಾರೆ.

ಬನ್ನೇರುಘಟ್ಟ ಜೈವಿಕ ಉದ್ಯಾನದ ಉಪನಿರ್ದೇಶಕ ಹರೀಶ್, ಸಾರ್ವಜನಿಕ ಸಂಪರ್ಕಾಧಿಕಾರಿ ಸಂತೋಷ್ ಇದ್ದರು.

ಲಿಂಗ ಸಮಾನತೆ: 135ನೇ ಸ್ಥಾನ

ನವದೆಹಲಿ (ಪಿಟಿಐ): ಲಿಂಗ ಸಮಾನತೆ ಶ್ರೇಯಾಂಕದಲ್ಲಿ ಕಳೆದ ವರ್ಷ 140ನೇ ಸ್ಥಾನದಲ್ಲಿದ್ದ ಭಾರತ ಈ ವರ್ಷ 135ನೇ ಸ್ಥಾನಕ್ಕೇರಿದೆ. ಆರ್ಥಿಕ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಾಗಿರುವುದರಿಂದ ಶ್ರೇಯಾಂಕ ಏರಿಕೆಯಾಗಿದೆ.

ಜಾಗತಿಕ ಆರ್ಥಿಕ ವೇದಿಕೆಯು (ಡಬ್ಲ್ಯುಇಎಫ್) ಲಿಂಗ ಸಮಾನತೆ ಕುರಿತ ವರದಿಯನ್ನು ಜಿನಿವಾದಲ್ಲಿ ಬುಧವಾರ ಬಿಡುಗಡೆ ಮಾಡಿದೆ. ಶ್ರೇಯಾಂಕ ಪಟ್ಟಿಯಲ್ಲಿ ಒಟ್ಟು 146 ದೇಶಗಳಿವೆ. ಐಸ್‌ಲ್ಯಾಂಡ್ ಅಗ್ರಸ್ಥಾನ ಕಾಯ್ದುಕೊಂಡಿದೆ. ನಂತರದ ಸ್ಥಾನದಲ್ಲಿ ಫಿನ್ಲೆಂಡ್, ನಾರ್ವೆ, ನ್ಯೂಜಿಲೆಂಡ್ ಮತ್ತು ಸ್ವೀಡನ್ ಇವೆ. ಅಫ್ಗಾನಿಸ್ತಾನ, ಪಾಕಿಸ್ತಾನ, ಕಾಂಗೊ, ಇರಾನ್, ಛಾಡ್ ದೇಶಗಳು ಕೊನೆಯ 5 ಸ್ಥಾನಗಳಲ್ಲಿವೆ.

ಸಮ್ಮೇಳನ, ವಿಚಾರಸಂಕಿರಣ, ವಿಚಾರ ಗೋಷ್ಠಿ ಮೂಲಕ ಹೋರಾಟಗಾರರ ಪರಿಚಯ

'19 ಗಡಿ ಜಿಲ್ಲೆಗಳಲ್ಲಿ ಏಕೀಕರಣಕ್ಕೆ ಶ್ರಮಿಸಿದ ವ್ಯಕ್ತಿಗಳ ಸ್ಮರಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ನಡೆಸಿದ ಮಹನೀಯರನ್ನು ಸ್ಮರಿಸುವ ಕಾರ್ಯಕ್ರಮಗಳನ್ನು 19 ಗಡಿ ಜಿಲ್ಲೆಗಳಲ್ಲಿ ಆಯೋಜಿಸಲಾಗುವುದು' ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್ ತಿಳಿಸಿದರು.

ಮಂಗಳವಾರ ನಡೆದ ಆಲೂರು ವೆಂಕಟರಾಯರ ಜನ್ಮದಿನಾಚರಣೆ ಹಾಗೂ ಫ.ಗು. ಹಳಕಟ್ಟಿ ಅವರ ಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಮತ್ತು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಈ ಮಹನೀಯರನ್ನು ಸ್ಮರಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು' ಎಂದು ತಿಳಿಸಿದರು.

ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಆಲೂರು ವೆಂಕಟರಾಯರ ಜನ್ಮ ದಿನಾಚರಣೆ ಮತ್ತು ಫ.ಗು. ಹಳಕಟ್ಟಿ ಅವರ ಸ್ಮರಣೆ ಕಾರ್ಯಕ್ರಮದಲ್ಲಿ ಶ್ರೀನಿವಾಸ ವಾಡಪ್ಪಿ, ವೂಡೇ ಪಿ. ಕೃಷ್ಣ, ಅರವಿಂದ ಜತ್ತಿ, ಮಹೇಶ ಜೋಶಿ, ಸಿ. ಸೋಮಶೇಖರ್ ಹಾಗೂ ಪ್ರಕಾಶ್ ಮತ್ತೀಹಳ್ಳಿ ಪುಷ್ಪ ನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

'19 ಗಡಿ ಜಿಲ್ಲೆಗಳಲ್ಲೂ ಸಮ್ಮೇಳನ, ವಿಚಾರಸಂಕಿರಣ, ವಿಚಾರ ಗೋಷ್ಠಿ ಹಮ್ಮಿಕೊಳ್ಳುವ ಮೂಲಕ ಹೋರಾಟಗಾರರ ಬದುಕು ಮತ್ತು ಸಾಧನೆಗಳನ್ನು ಪರಿಚಯ ಮಾಡಿಕೊಡಲಾಗುವುದು' ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಮಾತನಾಡಿ, 'ಕನ್ನಡ ನಾಡಿನಲ್ಲಿ ಏಕೀಕರಣದ ಬೀಜ ಬಿತ್ತಿದವರಲ್ಲಿ ಆಲೂರು ವೆಂಕಟರಾಯರೂ ಸೇರಿದ್ದಾರೆ. ಮರಾಠರು ಅಧಿಕವಾಗಿದ್ದ ಪ್ರದೇಶದಲ್ಲಿ ಕನ್ನಡ ಕಹಳೆ ಮೊಳಗಿಸಿ ಭಾಷೆಯ ಬೆಳವಣಿಗೆಗೆ ಕಾರಣರಾಗಿದ್ದಾರೆ. ಹಾಗೆಯೇ ವಚನ ಸಾಹಿತ್ಯ ಭದ್ರವಾಗಿ ಉಳಿಯುವಲ್ಲಿ ಫ.ಗು. ಹಳಕಟ್ಟಿ ಅವರ ಪಾತ್ರ ಸಹ ಸ್ಮರಣೀಯ' ಎಂದು ಹೇಳಿದರು.

'ಆಲೂರು ವೆಂಕಟರಾಯರ ಕೊಡುಗೆ' ಕುರಿತು ಸಾಹಿತಿ ಶ್ರೀನಿವಾಸ ವಾಡಪ್ಪಿ ಹಾಗೂ 'ಫ.ಗು. ಹಳಕಟ್ಟಿ ಅವರ ಕೊಡುಗೆ' ಕುರಿತು ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಅವರು ಉಪನ್ಯಾಸ ನೀಡಿದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತಿಹಳ್ಳಿ ಇದ್ದರು.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಶೇಷಾದ್ರಿಪುರ ಮಹಾವಿದ್ಯಾಲಯ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ರಾಜ್ಯಕೋಶದ ಸಹಯೋಗದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.



ಮೊದಲ ಬಾರಿಗೆ ಬ್ಯಾಂಕ್ ಪರೀಕ್ಷೆ ಬರೆಯುವವರಿಗೆ..

ಪರೀಕ್ಷೆ ಪ್ರವೇಶ ಸಿದ್ಧತೆ ಹೀಗಿರಲಿ

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ವರ್ಷದಿಂದ ವರ್ಷಕ್ಕೆ ಕೆಲವು ಬದಲಾವಣೆಗಳಾಗುವುದು ಸಾಮಾನ್ಯ. ಅದೇ ರೀತಿ ಐಬಿಪಿಎಸ್ ನಡೆಸುವ ಬ್ಯಾಂಕಿಂಗ್ ಪರೀಕ್ಷೆಯಲ್ಲೂ ಇಂಥ ಬದಲಾವಣೆಗಳಾಗಿವೆ. ಏನೇನು ಬದಲಾಗಿದೆ ಹಾಗೂ ಹೊಸದಾಗಿ ಬ್ಯಾಂಕಿಂಗ್ ಪರೀಕ್ಷೆ ಬರೆಯುವವರು ಗಮನಿಸಬೇಕಾದ ಅಂಶಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

ಆರ್.ಕೆ. ಬಾಲಚಂದ್ರ

'ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ(ಐಬಿಪಿಎಸ್) ನಡೆಸುವ ಬ್ಯಾಂಕಿಂಗ್ ಪರೀಕ್ಷೆ ಪ್ರಕ್ರಿಯೆಯಲ್ಲಿ ಈ ಬಾರಿ ಸಣ್ಣಪುಟ್ಟ ಬದಲಾವಣೆಗಳಾಗಿವೆ. ಅಭ್ಯರ್ಥಿಗಳು ಇವೆಲ್ಲವನ್ನೂ ಅನುಸರಿಸುವ ಜೊತೆಗೆ, ಅರ್ಜಿ ಭರ್ತಿ ಮಾಡುವಾಗ, ಪ್ರವೇಶ ಪತ್ರ ಸಂಗ್ರಹಿಸುವಾಗ ಒಂದಷ್ಟು ಜಾಗ್ರತೆ ವಹಿಸಬೇಕು. ಈ ಹಂತಗಳಲ್ಲಿ ಸ್ವಲ್ಪ ವ್ಯತ್ಯಾಸವಾದರೂ, ಪರೀಕ್ಷೆ ಪ್ರವೇಶಕ್ಕೆ ತೊಂದರೆಯಾಗುವ ಸಾಧ್ಯತೆ ಇರುತ್ತದೆ.

ಏನೇನು ಬದಲಾವಣೆಗಳು?

ಮೊದಲನೆಯದಾಗಿ ಈ ಬಾರಿ ಅರ್ಜಿ ಸಲ್ಲಿಸುವಾಗ ಪರೀಕ್ಷೆಗೆ ಅಭ್ಯರ್ಥಿಗಳು ತರುವ ಗುರುತಿನ ಚೀಟಿ(ಐಡಿ ಪ್ರೂಫ್) ಸಂಖ್ಯೆ ನೀಡುವುದು ಕಡ್ಡಾಯ. ಅದು ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿಯಲ್ಲಿನ ಹೆಸರಿನೊಂದಿಗೆ ಹೊಂದಾಣಿಕೆಯಾಗಿರಬೇಕು. ಹಾಗೆಯೇ ಪೂರ್ವಭಾವಿ ಪರೀಕ್ಷೆಯ(ಪ್ರಿಲಿಮ್ಸ್) ಪ್ರವೇಶ ಪತ್ರವನ್ನು ಪರೀಕ್ಷಾ ಕೇಂದ್ರದಲ್ಲಿ ಸಂಗ್ರಹಿಸಲಾಗುವುದಿಲ್ಲ. ಬದಲಾಗಿ ಇದನ್ನು ಪರೀಕ್ಷಾ ಕೇಂದ್ರದ ಸಿಬ್ಬಂದಿಯಿಂದ ಧೃಡಪಡಿಸಿಕೊಳ್ಳುವ ಅಗತ್ಯವಿದೆ.

ಮುಖ್ಯ ಪರೀಕ್ಷೆಗೆ (ಮೇನ್ಸ್) ಅರ್ಹತೆ ಪಡೆದ ಅಭ್ಯರ್ಥಿಗಳು ಈ ಪ್ರವೇಶ ಪತ್ರದೊಂದಿಗೆ ಪ್ರಿಲಿಮ್ಸ್ ಪರೀಕ್ಷೆಯಲ್ಲಿ ದೃಢೀಕರಣಗೊಂಡ ಪ್ರವೇಶ ಪತ್ರವನ್ನೂ ಸಲ್ಲಿಸಬೇಕಾಗುತ್ತದೆ. ಕನಿಷ್ಠ 8 ಭಾವಚಿತ್ರಗಳ ಜೊತೆಗೆ (ಅಭ್ಯರ್ಥಿಯು ಕಾಲ್-ಲೆಟರ್‌ನಲ್ಲಿ ಅಂಟಿಸಿದಂತೆಯೇ) ಪ್ರಿಲಿಮ್ಸ್ ಹಾಗೂ ಮೇನ್ಸ್‌ನ ಕರೆ (ಕಾಲ್ ಲೆಟರ್) ಪತ್ರದ ಝೆರಾಕ್ಸ್ ಪ್ರತಿ(ಹೆಚ್ಚುವರಿ ಪ್ರಿಂಟ್ ಇದ್ದರೂ ಆದೀತು) ಯನ್ನು ತೆಗೆದಿಟ್ಟುಕೊಳ್ಳಿ. ಕೊನೆಯಲ್ಲಿ ಬ್ಯಾಂಕ್‌ಗಳಿಗೆ ಸೇರುವಾಗ ಅದರ ಪ್ರತಿಯನ್ನು ನೀಡಬೇಕು. ಇದು ನಂತರದ ದಿನಗಳಲ್ಲಿ ವೆಬ್‌ಸೈಟ್‌ನಲ್ಲಿ ಸಿಗುವುದಿಲ್ಲ.

ಅಭ್ಯರ್ಥಿಗಳು ಒಂದು ಹೆಚ್ಚುವರಿ ಛಾಯಾಚಿತ್ರ (ಅಭ್ಯರ್ಥಿಯು ಕಾಲ್ ಲೆಟರ್‌ನಲ್ಲಿ ಅಂಟಿಸಿದಂತೆಯೇ) ಜೊತೆಗೆ 'ಮಾಹಿತಿ ಕೈಪಿಡಿ' ಮತ್ತು ಕರೆ ಪತ್ರದಲ್ಲಿ ಸೂಚಿಸಿದಂತೆ ಕರೆ ಪತ್ರ ಮತ್ತು ಇತರ ಅಗತ್ಯ ದಾಖಲೆಗಳನ್ನು ತೆಗೆದುಕೊಂಡು ಹೋಗಬೇಕು.

ಪರೀಕ್ಷಾ ಕೇಂದ್ರದಲ್ಲಿ..

ಎ. ಪೋಟೊ ಕ್ಯಾಪ್ಚರ್ ಮೂಲಕ ಅಭ್ಯರ್ಥಿಗಳ ನೋಂದಣಿ ಮಾಡಲಾಗುತ್ತದೆ.
ಬಿ. ಅಭ್ಯರ್ಥಿಗಳಿಗೆ ಸೀಟ್ ನಂಬರ್ ನೀಡಲಾಗುತ್ತದೆ.
ಸಿ. ಪ್ರತಿ ಅಭ್ಯರ್ಥಿ ಕೂರುವ ಸ್ಥಳದಲ್ಲಿ ಹಾಳೆಗಳನ್ನು ಇರಿಸಲಾಗಿರುತ್ತದೆ. ಪರೀಕ್ಷೆಯ ಕೊನೆಯಲ್ಲಿ ಅಭ್ಯರ್ಥಿಗಳಿಗೆ ಸೂಚಿಸಿದಂತೆ ನಿಗದಿತ ಡ್ರಾಪ್ ಬಾಕ್ಸ್‌ನಲ್ಲಿ ಆ ಹಾಳೆಗಳನ್ನು ಹಾಕಬೇಕು.
ಡಿ. ಮುಖ್ಯ ಪರೀಕ್ಷೆಗೆ ಸ್ಟ್ಯಾಂಪ್ ಮಾಡಿದ ಫೋಟೊ ಕಾಪಿ ತರದಿರುವ ಅಭ್ಯರ್ಥಿಗಳನ್ನು ಪರೀಕ್ಷೆಗೆ ಹಾಜರಾಗಲು ಅನುಮತಿಸಲಾಗುವುದಿಲ್ಲ.

ಪೂರ್ವಭಾವಿ ಪರೀಕ್ಷೆ ಹೇಗೆ ?

ಮೊದಲ ಹಂತದಲ್ಲಿ ಪೂರ್ವ ಭಾವಿ ಪರೀಕ್ಷೆ (ಪ್ರಿಲಿಮ್ಸ್) ನಡೆಯಲಿದೆ. ಬೆಳಗಾವಿ, ಬೆಂಗಳೂರು, ಬೀದರ್,ದಾವಣಗೆರೆ, ಧಾರವಾಡ ಕಲಬುರಗಿ, ಹಾಸನ, ಹುಬ್ಬಳ್ಳಿ, ಮಂಡ್ಯ, ಮಂಗಳೂರು, ಮೈಸೂರು, ಶಿವಮೊಗ್ಗ ಮತ್ತು ಉಡುಪಿಯಲ್ಲಿ ಪೂರ್ವಭಾವಿ ಪರೀಕ್ಷೆ ಪರೀಕ್ಷಾ ಕೇಂದ್ರಗಳಿರುತ್ತವೆ.

ಪೂರ್ವಭಾವಿ ಪರೀಕ್ಷೆ ಒಂದು ಗಂಟೆ ಅವಧಿಯದ್ದು. 100 ಅಂಕಗಳಿಗೆ ನಡೆಯುತ್ತದೆ. ಪ್ರತಿ ಪತ್ರಿಕೆಗೆ 20 ನಿಮಿಷಗಳಂತೆ ಮೂರು ಪತ್ರಿಕೆಗಳಿಗೆ ಸಮಯ ಹಂಚಿಕೆ ಮಾಡಿರುತ್ತಾರೆ.

ಪೂರ್ವಭಾವಿ ಪರೀಕ್ಷಾ ಪ್ರಕ್ರಿಯೆ ವಿವರಗಳು

ಕ್ರಮ ಸಂಖ್ಯೆ	ವಿಷಯಗಳು	ಪ್ರಶ್ನೆಗಳು	ಅಂಕಗಳು	ಅವಧಿ	ಪ್ರತಿ ಪ್ರಶ್ನೆಗೆ ಸಿಗುವ ಸಮಯ
1	ಇಂಗ್ಲಿಷ್ ಭಾಷೆ	30	30	20 ನಿ.	40 ಸೆ.
2	ನ್ಯೂಮರಿಕಲ್ ಎಬಿಲಿಟಿ	35	35	20 ನಿ.	34.28 ಸೆ.
3	ರೀಸನಿಂಗ್ ಎಬಿಲಿಟಿ	35	35	20 ನಿ.	34.28 ಸೆ.
	ಒಟ್ಟು	100	100	1 ಗಂಟೆ	

ಪ್ರತಿ ಪತ್ರಿಕೆ(ವಿಷಯ)ಯಲ್ಲೂ ಕನಿಷ್ಠ ಅಂಕಗಳಿಸಬೇಕೆಂಬ ನಿಯಮವಿದೆ. ಆದರೆ ಒಟ್ಟಾರೆ ಹೆಚ್ಚು ಅಂಕಗಳಿಸುವುದು ಮುಖ್ಯ.

ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆಯುತ್ತಾರೆ. ಮುಖ್ಯ ಪರೀಕ್ಷೆಯು ಬೆಂಗಳೂರು, ಹುಬ್ಬಳ್ಳಿ ಮತ್ತು ಮಂಗಳೂರಿನಲ್ಲಿ ಮಾತ್ರ ನಡೆಯುತ್ತದೆ. ಈ ಪರೀಕ್ಷೆಗಳು ಎರಡು ಹಂತಗಳಲ್ಲಿ ನಡೆಯಲಿವೆ. ನಿಗದಿತ ದಿನದಂದು ಎರಡೂ ಲಿಖಿತ ಪರೀಕ್ಷೆಗಳು ಆನ್‌ಲೈನ್‌ಲ್ಲಿಯೇ ನಡೆಯಲಿವೆ. ಮುಖ್ಯ ಪರೀಕ್ಷೆಯ ಅವಧಿ 2 ಗಂಟೆ 40 ನಿಮಿಷ (160 ನಿಮಿಷ). 190 ಪ್ರಶ್ನೆಗಳನ್ನು 200 ಅಂಕಗಳಿಗೆ ಕೇಳಲಾಗುತ್ತದೆ.

ಮುಖ್ಯಪರೀಕ್ಷೆಯ ವಿವರಗಳು ಹೀಗಿವೆ

ಕ್ರಮ ಸಂಖ್ಯೆ	ಪರೀಕ್ಷೆಗಳ ಹೆಸರು	ಪ್ರಶ್ನೆಗಳ ಸಂಖ್ಯೆ	ಗರಿಷ್ಠ ಅಂಕ	ಅವಧಿ
1	ರೀಸನಿಂಗ್ ಮತ್ತು ಕಂಪ್ಯೂಟರ್ ಆಪ್ಟಿಟ್ಯೂಡ್	50	60	45 ನಿ.
2	ಜನರಲ್ / ಫೈನಾನ್ಷಿಯಲ್ ಅವೇರ್‌ನೆಸ್	50	50	35 ನಿ.
3	ಇಂಗ್ಲಿಷ್ ಭಾಷೆ	40	40	35 ನಿ.
4	ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್	50	50	45 ನಿ.
	ಒಟ್ಟು	190	200	160 ನಿ.

ಇಂಗ್ಲಿಷ್ ಭಾಷೆ ಒಂದನ್ನು ಹೊರತುಪಡಿಸಿ ಮತ್ತೆ ಎಲ್ಲ ಪ್ರಶ್ನೆಗಳು ಇಂಗ್ಲಿಷ್, ಹಿಂದಿ ಮತ್ತು ಪ್ರಾದೇಶಿಕ ಭಾಷೆಯಲ್ಲಿ ಇರುತ್ತದೆ(ಅಭ್ಯರ್ಥಿಗಳು ಯಾವ ಭಾಷೆ ಆಯ್ಕೆ ಮಾಡಿಕೊಂಡಿರುತ್ತಾರೋ ಆ ಭಾಷೆಯಲ್ಲಿ). ತಪ್ಪು ಉತ್ತರ ಗುರುತಿಸಿದಲ್ಲಿ, ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳಲ್ಲಿ ಆಯಾ ವಿಷಯದ ಪ್ರತಿ ಪ್ರಶ್ನೆಗೆ ನಿಗದಿ ಪಡಿಸಿದ ಅಂಕದ 0.25 ಅಂಕವನ್ನು ಋಣಾತ್ಮಕ ಮೌಲ್ಯಮಾಪನದ(ನೆಗೆಟಿವ್ ಕರೆಕ್ಷನ್) ನಿಯಮದಂತೆ ಗಳಿಸಿದ ಅಂಕದಿಂದ ಕಳೆಯಲಾಗುತ್ತದೆ.

ನೇಮಕಾತಿ ಪ್ರಕ್ರಿಯೆ

ಮುಖ್ಯ ಪರೀಕ್ಷೆಯ ಪ್ರತಿ ಪತ್ರಿಕೆಯಲ್ಲಿ ಪಡೆದ ಕನಿಷ್ಠ ಅಂಕಗಳನ್ನು ಪಡೆದ ಅಭ್ಯರ್ಥಿಯನ್ನು ನೌಕರಿಗೆ ಆಯ್ಕೆ ಮಾಡಲಾಗುತ್ತದೆ. ನೆನಪಿರಲಿ, ಅರ್ಹತಾ ಪರೀಕ್ಷೆಯ ಅಂಕ ಪರಿಗಣಿಸಲಾಗುವುದಿಲ್ಲ.

ಪೂರ್ವಭಾವಿ ಪರೀಕ್ಷೆಯಲ್ಲಿ ಪಡೆದ ಅಂಕಗಳು ಅರ್ಹತಾ ಪಟ್ಟಿಗೆ ಮಾತ್ರ ಮೀಸಲಾಗಿದ್ದು ಅದರಲ್ಲಿ ಪಡೆದ ಅಂಕಗಳನ್ನು ಮುಂದೆ ಪರಿಗಣಿಸಲಾಗುವುದಿಲ್ಲ. ಆದರೆ, ಎರಡೂ ಪರೀಕ್ಷೆಗಳಿಗೂ ಅಷ್ಟೇ ಮಹತ್ವ ನೀಡಬೇಕು ಎಂಬುದನ್ನು ಖಂಡಿತಾ ಮರೆಯದಿರಿ.

ಆಯ್ಕೆಯಾದ ಸಂದರ್ಭದಲ್ಲಿ 'ಒಬಿಸಿ' ವರ್ಗದ ಅಡಿಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು ಒಬಿಸಿ ಪ್ರಮಾಣಪತ್ರವನ್ನು 'ಕೆನೆ ಪದರ ಹೊರತಾದ'('Non-Creamy layer') ಷರತ್ತು ಒಳಗೊಂಡಿರುವುದನ್ನು ಸಲ್ಲಿಸಬೇಕಾಗುತ್ತದೆ. ಆರ್ಥಿಕ ದುರ್ಬಲ ವರ್ಗದ(EWS) ಅಡಿಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು ಆಯಾ ಆರ್ಥಿಕ ವರ್ಷದ ಒಟ್ಟು ವಾರ್ಷಿಕ ಆದಾಯದ ಆಧಾರದ ಮೇಲೆ EWS ಪ್ರಮಾಣಪತ್ರವನ್ನು ಸಲ್ಲಿಸಬೇಕಾಗುತ್ತದೆ.

(ಮುಂದಿನವಾರ : ಹೊಸದಾಗಿ ಬ್ಯಾಂಕ್ ಪರೀಕ್ಷೆ ಬರೆಯುವವರಿಗಾಗಿ ಅರ್ಜಿ ಸಲ್ಲಿಕೆಯಿಂದ ಪರೀಕ್ಷೆಗೆ ತಯಾರಿಯಾಗುವವರೆಗೆ ಅಗತ್ಯವಿರುವ ವಿವರಣಾತ್ಮಕ ಮಾಹಿತಿ)

ಲೇಖಕರು: ಬ್ಯಾಂಕಿಂಗ್ ಪರೀಕ್ಷೆ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು. ಮಡಿಕೇರಿ

ಗಮನಿಸಬೇಕಾದ ಅಂಶಗಳು

ಪೂರ್ವಭಾವಿ ಪರೀಕ್ಷೆಯ ನ್ಯೂಮರಿಕಲ್ ಎಬಿಲಿಟಿ(ಸಂಖ್ಯಾತ್ಮಕ ಸಾಮರ್ಥ್ಯವು) ಹಾಗೂ ಮುಖ್ಯ ಪರೀಕ್ಷೆಯ ಕ್ವಾಂಟಿಟೇಟಿವ್ ಅಪ್ಟಿಟ್ಯೂಡ್ (ಪರಿಮಾಣಾತ್ಮಕ ಯೋಗ್ಯತೆಯು) ಎರಡೂ ಗಣಿತದ ವಿಷಯವೇ ಆಗಿದ್ದರೂ ನ್ಯೂಮರಿಕಲ್ ಎಬಿಲಿಟಿಯಲ್ಲಿ ಅಭ್ಯರ್ಥಿಗೆ ಸಂಖ್ಯೆಗಳೊಂದಿಗೆ ವ್ಯವಹರಿಸುವ ಸಾಮರ್ಥ್ಯ ಪರೀಕ್ಷಿಸಲಾಗುತ್ತದೆ. ಕ್ವಾಂಟಿಟೇಟಿವ್ ಅಪ್ಟಿಟ್ಯೂಡ್‌ನಲ್ಲಿ, ತಾರ್ಕಿಕವಾಗಿ ಆಲೋಚಿಸುವ ಶಕ್ತಿ ಮತ್ತು ಸಂಖ್ಯೆಗಳೊಂದಿಗೆ ವ್ಯವಹರಿಸುವ ಸಾಮರ್ಥ್ಯವನ್ನು ಪರೀಕ್ಷಿಸಲಾಗುತ್ತದೆ.

ಹಾಗೆಯೇ ಈ ಎರಡೂ ವಿಷಯಗಳಲ್ಲಿರುವ ಪ್ರಶ್ನೆಗಳ ಮಾದರಿಯಲ್ಲೂ ವ್ಯತ್ಯಾಸವಿರುತ್ತದೆ. 'ನ್ಯೂಮರಿಕಲ್ ಎಬಿಲಿಟಿ'ಯಲ್ಲಿ, ಸರಳೀಕರಣ(Simplification), ಸಂಖ್ಯಾ ಸರಣಿ,(Series) ಅಂಕಗಣಿತ, ಬೀಜಗಣಿತದಿಂದ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಆದರೆ ಕ್ವಾಂಟಿಟೇಟಿವ್ ಅಪ್ಟಿಟ್ಯೂಡ್‌ಲ್ಲಿ, ಸಂಭವನೀಯತೆ, ಕ್ರಮಪಲ್ಲಟನೆ ಮತ್ತು ಸಂಯೋಜನೆ, ಡೇಟಾ ಸಮರ್ಪಕತೆ(Data Interpretation) ಇತ್ಯಾದಿಗಳ ಬಗ್ಗೆ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತದೆ. ನಿಮ್ಮ ಸುತ್ತಲಿನ ವಿಷಯಗಳಿಗೆ ನಿಮ್ಮ ಜ್ಞಾನವನ್ನು ಅನ್ವಯಿಸುವ ಸಾಮರ್ಥ್ಯವನ್ನು ಇಲ್ಲಿ ಪರೀಕ್ಷಿಸುತ್ತಾರೆ.

'ಪರಿಶ್ರಮ, ಬದ್ಧತೆಯೇ ಮುಖ್ಯ'

ಅಪೂರ್ವಾ ಬಾಸೂರ

ಯುಪಿಎಸ್‌ಸಿ ಟಾಪರ್ಸ್ ಟಿಪ್ಸ್

ಕೊಪ್ಪಳ ಜಿಲ್ಲೆ ಗಂಗಾವತಿಯ ಅಪೂರ್ವಾ ಬಾಸೂರ, ದಂತವೈದ್ಯಕೀಯ ಪದವೀಧರೆ. ಈ ಬಾರಿ ಯುಪಿಎಸ್ಸಿ ಪರೀಕ್ಷೆಯಲ್ಲಿ 191ನೇ ರ‍್ಯಾಂಕ್ ಗಳಿಸಿದ್ದಾರೆ. ಸಾರ್ವಜನಿಕ ಆಡಳಿತವನ್ನು ಐಚ್ಛಿಕ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡಿದ್ದ ಅವರು ಎರಡನೇ ಪ್ರಯತ್ನದಲ್ಲೇ ಯುಪಿಎಸ್ಸಿ ಪರೀಕ್ಷೆ ಪೂರ್ಣಗೊಳಿಸಿದ್ದಾರೆ.

ಪರೀಕ್ಷೆಯ ಯಶಸ್ಸಿನ ಹಿಂದಿನ ಅಧ್ಯಯನದ ಪಯಣದ ಕುರಿತು 'ಸ್ಪರ್ಧಾವಾಣಿ'ಯೊಂದಿಗೆ ಮಾಹಿತಿ ಹಂಚಿಕೊಂಡಿದ್ದಾರೆ.

ಪ್ರಮೋದ

● ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದ್ದೀರಿ, ಅಭಿನಂದನೆಗಳು. ನಿಮ್ಮ ಮುಂದಿನ ಹೆಜ್ಜೆ?

ಹಲವು ವರ್ಷಗಳ ಕಾಲ ದಂತ ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇನೆ. ಈಗ ಸಿಕ್ಕಿರುವ ಅವಕಾಶ ಬಹಳ ದೊಡ್ಡದು. ಸಾಧ್ಯವಾದಷ್ಟು ಮಹಿಳೆಯರ ಏಳ್ಗೆಗಾಗಿ ಕೆಲಸ ಮಾಡುವ ಆಸೆ ಇದೆ.

● ಯುಪಿಎಸ್‌ಸಿ ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳನ್ನು ಎಷ್ಟನೇ ಪ್ರಯತ್ನದಲ್ಲಿ ಪೂರ್ಣಗೊಳಿಸಿದಿರಿ?

ಎರಡನೇ ಪ್ರಯತ್ನದಲ್ಲೇ ಪೂರ್ಣಗೊಳಿಸಿದೆ. ಮೊದಲ ಪ್ರಯತ್ನದಲ್ಲಿ ಪ್ರಿಲಿಮ್ಸ್‌ನಲ್ಲಿ ಉತ್ತೀರ್ಣವಾಗಲು ಸಾಧ್ಯವಾಗಿರಲಿಲ್ಲ.

● ಮೊದಲ ಪ್ರಯತ್ನ ಫಲಿಸದಿರಲು ಕಾರಣವೇನು? ಆ ನ್ಯೂನತೆಗಳನ್ನು ಹೇಗೆ ಸರಿಪಡಿಸಿಕೊಂಡಿರಿ?

ಮೊದಲ ಪ್ರಯತ್ನದಲ್ಲಿ ಎರಡನೇ ಪತ್ರಿಕೆಯಲ್ಲಿ ಅರ್ಹತೆ ಪಡೆಯಲಾಗಲಿಲ್ಲ. ಎರಡನೇ ಬಾರಿ ಪರೀಕ್ಷೆ ಬರೆದಾಗ ಮೊದಲ ಸಲ ಮಾಡಿದ ತಪ್ಪುಗಳ ಅವಲೋಕನ ಮಾಡಿಕೊಂಡೆ. ಎರಡನೇ ಪತ್ರಿಕೆಗೆ ನಿತ್ಯ ಎರಡು ಗಂಟೆ ಹೆಚ್ಚು ಸಮಯ ಕೊಟ್ಟು ಓದಿದೆ. ಇದರಿಂದ ಎರಡನೇ ಅವಕಾಶದಲ್ಲಿ ಪ್ರಿಲಿಮ್ಸ್ ಮತ್ತು ಮುಖ್ಯಪರೀಕ್ಷೆಯಲ್ಲಿ ಯಶಸ್ಸು ಸಾಧಿಸಿದೆ.

● ನೀವು ಬಳಸುತ್ತಿದ್ದ ಅಧ್ಯಯನ ಪರಿಕರಗಳ ಬಗ್ಗೆ ತಿಳಿಸಿ

ನಾನು ಓದಿದ ವಿಧಾನ, ಮಾಡಿಕೊಂಡ ಸಿದ್ಧತೆ, ಅಧ್ಯಯನ ಪರಿಕರಗಳು ಬಹುಶಃ ಎಲ್ಲರಿಗೂ ಅನ್ವಯ ವಾಗಲಿಕ್ಕಿಲ್ಲ. ದಿನಪೂರ್ತಿ ಓದುವುದಷ್ಟೇ ನನ್ನ ಕೆಲಸವಾಗಿತ್ತು. ಓದಿದ ವಿಷಯವನ್ನು ಹಲವು ಬಾರಿ ಪುನರಾವರ್ತನೆ ಮಾಡುತ್ತಿದೆ. ಇಂಗ್ಲಿಷ್ ಹಾಗೂ ಕನ್ನಡ ಪತ್ರಿಕೆಗಳನ್ನು ಓದುತ್ತಿದೆ. ಅದು ಸಂದರ್ಶನ ಸಮಯದಲ್ಲಿ ನೆರವಾಯಿತು. ಏನೇ ಓದಿದರೂ ಅದನ್ನು ಟಿಪ್ಪಣಿ ಮಾಡಿಟ್ಟುಕೊಳ್ಳುತ್ತಿದ್ದೆ.

● ಈ ಸ್ಪರ್ಧಾತ್ಮಕ ಪರೀಕ್ಷೆಗೆ ಹೆಚ್ಚುವರಿ ಕೋಚಿಂಗ್ ಅಗತ್ಯವಿದೆಯೇ ? ನೀವು ಕೋಚಿಂಗ್‌ಗೆ ಹೋಗಿದ್ದಿರಾ? ಯಾವ ರೀತಿ ಕೋಚಿಂಗ್ ನೆರವಾಗುತ್ತದೆ?

ನವದೆಹಲಿಯಲ್ಲಿ ಎರಡು ವರ್ಷ ತರಬೇತಿ ಪಡೆದಿದ್ದೇನೆ. ತರಬೇತಿ ಬೇಕು, ಬೇಡ ಎನ್ನುವುದು ಅವರವರ ಓದಿನ ಸಾಮರ್ಥ್ಯದ ಮೇಲೆ ನಿರ್ಧಾರವಾಗುತ್ತದೆ. ಹೇಗೆ ಓದಬೇಕು, ಏನು ಓದಬೇಕು ಮತ್ತು ಯಾವುದನ್ನು ಓದಬಾರದು ಎನ್ನುವುದನ್ನು ಕೋಚಿಂಗ್ ಕೇಂದ್ರಗಳು ಸ್ಪಷ್ಟವಾಗಿ ತಿಳಿಸಿ ಕೊಡುತ್ತವೆ. ಇದರಿಂದ ನಮ್ಮ ಸಮಯವೂ ಉಳಿತಾಯವಾಗುತ್ತದೆ.

● ಎಷ್ಟು ಸಮಯದಿಂದ ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದೀರಿ?

ಒಂಬತ್ತನೇ ತರಗತಿಯಲ್ಲೇ ಯುಪಿಎಸ್‌ಸಿ ಪರೀಕ್ಷೆ ಪಾಸ್ ಮಾಡಬೇಕೆಂದು ನಿರ್ಧಾರ ಮಾಡಿದ್ದೆ. ಈ ಪರೀಕ್ಷೆಗಾಗಿ 2019ರಿಂದಲೇ ತಯಾರಿ ಆರಂಭಿಸಿದ್ದೆ. ನನ್ನ ಅನುಭವದ ಪ್ರಕಾರ, ಪ್ರೌಢಶಾಲೆ ಹಂತದಲ್ಲಿದ್ದಾಗ ತಯಾರಿ ಆರಂಭಿಸುವುದು ಉತ್ತಮ.

● ನಿತ್ಯ ಎಷ್ಟು ಗಂಟೆ ಓದು ಅಗತ್ಯ?

ಕೆಲವರು ನಿತ್ಯ 16 ರಿಂದ 18 ತಾಸು ಓದಬೇಕು ಎಂದು ಸಲಹೆ ನೀಡುತ್ತಾರೆ. ಇಷ್ಟೊಂದು ದೀರ್ಘ ಅವಧಿಯ ಓದು ವರ್ಷಾನುಗಟ್ಟಲೆ ಸಾಧ್ಯ ಆಗುವುದಿಲ್ಲ. ಆರೋಗ್ಯ ಕೆಡುತ್ತದೆ. ಆದ್ದರಿಂದ ಸರಿಯಾಗಿ ಊಟ, ನಿದ್ದೆ, ವಿಶ್ರಾಂತಿಗೆ ಆದ್ಯತೆ ಕೊಟ್ಟು ಓದಬೇಕು. ಆಗ ಓದಿದ ವಿಷಯ ಹೆಚ್ಚು ಮನದಟ್ಟಾಗುತ್ತದೆ.

● ಮುಂದೆ ಯುಪಿಎಸ್‌ಸಿ ಪರೀಕ್ಷೆ ಬರೆಯುವವರಿಗೆ ನಿಮ್ಮ ಸಲಹೆ?

ಕೆಲಸ ಅಥವಾ ಸಾಧನೆಯಾಗಲಿ ಅದನ್ನು ಪೂರ್ಣಗೊಳಿಸಲು ಕಠಿಣ ಪರಿಶ್ರಮ ಮತ್ತು ಬದ್ಧತೆ ತುಂಬಾ ಮುಖ್ಯ. ಮುಖ್ಯವಾಗಿ ಸವಾಲುಗಳನ್ನು ಎದುರಿಸುವ ಗುಣ ಬೆಳೆಸಿಕೊಳ್ಳಬೇಕು. ಯುಪಿಎಸ್‌ಸಿ ಸವಾಲು ಕೂಡ ಇದರಿಂದ ಹೊರತಲ್ಲ. ❖

ಪ್ರಜಾವಾಣಿ ಉದ್ಯೋಗ ವಾರ್ತೆ

ಉತ್ತರ ಕೇಂದ್ರ ರೈಲ್ವೆ: 1659 ಅಪ್ರೆಂಟಿಸ್ ಹುದ್ದೆಗಳು

ರೈಲ್ವೆ ಇಲಾಖೆಯ ಉತ್ತರ ಕೇಂದ್ರ ರೈಲ್ವೆ ವಿಭಾಗದಲ್ಲಿ ಖಾಲಿ ಇರುವ 1659 ಅಪ್ರೆಂಟಿಸ್ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಹುದ್ದೆಗಳ ವಿವರ: ಫಿಟ್ಟರ್, ಟರ್ನರ್, ಎಲೆಕ್ಟ್ರಿಷಿಯನ್, ಮೆಕಾನಿಸ್ಟ್, ಪ್ಲಂಬರ್, ಪೇಂಟರ್ ಹುದ್ದೆಗಳ ನೇಮಕಾತಿ ನಡೆಯಲಿದೆ

ಒಟ್ಟು ಹುದ್ದೆಗಳ ಸಂಖ್ಯೆ: 1659

ವಿದ್ಯಾರ್ಹತೆ: ಹುದ್ದೆಗಳಿಗೆ ಸಂಬಂಧಿಸಿದಂತೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಐಟಿಐ ವಿದ್ಯಾರ್ಹತೆಯನ್ನು ಪೂರ್ಣಗೊಳಿಸಿರಬೇಕು.

ತರಬೇತಿ ಭತ್ಯೆ: ಭಾರತ ಸರ್ಕಾರದ ನಿಯಮಗಳ ಅನ್ವಯ ತರಬೇತಿ ಭತ್ಯೆ ನೀಡಲಾಗುವುದು.

ವಯೋಮಿತಿ ಸಡಿಲಿಕೆ: ಕನಿಷ್ಠ 15, ಗರಿಷ್ಠ 24 ವರ್ಷದರಾಗಿರಬೇಕು. ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷಗಳ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

ಅರ್ಜಿ ಶುಲ್ಕ: ಸಾಮಾನ್ಯ ಮತ್ತು ಒಬಿಸಿ ಅಭ್ಯರ್ಥಿಗಳಿಗೆ ₹100. ಎಸ್‌ಸಿ / ಎಸ್‌ಟಿ / ಅಂಗವಿಕಲ/ ಮಹಿಳಾ ಅಭ್ಯರ್ಥಿಗಳಿಗೆ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ.

ನೇಮಕಾತಿ ವಿಧಾನ: ಎಸ್‌ಎಸ್‌ಎಲ್‌ಸಿ ಹಾಗೂ ಐಟಿಐನಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಲಿಸ್ಟ್ ತಯಾರಿಸಿ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ.

ಅರ್ಜಿ ಸಲ್ಲಿಸುವ ವಿಧಾನ: ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಅಧಿಕೃತ ವೆಬ್‌ಸೈಟ್ www.rrcpryj.org ಗೆ ಲಾಗಿನ್ ಆಗಿ ಅರ್ಜಿ ಸಲ್ಲಿಸಬಹುದು. ಇತರೆ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನ: 01-08-2022

ಅಧಿಸೂಚನೆಗಾಗಿ ಲಿಂಕ್ ನೋಡಿ: https://www.rrcpryj.org/Downloads/Notification-Act-Apprentices-01-2022.pdf

ವೆಬ್‌ಸೈಟ್: www.rrcpryj.org

ಜಾಗತಿಕ ಆರೋಗ್ಯಕ್ಕೆ ಭಾರತದ 'ಯೋಗ'

ಯುಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3, ಕೆಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3 ಸೇರಿದಂತೆ ಎಲ್ಲಾ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ವಿದ್ಯಮಾನವೊಂದರ ಮಾಹಿತಿ ಇಲ್ಲಿದೆ.

ಯು.ಟಿ.ಆಯಿಶ ಫರ್ಝಾನ

ಪ್ರಚಲಿತ

ಯೋಗ ಎಂಬುದು 'ಯುಜ್' ಎಂಬ ಪದದಿಂದ ವ್ಯುತ್ಪತ್ತಿಯಾಗಿದ್ದು ಇದರರ್ಥ 'ಒಗ್ಗೂಡಿಸಲು' ಎಂದಾಗಿದೆ. ಆಕ್ಸ್‌ಫರ್ಡ್ ನಿಘಂಟಿನ ಪ್ರಕಾರ ಯೋಗ ಎಂಬ ಪದದ ಅರ್ಥ 'ಯೂನಿಯನ್' (ಒಗ್ಗೂಡಿಸುವುದು) ಎಂದಾಗಿದೆ. ಆದ್ದರಿಂದ ಇದನ್ನು ಜೀವಾತ್ಮದ ಜತೆಗೆ ಪರಮಾತ್ಮನ ಬೆಸುಗೆ ಎನ್ನಬಹುದು. ಯೋಗವು ಹಲವು ರೀತಿಯ ಅಭ್ಯಾಸಗಳ ಸಂಯೋಜನೆಯಾಗಿದೆ.

ಯೋಗ ಭಾರತದ ಸನಾತನ ಪರಂಪರೆಯಿಂದ ಹರಿದು ಬಂದ ಒಂದು ಶಿಸ್ತು. ಮನುಷ್ಯ ತನ್ನನ್ನು ತಾನು ತೊಡಗಿಸಿಕೊಳ್ಳಲು, ಭಾಗವಹಿಸಲು, ಸ್ವಯಂ ಒಳಗೊಳ್ಳಲು ಮತ್ತು ಸಹಜನರ ಜತೆ ಸಂಪರ್ಕಿಸಲು ಇರುವ ಒಂದು ಶಿಸ್ತಾಗಿದೆ. ಈ ಶಿಸ್ತನ್ನು ಸಂತರು ಮತ್ತು ಋಷಿಗಳು ಸ್ಥಾಪಿಸಿದ್ದು ಇವುಗಳ ಮಹತ್ವದ ಬಗ್ಗೆ ಅವರು ತಮ್ಮದೇ ತರ್ಕಬದ್ಧ ವ್ಯಾಖ್ಯಾನಗಳನ್ನು ಪ್ರಸ್ತುತಪಡಿಸಿದ್ದಾರೆ.

- ಯೋಗವು ಕಾಲದ ಹಾದಿಯಲ್ಲಿ ನಡೆದುಬಂದ ಒಂದು ಜೀವನಕ್ರಮವಾಗಿದ್ದು, ಸಾವಿರಾರು ವರ್ಷಗಳ ಹಿಂದೆಯೇ ಆತ್ಮವನ್ನು ಶಾಂತಗೊಳಿಸಲು ತಿಳಿದಿರುವ ಅತ್ಯುತ್ತಮ ಅಭ್ಯಾಸಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಈ ಯೋಗಾಭ್ಯಾಸವು ವ್ಯಕ್ತಿಯ ಅಂತರ್ಗತ ಶಕ್ತಿಯನ್ನು ಸಮತೋಲಿತ ರೀತಿಯಲ್ಲಿ ಸುಧಾರಿಸುವ ಮೂಲಕ ಸ್ವಯಂ-ಸಾಕ್ಷಾತ್ಕಾರವನ್ನು ಸಾಧಿಸುವ ಗುರಿಯನ್ನು ಹೊಂದಿದೆ.
- ಯೋಗದ ಮೊದಲ ಉಲ್ಲೇಖವು ಅತ್ಯಂತ ಹಳೆಯ ಪವಿತ್ರ ಗ್ರಂಥಗಳಲ್ಲಿ ಒಂದಾದ ಋಗ್ವೇದದಲ್ಲಿದೆ. ಈ ಆಧ್ಯಾತ್ಮಿಕ ಶಿಸ್ತು ದೇಹ ಮತ್ತು ಮನಸ್ಸಿನ ನಡುವೆ ಸಾಮರಸ್ಯವನ್ನು ತರುವ ಗುರಿಯನ್ನು ಹೊಂದಿರುವ ಸೂಕ್ಷ್ಮ ವಿಜ್ಞಾನವನ್ನು ಆಧರಿಸಿದೆ.

ಯೋಗ ಮತ್ತು ಮಹರ್ಷಿ ಪತಂಜಲಿ

ಯೋಗದ ಪಿತಾಮಹ ಮಹರ್ಷಿ ಪತಂಜಲಿ. ಅವರು ಯೋಗದ ಬಹು ಅಂಶಗಳನ್ನು ಸಂಯೋಜಿಸಿದ್ದು ಅವುಗಳನ್ನು 'ಯೋಗ ಸೂತ್ರಗಳು' ಅಥವಾ ಪೌರುಷಗಳು ಎಂದು ಕರೆದರು. ಯೋಗವು ವ್ಯಕ್ತಿಯ ಮನಸ್ಸು, ಶಕ್ತಿ ಮತ್ತು ಭಾವನಾತ್ಮಕ ಮಟ್ಟಗಳ ಮೇಲೆ ಕೆಲಸ ಮಾಡುತ್ತದೆ, ಹೀಗಾಗಿ ದೈಹಿಕ ಮತ್ತು ಮಾನಸಿಕ ಯೋಗಕ್ಷೇಮವನ್ನು ಉತ್ತೇಜಿಸುತ್ತದೆ.

ಪತಂಜಲಿ ಮುನಿಗಳು 'ಅಷ್ಟಾಂಗ ಯೋಗ'ವನ್ನು ಪ್ರತಿಪಾದಿಸಿದ್ದು ಯೋಗವು ಮಾನವನ ಸರ್ವತೋಮುಖ ಬೆಳವಣಿಗೆಯನ್ನು ಸುಗಮಗೊಳಿಸುತ್ತದೆ.

ಅಷ್ಟಾಂಗ ಯೋಗಗಳು ಹೀಗಿವೆ: ಯಮ, ನಿಯಮ, ಪ್ರತ್ಯಾಹಾರ, ಧಾರಣ, ಆಸನ, ಪ್ರಾಣಾಯಾಮ, ಧ್ಯಾನ ಮತ್ತು ಸಮಾಧಿ. ಈ ಎಂಟು ವಿವಿಧ ಯೋಗಾಭ್ಯಾಸದ ಮೂಲಕ ಮನಸ್ಸಿನಲ್ಲಿರುವ ಸಂವೇದನೆಗಳನ್ನು ಮತ್ತು ಸಂಸ್ಕಾರಗಳನ್ನು ಸಂಸ್ಕರಿಸುವುದೇ ಅಷ್ಟಾಂಗ ಯೋಗದ ಪ್ರಮುಖ ಉದ್ದೇಶವಾಗಿದೆ.

ಅಷ್ಟಾಂಗ ಯೋಗದ ಉದ್ದೇಶ :

1. ಚಿತ್ತ ವೃತ್ತಿಗಳು ನಿರೋಧಿಸಿ ವ್ಯಕ್ತಿಗೆ ಮುಕ್ತಿ ದೊರಕಿಸಿ ಕೊಡುವುದು.
2. ಏಕಾಗ್ರತೆಯಿಂದ ಮನಸ್ಸನ್ನು ಶಾಂತಗೊಳಿಸುವುದು.
3. ಆತ್ಮವನ್ನು ಶುದ್ಧಿಯಾಗಿರಿಸುವುದು
4. ದುಃಖಕ್ಕೆ ಕಾರಣವಾಗುವ ಕ್ಲೇಶಗಳನ್ನು ನಿವಾರಿಸುವುದು.
5. ಆತ್ಮಶೋಧನೆ ಮತ್ತು ಸಾಕ್ಷಾತ್ಕಾರಗಳನ್ನು ಸುಲಭಗೊಳಿಸುವುದು.
6. ಮಾನವ ಪ್ರಜ್ಞೆಯ ಆಳದಲ್ಲಿರುವ ನಿಗೂಢವಾದ ರಹಸ್ಯವನ್ನು ಅರಿಯಲು ಪ್ರಯತ್ನಿಸುವುದು.
7. ಅಪಾರವಾದ ದೈಹಿಕ ಉಲ್ಲಾಸ ಮತ್ತು ಮಾನಸಿಕ ಶಕ್ತಿಯನ್ನು ಗಳಿಸಿಕೊಳ್ಳುವುದು.
8. ಅಷ್ಟಾಂಗ ಯೋಗವನ್ನು ಅದರ ಮಹತ್ವದ ಕಾರಣದಿಂದಾಗಿ 'ರಾಜಯೋಗ' ಎಂದು ಕೂಡ ಕರೆಯಲಾಗಿದೆ.
9. ಈ ಎಲ್ಲವೂ ದೈಹಿಕ ಶಿಸ್ತನ್ನು ತರುತ್ತವೆ. ಉಸಿರಾಟದ ನಿಯಂತ್ರಣದಲ್ಲಿ ಸಹಾಯ ಮಾಡುತ್ತದವೆ. ಇಂದ್ರಿಯಗಳನ್ನು ನಿಗ್ರಹಿಸುತ್ತವೆ ಮತ್ತು ಚಿಂತನೆ ಮತ್ತು ಧ್ಯಾನವನ್ನು ಉತ್ತೇಜಿಸುತ್ತವೆ.

ಯೋಗವನ್ನು ಅತ್ಯಂತ ಸಿಹಿಯಾದ ಫಲವನ್ನು ಬಿಡುವ ಒಂದು ಮರಕ್ಕೆ ಹೋಲಿಸಲಾಗುತ್ತದೆ. ಈ ಯೋಗ ವೃಕ್ಷದ ಬೀಜವು 'ಯಮ' ಮತ್ತು 'ನಿಯಮ'ಗಳಿಂದ ಪೋಷಿಸಲ್ಪಡುತ್ತದೆ ಮತ್ತು ಆ ಬೀಜವು ಮೊಳೆಯುವಾಗ 'ಆಸನ' ಮತ್ತು 'ಪ್ರಾಣಾಯಾಮ'ಗಳು ಅದಕ್ಕೆ ಆಹಾರ ನೀಡುತ್ತವೆ. ವೃಕ್ಷವು ಬೆಳೆದು ದೊಡ್ಡ ಮರವಾಗಿ ಪ್ರತ್ಯಾಹಾರ ರೂಪದ ಹೂವನ್ನು ನೀಡುತ್ತದೆ. ಆನಂತರ ಧಾರಣೆ, 'ಧ್ಯಾನ' ಮತ್ತು 'ಸಮಾಧಿ' ರೂಪದಲ್ಲಿ ಅನೇಕ ಫಲಗಳನ್ನು ನೀಡುತ್ತವೆ. ❖

ಜೂನ್ 21, 2022 ರಂದು 8ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಸಂದರ್ಭದಲ್ಲಿ ಮೈಸೂರಿನ ಅರಮನೆ ಮೈದಾನದಲ್ಲಿ ನಡೆದ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕೇಂದ್ರ ಸಚಿವ ಸರ್ವಾನಂದ ಸೋನೋವಾಲ್ ಉಪಸ್ಥಿತರಿದ್ದರು.



EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

'ಪ್ರಚಲಿತ'- ಮತ್ತಷ್ಟು ಮಾಹಿತಿಗಾಗಿ

ಯೋಗ ಮತ್ತು ಯೋಗ ದಿನ ಕುರಿತ ಸಂಪೂರ್ಣ ಮಾಹಿತಿ, ವಿಡಿಯೊಗಳು ಹಾಗೂ ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಸಫಲರಾಗಲು ಅತ್ಯವಶ್ಯವಿರುವ ಇಂಥ ಹತ್ತು ಹಲವು ಪ್ರಮುಖ ಮಾಹಿತಿಗಾಗಿ ಪ್ರಜಾವಾಣಿ – ಡೆಕ್ಕನ್‌ಹೆರಾಲ್ಡ್ ಪತ್ರಿಕೆಯ 'ಮಾಸ್ಟರ್ ಮೈಂಡ್' ಇ ಪೇಪರ್‌ಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.

www.exammastermind.com

ಕೆ. ಆರ್‌. ಪುರ ವ್ಯಸನಿಗಳನ್ನು ಥಳಿಸಿ ಪೊಲೀಸರಿಗೆ ಒಪ್ಪಿಸಿದ ಸಾರ್ವಜನಿಕರು

ಗಾಂಜಾ ವ್ಯಸನಿಗಳು ಪೊಲೀಸರ ವಶಕ್ಕೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಗಾಂಜಾ ಮತ್ತಿನಲ್ಲಿದ್ದ ಹದಿನೈದು ಮಂದಿಯನ್ನು ಸಾರ್ವಜನಿಕರೇ ಥಳಿಸಿ ಪೊಲೀಸರಿಗೆ ಒಪ್ಪಿಸಿದ ಘಟನೆ ಕೆ.ಆರ್.ಪುರ ಪೊಲೀಸ್ ಠಾಣೆ ವ್ಯಾಪ್ತಿಯ ವಾರಣಾಸಿಯ ಗ್ರೀನ್ ವುಡ್ ಬಡಾವಣೆಯಲ್ಲಿ ನಡೆದಿದೆ.

'ಬಡಾವಣೆ ಸಮೀಪದ ಖಾಲಿ ನಿವೇಶನ ಬಳಿ ದಿನೇ ದಿನೇ ಗಾಂಜಾ ವ್ಯಸನಿಗಳ ಹಾವಳಿ ಮಿತಿ ಮೀರಿತ್ತು. ಬಡಾವಣೆ ನಿವಾಸಿಗಳಿಗೆ ಪ್ರತಿದಿನ ಭಯದ ವಾತಾವರಣ ನಿರ್ಮಾಣವಾಗುತ್ತಿತ್ತು. ಇದರಿಂದ ರೋಸಿಹೋದ ನಿವಾಸಿಗಳು ಮಂಗಳವಾರ ರಾತ್ರಿ 8:30ರ ಸಮಯದಲ್ಲಿ ಗಾಂಜಾ ಸೇವಿಸಿ ಮೋಜು ಮಸ್ತಿ ಮಾಡುತ್ತಿದ್ದ ಹದಿನೈದು ಮಂದಿ ವ್ಯಸನಿಗಳನ್ನು ಹಿಡಿದು ನಂತರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ' ಎಂದು ಸ್ಥಳೀಯರು ತಿಳಿಸಿದ್ದಾರೆ.

ಸ್ಥಳಕ್ಕೆ ತೆರಳಿದ ಪೊಲೀಸರು ವ್ಯಸನಿಗಳನ್ನು ವಶಕ್ಕೆ ಪಡೆದು ಸಾರ್ವಜನಿಕರ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡು ನಂತರ ಬಿಟ್ಟು ಕಳುಹಿಸಿದ್ದಾರೆ. ಗಾಂಜಾ ಪೂರೈಸುತ್ತಿದ್ದ ಪೆಡ್ಲರ್‌ಗಾಗಿ ಶೋಧ ಕಾರ್ಯ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಾಂಜಾ ಪ್ರಕರಣ ಸಂಬಂಧ ಬುಧವಾರ ಕೆ.ಆರ್.ಪುರ ಠಾಣಾಧಿಕಾರಿ ನಂದೀಶ್ ನೇತೃತ್ವದಲ್ಲಿ ಗ್ರೀನ್ ವುಡ್ ಬಡಾವಣೆಗಳ ನಿವಾಸಿಗಳ ಜೊತೆ ಸಭೆ ನಡೆಸಿದರು.

ಕೆ.ಆರ್‌.ಪುರ ಠಾಣಾಧಿಕಾರಿ ನಂದೀಶ್ ಅವರು ಗ್ರೀನ್ ವುಡ್ ಬಡಾವಣೆಗಳ ನಿವಾಸಿಗಳ ಜೊತೆ ಸಭೆ ನಡೆಸಿದರು

ಅಪರಾಧ ಸುದ್ದಿ

ಹ್ಯಾಶಿಶ್ ಆಯಿಲ್ ದಂಧೆ; ಬಂಧನ

ಬೆಂಗಳೂರು: ಅಲೆಮಾರಿಗಳ ಸೋಗಿನಲ್ಲಿ ಹ್ಯಾಶಿಶ್ ಆಯಿಲ್ ಹಾಗೂ ಗಾಂಜಾ ಸಾಗಣೆ ಮಾಡುತ್ತಿದ್ದ ನಾಲ್ವರು ಅಂತರರಾಜ್ಯ ಆರೋಪಿಗಳನ್ನು ನಗರದ ಸಿಸಿಬಿ ಪೊಲೀಸರು ಬಂಧಿಸಿದ್ದು, ₹ 4 ಕೋಟಿ ಮೌಲ್ಯದ ನಿಷೇಧಿತ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಬೆಂಗಳೂರಿನ ಪ್ರತಿಷ್ಠಿತ ಪಬ್‌ಗಳಲ್ಲಿ ಡಿ.ಜೆಯಾಗಿ ಕೆಲಸ ಮಾಡುತ್ತಿದ್ದ ಜೂಡ್ ಹ್ಯಾರೀಸ್, ಶ್ರೀನಿವಾಸ್, ವಂತಲಾ ಪ್ರಹ್ಲಾದ್, ಮಲ್ಲೇಶ್ವರಿ, ಸತ್ಯವತಿ ಬಂಧಿತರು. ಜೂಡ್ ಹ್ಯಾರೀಸ್ ಪ್ರಕರಣದ ಸೂತ್ರಧಾರ.

ಅರಣ್ಯಾಧಿಕಾರಿಗಳ ಕಣ್ತಪ್ಪಿಸಿ ಆರೋಪಿಗಳು, ಆಂಧ್ರಪ್ರದೇಶದ ವಿಶಾಖಪಟ್ಟಣದ ಅರಕು ಹಾಗೂ ಸೆಂಥಿಪಲ್ಲಿ ಅರಣ್ಯಕ್ಕೆ ನುಗ್ಗಿ ಅಲ್ಲಿ ಗಾಂಜಾ ಬೆಳೆದು ಹ್ಯಾಶಿಶ್ ಆಯಿಲ್ ತಯಾರಿಸುತ್ತಿದ್ದರು. ಅದನ್ನು ಕೊಚ್ಚಿ, ಚೆನ್ನೈ, ಹೈದರಾಬಾದ್, ಮುಂಬೈ, ಬೆಂಗಳೂರು ಸೇರಿದಂತೆ ದೇಶದ ಪ್ರಮುಖ ನಗರದ ಗ್ರಾಹಕರಿಗೆ ಪೂರೈಸುತ್ತಿದ್ದರು. ಪ್ರಕರಣದ ಯಾವುದೇ ಕುರುಹು ಸಿಗದಂತೆ ತಂತ್ರ ರೂಪಿಸಿದ್ದರು. ಯಾರೂ ಮೊಬೈಲ್ ಹಾಗೂ ಗುರುತಿನ ಚೀಟಿ ಬಳಸುತ್ತಿರಲಿಲ್ಲ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಆರಂಭದಲ್ಲಿ ಡಿ.ಜೆ ಜೂಡ್‌ನನ್ನು ಬಂಧಿಸಲಾಗಿತ್ತು. ಜೂಡ್ ಬಾಯ್ಬಿಟ್ಟ ಮಾಹಿತಿ ಆಧರಿಸಿ ಉಳಿದ ನಾಲ್ವರನ್ನು ಬಂಧಿಸಲಾಯಿತು. ₹ 4 ಕೋಟಿ ಮೌಲ್ಯದ 5 ಕೆ.ಜಿ ಹ್ಯಾಶಿಶ್ ಆಯಿಲ್, 6 ಕೆ.ಜಿ ಗಾಂಜಾ ವಶಕ್ಕೆ ಪಡೆಯಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಅಂಗನವಾಡಿ ಕಾರ್ಯಕರ್ತೆಯ ಕತ್ತು ಸೀಳಿ ಕೊಲೆ

ಚಿಂತಾಮಣಿ: ತಾಲ್ಲೂಕಿನ ನಾಯನಹಳ್ಳಿ ಗ್ರಾಮದಲ್ಲಿ ಮಂಗಳವಾರ ಅಂಗನವಾಡಿ ಕಾರ್ಯಕರ್ತೆಯನ್ನು ಕತ್ತು ಸೀಳಿ ಕೊಲೆ ಮಾಡಿ, ಚಿನ್ನಾಭರಣ ಕಳ್ಳತನ ಮಾಡಲಾಗಿದೆ.

ಚೊಕ್ಕನಹಳ್ಳಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದ ಎಸ್.ವೆಂಕಟಲಕ್ಷ್ಮಮ್ಮ (51) ಕೊಲೆಯಾದವರು. ಅವರು ನಾಯನಹಳ್ಳಿ ಗ್ರಾಮದಲ್ಲಿ ಒಬ್ಬರೇ ಜೀವನ ನಡೆಸುತ್ತಿದ್ದರು. ಅವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ.

ಮಂಗಳವಾರ ಬೆಳಿಗ್ಗೆ 10 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಬಂದು ವಿದ್ಯುತ್ ಬಿಲ್ ಸ್ವೀಕರಿಸಿದ್ದರು. ಆ ನಂತರ ಅವರು ಮನೆಯಿಂದ ಹೊರಬಂದಿರಲಿಲ್ಲ ಎಂದು ಸುತ್ತಮುತ್ತಲಿನ ಮನೆಯವರು ತಿಳಿಸಿದ್ದಾರೆ. ಹಾಗಾಗಿ ಮಧ್ಯಾಹ್ನ ಈ ಕೊಲೆ ನಡೆದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರು ರವರ ಕಛೇರಿ,
ಕ.ನೀ.ನಿ.ನಿ, ನಂ.5 ಕಾಲುವೆ ವಿಭಾಗ, ಯರಮರಸ್ ಶಿಬಿರ–584135

ಸಂ:ಕನೀನಿನಿ/ಕಾ.ಅ–5/ತಾಶಾ–3/ಮಾ.ಸಂ 22–23/ಟೆಂಡರ್/2022–23/585 ದಿನಾಂಕ:11.07.2022

ಅಲ್ಪಾವಧಿ ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

2020–21ನೇ ಸಾಲಿಗೆ ಟಿ.ಎಲ್.ಬಿ.ಸಿ ಯೋಜನೆಯ ಕಾಲುವೆಗಳ, ಶಿಬಿರಗಳ ನಿರ್ವಹಣೆಗೆ ಮಾನವ ಸಂಪನ್ಮೂಲ ಒದಗಿಸುವ ಕಾಮಗಾರಿಗಳಿಗೆ ಈ ಕಛೇರಿಯಿಂದ ಮೂರು ಕಾಮಗಾರಿಗಳಿಗೆ ರೂ. **111.80** ಲಕ್ಷಗಳು, **ರೂ. 255.32 ಲಕ್ಷಗಳು & ರೂ. 139.36** ಲಕ್ಷಗಳಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಶೇಕಡವಾರು ಟೆಂಡರ್‌ಗಳನ್ನು ಕರೆಯಲಾಗಿರುತ್ತದೆ. ಅರ್ಹ ಗುತ್ತಿಗೆದಾರರು ಭರ್ತಿ ಮಾಡಿದ ಟೆಂಡರ್‌ಗಳನ್ನು ದಿನಾಂಕ:20.07.2022ರ ಸಂಜೆ 4.00 ಗಂಟೆ ವರೆಗೆ ಸಲ್ಲಿಸಬಹುದಾಗಿದೆ. ಕಾಮಗಾರಿಯ ಹೆಸರು, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ ಮೊತ್ತ, ಟೆಂಡರ್ ನಿಬಂಧನೆ ಹಾಗೂ ಇನ್ನಿತರೆ ವಿವರಗಳನ್ನು ಕಛೇರಿ ಸಮಯದಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ ಅಂತರ್ಜಾಲದಲ್ಲಿ www.eproc.Karnataka.gov.in ಪಡೆಯಬಹುದಾಗಿದೆ.

ಮುಂದುವರೆದು ಇನ್ನಿತರೆ ಯಾವುದಾದರೂ ತಿದ್ದುಪಡಿ, ಮಾರ್ಪಾಡು ಅಥವಾ ಇತರೆ ಬದಲಾವಣೆಗಳಿದ್ದಲ್ಲಿ www.eproc.Karnataka.gov.in ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ, ನಂ.5 ಕಾಲುವೆ ವಿಭಾಗ, ಯರಮರಸ್ ಶಿಬಿರ.

ವಾ.ಸಾ.ಸಂ.ಇ/ರಾಯಚೂರು/186/ಎಂ.ಸಿ&ಎ/2022–23

ದುರಾಭ್ಯಾಸದ ಖರ್ಚಿಗೆ ಬೈಕ್ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುರಾಭ್ಯಾಸದ ಖರ್ಚಿಗೆ ಬೈಕ್ ಕಳವು ಮಾಡಿ ಆಂಧ್ರಪ್ರದೇಶದಲ್ಲಿ ಮಾರಾಟ ಮಾಡುತ್ತಿದ್ದ ಆರೋಪಿ ಲಗ್ಗೆರೆಯ ಶ್ರೀನಿವಾಸ್‌ನನ್ನು (39) ಮಹಾಲಕ್ಷ್ಮಿ ಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ₹ 12.5 ಲಕ್ಷ ಮೌಲ್ಯದ 25 ಬೈಕ್ ವಶಕ್ಕೆ ಪಡೆಯಲಾಗಿದೆ.

ಆರೋಪಿಯು ಗಾರ್ಮೆಂಟ್ಸ್‌ನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ. ಗಾರ್ಮೆಂಟ್ಸ್ ಸಂಬಳ ದುರಾಭ್ಯಾಸದ ಖರ್ಚಿಗೆ ಸಾಕಾಗದ ಕಾರಣಕ್ಕೆ ದ್ವಿಚಕ್ರ ವಾಹನ ಕಳವು ಕೃತ್ಯಕ್ಕೆ ಮುಂದಾಗಿದ್ದ ಎಂದು ಮೂಲಗಳು ತಿಳಿಸಿವೆ.

'ರಾಜಾಜಿನಗರ ಮೆಟ್ರೊ ನಿಲ್ದಾಣ ಹಾಗೂ ಅಕ್ಕಮಹಾದೇವಿ ಉದ್ಯಾನದ ಸುತ್ತಮುತ್ತ ಸವಾರರು ನಿಲುಗಡೆ ಮಾಡುತ್ತಿದ್ದ ಬೈಕ್‌ಗಳನ್ನು ನಕಲಿ ಕೀ ಬಳಸಿ ಕಳವು ಮಾಡುತ್ತಿದ್ದ. 2019ರಿಂದ ಇದೇ ಕೃತ್ಯ ಎಸಗಿ ಅದರಿಂದ ಬರುತ್ತಿದ್ದ ಹಣದಿಂದ ದುರಾಭ್ಯಾಸದ ಖರ್ಚುಗಳಿಗೆ ವ್ಯಯಿಸುತ್ತಿದ್ದ. ಬೆಂಗಳೂರಿನಲ್ಲಿ ಕದ್ದ ಬೈಕ್‌ಗಳನ್ನು ಆಂಧ್ರ ಪ್ರದೇಶದಲ್ಲಿ ಸ್ನೇಹಿತರಿಗೆ ಮಾರಾಟ ಮಾಡುತ್ತಿದ್ದ. ಬೈಕ್ ದಾಖಲಾತಿಗಳನ್ನು ನಂತರ ಬಂದು ಕೊಡವುದಾಗಿ ನಂಬಿಸುತ್ತಿದ್ದ' ಎಂದು ಮೂಲಗಳು ತಿಳಿಸಿವೆ.

ಮಹಾಲಕ್ಷ್ಮಿಲೇಔಟ್‌ನಲ್ಲಿ 21 ಬೈಕ್ ಕಳವು ಮಾಡಿದ್ದ. ಉಳಿದ ನಾಲ್ಕು ಬೈಕ್‌ಗಳ ಮಾಲೀಕರು ಪತ್ತೆಯಾಗಿಲ್ಲ.

ಪೊಲೀಸರು ವಶಪಡಿಸಿಕೊಂಡ ಬೈಕ್‌ಗಳು

ನಟ ಶಿವರಂಜನ್ ಮೇಲೆ ಗುಂಡಿನ ದಾಳಿ: ಆರೋಪಿ ವಶ

ಪ್ರಜಾವಾಣಿ ವಾರ್ತೆ

ಬೈಲಹೊಂಗಲ: 'ಆಸ್ತಿ ವಿವಾದದಿಂದ ಉಂಟಾದ ಹಲವು ವರ್ಷಗಳ ಹಿಂದಿನ ದ್ವೇಷವೇ ನನ್ನ ಮೇಲೆ ಗುಂಡಿನ ದಾಳಿ ನಡೆಯಲು ಕಾರಣ. ನನ್ನ ಸಹೋದರ ಹಾಗೂ ದೂರದ ಸಂಬಂಧಿಯೇ ಈ ಕೃತ್ಯ ಎಸಗಿದ್ದಾರೆ' ಎಂದು ಉದ್ಯಮಿ, ಚಲನಚಿತ್ರ ನಟ ಶಿವರಂಜನ್ ಬೋಳನ್ನವರ ತಿಳಿಸಿದರು.

ಮಂಗಳವಾರ ರಾತ್ರಿ ಅವರ ಮೇಲೆ ಗುಂಡಿನ ದಾಳಿ ನಡೆದ ಬಗ್ಗೆ ಬುಧವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, 'ನನ್ನ ಮೇಲೆ ಐದು ಸುತ್ತು ಗುಂಡು ಹಾರಿಸಲಾಯಿತು. ಅತ್ತಿತ್ತ ಓಡಾಡಿ ತಪ್ಪಿಸಿಕೊಂಡೆ. ಹೀಗಾಗಿ ಗುಂಡು ತಗಲಿಲ್ಲ. ಪಟ್ಟಣದ ಇಂಚಲ ರಸ್ತೆಯ ನಮ್ಮ ನಿವಾಸದ ಮುಂದೆ ಬೈಕ್ ಮೇಲೆ ಬಂದ ಆರೋಪಿಗಳು ಗುಂಡು ಹಾರಿಸಿ ಪರಾರಿಯಾದರು' ಎಂದು ಘಟನೆಯನ್ನು ಅವರು ವಿವರಿಸಿದರು.

ಶಿವರಂಜನ್ ಬೋಳನ್ನವರ

'ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಮಹೇಶ ನಾವಲಗಟ್ಟಿ ಎಂಬುವವರನ್ನು ಮಂಗಳವಾರ ತಡರಾತ್ರಿ ವಶಕ್ಕೆ ಪಡೆಯಲಾಗಿದೆ. ಶಿವರಂಜನ್ ಅವರ ಸಹೋದರ ತಲೆಮರೆಸಿಕೊಂಡಿದ್ದಾರೆ. ಕೊಲೆ ಯತ್ನಕ್ಕೆ ನಿಖರ ಕಾರಣ ಪತ್ತೆ ಮಾಡಬೇಕಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ ತಿಳಿಸಿದ್ದಾರೆ. ಶಿವರಂಜನ್ ಅವರ ಮನೆ ಸುತ್ತ ಪೊಲೀಸ್ ಕಾವಲು ಹಾಕಲಾಗಿದೆ.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಸಾಮಿತ್ವದಲ್ಲಿ)
ಕಾರ್ಯನಿರ್ವಾಹಕ ಅಭಿಯಂತರರು ಕೃಭಾಜನಿ(ನಿ),
ಮು.ಏ.ನೀ ವಿಭಾಗ ನಂ–1, ಮಟ್ಟಿಹಾಳ. ತಾ॥ ಕೋಲ್ಹಾರ ಜಿ॥ ವಿಜಯಪುರ.

ಸಂ:ಕೃಭಾಜನಿನಿ/ಮುಏನೀ/ವಿ–1ಮ/ಯೋ.ಶಾ/ಟೆಂಡರ್ ಅ.ವಿ/2022–23/365 ದಿನಾಂಕ:11.07.2022

ಟೆಂಡರ್ ಅವಧಿ ವಿಸ್ತರಣೆ (ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಉಲ್ಲೇಖ: ಕೃಭಾಜನಿ(ನಿ)/ಮುಏನೀ/ವಿ–1ಮ/ಯೋ.ಶಾ/ಟೆಂಡರ್/2022–23/300 ದಿನಾಂಕ:27.06.2022
ಈ ಕಚೇರಿಯಿಂದ ಬೀಳಗಿ ಮತಕ್ಷೇತ್ರಕ್ಕೆ ಸಂಬಂಧಪಟ್ಟ ಎಸ್.ಸಿ.ಪಿ–ಟಿ.ಎಸ್.ಪಿ ಯೋಜನೆಯ ಒಟ್ಟು 09 ಸಂಖ್ಯೆಯ ಕಾಮಗಾರಿಗಳ ಟೆಂಡರಗಳನ್ನು ಮೇಲಿನ ಉಲ್ಲೇಖದನ್ವಯ ಆಹ್ವಾನಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಸದರಿ ಕಾಮಗಾರಿಗಳ ಟೆಂಡರ ವೇಳಾಪಟ್ಟಿಯನ್ನು ಮಾರ್ಪಡಿಸಲಾಗಿರುತ್ತದೆ. ಸದರಿ ಮಾರ್ಪಡಿಸಲಾಗಿರುವ ವೇಳಾಪಟ್ಟಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿರುತ್ತದೆ. ಸದರಿ ಟೆಂಡರ್ ಕುರಿತ ತಿದ್ದುಪಡಿ/ ಪರಿಷ್ಕೃತ ದಿನಾಂಕಗಳನ್ನು ಜಾಲತಾಣ (ವೆಬ್ ಸೈಟ್) https://eproc.karnataka.gov.in/eportal/index.seam ದಲ್ಲಿ ಪ್ರಕಟಿಸಲಾಗುವುದು, ಆಸಕ್ತರು ವೀಕ್ಷಿಸಬಹುದಾಗಿದೆ. **ದಿನಾಂಕವಾರು ಘಟನಾವಳಿಗಳು ಈ ಕೆಳಗಿನಂತಿವೆ.**

Sl.No	Schedule	Date / Time
1	ಇ–ಟೆಂಡರ್ ದಸ್ತಾವೇಜುಗಳ ವಿವರಗಳು ಗುತ್ತಿಗೆದಾರರಿಗೆ ದೊರೆಯುವುದು	11.07.2022 ರಿಂದ 19.07.2022 ಸಾಯಂಕಾಲ 5.00 ಗಂಟೆಯವರೆಗೆ
2	ಪೂರ್ಣಗೊಳಿಸಿದ ಇ–ಟೆಂಡರ್ ದಾಖಲೆಗಳನ್ನು ಸಲ್ಲಿಸುವುದು ದಿನಾಂಕ	11.07.2022 ರಿಂದ 19.07.2022 ಸಾಯಂಕಾಲ 5.00 ಗಂಟೆಯವರೆಗೆ
3	ಲಕೋಟೆ–1 (ತಾಂತ್ರಿಕ ಬಿಡ್) ಅನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ ವಿಭಾಗ ಸಂಖ್ಯೆ–1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ತೆರೆಯುವುದು	21.07.2022 ಬೆಳಿಗ್ಗೆ 11.00 ಗಂಟೆಗೆ
4	ಲಕೋಟೆ–2 (ಆರ್ಥಿಕ ಬಿಡ್) ಅನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ ವಿಭಾಗ ಸಂಖ್ಯೆ–1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ತೆರೆಯುವುದು	25.07.2022 ಬೆಳಿಗ್ಗೆ 11.00 ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆ ನಂತರ ತೆರೆಯುವುದು

ವಿಶೇಷ ಸೂಚನೆ: 1) ಮೀಸಲಾತಿ ಕಾಮಗಾರಿಗಳಿಗೆ ಭಾಗವಹಿಸುವ ಗುತ್ತಿಗೆದಾರರು, ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಅಪ್ಲೋಡ್ ಮಾಡತಕ್ಕದ್ದು. 2) ಮೀಸಲಾತಿ ಕಾಮಗಾರಿಗಳಿಗೆ ಗುತ್ತಿಗೆ ಸಲ್ಲಿಸುವ ಪರಿಶಿಷ್ಟ ಜಾತಿ/ಪಂಗಡ ಗುತ್ತಿಗೆದಾರರು ಕನಿಷ್ಠ 10 ವರ್ಷ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು ಹಾಗೂ ಸಕ್ಷಮ ಪ್ರಾಧಿಕಾರದಿಂದ ಪಡೆದ ನಿವಾಸಿ ಪ್ರಮಾಣ ಪತ್ರ ಲಗತ್ತಿಸತಕ್ಕದ್ದು. 3) ಗುತ್ತಿಗೆದಾರರು ಫರ್ಮ ಗುತ್ತಿಗೆದಾರರಾಗಿದ್ದರೆ ಎಲ್ಲಾ ಪಾರ್ಟನರ್ ಸದಸ್ಯರು ಪರಿಶಿಷ್ಠ ಜಾತಿ/ ಪಂಗಡದವರಾಗಿರಬೇಕು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಮುಏನೀ ವಿಭಾಗ–1, ಮಟ್ಟಿಹಾಳ

ವಾಸಾಸಂಇ/ವಿಜಯಪುರ/259/ಎಂಸಿಎ/2022–23

ಜ್ಯೋತಿಷಿ ಸುಲಿಗೆ: ಪಿ.ಎ ಸೂತ್ರಧಾರಿ

ಬೆಂಗಳೂರು: ಕೆಂಗೇರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜ್ಯೋತಿಷಿಯ ಕೈಕಾಲು ಕಟ್ಟಿಹಾಕಿ ಚಿನ್ನಾಭರಣ ದೋಚಿದ್ದ ಪ್ರಕರಣ ಭೇದಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಜ್ಯೋತಿಷಿಯ ಸಹಾಯಕಿಯಾಗಿದ್ದ ಮೇಘನಾ ಪ್ರಕರಣದ ಸೂತ್ರಧಾರಿಯಾಗಿದ್ದು, ಆಕೆಯನ್ನು ತಮಿಳುನಾಡಿನಲ್ಲಿ ಬಂಧಿಸಲಾಗಿದೆ. ಉಳಿದ ಮೂವರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಸಾಲ ನೀಡದಿರುವ ವಿಚಾರಕ್ಕೆ ಜ್ಯೋತಿಷಿ ಹಾಗೂ ಅವರ ಪಿಎ ನಡುವೆ ಗಲಾಟೆ ನಡೆದಿತ್ತು. ಮೇಘನಾ ಸುಲಿಗೆಗೆ ತಂತ್ರ ರೂಪಿಸಿ ಮೂವರಿಗೆ ಸುಪಾರಿ ನೀಡಿದ್ದಳು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜುಲೈ 10ರಂದು ಮೇಘನಾ ಕಚೇರಿಯಲ್ಲಿದ್ದಾಗ ಅಲ್ಲಿಗೆ ಬಂದ ತಂಡವು ಪಿ.ಎ ಕೈಕಾಲು ಕಟ್ಟಿಹಾಕಿ, ಜ್ಯೋತಿಷಿಗೆ ಥಳಿಸಿ ದರೋಡೆ ನಡೆಸಿತ್ತು. 250 ಗ್ರಾಂ ಚಿನ್ನಾಭರಣ, ₹ 5 ಲಕ್ಷ ನಗದು ದೋಚಿ ನಗರದ ಮನೆಯೊಂದರಲ್ಲಿ ಬಚ್ಚಿಟ್ಟು ತಮಿಳುನಾಡಿಗೆ ಪರಾರಿಯಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಮಳೆಯಿಂದ ಕಾಂಪೌಂಡ್ ಕುಸಿದು ಇಬ್ಬರ ಸಾವು

ಬೆಂಗಳೂರು: ಇಲ್ಲಿನ ದೀಪಾಂಜಲಿ ನಗರದ ಬಳಿ ಮಳೆಯಿಂದ ಶಿಥಿಲಗೊಂಡಿದ್ದ ಕಾಂಪೌಂಡ್ ಕುಸಿದು ವಾಲ್ಮೀಕಿ ನಗರದ 10ನೇ ಕ್ರಾಸ್‌ನ ನಿವಾಸಿಗಳಾದ ರಾಜಮಣಿ (35) ಹಾಗೂ ಬಾಲು (30) ಬುಧವಾರ ಮೃತಪಟ್ಟಿದ್ದಾರೆ.

ಕಳೆದ ನಾಲ್ಕು ದಿನಗಳಿಂದ ನಗರದಲ್ಲಿ ಬೀಳುತ್ತಿದ್ದ ಮಳೆಯಿಂದ ಕಾಂಪೌಂಡ್ ಶಿಥಿಲಗೊಂಡಿತ್ತು. ಅದೇ ಮಾರ್ಗದಲ್ಲಿ ತೆರಳುತ್ತಿದ್ದ ಇಬ್ಬರ ಮೇಲೆ ಶಿಥಿಲವಾಗಿದ್ದ ಗೋಡೆ ಕುಸಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾಂಪೌಂಡ್ ಶಿಥಿಲವಾಗಿದ್ದರೂ ಮಾಲೀಕರು ತೆರವು ಮಾಡಿರಲಿಲ್ಲ. ಇದರಿಂದ ಅವಘಡ ಸಂಭವಿಸಿದೆ.

ಕುಸಿದ ಕಾಂಪೌಂಡ್

ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಬಿಎಂಪಿ ಮಾಜಿ ಸದಸ್ಯ ಅಯೂಬ್ ಖಾನ್‌ಗೆ ಚಾಕು ಇರಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಅಯೂಬ್ ಖಾನ್‌ಗೆ ಬುಧವಾರ ಸಂಜೆ ಚಾಕುವಿನಿಂದ ಇರಿಯಲಾಗಿದೆ. ಚಾಮರಾಜಪೇಟೆಯ ಅವರ ಮನೆಯ ಬಳಿಯೇ ಘಟನೆ ನಡೆದಿದೆ.

ಅಯೂಬ್ ಅವರನ್ನು ಚಿಕಿತ್ಸೆಗೆ ಏಷ್ಯನ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಸ್ತಿ ವಿಚಾರವಾಗಿ ಸಂಬಂಧಿಕರೊಬ್ಬರು ಹೊಟ್ಟೆ ಭಾಗಕ್ಕೆ ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ. ಆರೋಪಿ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಿಎಸ್‌ಐ ಹಗರಣದ ತನಿಖೆ ತ್ವರಿತಗೊಳಿಸಿ: ಪ್ರಿಯಾಂಕ್

ಬೆಂಗಳೂರು: 'ಪಿಎಸ್‌ಐ ನೇಮಕಾತಿ ಹಗರಣದ ತನಿಖೆ ತ್ವರಿತಗೊಳಿಸಬೇಕು' ಎಂದು ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ, ಶಾಸಕ ಪ್ರಿಯಾಂಕ್ ಖರ್ಗೆ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಪ್ರಭಾವಿಗಳನ್ನು ರಕ್ಷಿಸಲು ಬಿಜೆಪಿ ಸರ್ಕಾರ ಯತ್ನಿಸುತ್ತಿದೆ. ಕಲಬುರಗಿಯ ಪರೀಕ್ಷಾ ಕೇಂದ್ರಕ್ಕೆ ಮಾತ್ರ ತನಿಖೆಯನ್ನು ಸೀಮಿತಗೊಳಿಸಿದ್ದು, ಇತರ ಕೇಂದ್ರಗಳಲ್ಲಿನ ಅಕ್ರಮದ ಕುರಿತು ತನಿಖೆ ಯಾವಾಗ?. ಅನ್ನಪೂರ್ಣೇಶ್ವರಿ ನಗರದಲ್ಲಿ ದಾಖಲಾಗಿರುವ ದೂರನ್ನು ಮುಚ್ಚಿಹಾಕಿ ಇಡೀ ಪ್ರಕರಣವನ್ನೇ ಮುಚ್ಚಿಹಾಕಲು ಪ್ರಯತ್ನ ನಡೆಯುತ್ತಿದೆ' ಎಂದು ಆರೋಪಿಸಿದರು.

'ಎಡಿಜಿಪಿ ಅಮ್ರಿತ್ ಪೌಲ್ ಅವರ ಹೇಳಿಕೆಯನ್ನು ಸೆಕ್ಷನ್ 164 ಪ್ರಕಾರ ನ್ಯಾಯಾಲಯದ ಮುಂದೆ ಹೇಳಿಕೆ ದಾಖಲಿಸಿಕೊಳ್ಳಬೇಕು. ಅರೋಪಪಟ್ಟಿಯಲ್ಲಿ ಉಲ್ಲೇಖಿಸಿರುವಂತೆ ಎಸ್‌ಡಿಎ, ಎಫ್‌ಡಿಎ, ಪಿಡಬ್ಲ್ಯುಡಿ, ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಅಕ್ರಮದ ಕುರಿತು ಕೂಡಲೇ ತನಿಖೆ ನಡೆಸಬೇಕು' ಎಂದೂ ಒತ್ತಾಯಿಸಿದರು.

'ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಪಟ್ಟಿಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಯಾವ ಯಾವ ಅಭ್ಯರ್ಥಿಗಳ ಜತೆ ಹೇಗೆ ಡೀಲ್ ಕುದುರಿಸಿದ್ದಾರೆ ಎಂಬ ವಿಚಾರವೂ ಪ್ರಸ್ತಾಪವಾಗಿದೆ. ಈ ಒಂದು ಪರೀಕ್ಷಾ ಕೇಂದ್ರದಲ್ಲೇ ಸುಮಾರು ₹ 3.5 ಕೋಟಿ ಅವ್ಯವಹಾರ ನಡೆದಿದ್ದು, ರಾಜ್ಯದ ಇತರೆ ಕೇಂದ್ರಗಳಲ್ಲಿ ಎಷ್ಟು ಅಕ್ರಮ ನಡೆದಿರಬಹುದು' ಎಂದ ಅವರು, 'ಪ್ರಕರಣ ತನಿಖೆ ಬೆಂಗಳೂರಿನವರೆಗೂ ವಿಸ್ತರಿಸಿದರೆ, ವಿಧಾನಸೌಧ ವ್ಯಾಪಾರ ಸೌಧವಾಗಿದೆ ಎಂದು ಬಹಿರಂಗವಾಗಲಿದೆ' ಎಂದರು.

ಖಾಸಗಿ ಶಾಲೆ ವಿರುದ್ಧ ಎಫ್‌ಐಆರ್

ಬೆಂಗಳೂರು: ಶಿಕ್ಷಣ ಇಲಾಖೆಯ ಅನುಮತಿ ಪಡೆಯದೆ ಮಕ್ಕಳನ್ನು ದಾಖಲಿಸಿಕೊಂಡ ಮಾಗಡಿ ರಸ್ತೆ ಗೊಲ್ಲರ ಪಾಳ್ಯ–ಹೊಸಳ್ಳಿಯ ಆರ್ಕಿಡ್ಸ್ ಇಂಟರ್ ನ್ಯಾಷನಲ್ ಶಾಲೆಯ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಅನಧಿಕೃತವಾಗಿ ಶಾಲೆ ತೆರೆದು ಪೂರ್ವ ಪ್ರಾಥಮಿಕ ಶಾಲೆಯಿಂದ 7ನೇ ತರಗತಿವರೆಗೆ ಮಕ್ಕಳಿಗೆ ಪ್ರವೇಶ ನೀಡಲಾಗಿದೆ. ಇಲಾಖೆಯ ಆದೇಶಗಳನ್ನು ಧಿಕ್ಕರಿಸಲಾಗಿದೆ. ಹಾಗಾಗಿ, ಶಾಲೆಯ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಸೂಚಿಸಿದ್ದಾರೆ ಎಂದು ರಾಜಾಜಿನಗರ ಬಿಇಒ ರಮೇಶ್ ಬ್ಯಾಡರಹಳ್ಳಿ ಠಾಣೆಗೆ ನೀಡಿದ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಚಿಕ್ಕಬಳ್ಳಾಪುರ ಜಿಲ್ಲೆ ಚಿಕ್ಕಬಳ್ಳಾಪುರ.
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ)
E-mail: pdchikkaballapur@gmail.com
Ph: 08156-277005

ಸಂಖ್ಯೆ:ಜಿನಕೋ/ತಾಶಾ/ಸಿಆರ್/30/2022–23 ದಿನಾಂಕ: 08–07–2022

ಟೆಂಡರ್ ಅಧಿಸೂಚನೆ

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ನಗರಸಭೆಯ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ)–4ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಂದ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

(1) **ಕಾಮಗಾರಿಗಳ ವಿವರ:** ಗೌರಿಬಿದನೂರು ನಗರಸಭೆ ವ್ಯಾಪ್ತಿಯಲ್ಲಿ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ)–4 ಯೋಜನೆಯಡಿ ರಸ್ತೆ ಮತ್ತು ಚರಂಡಿಗಳ ಅಭಿವೃದ್ಧಿ, ಫುಟ್‌ಪಾತ್ ನಿರ್ಮಾಣ, ಶೌಚಾಲಯ ಕಟ್ಟಡ ನಿರ್ಮಾಣ, ಬೀದಿ ದೀಪ ಅಳವಡಿಸುವುದು, ವಾಹನ ಶೆಡ್ ನಿರ್ಮಾಣ, ಸ್ಮಶಾನ ಅಭಿವೃದ್ಧಿ ಮತ್ತು ಸ್ವಾಗತ ಕಮಾನು ಅಳವಡಿಸುವ ಕಾಮಗಾರಿ. **(DMA/2022-23/OW/WORK_INDENT133402). ಟೆಂಡರಿಗಿಟ್ಟ ಮೊತ್ತ:** ರೂ.1,402.43ಲಕ್ಷಗಳು (ಜಿ.ಎಸ್.ಟಿ. ಹೊರತುಪಡಿಸಿ). ಇ.ಎಂ.ಡಿ ಮೊತ್ತ: ರೂ.15.00 ಲಕ್ಷಗಳು. ಗುತ್ತಿಗೆ ಅವಧಿ: 18 ತಿಂಗಳು(ಮಳೆಗಾಲ ಸೇರಿ).

ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸುವುದು, ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ **www.eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ **www.eproc.karnataka.gov.in** ನಲ್ಲಿ ಸಲ್ಲಿಸುವುದು. ಟೆಂಡರ್ ಸಂಸ್ಕರಣಾ ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು.

(1) ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್‌ಮಾಡಿಕೊಳ್ಳುವ ಪ್ರಾರಂಭಿಕ ದಿನಾಂಕ: **08.07.2022.** (2) ಪೂರ್ವಭಾವಿ ಸಭೆ (PRE-BID MEETING): **22.07.2022 ಪೂರ್ವಾಹ್ನ 11.00 ಗಂಟೆಗೆ** ಜಿಲ್ಲಾ ನಗರಾಭಿವೃದ್ಧಿ ಕೋಶ ಕಛೇರಿ. (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **08.08.2022ರ ಸಂಜೆ 05.30 ಗಂಟೆಗೆ.** (4) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10.08.2022ರ ಪೂರ್ವಾಹ್ನ 11.00 ಗಂಟೆಗೆ.** (5) ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ ದಿನಾಂಕ: **19.08.2022ರ ಬೆಳಗ್ಗೆ 11.00 ಗಂಟೆಗೆ** ಅಥವಾ ಮುಂದೆ ಸೂಚಿಸಿದ ದಿನದಂದು.

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ.

ವಾಸಾಸಂಇ/ ಚಿಕ್ಕಬಳ್ಳಾಪುರ/ ಆರ್.ಓ.ಸಂಖ್ಯೆ 173/ ಎಂ.ಸಿ.ಎ/ 2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನೆ ವಿಭಾಗ, ಬೇಗೂರು ಮುಖ್ಯರಸ್ತೆ,
ಬೊಮ್ಮನಹಳ್ಳಿ, ಬೆಂಗಳೂರು–560 068.

ಸಂ: ಬಿಬಿಎಂಪಿ/ಕಾಪಾಅ/ಬೊಯೋವಿ/ಟೆಂಡ್–02/2022–23 **ದಿನಾಂಕ:13.07.2022**

ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನೆ ವಿಭಾಗ, ಇವರು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	**ಪ್ಯಾಕೇಜ್ 1**: (1) ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಸಿಸಿ ಕ್ಯಾಮೆರಗಳನ್ನು ಒದಗಿಸುವುದು ಮತ್ತು ನಿರ್ವಹಣೆ ಮಾಡುವುದು (2) ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಸೂಚನಾ ಫಲಕಗಳನ್ನು ಒದಗಿಸುವುದು ಮತ್ತು ನಿರ್ವಹಣೆ ಮಾಡುವುದು ಹಾಗೂ ಇತರೆ ಕಾಮಗಾರಿಗಳು (3) ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಬೀದಿ ದೀಪಗಳನ್ನು ಒದಗಿಸುವುದು ಮತ್ತು ನಿರ್ವಹಣೆ ಮಾಡುವುದು ಹಾಗೂ ಇತರೆ ಕಾಮಗಾರಿಗಳು.	1000.00	**ರೂ. 15,00,000/–** (ರೂ.1,00,000/– ಆನ್‌ಲೈನ್ ಪಾವತಿ ಮೂಲಕ ಹಾಗೂ ರೂ. 14,00,000/– ಬ್ಯಾಂಕ್ ಗ್ಯಾರಂಟಿ ಮೂಲಕ)
2	**ಪ್ಯಾಕೇಜ್ 2** : (1) ವಾರ್ಡ್ ಸಂಖ್ಯೆ 191ರಲ್ಲಿ ಸಿಂಗಸಂದ್ರ ಶಾಲಾ ಕಟ್ಟಡದ ನಿರ್ಮಾಣ ಮತ್ತು ನಿರ್ವಹಣಾ ಕಾಮಗಾರಿಗಳು (2) ವಾರ್ಡ್ ಸಂಖ್ಯೆ 193, ಹುಳಿಮಾವಿನ ಮುನೇಶ್ವರ ಬಡಾವಣೆಯಲ್ಲಿ ಸಮುದಾಯ ಭವನದ ನಿರ್ಮಾಣ ಕಾಮಗಾರಿ. (3) ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಅಂಗನವಾಡಿ ಕಟ್ಟಡದ ನಿರ್ಮಾಣ ಕಾಮಗಾರಿ. (4) ವಾರ್ಡ್ ಸಂಖ್ಯೆ 175, ರೂಪೇನ ಅಗ್ರಹಾರದಲ್ಲಿ ಸಮುದಾಯ ಭವನದ ನಿರ್ಮಾಣ, ನಿರ್ವಹಣೆ ಮತ್ತು ಪೀಠೋಪಕರಣಗಳನ್ನು ಒದಗಿಸುವುದು ಹಾಗೂ ಸಂಬಂಧಿತ ಕಾಮಗಾರಿಗಳು. (5) ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಘನತ್ಯಾಜ್ಯ ಸಂಗ್ರಹ ಕೇಂದ್ರದ ಅಭಿವೃದ್ಧಿ ಕಾಮಗಾರಿ, ಶ್ರೆಡ್ಡರ್‌ಗಳನ್ನು ಒದಗಿಸುವುದು ಹಾಗೂ ಇತರೆ ಒಳಚರಂಡಿ ಸಂಬಂಧಿತ ಕಾಮಗಾರಿಗಳು.	1000.00	**ರೂ. 15,00,000/–** (ರೂ.1,00,000/– ಆನ್‌ಲೈನ್ ಪಾವತಿ ಮೂಲಕ ಹಾಗೂ ರೂ. 14,00,000/– ಬ್ಯಾಂಕ್ ಗ್ಯಾರಂಟಿ ಮೂಲಕ)
3	**ಪ್ಯಾಕೇಜ್ 3** : (1) ವಾರ್ಡ್ ಸಂಖ್ಯೆ 174ರಲ್ಲಿ ಸಮುದಾಯ ಭವನದ ನಿರ್ಮಾಣ ಕಾಮಗಾರಿ (2) ವಾರ್ಡ್ ಸಂಖ್ಯೆ 174, ಪರಂಗಿಪಾಳ್ಯದಲ್ಲಿ ಶಾಲಾ ಕಟ್ಟಡದ ನಿರ್ಮಾಣ ಕಾಮಗಾರಿ (3) ವಾರ್ಡ್ ಸಂಖ್ಯೆ 174, ಪರಂಗಿಪಾಳ್ಯದಲ್ಲಿ ಅಂಬೇಡ್ಕರ್ ಭವನದ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗಳು. (4) ವಾರ್ಡ್ ಸಂಖ್ಯೆ 174ರಲ್ಲಿ ಕಛೇರಿ ಕಟ್ಟಡದ ನಿರ್ಮಾಣ ಕಾಮಗಾರಿ ಹಾಗೂ ಅಟಲ್ ಬಿಹಾರಿ ವಾಜಪೇಯಿ ಆಟದ ಮೈದಾನದಲ್ಲಿ ಇತರೆ ಅಭೀವೃದ್ಧಿ ಕಾಮಗಾರಿಗಳು. (5) ವಾರ್ಡ್ ಸಂಖ್ಯೆ 175 ಕೋಡಿಚಿಕ್ಕನಹಳ್ಳಿಯಲ್ಲಿ ಶಾಲಾ ಕಟ್ಟಡದ ನಿರ್ಮಾಣ ಕಾಮಗಾರಿ. (6) ವಾರ್ಡ್ ಸಂಖ್ಯೆ 189, ಹೊಂಗಸಂದ್ರದಲ್ಲಿ ಶಾಲಾ ಕಟ್ಟಡದ ನಿರ್ಮಾಣ ಕಾಮಗಾರಿ. (7) ವಾರ್ಡ್ ಸಂಖ್ಯೆ 189, ಹೊಂಗಸಂದ್ರದ 8ನೇ ಮುಖ್ಯರಸ್ತೆಯಲ್ಲಿ ಶಾಲಾ ಕಟ್ಟಡ ಮತ್ತು ಆಸ್ಪತ್ರೆಯ ನಿರ್ಮಾಣ ಕಾಮಗಾರಿ. (8)ವಾರ್ಡ್ ಸಂಖ್ಯೆ 190, ಎಲ್ಲುಕುಂಟೆಯಲ್ಲಿ ಸಮುದಾಯ ಭವನದ ನಿರ್ಮಾಣ ಕಾಮಗಾರಿ (9) ವಾರ್ಡ್ ಸಂಖ್ಯೆ 190 ರ ಬಂಡೆಪಾಳ್ಯದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗಳು. (10) ವಾರ್ಡ್ ಸಂಖ್ಯೆ 190, ಸೋಮಸುಂದರಪಾಳ್ಯದಲ್ಲಿ ಆಟದ ಮೈದಾನದ ಅಭಿವೃದ್ಧಿ ಕಾಮಗಾರಿಗಳು ಹಾಗೂ ಶಾಲಾ ಕಟ್ಟಡದ ನಿರ್ಮಾಣ ಕಾಮಗಾರಿ.	1090.00	**ರೂ. 15,00,000/–** (ರೂ.1,00,000/– ಆನ್‌ಲೈನ್ ಪಾವತಿ ಮೂಲಕ ಹಾಗೂ ರೂ. 14,00,000/– ಬ್ಯಾಂಕ್ ಗ್ಯಾರಂಟಿ ಮೂಲಕ)
4	**ಪ್ಯಾಕೇಜ್ 4** : (1) ವಾರ್ಡ್ ಸಂಖ್ಯೆ 188 ರಲ್ಲಿ ವಿಜಯ ಬ್ಯಾಂಕ್ ಬಡಾವಣೆ ಉದ್ಯಾನವನದ ಅಭಿವೃದ್ಧಿ ಕಾಮಗಾರಿಗಳು. (2) ವಾರ್ಡ್ ಸಂಖ್ಯೆ 191 ರಲ್ಲಿ ಸಿಂಗಸಂದ್ರದ ಉದ್ಯಾನವನದ ಅಭಿವೃದ್ಧಿ ಕಾಮಗಾರಿಗಳು. (3) ವಾರ್ಡ್ ಸಂಖ್ಯೆ 174 ರ ಹೆಚ್‌ಎಸ್‌ಆರ್ ಬಡಾವಣೆಯ ವೇಮನ ವೃತ್ತದ ಅಭಿವೃದ್ಧಿ ಕಾಮಾಗಾರಿಗಳು (4) ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಜಂಕ್ಷನ್‌ಗಳ ಸುಧಾರಣಾ ಕಾಮಗಾರಿಗಳು (5) ವಾರ್ಡ್ ಸಂಖ್ಯೆ 175, ಕೋಡಿಚಿಕ್ಕನಹಳ್ಳಿಯ ಆಟದ ಮೈದಾನದ ಅಭಿವೃದ್ಧಿ ಕಾಮಗಾರಿಗಳು (6) ವಾರ್ಡ್ ಸಂಖ್ಯೆ 188, ವಿಜಯ ಬ್ಯಾಂಕ್ ಬಡಾವಣೆಯ ಆಟದ ಮೈದಾನದ ಅಭಿವೃದ್ಧಿ ಕಾಮಗಾರಿಗಳು (7) ವಾರ್ಡ್ ಸಂಖ್ಯೆ 191, ಎಇಸಿಎಸ್‌ಬಡಾವಣೆ ಬಿ ಬ್ಲಾಕ್‌ನ ಆಟದ ಮೈದಾನದ ಅಭಿವೃದ್ಧಿ ಕಾಮಗಾರಿಗಳು (8) ವಾರ್ಡ್ ಸಂಖ್ಯೆ 175, ದೇವರಚಿಕ್ಕನಹಳ್ಳಿಯ ಸ್ಮಶಾನ ಅಭಿವೃದ್ಧಿ ಕಾಮಗಾರಿಗಳು (9) ವಾರ್ಡ್ ಸಂಖ್ಯೆ 188 ಬಿಳೇಕಹಳ್ಳಿಯ ಸ್ಮಶಾನ ಅಭಿವೃದ್ಧಿ ಕಾಮಗಾರಿಗಳು (10) ವಾರ್ಡ್ ಸಂಖ್ಯೆ 191, ಚನ್ನಕೇಶವನಗರ, ಹೊಸರೋಡ್‌ನಲ್ಲಿ ಸ್ಮಶಾನ ಅಭಿವೃದ್ಧಿ ಕಾಮಗಾರಿಗಳು (11) ವಾರ್ಡ್ ಸಂಖ್ಯೆ 190, ಹೊಸಪಾಳ್ಯದಲ್ಲಿ ಕ್ರೆಮೆಟೋರಿಯಂ ನ ಅಭಿವೃದ್ಧಿ ಕಾಮಗಾರಿಗಳು (12) ವಾರ್ಡ್ ಸಂಖ್ಯೆ 187, ಪುಟ್ಟೇನಹಳ್ಳಿಯಲ್ಲಿ ಶಾಲ ಕಟ್ಟಡದ ನಿರ್ಮಾಣ ಹಾಗೂ ನಿರ್ವಹಣಾ ಕಾಮಗಾರಿಗಳು (13) ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಸಾರ್ವಜನಿಕ ಆರೋಗ್ಯ ಕೇಂದ್ರಗಳ ನಿರ್ಮಾಣ ಕಾಮಗಾರಿ.	1010.00	**ರೂ. 15,00,000/–** (ರೂ.1,00,000/– ಆನ್‌ಲೈನ್ ಪಾವತಿ ಮೂಲಕ ಹಾಗೂ ರೂ. 14,00,000/– ಬ್ಯಾಂಕ್ ಗ್ಯಾರಂಟಿ ಮೂಲಕ)

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ದಿನಾಂಕ 17.07. 2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **2)** ಪೂರ್ವಭಾವಿ ಸಭೆ ದಿನಾಂಕ : **21.07.2022ರ ಬೆಳಿಗ್ಗೆ 11.00 ಗಂಟೆಗೆ. 3)** ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **27.07.2022 ರ ಸಂಜೆ 4.00 ಗಂಟೆಯವರೆಗೆ 4)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **28.07.2022 ರ ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: 080–22441076 ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನೆ ವಿಭಾಗ

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಶಿಕ್ಷಣ ನೀತಿಗಾಗಿನ ವರದಿ– ಮೊಟ್ಟೆ ಬದಲು ಚಿಕ್ಕಿ ಕೊಡಿ

ಮೊಟ್ಟೆ ಕೊಟ್ಟರೆ ತಾರತಮ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲೆಗಳಲ್ಲಿ ಮಧ್ಯಾಹ್ನದ ಊಟದ ಜೊತೆ ಮೊಟ್ಟೆ ನೀಡುವುದು ಮಕ್ಕಳ ಮಧ್ಯೆ ತಾರತಮ್ಯಕ್ಕೆ ಕಾರಣವಾಗುತ್ತದೆ. ಪೌಷ್ಟಿಕಾಂಶ ವಿತರಣೆಯಲ್ಲಿ ಅಸಮತೋಲನ ಸೃಷ್ಟಿಸುತ್ತದೆ ಎಂದು ರಾಷ್ಟ್ರೀಯ ಶಿಕ್ಷಣ ನೀತಿಯಡಿ ಆರೋಗ್ಯ ಮತ್ತು ಯೋಗಕ್ಷೇಮ ಕುರಿತು ಸಿದ್ಧಪಡಿಸಿದ ವರದಿಯಲ್ಲಿ (ಪೊಸಿಷನ್ ಪೇಪರ್) ಉಲ್ಲೇಖಿಸಲಾಗಿದೆ.

ಭಾರತೀಯರು ಸಣ್ಣ ಗಾತ್ರದ ದೇಹದಾರ್ಢ್ಯ ಹೊಂದಿದ್ದು, ಮೊಟ್ಟೆ, ಮಾಂಸದ ನಿರಂತರ ಸೇವನೆಯಿಂದ ಹೆಚ್ಚುವರಿ ಕೊಬ್ಬಿನಾಂಶವು ಸೇರಿಕೊಳ್ಳುತ್ತದೆ. ಇದರಿಂದ ಮಕ್ಕಳಲ್ಲಿ ಜೀವನಶೈಲಿಯ ಅಸ್ವಸ್ಥತೆಗಳಿಗೂ ಕಾರಣವಾಗುತ್ತದೆ ಎಂದು ನಿಮ್ಹಾನ್ಸ್‌ನ 'ಮಕ್ಕಳ ಮತ್ತು ಹದಿಹರೆಯದವರ ಮನೋವೈದ್ಯಶಾಸ್ತ್ರ' ವಿಭಾಗದ ಮುಖ್ಯಸ್ಥ ಜಾನ್ ವಿಜಯ್ ಸಾಗರ್ ನೇತೃತ್ವದ ತಜ್ಞರ ಸಮಿತಿ ತನ್ನ ಶಿಫಾರಸಿನಲ್ಲಿ ತಿಳಿಸಿದೆ. ಈ ವರದಿಯು ಎನ್‌ಸಿಇಆರ್‌ಟಿ ವೆಬ್‌ಸೈಟ್‌ನಲ್ಲಿ ಇದೆ.

ಅಲ್ಲದೇ, ಕೆಲವು ಮಕ್ಕಳಿಗೆ ಮೊಟ್ಟೆ, ಇನ್ನೂ ಕೆಲವರಿಗೆ ಬಾಳೆಹಣ್ಣು ನೀಡಿದರೆ ತಾರತಮ್ಯವಾಗುತ್ತದೆ. ಸ್ನೇಹಿತರ ಮಧ್ಯೆ ಭಾವನಾತ್ಮಕ ಬಾಂಧವ್ಯಕ್ಕೂ ಅಡ್ಡಿಯಾಗುತ್ತದೆ. ಶಾಲೆಯಲ್ಲಿ ಎಲ್ಲಾ ಮಕ್ಕಳನ್ನೂ ಸಮಾನವಾಗಿ, ತಾರತಮ್ಯವಿಲ್ಲದೆ ಪರಿಗಣಿಸುವುದು ಸೂಕ್ತ. ಇದು ಭಾರತೀಯ ಪರಂಪರೆ ಎಂದೂ ಹೇಳಿದೆ.

'ವಿಶ್ವ ಸಂಸ್ಥೆಯ ಮಕ್ಕಳ ಒಡಂಬಡಿಕೆಗೆ ಸಹಿ ಹಾಕಿದ ನಂತರ ಮಕ್ಕಳ ಆರೋಗ್ಯ ಹಿತಾಸಕ್ತಿ ಕಾಪಾಡುವುದು ಸರ್ಕಾರಗಳ ಜವಾಬ್ದಾರಿ. ಶಾಲೆಗಳಲ್ಲಿ ನೀಡುವ ಆಹಾರವು ಮಕ್ಕಳ ಹಕ್ಕಿನ ಒಂದು ಭಾಗವಾಗಿರಬೇಕು. ಜಾತಿ, ಧರ್ಮದ ಆಧಾರದಲ್ಲಿ ಪರಿಗಣಿಸಬಾರದು. ಅಪೌಷ್ಟಿಕತೆ, ರಕ್ತ ಹೀನತೆಯಿಂದ ಬಳಲುವ ಶೇ 32ರಷ್ಟು ಮಕ್ಕಳಿಗೆ ಬೇಕಿರುವುದು ಅಗತ್ಯ ಪ್ರೋಟಿನ್. ಒಣ ಹಣ್ಣುಗಳು, ಮಾಂಸ ಪದಾರ್ಥಗಳಿಗೆ ಹೋಲಿಸಿದರೆ ಅತಿ ಕಡಿಮೆ ವೆಚ್ಚದಲ್ಲಿ ದೊರೆಯುವುದು ಮೊಟ್ಟೆ. ಶಾಲೆಗೆ ಕಡಿಮೆ ಮಕ್ಕಳು ಬಂದರೆ ಮರು ದಿನವೂ ಕೊಡಲು ಸಾಧ್ಯವಾಗುವ ಪ್ರೋಟಿನ್ ಯುಕ್ತ ಆಹಾರ. ಇಂತಹ ಆಹಾರ ನಿಷೇಧಿಸುವುದು ಸಲ್ಲದು' ಎನ್ನುತ್ತಾರೆ ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ.

ಭಾಷಾ ನೀತಿ: ಸಿ.ಎಂಗೆ ದೂರು

ರಾಷ್ಟ್ರೀಯ ಶಿಕ್ಷಣ ನೀತಿಯಡಿ ಪ್ರಾಥಮಿಕ ಹಂತದ ಪಠ್ಯಕ್ರಮ ರೂಪಿಸಲು ಭಾಷಾ ಶಿಕ್ಷಣ ಕುರಿತು ಸಿದ್ಧಪಡಿಸಿದ ವರದಿಗೆ ಕರ್ನಾಟಕ ಪ್ರಾಥಮಿಕ ಮತ್ತು ಪ್ರೌಢಶಾಲಾ ಆಡಳಿತ ಮಂಡಳಿಗಳ ಒಕ್ಕೂಟ ಆಕ್ಷೇಪ ವ್ಯಕ್ತಪಡಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ದೂರು ಸಲ್ಲಿಸಿದೆ.

ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಶಿಫಾರಸು ಮಾಡಲಾಗಿದೆ. ಬೋಧನಾ ಮಾಧ್ಯಮವು ಪೋಷಕರು ಮತ್ತು ಮಗುವಿನ ಆಯ್ಕೆಯಾಗಿದೆ ಎಂದು ಸುಪ್ರೀಂಕೋರ್ಟ್ ಸಾಂವಿಧಾನಿಕ ಪೀಠ ಹೇಳಿದೆ. ಇಂತಹ ಮಹತ್ವದ ತೀರ್ಪು ಅರ್ಥಮಾಡಿಕೊಳ್ಳುವಲ್ಲಿ ಸಮಿತಿ ವಿಫಲವಾಗಿದೆ. ಆದರೆ, ರಾಜ್ಯ ಸರ್ಕಾರ ನ್ಯಾಯಾಲಯದ ತೀರ್ಪನ್ನು ಗೌರವಿಸುತ್ತದೆ. ಬಡವರು, ಹಿಂದುಳಿದವರು, ದುರ್ಬಲ ವರ್ಗಗಳನ್ನು ರಕ್ಷಿಸುತ್ತದೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಉನ್ನತ ವ್ಯಕ್ತಿತ್ವ ಉಳ್ಳವರು ಸತ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕೇ ವಿನಾ ಜನ ಏನು ಯೋಚಿಸುತ್ತಾರೆ ಎನ್ನುವುದರ ಬಗೆಗಲ್ಲ.

-ಅರಿಸ್ಟಾಟಲ್

ಬರಹಗಾರರಿಗೆ ಜೀವಬೆದರಿಕೆ ಪತ್ರ ಸರ್ಕಾರದ ಮೌನ– ನಿರ್ಲಕ್ಷ್ಯ ಸರಿಯಲ್ಲ

ಬರಹಗಾರರ ಜೀವಕ್ಕೆ ಬೆದರಿಕೆಯೊಡ್ಡುವ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನಗೊಳಿಸುವ ಪ್ರಯತ್ನಗಳು ರಾಜ್ಯದಲ್ಲಿ ಮರುಕಳಿಸಿರುವುದು ದುರದೃಷ್ಟಕರ. ಹಿಜಾಬ್ ಪ್ರಕರಣದಲ್ಲಿ ರಾಜ್ಯ ಸರ್ಕಾರ ತಳೆದ ನಿಲುವನ್ನು ವಿರೋಧಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬಹಿರಂಗ ಪತ್ರ ಬರೆದ 61 ಬರಹಗಾರರಲ್ಲಿ ಹಲವರಿಗೆ ಜೀವಬೆದರಿಕೆ ಎದುರಾಗಿದೆ. ಮೂರು ತಿಂಗಳ ಅವಧಿಯಲ್ಲಿ ಹತ್ತೊಂಬತ್ತು ಬೆದರಿಕೆ ಪತ್ರಗಳು ಲೇಖಕರನ್ನು ತಲುಪಿವೆ. 'ಸಹಿಷ್ಣು ಹಿಂದೂ' ಹೆಸರಿನಲ್ಲಿ ಬರೆಯಲಾಗಿರುವ ಕೈಬರಹದ ಪತ್ರಗಳಲ್ಲಿ ಕೆಲವು, ಒಂದೇ ದಿನ ಒಂದೇ ಅಂಚೆ ಕಚೇರಿಯಿಂದ ಬಟವಾಡೆಯಾಗಿವೆ. ಕುಂ. ವೀರಭದ್ರಪ್ಪನವರಿಗೆ 6, ಬಂಜಗೆರೆ ಜಯಪ್ರಕಾಶ್ ಅವರಿಗೆ 5, ಬಿ.ಟಿ. ಲಲಿತಾ ನಾಯಕ್, ಬಿ.ಎಲ್. ವೇಣು, ಚಂದ್ರಶೇಖರ ತಾಳ್ಯ ಅವರಿಗೆ ತಲಾ 2, ಎಸ್.ಜಿ. ಸಿದ್ಧರಾಮಯ್ಯ ಹಾಗೂ ಡಾ. ವಸುಂಧರಾ ಭೂಪತಿ ಅವರಿಗೆ ಒಂದೊಂದು ಬೆದರಿಕೆ ಪತ್ರಗಳು ಬಂದಿವೆ. ಹಿಜಾಬ್ ವಿವಾದ ಹಾಗೂ ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದಂತೆ ಸಾಹಿತಿಗಳು ತಳೆದಿರುವ ನಿಲುವಿನ ಕಾರಣಕ್ಕೆ ಜೀವಬೆದರಿಕೆ ಒಡ್ಡಲಾಗಿದ್ದು, 'ಕ್ಷಮೆ ಕೇಳದೆಹೋದರೆ ಕಾಲನ ಉಪಚಾರಕ್ಕೆ ಸಿದ್ಧರಾಗಿ' ಎಂದು ಪತ್ರಗಳಲ್ಲಿ ಎಚ್ಚರಿಸಲಾಗಿದೆ. ಜೀವಬೆದರಿಕೆಗೆ ಗುರಿಯಾದ ಕೆಲವು ಬರಹಗಾರರ ಮನೆಗಳಿಗೆ ಭೇಟಿ ನೀಡಿರುವ ಪೊಲೀಸರು, ಭದ್ರತಾ ವ್ಯವಸ್ಥೆ ಕಲ್ಪಿಸಿದ್ದಾರೆ. ಆದರೆ, ಜೀವಬೆದರಿಕೆ ಕುರಿತಂತೆ ಕೆಲವೆಡೆ ಮಾತ್ರ ಎಫ್‌ಐಆರ್ ದಾಖಲಾಗಿದೆ. ಕಾಂಗ್ರೆಸ್‌ನ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರ ಮೇಲೆ ಗುಂಡುಹಾರಿಸಬೇಕೆಂದು ವ್ಯಕ್ತಿಯೊಬ್ಬ ಟಿ.ವಿ. ಚಾನೆಲ್‌ವೊಂದರಲ್ಲಿ ಹೇಳಿಕೆ ನೀಡಿದ್ದು, ಆ ಬಗ್ಗೆ ಕಾಂಗ್ರೆಸ್ ದೂರು ಸಲ್ಲಿಸಿದ್ದರೂ ಈವರೆಗೂ ಎಫ್‌ಐಆರ್ ದಾಖಲಾಗಿಲ್ಲ ಎಂದು ಸಿದ್ದರಾಮಯ್ಯ ಅವರು ಹೇಳಿರುವುದನ್ನು ನೋಡಿದರೆ, ಬರಹಗಾರರು ಹಾಗೂ ವಿರೋಧ ಪಕ್ಷಗಳ ನಾಯಕರಿಗೆ ಬಂದಿರುವ ಜೀವಬೆದರಿಕೆ ಕರೆಗಳು ಮತ್ತು ಪತ್ರಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದಂತೆ ಕಾಣಿಸುತ್ತಿಲ್ಲ. ವಿರೋಧ ಪಕ್ಷಗಳ ನಾಯಕರಿಗೆ ಎದುರಾದ ಜೀವ ಬೆದರಿಕೆಗಳನ್ನೇ ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳದೇ ಹೋದರೆ, ಬರಹಗಾರರ ಪಾಡೇನು?

ಅಭಿಪ್ರಾಯಭೇದಗಳು ಹಿಂಸೆಗೆ ಕಾರಣವಾಗದಂತೆ ಸಮಾಜ ಎಚ್ಚರಿಕೆ ವಹಿಸಬೇಕು. ಹಿಂಸೆಯನ್ನು ಉತ್ತೇಜಿಸುವ, ಹಿಂಸಾಕೃತ್ಯಗಳಲ್ಲಿ ತೊಡಗುವವರ ವಿರುದ್ಧ ಸರ್ಕಾರ ಕಠಿಣ ಕ್ರಮ ಜರುಗಿಸಬೇಕು

ಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವವರಿಗೆ ಜೀವಬೆದರಿಕೆಯೊಡ್ಡುವ ಕೃತ್ಯಗಳ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರಯತ್ನಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿವೆ. ಬರಹಗಾರರನ್ನು ಬೆದರಿಸುವುದಕ್ಕೆ ಹಾಗೂ ಅವರ ಚಾರಿತ್ರ್ಯಹರಣಕ್ಕೆ ಸಾಮಾಜಿಕ ಜಾಲತಾಣಗಳನ್ನೂ ಬಳಸಿಕೊಳ್ಳಲಾಗುತ್ತಿದೆ. ಈ ಬೆದರಿಕೆಗಳನ್ನು ಹುಸಿ ಬಡಬಡಿಕೆಗಳೆಂದು ನಿರ್ಲಕ್ಷಿಸುವಂತಿಲ್ಲ. ಹೀಗೆ ನಿರ್ಲಕ್ಷಿಸುವುದರಿಂದ ಮುಸುಕಿನ ಮರೆಯ ಕಿಡಿಗೇಡಿಗಳಿಗೆ ಮತ್ತಷ್ಟು ಉತ್ತೇಜನ ನೀಡಿದಂತಾಗುತ್ತದೆ. ವಿಮರ್ಶಾತ್ಮಕವಾಗಿ ಮಾತನಾಡುವವರನ್ನು ಬಾಯಿ ಮುಚ್ಚಿಸಲು ಪ್ರಯತ್ನಿಸುವವರನ್ನು ನಿರ್ಲಕ್ಷಿಸುವುದು ಅವರಿಗೆ ಪರೋಕ್ಷ ಬೆಂಬಲ ನೀಡಿದಂತೆಯೇ. ವೈಚಾರಿಕತೆಯನ್ನು ಹಾಗೂ ಭಿನ್ನಾಭಿಪ್ರಾಯಗಳನ್ನು ಹಿಂಸೆಯ ಮೂಲಕ ಹತ್ತಿಕ್ಕಲು ಬಯಸುವುದು, ಆ ಮೂಲಕ ಸಾಮೂಹಿಕವಾಗಿ ಭಯ ಹುಟ್ಟಿಸುವ ಪ್ರಯತ್ನಗಳು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೂಲಭೂತ ಆಶಯಗಳನ್ನು ದುರ್ಬಲಗೊಳಿಸುವಂತಹವು. ಅನಾಮಿಕ ಕಿಡಿಗೇಡಿಗಳು ಒಡ್ಡುವ ಬೆದರಿಕೆಗಳು ಬರಹಗಾರರ ಮಾನಸಿಕ ನೆಮ್ಮದಿಯನ್ನು ಹಾಳು ಮಾಡುವುದರ ಜೊತೆಗೆ, ಅವರ ಕುಟುಂಬ ವರ್ಗದವರು ಆತಂಕದೊಂದಿಗೆ ಜೀವನ ನಡೆಸುವ ಪರಿಸ್ಥಿತಿ ಸೃಷ್ಟಿಸುತ್ತವೆ. ಜೀವಭಯದೊಂದಿಗೆ ಬದುಕು ಸಾಗಿಸುವಂತಹ ಸ್ಥಿತಿ ರೂಪುಗೊಳ್ಳುವುದು ನಾಗರಿಕ ಸಮಾಜದ ಲಕ್ಷಣವಲ್ಲ. ಬರಹಗಾರರು ಹಾಗೂ ಅವರ ಕುಟುಂಬ ನಿರ್ಭಯದಿಂದ ಜೀವನ ಸಾಗಿಸಲು ಅಗತ್ಯವಾದ ಮುಕ್ತ ವಾತಾವರಣವನ್ನು ಕಲ್ಪಿಸುವುದು ಸರ್ಕಾರದ ಕರ್ತವ್ಯ. ವೈಚಾರಿಕ ಭಿನ್ನಾಭಿಪ್ರಾಯಗಳನ್ನು ಸಂವಾದದ ಮೂಲಕ ಬಗೆಹರಿಸಿಕೊಳ್ಳುವ ಸೌಹಾರ್ದದ ಮಾದರಿಗಳನ್ನು ಸೃಷ್ಟಿಸುವುದರಲ್ಲೂ ಆಡಳಿತ ಪಕ್ಷವೇ ಮುಂಚೂಣಿಯಲ್ಲಿರಬೇಕು.

ವ್ಯತಿರಿಕ್ತ ಅಭಿಪ್ರಾಯಗಳು ಎದುರಾದಾಗ ಅವುಗಳನ್ನು ಎದುರಿಸಲು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅನೇಕ ದಾರಿಗಳಿವೆ. ಕಾನೂನು ಕ್ರಮದ ಮೂಲಕ ವೈಚಾರಿಕ ಸಂಘರ್ಷ ನಡೆಸಲಿಕ್ಕೆ ಅವಕಾಶವಿದೆ. ಈ ಮಾರ್ಗಗಳನ್ನು ಬಿಟ್ಟು ಕಾನೂನನ್ನು ಕೈಗೆತ್ತಿಕೊಳ್ಳುವುದಕ್ಕೆ ಯಾರಿಗೂ ಅವಕಾಶವಿಲ್ಲ. ಅಭಿಪ್ರಾಯಭೇದವನ್ನು ಹಿಂಸೆಯ ಮೂಲಕ ಎದುರಿಸುವುದರ ಪರಿಣಾಮವನ್ನು ಎಂ.ಎಂ. ಕಲಬುರ್ಗಿ ಮತ್ತು ಗೌರಿ ಲಂಕೇಶ್ ಅವರ ಹತ್ಯೆಯ ರೂಪದಲ್ಲಿ ಈಗಾಗಲೇ ಕಂಡಿದ್ದೇವೆ. ಕರ್ನಾಟಕದ ಸೌಹಾರ್ದ ಪರಂಪರೆಗೆ ಕಪ್ಪುಚುಕ್ಕೆಗಳಾದ ಆ ಸಾವುಗಳು ಸರ್ಕಾರಕ್ಕೆ ಹಾಗೂ ಸಮಾಜಕ್ಕೆ ಪಾಠಗಳಾಗಬೇಕು. ಅಭಿಪ್ರಾಯಭೇದಗಳು ಹಿಂಸೆಗೆ ಕಾರಣವಾಗದಂತೆ ಸಮಾಜ ಎಚ್ಚರಿಕೆ ವಹಿಸಬೇಕು. ಹಿಂಸೆಯನ್ನು ಉತ್ತೇಜಿಸುವ ಹಾಗೂ ಹಿಂಸಾಕೃತ್ಯಗಳಲ್ಲಿ ತೊಡಗುವವರ ವಿರುದ್ಧ ಸರ್ಕಾರ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಕೋಮುಸೌಹಾರ್ದ ಕದಡುವ ಮಾತುಗಳನ್ನಾಡುವ ನಾಲಿಗೆ ತುರಿಕೆಗೆ ರಾಜಕೀಯ ಮುಖಂಡರು ತಾವೇ ಕಡಿವಾಣ ಹಾಕಿಕೊಳ್ಳಬೇಕು; ಆ ಮೂಲಕ, ತಮ್ಮ ಹಿಂಬಾಲಕರಿಗೆ ಸಂಯಮದ ಮಾದರಿಗಳಾಗಬೇಕು. ದ್ವೇಷದ ಮಾತುಗಳನ್ನಾಡುವ ನಾಯಕರ ವಿರುದ್ಧ ಆಯಾ ಪಕ್ಷಗಳು ಕ್ರಮ ಕೈಗೊಳ್ಳುವ ಮೂಲಕ ಸಂವಿಧಾನಕ್ಕೆ ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಬೇಕು.

ದಿನದ ಟ್ವೀಟ್

ಭೂಮಿ ರಕ್ಷಿಸಲಾರೆವೇ?

ಹದಿನಾಲ್ಕು ವರ್ಷಗಳಲ್ಲಿ 647 ಎಕರೆ ಕರಾವಳಿ ಭೂಮಿಯು ಸಮುದ್ರದ ಪಾಲಾಗಿದೆ. ಸಂಸತ್ತಿನಲ್ಲಿ ಈ ವಿಷಯವನ್ನು ಪದೇ ಪದೇ ಪ್ರಸ್ತಾಪಿಸಿದ್ದೇನೆ. ನನ್ನ ಕ್ಷೇತ್ರ ತೀವ್ರ ಹಾನಿಗೊಳಗಾಗಿದೆ. ಒಂದು ವೇಳೆ ಈ ಭೂಮಿಯನ್ನು ಚೀನಾ ಏನಾದರೂ ವಶಪಡಿಸಿಕೊಂಡಿದ್ದರೆ ನಾವು ಯುದ್ಧಕ್ಕೆ ಮುಂದಾಗುತ್ತಿದ್ದೆವು. ಆದರೆ, ಸಮುದ್ರವು ಅದನ್ನು ಕಸಿದುಕೊಂಡಾಗ ತಡೆಗೋಡೆ ನಿರ್ಮಿಸಲು ನಮ್ಮ ಬಳಿ ಹಣವಿಲ್ಲವೇ?

ಶಶಿ ತರೂರ್, ಕಾಂಗ್ರೆಸ್ ಸಂಸದ

ಕಿಡಿನುಡಿ

ಶ್ರೀಲಂಕಾದ ಅಧ್ಯಕ್ಷ ಗೊಟಬಯ ರಾಜಪಕ್ಸ ದೇಶದಿಂದ ಪಲಾಯನ ಮಾಡಿದ್ದಾರೆ. ಆದರೆ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿಲ್ಲ. ರಾನಿಲ್ ವಿಕ್ರಮಸಿಂಘೆ ಅವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ. ರಾನಿಲ್ ಅವರ ಮನೆಯನ್ನು ಸುಟ್ಟುಹಾಕಲಾಗಿದೆ. ಅಷ್ಟಾದರೂ ಅವರಿಗೆ ಇನ್ನೂ ಕುರ್ಚಿ ಬೇಕಾಗಿದೆ. ಅಧಿಕಾರ ಎಂಬುದು ಬರೀ ವಿಷವಲ್ಲ; ಅದು ಅತ್ಯಂತ ಅಮಲೇರಿಸುವ ಸಂಗತಿ ಸಹ.

ಅಶೋಕ್ ಸ್ವೈನ್, ಪ್ರಾಧ್ಯಾಪಕ

25 ವರ್ಷಗಳ ಹಿಂದೆ

ಸೋಮವಾರ, 14-7-1997

• 9 ಅರಣ್ಯ ಸಿಬ್ಬಂದಿ ಅಪಹರಿಸಿದ ಕಾಡುಗಳ್ಳ ವೀರಪ್ಪನ್

ಬೆಂಗಳೂರು, ಜುಲೈ 13– ಕಳೆದ ಸುಮಾರು ಎಂಟು ವರ್ಷಗಳಿಂದ ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳಿಗೆ ಸವಾಲಾಗಿರುವ ಕುಖ್ಯಾತ ನರಹಂತಕ– ಕಾಡುಗಳ್ಳ ವೀರಪ್ಪನ್ ಒಬ್ಬ ವನಪಾಲಕರೂ ಸೇರಿದಂತೆ ರಾಜ್ಯ ಅರಣ್ಯ ಇಲಾಖೆಯ ಒಂಬತ್ತು ಮಂದಿ ಸಿಬ್ಬಂದಿಯನ್ನು ಅಪಹರಣ ಮಾಡಿದ್ದು, ತನಗೆ 'ಕ್ಷಮಾದಾನ' ನೀಡದಿದ್ದರೆ ಎಲ್ಲ ಒತ್ತೆಯಾಳುಗಳನ್ನೂ ಕೊಲ್ಲುವ ಬೆದರಿಕೆ ಹಾಕಿದ್ದಾನೆ.

ಚಾಮರಾಜನಗರದಿಂದ ಸತ್ಯಮಂಗಲಕ್ಕೆ ಹೋಗುವ ಮಾರ್ಗದಲ್ಲಿರುವ ಹಾಗೂ ತಮಿಳುನಾಡು ಗಡಿಗೆ ಹೊಂದಿಕೊಂಡಿರುವ ಪುಣಜನೂರು ದಟ್ಟ ಅರಣ್ಯ ಪ್ರದೇಶದಲ್ಲಿ ಶನಿವಾರ ಬೆಳಿಗ್ಗೆ 9 ಗಂಟೆ ಸಮಯದಲ್ಲಿ ಶಸ್ತ್ರಸಜ್ಜಿತ ವೀರಪ್ಪನ್ ತನ್ನ ತಂಡದೊಂದಿಗೆ ಮಿಂಚಿನ ಕಾರ್ಯಾಚರಣೆ ನಡೆಸಿ, ಕರ್ತವ್ಯ ನಿರತರಾಗಿದ್ದ ಒಬ್ಬ ವನಪಾಲಕ, ಇಬ್ಬರು ಅರಣ್ಯ ರಕ್ಷಕರು ಹಾಗೂ ಆರು ಮಂದಿ ಅರಣ್ಯ ಕಾವಲುಗಾರರನ್ನು ಅಪಹರಿಸಿಕೊಂಡು ಹೋಗಿದ್ದಾನೆ.

ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಮತ್ತು ಅರಣ್ಯ ಸಚಿವ ಗುರುಪಾದಪ್ಪ ನಾಗಮಾರಪಲ್ಲಿ ಅವರಿಗೆ ಈ ಕುರಿತು ಪ್ರತ್ಯೇಕ ಕ್ಯಾಸೆಟ್‌ನಲ್ಲಿ ಧ್ವನಿಮುದ್ರಿತ 'ಸಂದೇಶ' ಕಳುಹಿಸಿದ್ದಾನೆ. ಆ ಬಳಿಕವಷ್ಟೇ ಅಪಹರಣದ ವಿಷಯ ಸರ್ಕಾರದ ಗಮನಕ್ಕೆ ಬಂದಿತು ಎನ್ನಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 14-7-1972

• ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗ ರಚಿಸಲು ನಿರ್ಧಾರ

ಬೆಂಗಳೂರು, ಜುಲೈ 13– ರಾಜ್ಯದಲ್ಲಿ ಹಿಂದುಳಿದವರನ್ನು ವರ್ಗೀಕರಿಸಲು ಆಧಾರಗಳನ್ನು ಸೂಚಿಸುವ ಐದು ಮಂದಿ ಸದಸ್ಯರ ಆಯೋಗವೊಂದನ್ನು ಸರ್ಕಾರ ರಚಿಸಲಿದೆ.

ಈ ನಿರ್ಧಾರವನ್ನು ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ವರದಿಗಾರರಿಗೆ ತಿಳಿಸಿದರು. ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗ ರಚಿಸಬೇಕೆಂಬ ಒತ್ತಾಯ ಹಳೆಯದು. ವಿಧಾನಮಂಡಲದ ಪ್ರಸ್ತುತ ಅಧಿವೇಶನದಲ್ಲೂ ಈ ಒತ್ತಾಯವನ್ನು ಮಾಡಲಾಯಿತು.

ಆರ್ಥಿಕ ಪರಿಸ್ಥಿತಿ ಹಾಗೂ ಜಾತಿಯ ಆಧಾರಗಳನ್ನು ಅಳವಡಿಸಿ ಹಿಂದುಳಿದವರ ವರ್ಗೀಕರಣ ಸಾಧ್ಯವೇ ಎಂಬುದನ್ನು ಪರಿಶೀಲಿಸಲು ಆಯೋಗ ರಚಿಸುವುದಾಗಿ ಅರಸು ವಿಧಾನಸಭೆಯಲ್ಲಿ ತಿಳಿಸಿದ್ದರು.

ವೇದಗಳು ಹುಟ್ಟಿದ್ದೇ ಭಾರತದಲ್ಲಿ ಎಂಬುದಕ್ಕೆ ಸಾಕ್ಷ್ಯ ಹುಡುಕಲು ಬರುತ್ತಿವೆಯೆ ಹೊಸ ಸಲಕರಣೆಗಳು?

ಮತ್ತೆ ವೇದಕಾಲಕ್ಕೆ ಹಾರುವ ಯಂತ್ರ

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಅತ್ತ ಏಕನಾಥ ಶಿಂದೆ ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸುತ್ತಿದ್ದ ಅವಧಿಯಲ್ಲೇ ಬೆಂಗಳೂರಿನಲ್ಲಿ ಇನ್ನೊಬ್ಬ ಶಿಂದೆ ಇಡೀ ದೇಶದ ಚಿಂತಕರ ವಲಯದಲ್ಲಿ ಆತಂಕ ಸೃಷ್ಟಿಸಿದ್ದರು. ಇವರು ಪ್ರೊ. ವಸಂತ ಶಿಂದೆ; ಇಲ್ಲಿನ ಪ್ರತಿಷ್ಠಿತ ವಿಜ್ಞಾನ ಸಂಸ್ಥೆ 'ನಿಯಾಸ್'ನಲ್ಲಿ ಪುರಾತತ್ವತಜ್ಞ.

ಆಗಿದ್ದೇನೆಂದರೆ, ಮನುಷ್ಯರ ತಳಿಗುಣ ಶೋಧನೆಗೆಂದು ಒಂದಿಷ್ಟು ಹೊಸ ಯಂತ್ರಗಳನ್ನು ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯ ತರಿಸಿಕೊಳ್ಳುತ್ತಿದೆ ಎಂದು ದಿಲ್ಲಿಯ ಪತ್ರಿಕೆಯೊಂದು ಜೂನ್ 1ರಂದು ವರದಿ ಮಾಡಿತು. ವಿಜ್ಞಾನ ತಂತ್ರಜ್ಞಾನ ಇಲಾಖೆಯ ಬದಲು ಸಂಸ್ಕೃತಿ ಸಚಿವಾಲಯಕ್ಕೆ ತಳಿಶೋಧದ ಯಂತ್ರಗಳೇಕೆ ಎಂದು ಮಾಧ್ಯಮಗಳು ತನಿಖೆಗೆ ಇಳಿದವು. ಭಾರತೀಯರ ಜನಾಂಗೀಯ ಲಕ್ಷಣಗಳನ್ನು ಪತ್ತೆಹಚ್ಚಲೆಂದು ಪ್ರೊ. ವಸಂತ ಶಿಂದೆ ಅವರ ಶಿಫಾರಸಿನ ಮೇರೆಗೆ ಡಿಎನ್ಎ ಪ್ರೊಫೈಲಿಂಗ್ ಯಂತ್ರಗಳನ್ನು ತರಿಸಲು ಸಚಿವಾಲಯ ಹೊರಟಿದೆ ಎಂದು 'ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್' ವರದಿ ಮಾಡಿತು.

ಅಷ್ಟಾಗಿದ್ದೇ ತಡ, ಸರ್ಕಾರದ ಈ ಸನ್ನಾಹವನ್ನು ವಿರೋಧಿಸಿ ದೇಶದ ಹೆಸರಾಂತ 120 ವಿಜ್ಞಾನಿಗಳು, ಇತಿಹಾಸಕಾರರು ಮತ್ತು ಸಮಾಜವಿಜ್ಞಾನಿಗಳು ಒಂದು ಜಂಟಿ ಹೇಳಿಕೆ ನೀಡಿದರು: 'ಯಾರು ಮೇಲು, ಯಾರು ಕೀಳು ಎಂಬುದನ್ನು ಪತ್ತೆ ಹಚ್ಚಬೇಕೆನ್ನುವ ಇಂಥ ಅಸಂಬದ್ಧ ಮತ್ತು ಅಪಾಯಕಾರಿ ಸಂಶೋಧನೆಯನ್ನು ಕೈಗೊಂಡರೆ ಸಮಾಜದ ಶಾಂತಿಯನ್ನು ಕದಡಿದಂತಾಗುತ್ತದೆ; ಜನಾಂಗೀಯ ಸಂಶೋಧನೆಗೆ ಕೈ ಹಾಕಬೇಡಿ' ಎಂಬ ಅರ್ಥದ ಹೇಳಿಕೆ ಇವರದ್ದಾಗಿತ್ತು. ಮುಂಬೈ, ಕೋಲ್ಕತ್ತ, ದಿಲ್ಲಿ, ಬೆಂಗಳೂರು, ಸೋನೆಪತ್- ಹೀಗೆ ದೇಶದ ಪ್ರತಿಷ್ಠಿತ ವಿಜ್ಞಾನ ಕೇಂದ್ರಗಳ ತಜ್ಞರು ಒಟ್ಟಾಗಿ ದನಿ ಎತ್ತಿದ್ದೇ ತಡ, ಪ್ರೊ. ಶಿಂದೆ ತಾನು ಜನಾಂಗೀಯ ಗುಣಪತ್ತೆಗೆಂದು ಈ ಯಂತ್ರಗಳ ಶಿಫಾರಸು ಮಾಡಿಲ್ಲ ಎಂದರು. ಸಂಸ್ಕೃತಿ ಇಲಾಖೆಯೂ ಧಿಗ್ಗನೆದ್ದು ಮಾಧ್ಯಮಗಳ 'ತಪ್ಪು' ವರದಿಯನ್ನು ಖಂಡಿಸಿತು. ಡಿಎನ್ಎ ಯಂತ್ರಗಳನ್ನು ತರಿಸುವಲ್ಲಿ ಜನಾಂಗೀಯ ಶ್ರೇಷ್ಠತೆಯನ್ನು ಹುಡುಕುವ ಉದ್ದೇಶ ಇಲ್ಲವೆಂದು ಹೇಳಿತು. ಹಾಗಿದ್ದರೆ ಯಾವ ಉದ್ದೇಶಕ್ಕೆ ಇವನ್ನು ತರಿಸಲಾಗುತ್ತಿದೆ ಎಂಬ ವಿವರಣೆಯನ್ನು ಮಾತ್ರ ನೀಡಲಿಲ್ಲ.

ಜನಾಂಗೀಯ ಶ್ರೇಷ್ಠತೆಯ ಪ್ರಶ್ನೆ ಬಂದಾಗಲೆಲ್ಲ ವಿಜ್ಞಾನಿಗಳು ಮತ್ತು ಪ್ರಾಜ್ಞರು ಹಾವು ತುಳಿದಂತೆ ಬೆಚ್ಚುತ್ತಾರೆ. ಏಕೆಂದರೆ ತಳಿ ಶ್ರೇಷ್ಠತೆಯ ಭ್ರಮೆಯಿಂದಾಗಿಯೇ ನಾತ್ಸಿ ಜರ್ಮನಿಯಲ್ಲಿ ಆರು ಲಕ್ಷಕ್ಕೂ ಹೆಚ್ಚು ಯಹೂದ್ಯರ ನರಮೇಧ ನಡೆದಿತ್ತು. ಅದಕ್ಕೂ ಮೊದಲು, 1920ರ ಆಜೂಬಾಜಿನಲ್ಲಿ 'ಯೂಜೆನಿಕ್ಸ್' ಹೆಸರಿನಲ್ಲಿ ಶುದ್ಧತಳಿಯ ಮಕ್ಕಳನ್ನು ಪಡೆಯಬೇಕೆಂಬ ಹುಚ್ಚು ಅಮೆರಿಕದಲ್ಲೂ ಆವರಿಸಿತ್ತು. ಈ ಹಪಹಪಿಗೆ ಕೆಲಕಾಲ ವಿಜ್ಞಾನಿಗಳೂ ತಪ್ಪು ಹೆಜ್ಜೆ ಇಡುವಂತಾಗಿತ್ತು. ಆದರೆ ವಿಜ್ಞಾನದ ವಿಶೇಷ ಏನೆಂದರೆ, ಅದು ತನ್ನ ತಪ್ಪನ್ನು ತಾನು ತಿದ್ದಿಕೊಳ್ಳುತ್ತ ಸಾಗುತ್ತದೆ. 1950ರ ದಶಕದ ನಂತರ ತಳಿವಿಜ್ಞಾನ ವಿಕಾಸವಾಗುತ್ತ ಬಂದಂತೆ, ಇಡೀ ಮಾನವ ಜನಾಂಗ ಒಂದೇ ಎಂಬುದು ಗೊತ್ತಾಯಿತು. ಮನುಷ್ಯರ ಸಂಪೂರ್ಣ ತಳಿನಕ್ಷೆಯನ್ನು ರೂಪಿಸಿದ ಮೇಲೆ, ನಾಗರಿಕತೆಯ ಕೆಲವು ಭಿನ್ನತೆಗಳನ್ನು ಗುರುತಿಸಬಹುದೇ ವಿನಾ 'ಜನಾಂಗೀಯ' (race) ವೈವಿಧ್ಯ ಎಂಬುದು ಇಲ್ಲವೇ ಇಲ್ಲವೆಂದೂ ಜಗತ್ತಿನ ಎಲ್ಲರ ರಕ್ತದಲ್ಲೂ ಆಫ್ರಿಕನ್ ತಳಿಗುಣವೇ ಇದೆಯೆಂದೂ ವಿಜ್ಞಾನ ಜಗತ್ತು ಒಪ್ಪಿಕೊಂಡಿದೆ.

ಹಾಗಿದ್ದರೆ ಏಕೆ ಡಿಎನ್ಎ ಪ್ರೊಫೈಲ್ ಸಲಕರಣೆಗಳ ಖರೀದಿ? ಅದಕ್ಕೆ ಹಿನ್ನೆಲೆ ಹೀಗಿದೆ: ಭಾರತದ ವಿದ್ವಜ್ಜನರಲ್ಲಿ ಎರಡು ಗುಂಪುಗಳಿವೆ: ವೇದಗಳು, ಯಜ್ಞ-ಯಾಗ, ರಥ-ಕುದುರೆ ಮತ್ತು ಅಸ್ತ್ರಶಸ್ತ್ರಗಳ ಜ್ಞಾನಪರಂಪರೆ ಹುಟ್ಟಿದ್ದೇ ನಮ್ಮಲ್ಲಿ ಎಂದು ವಾದಿಸುವ ಸನಾತನಿಗಳ ಒಂದು ಗುಂಪು; ಇವರದ್ದು, ಜಗತ್ತಿನ ಅತ್ಯಂತ ಪುರಾತನ ಸಂಸ್ಕೃತಿ ಪರಂಪರೆ ನಮ್ಮದೆಂದು ಬಿಂಬಿಸುವ ವರ್ಗ. ಇನ್ನೊಂದು ಗುಂಪಿನ ವೈಜ್ಞಾನಿಕ ಅಧ್ಯಯನದ ಪ್ರಕಾರ ಅದು ಹಾಗಲ್ಲ; ಆಫ್ರಿಕಾ ಮೂಲದಿಂದ ಹೊರಟ ಒಂದು ಕವಲಿನ ಆದಿಜನರು 65 ಸಾವಿರ ವರ್ಷಗಳೀಚೆ ಮೂರು ಅಥವಾ ನಾಲ್ಕು ಅಲೆಗಳಲ್ಲಿ ಮತ್ತೆ ಮತ್ತೆ ಭಾರತ, ಬರ್ಮಾ, ಇಂಡೊನೇಷ್ಯಾ, ಆಸ್ಟ್ರೇಲಿಯಾ ಕಡೆ ಸಾಗಿ ನೆಲೆಸಿದ್ದಾರೆ. ಸುಮಾರು 4000 ವರ್ಷಗಳ ಈಚಿನ ಕೊನೆಯ ಅಲೆಯಲ್ಲಿ ಬಂದವರು (ಆರ್ಯರು) ತಮ್ಮ ಜತೆ ಸಂಸ್ಕೃತಜನ್ಯ ಭಾಷೆಯನ್ನೂ ರಥಾಶ್ವಗಳನ್ನೂ ತಂದಿದ್ದಾರೆ. ಹೆಚ್ಚಿನ ಪಾಲು ಉತ್ತರ ಭಾರತದಲ್ಲಿ ನೆಲೆಸಿ, ಕ್ರಮೇಣ ಅವರು ದೇಶದಲ್ಲೆಲ್ಲೆಡೆ ಬೆರತು ಹೋಗಿದ್ದಾರೆ. ಹರಿಯಾಣದ ರಾಖೀಗಢಿ ಎಂಬಲ್ಲಿ ಸಿಕ್ಕ 5000 ವರ್ಷಗಳ ಹಿಂದಿನ ನಾಗರಿಕತೆಯ ಕುರುಹುಗಳಲ್ಲಿ ಮತ್ತು ಮಹಿಳೆಯ ಮೂಳೆಯಲ್ಲಿ ಸಿಕ್ಕ ಡಿಎನ್ಎಯಲ್ಲಿ ಈ ಯಾವ ಆರ್ಯನ್ ಲಕ್ಷಣಗಳಿಲ್ಲ ಎಂಬುದನ್ನು 111 ವಿಜ್ಞಾನಿಗಳ ಅಂತರರಾಷ್ಟ್ರೀಯ ತಂಡವೊಂದು ಮಧ್ಯ ಏಷ್ಯಾದಲ್ಲಿ ಸಿಕ್ಕ 523 ಅಸ್ಥಿಪಂಜರಗಳ ಡಿಎನ್ಎ ಜೊತೆ ತಾಳೆ ನೋಡಿ 2019ರಲ್ಲಿ ಘೋಷಿಸಿದೆ. ವೇದ-ರಾಮಾಯಣಗಳೆಲ್ಲ ಐದಾರು ಸಾವಿರ ವರ್ಷಗಳ ಹಿಂದಿನವಾಗಿದ್ದರೆ, ಅವು ಆಚೆ ಎಲ್ಲೋ ಸೃಷ್ಟಿಯಾಗಿದ್ದು ಎಂಬ ಧ್ವನಿ ಅವರದ್ದಾಗಿತ್ತು.

ಇದರಿಂದ ಸನಾತನವಾದಿ ಗುಂಪಿಗೆ ಹಿನ್ನಡೆ ಉಂಟಾಗಿದೆ. ಹೇಗಾದರೂ ಮಾಡಿ ಇವರು ವೇದಕಾಲೀನ ಭಾರತದ ಉಜ್ವಲ ಚರಿತ್ರೆ ಕುರಿತ ವೈಜ್ಞಾನಿಕ ಸಾಕ್ಷ್ಯಗಳನ್ನು ಸಂಗ್ರಹಿಸಬೇಕಾಗಿದೆ. ಮೂಲತಃ ಭಾರತದಿಂದಲೇ ಹೊರ ಜಗತ್ತಿಗೆ ಜ್ಞಾನಧಾರೆ ಹರಿದು ಸಾಗಿದೆ ಎಂಬುದನ್ನು ಇವರು ತೋರಿಸಬೇಕಾಗಿದೆ. ಈ ಗುಂಪಿಗೆ ಸೇರಿದ ಪುರಾತತ್ವ ತಜ್ಞ ಪ್ರೊ. ವಸಂತ ಶಿಂದೆ (ಇವರು ಡಿಎನ್ಎ ತಜ್ಞ ಅಲ್ಲ) ಮತ್ತು ಲಖನೌನ ಸೂಕ್ಷ್ಮಜೀವವಿಜ್ಞಾನಿ ಡಾ. ನೀರಜ್ ರಾಯ್ ಇಬ್ಬರೂ 111 ವಿಜ್ಞಾನಿಗಳ ನಿಲುವಿಗೆ ವಿರುದ್ಧವಾಗಿ, 2019ರ ಮಾಧ್ಯಮ ಗೋಷ್ಠಿಯಲ್ಲಿ, ಭಾರತವೇ ಆರ್ಯರ ಮೂಲವೆಂಬ ಹೇಳಿಕೆ ನೀಡಿದ್ದರು (ತಮಾಷೆ ಏನೆಂದರೆ, ಆರ್ಯರು ಇಲ್ಲಿನವರಲ್ಲ ಎಂದು ಪ್ರತಿಪಾದಿಸುವ ವೈಜ್ಞಾನಿಕ ಪ್ರಬಂಧದ ಸಹಲೇಖಕರ ಪಟ್ಟಿಯಲ್ಲಿ ಪ್ರೊ. ಶಿಂದೆಯ ಹೆಸರೂ ಇದೆ! ಆದರೆ ಬೆಳಗಾಗುವುದರೊಳಗೆ ಇವರು ಪಕ್ಷಾಂತರಿ ಆಗಿದ್ದರು). ನಂತರದ ಅನೇಕ ಸಂದರ್ಶನಗಳಲ್ಲೂ ಈ ಇಬ್ಬರು ತಜ್ಞರು ತಮ್ಮ ವಾದವೇ ಶೀಘ್ರದಲ್ಲಿ ಗೆಲ್ಲಲಿದೆ ಎಂದು ಹೇಳುತ್ತಿರುವುದನ್ನು ಯುಟ್ಯೂಬ್‌ನಲ್ಲಿ ನೋಡಬಹುದು. ಹೇಗೂ ದಕ್ಷಿಣ ಭಾರತದ ಅನೇಕ ಕಡೆ (ಕರ್ನಾಟಕದ ಪಿಕ್ಲಿಹಾಳ, ತೆಲಂಗಾಣದ ನಲ್ಗೊಂಡ, ಖಮ್ಮಂ ಮತ್ತು ಆಂಧ್ರದ ಏಲೇಶ್ವರಂನಲ್ಲಿ) ಉತ್ಖನನ ನಡೆಯುತ್ತಿದೆ. ಅಲ್ಲೇನಾದರೂ ಶುದ್ಧ ಭಾರತೀಯ (ಅಂದರೆ ಅಪ್ಪಟ ವೇದಕಾಲೀನ) ಡಿಎನ್ಎ ಸಿಗುತ್ತದೋ ನೋಡುವ ಆಸೆ ಇವರದು. ಅದಕ್ಕೇ ಹೊಸ ಡಿಎನ್ಎ ಯಂತ್ರಗಳು ಬೇಕಾಗಿರಬಹುದು.

ವೇದಕಾಲೀನ ಜ್ಞಾನ ಪರಂಪರೆ ಇಡೀ ಮನುಕುಲಕ್ಕೆ ಹೆಮ್ಮೆಯದು ಹೌದು. ಆದರೆ ಅದು ಭಾರತದಲ್ಲೇ ಅರಳಿತೋ ಅಥವಾ ವಾಯವ್ಯದಿಂದ ಬಂತೋ- ಅದು ನಮ್ಮದೆಂಬ ಅತಿರಂಜಿತ ಬಣ್ಣ ಬ್ಯಾಗಡೆ ಬೇಡವೆಂದು ಅನೇಕ ವಿಜ್ಞಾನಿಗಳು ಹೇಳುತ್ತಲೇ ಬಂದಿದ್ದಾರೆ. ಪ್ಲಾಸ್ಟಿಕ್ ಸರ್ಜರಿ, ಟೆಸ್ಟ್‌ಟ್ಯೂಬ್ ಬೇಬಿ, ವಿಮಾನದಂಥ ಅತಿಶಯಗಳ ಪಟ್ಟಿಯಲ್ಲಿ ವೇದಗಣಿತ ಕೂಡ ಸೇರಿದೆ. ವೇದದಲ್ಲಿ ಇಲ್ಲದ ವಿಶೇಷಗಳನ್ನು 1950ರ ದಶಕದಲ್ಲಿ ಪುರಿಯ ಶಂಕರಾಚಾರ್ಯ ಭಾರತೀ ಕೃಷ್ಣತೀರ್ಥರು ಸಂಸ್ಕೃತ ಶ್ಲೋಕಗಳ ಮೂಲಕ ಸೇರಿಸಿದ್ದಾರೆಂದು ಹೆಸರಾಂತ ಗಣಿತ ತಜ್ಞ ಎಸ್.ಜಿ.ದಾನಿಯವರು ಬಲವಾಗಿ ಪ್ರತಿಪಾದಿಸುತ್ತ ಬಂದಿದ್ದಾರೆ. ಆರ್ಯಭಟ, ಬ್ರಹ್ಮಗುಪ್ತ, ಭಾಸ್ಕರ, ಮಾಧವರ ಕೊಡುಗೆಗಳೆಲ್ಲ ಶ್ಲಾಘನೀಯವೇ ಹೌದಾದರೂ, ಗತಕಾಲದ ಪರಂಪರೆಯ ಉತ್ಪ್ರೇಕ್ಷೆ ಬೇಡವೆಂದು ಪ್ರೊ. ದಾನಿ ಹೇಳುತ್ತಾರೆ.

ಈಗ ಪ್ರೊ. ಶಿಂದೆಯ ವಿಚಾರಕ್ಕೆ ಮತ್ತೆ ಬರೋಣ. ಅವರ ಎಡಬಿಡಂಗಿ ನಿಲುವು ಮತ್ತು ಶ್ರೇಷ್ಠತೆಯ ಪೂರ್ವಗ್ರಹ ಇಡೀ ವಿಜ್ಞಾನಕ್ಕೇ ಅಪಚಾರವೆಂದು ಇನ್ನೊಬ್ಬ ಹೆಸರಾಂತ ವಿಜ್ಞಾನಿ ಡಾ. ಸಿ.ಪಿ. ರಾಜೇಂದ್ರನ್ (ಇವರೂ ಬೆಂಗಳೂರಿನ ನಿಯಾಸ್‌ನಲ್ಲಿ ಪ್ರೊಫೆಸರ್) ಹೇಳುತ್ತಾರೆ. ಜನಾಂಗೀಯ ಶ್ರೇಷ್ಠತೆಯ ಗೀಳಿನ ಹೊಗೆ ಈಗ ಅನೇಕ ರಾಷ್ಟ್ರಗಳಲ್ಲಿ ಮತ್ತೆ ಹೆಡೆಯಾಡುತ್ತಿರುವಾಗ ವಿಜ್ಞಾನಿಗಳು ಅದಕ್ಕೆ ಗಾಳಿ ಹಾಕಬಾರದು ತಾನೆ?

ಚುರುಮುರಿ

ಒನ್, ಟು, ಬಕಲ್ ಮೈ ಶೂ!

• ನಾರಾಯಣ ರಾಯಚೂರ್

ಇದು ಎಫ್.ಎಂ. 'ಐಸ್' ರೇಡಿಯೊ, ಸಖತ್ ಕೋಲ್ಡ್ ಮಗಾ...

ಈಗ ಕೇಳಿ, 'ಪರಮೇಶಿ ಪ್ರೇಮ ಪ್ರಸಂಗ' ಚಿತ್ರದ ಗೀತೆ. ಕೇಳಲು ಸಂದೇಶ ಕಳಿಸಿರುವವರು- ಮಲ್ಲೇಶ್ವರಂನಿಂದ ಮಲ್ಲಿಕಾ, ಬಸವನಗುಡಿಯಿಂದ ಬಬ್ಲೂ, ಗೊರಗುಂಟೆಪಾಳ್ಯದಿಂದ ಗೂಫಿ, ಗಾರ್ಗಿ ಅವರ ಮನೆಯವರು ಹಾಗೂ ಅವರ ಪಕ್ಕದ ಮನೆಯವರು...

'ಉಪ್ಪಿಲ್ಲ, ಮೆಣಸಿಲ್ಲ, ತರಕಾರಿಯೇನಿಲ್ಲ ಏನ್ಮಾಡಲಿ?...'

ಹ್ಲಾಂ! ಹೊಳೀತು- 'ಶೂ ಇಲ್ಲ, ಸಾಕ್ಸ್ ಇಲ್ಲ, ಬುಕ್ಸಂತೂ ಬಂದಿಲ್ಲ, ಏನ್ಮಾಡಲಿ? ಸ್ಕೂಲಿಗೆ ಹ್ಯಾಗ್ ಹೋಗಲಿ?!' ಪುಟಾಣಿ ಪ್ರಗತಿ ದನಿಗೂಡಿಸಿದಳು.

'ಹಾಗಲ್ಲ ಪುಟ್ಟಾ, ನಾವು ಚಿಕ್ಕವರಾಗಿದ್ದಾಗ ನಮಗೆ 'ಶೂನೂ ಕೊಡ್ತಿರ್ಲಿಲ್ಲ, ಸಾಕ್ಸೂ ಕೊಡ್ತಿರ್ಲಿಲ್ಲ, ಆದರೆ 'ಒನ್, ಟು, ಬಕಲ್ ಮೈ ಶೂ...' ಅಂತ ರೈಮ್ ಹೇಳಲೇಬೇಕಿತ್ತು'.

'ಥ್ರೀ, ಫೋರ್ ಶಟ್ ದಿ ಡೋರ್ ನನಗೂ ಗೊತ್ತು. ಈಗ ನೀವು ಸ್ವಲ್ಪ ಶಟ್ ದಿ ಮೌತ್ ಆಗ್ತೀರಾ?'- ಯಜಮಾನ್ತಿಯ ಗುಡುಗು.

'ಸರ್ಕಾರ 132 ಕೋಟಿ ರೂಪಾಯಿ ಬಿಡುಗಡೆ ಮಾಡಿದೆಯಂತೆ. ಶೂ, ಸಾಕ್ಸು ಬಂದ್ಬಿಡ್ತಾವಂತೆ! ಫ್ರಂಟ್ ಪೇಜಲ್ಲೇ ಹಾಕಿದಾರೆ'- ಪಕ್ಕದ್ಮನೆ ಪದ್ಮಿನಿ ಪೇಪರ್ ಸಮೇತ ಬಂದು 'ನಮ್ಮ ಮನೇಲಿ ಕರೆಂಟ್ ಇಲ್ಲ, ಸ್ವಲ್ಪ ಮಿಕ್ಸಿ ಮಾಡ್ಕೊಬಹುದಾ?' ಅಂದ್ರು.

'ಏನು ಬಿಡುಗಡೆನೋ?! ಸಾಕಾಗಿ ಹೋಗಿದೆ ಈ ಸ್ಕೂಲ್ ಸಹವಾಸ. ಶೂಗಳು ಮಕ್ಕಳ ಕೈ... ಅಲ್ಲಲ್ಲ... ಕಾಲು ಸೇರೋವರೆಗೂ ಇನ್ನೂ ಏನೇನೊ?'

'ಸರಿಯಾಗಿ ಹೇಳಿದ್ರಿ. ಯಾರಿಗೆ ಯಾವ ಬಣ್ಣದ ಸಾಕ್ಸ್ ಕೊಟ್ಟರೆ ಲೇಸು, ಯಾವ ಶೇಪಿನ ಶೂ, ಯಾವ ಪ್ರಾಣಿ ಲೆದರ್‌ನಿಂದ ಮಾಡಿದ್ದು, ಇದನ್ನ ಸ್ಟಡಿ ಮಾಡೋಕೆ ಸಮಿತಿ, ವರದಿ ಬರೋ ಅಷ್ಟರಲ್ಲಿ ಮಕ್ಕಳ ಪುಟಾಣಿ ಪಾದಗಳು ಸವೆದು ಕೆಟ್ಟು ಕೆರ ಹಿಡಿದಿರ್ತಾವೇನೊ!'- ಮಿಕ್ಸಿ ಕೆಲಸ ಮುಗಿಸಿಕೊಂಡು ಹೋಗ್ತಾ ಗೊಣಗಿದ್ರು ಪದ್ಮಿನಿ.

'ಪ್ರಗತೀ... ಸ್ಕೂಲ್ ಟೈಮ್ ಆಯ್ತು ಬರಲ್ವಾ?' ಕ್ರಾಂತಿ ಕೂಗಿದ್ಲು.

ಬರಿಗಾಲಲ್ಲಿ, ಮಂದಗತಿಯಲ್ಲಿ ಮುಂದೆ ಹೆಜ್ಜೆ ಇಟ್ಟಳು ಪ್ರಗತಿ!

ಸಂಗತ

ಸರಳ ನಡೆ: ಶ್ರೇಷ್ಠತೆಯ ರೂಪಕ

ಬಹುಮುಖ್ಯ ಮೌಲ್ಯವಾಗಿ ಸರಳತೆಯನ್ನು ಆವಾಹಿಸಿಕೊಳ್ಳುವುದು ವಿವೇಕ

• ಬಿ.ಎಸ್.ಭಗವಾನ್

ಮದುವೆ ಮನೆಯಲ್ಲಿ ನೆಂಟರೊಡನೆ ಹರಟುತ್ತಿದ್ದೆ. ಲಡ್ಡು ಘಮ ಘಮ ಪಾಕಶಾಲೆಯತ್ತ ಎಳೆದೊಯ್ದಿತು. ಕುತೂಹಲದಿಂದ 'ತಯಾರಿಕೆ ಹೇಗೆ?' ಎಂದು ವಿಚಾರಿಸಿದಾಗ ಬಾಣಸಿಗರ ಉತ್ತರ: 'ಛೆ! ಬಹು ತ್ರಾಸ, ನಿಮಗಾಗದು ಬಿಡಿ'. 'ಪಾಕ ಇಳಿಸೋದು ಬಹಳ ಸರಾಗ, ಯಾರಾದ್ರೂ ಲಡ್ಡು ಸಿದ್ಧ ಮಾಡಬಹುದು' ಅಂತ ಆತ ಹೇಳಿದ್ದರೆ ಅದೆಷ್ಟು ಚೆನ್ನಾಗಿರುತ್ತಿತ್ತು.

ನಾವು ಅದೆಷ್ಟೋ ಸನ್ನಿವೇಶಗಳಲ್ಲಿ ಸರಳತೆಗಿಂತ ಸಂಕೀರ್ಣತೆಯೇ ಶ್ರೇಷ್ಠ ಎಂಬ ನಿರ್ಧಾರಕ್ಕೆ ಬರುತ್ತೇವೆ. ಕಠಿಣವು ಘನತೆಯ ಪ್ರತೀಕ ಎಂಬುದೇ ನಮ್ಮ ಭಾವನೆ. 'ಬದುಕು ಸರಳ, ಆದರೆ ಅದನ್ನು ಸಂಕೀರ್ಣಗೊಳಿಸುವವರು ನಾವೇ' ಎಂದು ಚೀನಾದ ತತ್ವಜ್ಞಾನಿ ಕನ್‌ಫ್ಯೂಷಿಯಸ್ ಉದ್ಗರಿಸಿ ಎರಡೂವರೆ ಸಹಸ್ರಮಾನಗಳು ಸಂದಿವೆ. ಅವನ ಈ ನುಡಿಯು ಮಾಹಿತಿ ಸುನಾಮಿಯ ಈ ಯುಗದಲ್ಲಂತೂ ಹೆಚ್ಚು ಪ್ರಸ್ತುತ.

ಬಹುತೇಕ ಎಲ್ಲದರಲ್ಲೂ ಅನಗತ್ಯವಾಗಿ ಕಷ್ಟ, ಗೌಜು ಕಾಣುತ್ತ ವಿನಾಕಾರಣ ಕ್ಲಿಷ್ಟತೆಗೆ ರಂಗೋಲಿ ಹಾಕಿರುತ್ತೇವೆ. ವಾಸ್ತವವಾಗಿ ಪ್ರಕೃತಿಯಲ್ಲಿ ಸಂಕೀರ್ಣತೆ ಇಲ್ಲ. ತುಸು ಆಸ್ಥೆ ವಹಿಸಿದರೆ ಅದರ ಅನೇಕ ವಿದ್ಯಮಾನಗಳು ಕಾರ್ಯಕಾರಣ ಸಂಬಂಧಮುಖೇನ ದಕ್ಕುತ್ತವೆ, ಅರ್ಥವಾಗುತ್ತವೆ. ಸಂಕೀರ್ಣತೆ ಇರುವುದು ನಮ್ಮ ಮನಸ್ಸುಗಳಲ್ಲಿ. ಹಾಗಾಗಿ ಸರಳತೆಯನ್ನು ಒಂದು ಬಹುಮುಖ್ಯ ಮೌಲ್ಯವಾಗಿ ಆವಾಹಿಸಿಕೊಳ್ಳುವುದು ವಿವೇಕ.

ವಿಶ್ವಮಾನ್ಯ ವಿಜ್ಞಾನಿ ನ್ಯೂಟನ್‌ಗೂ ಸರಳತೆಯ ಕಿಮ್ಮತ್ತು ಕೈಗೂಡದೆ ನಗೆಪಾಟಲಾಗಿತ್ತು. ಒಂದು ಉದಾಹರಣೆಯಂತೂ ಬಲು ಸ್ವಾರಸ್ಯಕರ. ನ್ಯೂಟನ್ ಪ್ರಾಣಿಪ್ರಿಯ. ಒಮ್ಮೆ ಆಕಸ್ಮಿಕವಾಗಿ ಅವರ ಕೊಠಡಿಗೆ ಬಂದಿದ್ದ ಮಿತ್ರನೊಬ್ಬನಿಗೆ ಕಂಡಿದ್ದೇನು? ಗೋಡೆಯಲ್ಲಿನ ಎರಡು ಕಿಂಡಿಗಳು- ಒಂದು ದೊಡ್ಡದು, ಇನ್ನೊಂದು ಸಣ್ಣದು. ಚಿಕ್ಕದೇಕೆ? ದೊಡ್ಡ ಕಿಂಡಿಯ ಮೂಲಕವೇ ಬೆಕ್ಕು, ನಾಯಿ ಎರಡೂ ಓಡಾಡಬಹುದಲ್ಲ ಎಂದು ಆಪ್ತ ಹೇಳಿದಾಗಲೇ ವಿಜ್ಞಾನಿಗೆ ಸರಾಗದ ಹಿರಿಮೆ ಅರಿವಾದದ್ದು!

ಸರಳತೆಯು ನಿರ್ದೇಶಿಸುವುದು ಬಡತನವನ್ನಲ್ಲ, ಬದಲಿಗೆ ಇರುವುದನ್ನು, ಕಿರಿಯದನ್ನು ಮೆಚ್ಚುವ ಮನಃಸ್ಥಿತಿಯನ್ನು. ಗೊತ್ತುಗುರಿಯಿಲ್ಲದೆ ಬೇಕು ಬೇಡಗಳು ಅನಿವಾರ್ಯವೆಂಬ ಭ್ರಮೆ ನಮ್ಮನ್ನಾಳಿ ಸರಳತೆ ಸೊರಗುತ್ತದೆ. ಭಾವೋದ್ವೇಗ ಮತ್ತು ಅತಿಸಮೃದ್ಧಿಯಿಂದ ಹೊರಬಂದು ಆಳ, ನಿರಾಳ ಬದುಕನ್ನು ಆತುಕೊಳ್ಳುವುದೇ ಸರಳತೆ. ದುಂದುವ್ಯಯ, ಆಡಂಬರ, ಹುಸಿ ಹೆಮ್ಮೆ ಪರಿತಾಪದ ಬೇರುಗಳು. ಸರಳತೆಯನ್ನು ನಮ್ಮ ದಿನಮಾನಗಳ ಶೈಲಿಯಾಗಿಸಿಕೊಳ್ಳಬೇಕಿದೆ. 'ಇದ್ರೆ ಹೋಳಿಗೆ, ಇಲ್ದಿದ್ರೆ ಜೋಳಿಗೆ' ಗಾದೆಯು ಕೊಳ್ಳುಬಾಕ ಪ್ರವೃತ್ತಿಗೆ ಕನ್ನಡಿ ಹಿಡಿಯುವುದು!

ಜನಪದರು ತಮ್ಮ ವ್ಯಾಪಕ ಅನುಭವಗಳಿಂದಲೇ ನಯ, ನಾಜೂಕು ಸಾಧಿಸಿದವರು. ಗಾಂಧೀಜಿ ಅವರ ನಡೆ, ನುಡಿ, ರೀತಿ, ನೀತಿ, ಒಟ್ಟಾರೆ ಅವರು ಸಾಂಪ್ರತಗೊಳಿಸಿಕೊಂಡ ಬದುಕು ಸಾರ್ವಕಾಲಿಕ, ಸರ್ವಸಮ್ಮತ ಮಾದರಿ. ಸರಳಜೀವನ, ಉದಾತ್ತ ಚಿಂತನೆಯು ಗಾಂಧಿ ಮಾರ್ಗ. ಸಹಜತೆ, ನೇರ ನಡೆನುಡಿಯಿಂದ ನಾವು ದೂರ ಸರಿದಂತೆ ಮಾತಿನಲ್ಲಿ ನಯ, ವಿನಯ ಬೇರ್ಪಡುವುದು. ಪರೀಕ್ಷೆ, ಸಂದರ್ಶನಗಳಲ್ಲಿ ತಾನೆ ಏನು? ಪ್ರಶ್ನೆಗಳು ಸುತ್ತಿ ಬಳಸಿದಷ್ಟೂ ಪರೀಕ್ಷಾರ್ಥಿಗಳು ಗೊಂದಲಕ್ಕೆ ಒಳಗಾಗುತ್ತಾರೆ.

ಜಗತ್ತಿನ ಬಹುಮುಖ ಪ್ರತಿಭಾವಂತನೆಂದು ಪ್ರಸಿದ್ಧನಾದ ಅಮೆರಿಕದ ಹೆನ್ರಿ ಡೇವಿಡ್ ಥೋರೊ ಜನಿಸಿದ್ದು 1817ರಲ್ಲಿ. ಸರಳತೆಯ ಸೊಗಡು, ಸೊಬಗನ್ನು ಸಾರಿದ ದಾರ್ಶನಿಕ. 'ನಮ್ಮ ಬದುಕನ್ನು ಸರಳಗೊಳಿಸಿದರೆ ಜಗತ್ತಿನ ನಿಯಮಗಳು ಸರಳಗೊಳ್ಳುತ್ತವೆ' ಎಂಬ ಅವನ ನುಡಿ ಮನನೀಯ. ವಿಶ್ವದೆಲ್ಲೆಡೆ 'ರಾಷ್ಟ್ರೀಯ ಸರಳತೆಯ ದಿನ' ಎಂದು ಪರಿಗಣಿತವಾಗಿರುವ ಆತನ ಜನ್ಮದಿನ (ಜುಲೈ 12) ಆಚರಣೆ ಇತ್ತೀಚೆಗಷ್ಟೇ ಮುಗಿದಿದೆ. ಪರಿಸರ ಜಾಗೃತಿಯ ಸಂದೇಶವೂ ಆ ಸಡಗರಕ್ಕೆ ಜೊತೆಯಾಗಿ 'ಸರಳತೆ, ಪ್ಲಾಸ್ಟಿಕ್‌ರಹಿತ ದಿನ' ಎಂದಾಗಿದೆ.

ರೈಲು ಬೋಗಿಯೊಳಗಿನ ಆ ಸೂಚನಾ ಫಲಕ ಆಗಾಗ ಕಣ್ಮುಂದೆ ಬರುತ್ತದೆ: 'ಕಡಿಮೆ ಲಗೇಜಿದ್ದರೆ ಹೆಚ್ಚು ಅನುಕೂಲ, ಪ್ರಯಾಣವೂ ಸುಖಕರ'. ಪ್ರಯಾಣಿಕರಿಗೆ ಈ ಒಕ್ಕಣೆ ಒಂದು ಕರಾರೆನ್ನಿಸುವುದೇ ಇಲ್ಲ. ಬದುಕೆಂಬ ಪಯಣಕ್ಕೇನೆ ಅತಿಯಾಸೆ ಒಯ್ಯದೆ, ಸಂತೋಷದಿಂದಿರಿ ಎಂಬ ಅಮೂಲ್ಯ ದರ್ಶನವನ್ನು ಮಾಡಿಸುತ್ತದೆ.

ಸಂಪನ್ಮೂಲಗಳ ಪ್ರಜ್ಞಾಪೂರ್ವಕ ಬಳಕೆಯ ಉತ್ಪನ್ನವೇ ಇಂಗಾಲದ ಕನಿಷ್ಠತಮ ವಿಸರ್ಜನೆ. ಸೊಪ್ಪು, ತರಕಾರಿ ತರಲೂ ಕಾರು, ಸ್ಕೂಟರಿನ ಅವಲಂಬನೆ ಸರಳತೆಯನ್ನು ನಾವೆಷ್ಟು ಮೂಲೆಗುಂಪಾಗಿಸುತ್ತೇವೆ ಎನ್ನಲು ಒಂದು ನಿದರ್ಶನ ಮಾತ್ರ. ಗಮನಾರ್ಹವೆಂದರೆ, ನೆದರ್‌ಲ್ಯಾಂಡ್ಸ್, ಫ್ರಾನ್ಸ್‌ನಲ್ಲಿ 'ವಿಮಾನವೇಕೆ, ಕೇವಲ ಎರಡೂವರೆ ತಾಸುಗಳಲ್ಲಿ ನಿಮ್ಮ ಊರು ತಲುಪಿಸುವ ರೈಲುಂಟಲ್ಲ' ಅಂತ ಖಡಕ್ಕಾಗಿ ಪ್ರಭುತ್ವವು ಜನರನ್ನು ತರಾಟೆಗೆ ತೆಗೆದುಕೊಂಡಿದೆ. ಕಡಿಮೆ ದೂರ ಹಾರುವ ವಿಮಾನಗಳನ್ನು ಅಲ್ಲಿ ರದ್ದುಪಡಿಸಲು ಚಿಂತಿಸಲಾಗುತ್ತಿದೆ.

ಅಂದಹಾಗೆ ಯುರೋಪಿನ ಕೆಲ ದೇಶಗಳಲ್ಲಿ ನಿಯಮಿತವಾಗಿ 'ಕಾರ್‌ಲೆಸ್ ಡೇ' ಆಚರಣೆಯಿದೆ. ಜಕಾರ್ತ, ಇಂಡೊನೇಷ್ಯಾ, ನ್ಯೂಜಿಲೆಂಡ್, ಅಮೆರಿಕ ಸೇರಿದಂತೆ ಹಲವು ದೇಶಗಳಲ್ಲಿ ಕಾರುಗಳ ಸಂಚಾರಕ್ಕೆ ನಿರ್ದಿಷ್ಟ ದಿನಗಳಂದು ಕ್ರಮಬದ್ಧ ನಿಷೇಧಗಳಿವೆ. ಉದ್ದೇಶ ನಿರಾಡಂಬರತೆ, ತನ್ಮೂಲಕ ಪರಿಯಾವರಣದ ಮೇಲೆ ಅನಗತ್ಯ ಒತ್ತಡಕ್ಕೆ ಅಷ್ಟಾದರೂ ತಡೆ.

ಮಿಕ್ಸರ್, ಗ್ರೈಂಡರ್, ಫ್ರಿಜ್ ವಗೈರೆ ಪರಿಕರಗಳ ಸಂಖ್ಯೆ ಮಿತಗೊಳಿಸುವುದು ಸರಿಯೆ. ಆದರೆ ಅದಕ್ಕೂ ಮುಖ್ಯವಾಗಿ ಅವಕ್ಕೆ ವ್ಯಯವಾಗುವ ವಿದ್ಯುತ್ತನ್ನು ಕಡಿಮೆಗೊಳಿಸುವುದು ಮುಖ್ಯವಾಗುತ್ತದೆ.

ವಾಚಕರ ವಾಣಿ

ಕುವೆಂಪು ಸಾಹಿತ್ಯ: ಪ್ರತಿಷ್ಠಾನಕ್ಕಿಲ್ಲ ಹಕ್ಕುಸ್ವಾಮ್ಯ

'ಕುವೆಂಪು ಸಮಗ್ರ ಬರಹ: ಕೈಗೆಟುಕುವಂತಿರಲಿ' ಎಂಬ ಪತ್ರಕ್ಕೆ (ವಾ.ವಾ., ಜುಲೈ 11) ಪ್ರತಿಕ್ರಿಯೆ. ಕುವೆಂಪು ಪ್ರತಿಷ್ಠಾನವು 10 ವರ್ಷಗಳಿಂದ ಕುವೆಂಪು ಸಮಗ್ರ ಸಾಹಿತ್ಯದ ಹತ್ತು ಸಾವಿರ ಪುಟಗಳ 11 ಸಂಪುಟಗಳನ್ನು ಮಾರಾಟ ಮಾಡುತ್ತಿದೆ. 2013ರ ಮೊದಲನೇ ಮುದ್ರಣದಲ್ಲಿ ₹ 4,400 ಮುಖಬೆಲೆ ನಿಗದಿಪಡಿಸಿ, ಕವಿಮನೆ ಕುಪ್ಪಳಿಯಲ್ಲಿ ₹ 3,500ಕ್ಕೆ ಮಾರಾಟ ಮಾಡಲಾಗಿದೆ. 2017ರ ಎರಡನೇ ಮುದ್ರಣವನ್ನು ₹ 5,800 ಮುಖಬೆಲೆಗೆ ಮುದ್ರಿಸಿ ಕವಿಮನೆಯಲ್ಲಿ ₹ 4,000ಕ್ಕೆ, ಲಾಭಾಂಶವೇ ಇಲ್ಲದೆ ಮಾರಾಟ ಮಾಡುತ್ತಿದ್ದೇವೆ. ಕೆಲವೇ ಪ್ರತಿಗಳು ಉಳಿದಿದ್ದು, ಕೊರಿಯರ್ ವೆಚ್ಚ ಸೇರಿಸಿ ಪಾವತಿಸಿದರೆ, ಈಗಲೂ ಮನೆಮನೆಗೆ ತಲುಪಿಸುವ ವ್ಯವಸ್ಥೆ ಇದೆ.

ಕುವೆಂಪು ಪ್ರತಿಷ್ಠಾನಕ್ಕೆ ಕುವೆಂಪು ಸಾಹಿತ್ಯದ ಹಕ್ಕುಸ್ವಾಮ್ಯ ಇರುವುದಿಲ್ಲ. ಕಡಿಮೆ ಬೆಲೆಗೆ ಕೊಡಬೇಕು ಎನ್ನುವ ಉದ್ದೇಶವನ್ನು ನಾವು ಗೌರವಿಸುತ್ತೇವೆ. ಸರ್ಕಾರ ಅದೇ ಉದ್ದೇಶಕ್ಕೆ ನೆರವು ನೀಡಿದರೆ ಅತ್ಯಂತ ಕಡಿಮೆ ಬೆಲೆಗೆ ಮುದ್ರಿಸಿ ಕೊಡಲು ಸಿದ್ಧರಿದ್ದೇವೆ. ಪತ್ರದಲ್ಲಿ ಹೇಳಿರುವಂತೆ, ಕುವೆಂಪು ಸಮಗ್ರ ಸಾಹಿತ್ಯ ಖರೀದಿಸಲು ₹ 12,000 ಬೇಕು ಎನ್ನುವುದು ಬೇರೆ ಪ್ರಕಾಶಕರ ಮುದ್ರಣ ಇರಬಹುದು.

ಕಡಿದಾಳ್ ಪ್ರಕಾಶ್, ಸಮಕಾರ್ಯದರ್ಶಿ, ಕುವೆಂಪು ಪ್ರತಿಷ್ಠಾನ, ಕುಪ್ಪಳಿ

ರದ್ದಾಗಿರುವುದು ಯಾವ ಕಾರಣಕ್ಕೆ?

ವಿವಿಧ ನಿಗಮ, ಮಂಡಳಿ ಮತ್ತು ಪ್ರಾಧಿಕಾರಗಳಿಗೆ ಸೇರಿದ ಅಧ್ಯಕ್ಷರು, ಉಪಾಧ್ಯಕ್ಷರು ಸೇರಿದಂತೆ 52 ಮಂದಿಯ ನಾಮನಿರ್ದೇಶನವನ್ನು ರದ್ದುಗೊಳಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಜುಲೈ 13). ಆದರೆ ಯಾವ ಕಾರಣದಿಂದ ಈ ನೇಮಕ ರದ್ದಾಯಿತು ಎಂಬುದು ಸ್ಪಷ್ಟವಾಗಿಲ್ಲ. ಹೀಗೆ ನಿಗಮ, ಮಂಡಳಿ, ಪ್ರಾಧಿಕಾರಗಳ ಅಧ್ಯಕ್ಷರನ್ನು ಇದ್ದಕ್ಕಿದ್ದಂತೆಯೇ ಬದಲಾಯಿಸುವುದರಿಂದ ಉಂಟಾಗುವ ಕಾರ್ಯಕ್ಷಮತೆಯ ಅಡಚಣೆಗೆ ಹಾಗೂ ಆರ್ಥಿಕ ನಷ್ಟಕ್ಕೆ ಯಾರು ಹೊಣೆ? ಎಲ್ಲವೂ ರಾಜಕೀಯ ಮೇಲಾಟ!

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಪ್ರವಾಸ: ಇರಲಿ ಎಚ್ಚರ

ರಾಜ್ಯದ ಕೆಲವೆಡೆ ಒಂದು ವಾರದಿಂದ ಭಾರಿ ಪ್ರಮಾಣದಲ್ಲಿ ಮಳೆ ಸುರಿಯುತ್ತಿರುವುದರಿಂದ ನದಿ, ಹಳ್ಳ-ಕೊಳ್ಳ, ತೊರೆಗಳು ತುಂಬಿ ಹರಿಯುತ್ತಿವೆ. ಇವುಗಳಿಂದ ಸೃಷ್ಟಿಯಾಗುವ ಜಲಪಾತಗಳ ಸೊಬಗು ಕಣ್ತುಂಬಿಕೊಳ್ಳಲು ಪ್ರವಾಸಿಗರು ಧಾವಿಸಿ ಬರುವುದು ಸಾಮಾನ್ಯ. ಕಣಿವೆ ಪ್ರದೇಶಗಳಲ್ಲಿ ಗುಡ್ಡ ಕುಸಿತದಂತಹ ಪ್ರಕರಣಗಳು ಸಂಭವಿಸುತ್ತಿರುವುದರಿಂದ ಪ್ರವಾಸಿಗರು ಎಚ್ಚರಿಕೆ ವಹಿಸುವುದು ಅತಿಮುಖ್ಯ. ಮೈಮರೆತು ಅಪಾಯಕಾರಿ ಸ್ಥಳಗಳಲ್ಲಿ ನಿಂತು ಮೊಬೈಲ್ ಮೂಲಕ ಸೆಲ್ಫಿ ತೆಗೆದುಕೊಳ್ಳುವುದು, ನೀರಿಗೆ ಇಳಿದು ಆಟ ಆಡುವುದು, ಜಲಪಾತದ ತುದಿಯ ಬಂಡೆಗಳ ಮೇಲೆ ನಿಂತು ಸೆಲ್ಫಿ ಕ್ಲಿಕ್ಕಿಸಿಕೊಳ್ಳುವುದು, ನೀರಿನ ಆಳ ಲೆಕ್ಕಿಸದೆ ಈಜಲು ಇಳಿಯುವುದು ಸುರಕ್ಷತಾ ದೃಷ್ಟಿಯಿಂದ ಒಳ್ಳೆಯ ನಡೆಯಲ್ಲ. ಇಂತಹ ರಮಣೀಯ ಸ್ಥಳಗಳಲ್ಲಿ ಜವಾಬ್ದಾರಿಯಿಂದ ವರ್ತಿಸಿ, ತಮ್ಮ ಪ್ರವಾಸವನ್ನು ಸುಖಮಯಗೊಳಿಸಿಕೊಳ್ಳಬೇಕು.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

ಆಧಾರರಹಿತ ವಾದ ಸರಣಿ

'ಶೇ 10 ಮೀಸಲಾತಿ, ಶೇ 90 ಪೂರ್ವಗ್ರಹ!' ಎಂಬ ಲೇಖನದಲ್ಲಿ ವಾದಿರಾಜ್ ಅವರು (ಸಂಗತ, ಜುಲೈ 13), ಕೇಂದ್ರ ಸರ್ಕಾರ ಈಚೆಗೆ ಜಾರಿಗೆ ತಂದ ಶೇ 10 ಮೀಸಲಾತಿಗೆ ಸಂಬಂಧಿಸಿದಂತೆ ದೇವನೂರ ಮಹಾದೇವ ಅವರು ತಮ್ಮ 'ಆರ್‌ಎಸ್‌ಎಸ್ ಆಳ ಮತ್ತು ಅಗಲ' ಎಂಬ ಪುಸ್ತಕದಲ್ಲಿ ಬರೆದಿರುವ ಸಾಲೊಂದನ್ನು ಉದಾಹರಿಸಿ ವಾದಿಸಿದ್ದಾರೆ. '... ಸಿದ್ದರಾಮಯ್ಯ ಸೇರಿದಂತೆ ಅನೇಕರು ಈ ಮೇಲ್ವರ್ಗದ ಮೀಸಲಾತಿಯ ಬಗ್ಗೆ ಪದೇ ಪದೇ ತಕರಾರು ಎತ್ತುತ್ತಿದ್ದಾರೆ' ಎಂದು ಹೇಳುವುದರ ಮೂಲಕ, ಈ ಹತ್ತು ಪರ್ಸೆಂಟ್ ಮೀಸಲಾತಿಯನ್ನು ನೀಡಿರುವುದು 'ಮೇಲ್ವರ್ಗ'ಕ್ಕೆ ಎಂಬುದನ್ನು ಪ್ರತ್ಯಕ್ಷವಾಗಿಯೇ ಒಪ್ಪಿಕೊಂಡಿದ್ದಾರೆ! ಈ ಹೇಳಿಕೆಯ ನಂತರ ಇದನ್ನು ರೈತಾಪಿ ಜನರಿಗೆ ಕೊಟ್ಟಿದ್ದೆಂದು ಆಧಾರರಹಿತವಾಗಿ ಪ್ರತಿಪಾದಿಸಲು ಪ್ರಯತ್ನಿಸಿದ್ದಾರೆ. ಲೇಖನದಲ್ಲಿ ವೈರುಧ್ಯಗಳು ಡಿಕ್ಕಿ ಹೊಡೆದುಕೊಳ್ಳುತ್ತವೆ!

ದೇವನೂರ ಅವರು ಈ ಶೇ 10 ಮೀಸಲಾತಿ ಕುರಿತು ಕಲ್ಪಿಸಿಕೊಂಡು ಬರೆದಿಲ್ಲ. ಅವರ ಮಾತಿಗೆ ಪೂರಕವಾಗಿ ಇಲ್ಲಿನ ಜಾತಿ ತಾರತಮ್ಯದ ಇತಿಹಾಸ ಮತ್ತು ಸಂವಿಧಾನ ಇದೆ. ಸುಪ್ರೀಂ ಕೋರ್ಟಿನ ತೀರ್ಪುಗಳೂ ಇವೆ. ಸಂವಿಧಾನದ ವಿಧಿ 15(4) ಮತ್ತು 16(4)ರ ಪ್ರಕಾರ, ಮೀಸಲಾತಿ ನೀಡಬೇಕಾದುದು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವಿಕೆಯ ಆಧಾರದ ಮೇಲೆಯೇ ವಿನಾ ಆರ್ಥಿಕ ಹಿಂದುಳಿದಿರುವಿಕೆಯ ಆಧಾರದ ಮೇಲಲ್ಲ. ಅಂತೆಯೇ ಇಂದಿರಾ ಸಾಹ್ನಿ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟಿನ ಸಂವಿಧಾನ ಪೀಠ ನೀಡಿರುವ ತೀರ್ಪಿನಲ್ಲಿ, ಯಾವುದೇ ಜಾತಿಯನ್ನು ಹಿಂದುಳಿದ ಪಟ್ಟಿಗೆ ಸೇರಿಸಬೇಕಾದರೆ ಅಥವಾ ಅಲ್ಲಿಂದ ತೆಗೆಯಬೇಕಾದರೆ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಶಿಫಾರಸು ಬೇಕಾಗುತ್ತದೆ. ಆದರೆ ಇಲ್ಲಿ ಕೇಂದ್ರ ಸರ್ಕಾರ ಸ್ಪಷ್ಟವಾಗಿ 'ಆರ್ಥಿಕವಾಗಿ ಹಿಂದುಳಿದವರಿಗೆ' ಎಂದು ಹೇಳುವುದರ ಮೂಲಕ ಸಂವಿಧಾನದ ಮೂಲ ಆಶಯವನ್ನು ಉಲ್ಲಂಘಿಸಿದೆ. ಹಿಂದುಳಿದ ವರ್ಗಗಳ ಆಯೋಗದ ಶಿಫಾರಸು ಇಲ್ಲದೆ, ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡಲು ಏಕಾಏಕಿ ತೀರ್ಮಾನಿಸಿ ಸುಪ್ರೀಂ ಕೋರ್ಟಿನ ತೀರ್ಪನ್ನೂ ಧಿಕ್ಕರಿಸಿದೆ! ಆರ್ಥಿಕ ಆಧಾರದ ಮೇಲೆ ಮೀಸಲಾತಿ ನೀಡಲು ಸಂವಿಧಾನಕ್ಕೆ ತಿದ್ದುಪಡಿ (103ನೇ ತಿದ್ದುಪಡಿ) ತರಲಾಗಿದೆ. ಕೇಶವಾನಂದ ಭಾರತಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟಿನ ಸಂವಿಧಾನ ಪೀಠ ನೀಡಿರುವ ತೀರ್ಪಿನಲ್ಲಿ 'ಸಂವಿಧಾನದ ಮೂಲ ಆಶಯಗಳಿಗೆ ಧಕ್ಕೆಯಾಗುವಂತೆ ಸಂವಿಧಾನಕ್ಕೆ ಯಾವುದೇ ತಿದ್ದುಪಡಿ ತರಬಾರದು' ಎಂದು ಸ್ಪಷ್ಟಪಡಿಸಲಾಗಿದೆ. ಆದರೂ ಕೇಂದ್ರ ಸರ್ಕಾರ ಈ ತಿದ್ದುಪಡಿ ತಂದಿರುವುದು ಸಂವಿಧಾನಬಾಹಿರ, ಈ ತಿದ್ದುಪಡಿಯ ಸಾಂವಿಧಾನಿಕತೆಯನ್ನು ಪ್ರಶ್ನಿಸಿರುವ ಅನೇಕ ಪ್ರಕರಣಗಳು ಸುಪ್ರೀಂ ಕೋರ್ಟ್ ಮುಂದೆ ಬಾಕಿ ಇವೆ. ಈ ಹಿನ್ನೆಲೆಯಲ್ಲಿ ದೇವನೂರರ ಮಾತುಗಳು ಅಕ್ಷರಶಃ ವಾಸ್ತವ. ಅವರು ಹೇಳಿರುವಂತೆ ಇದು ಸಂವಿಧಾನಕ್ಕೆ ಕೊಟ್ಟಿರುವ ಒಳ ಏಟಲ್ಲದೆ ಬೇರೇನೂ ಅಲ್ಲ.

ಮಿಕ್ಕಂತೆ ವಾದಿರಾಜ್ ಅವರು ತಮ್ಮ ವಾದವನ್ನು ಸಮರ್ಥಿಸಲು ಆಧಾರರಹಿತವಾಗಿ ಏನೇನೋ ಹೇಳಲು ತಿಣುಕಾಡಿರುವುದು ಎದ್ದು ಕಾಣುತ್ತದೆ. ಅವರ ಬರಹವನ್ನು ಓದಿದಾಗ, ಅವರ ಹೇಳಿಕೆಯಂತೆಯೇ ಶೇ 90 ಪೂರ್ವಗ್ರಹ ಯಾರದು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲವಷ್ಟೆ...

ಸಿ.ಎಸ್.ದ್ವಾರಕಾನಾಥ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮುಂಗಾರು ಹಂಗಾಮು ಆಹಾರ ಧಾನ್ಯ ಬಿತ್ತನೆಗೆ ನಿರಾಸಕ್ತಿ

ಪ್ರಜಾವಾಣಿ ವಾರ್ತೆ

ಕರ್ನಾಟಕದಲ್ಲಿ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗಿದೆ ಎಂದು ಹವಾಮಾನ ಇಲಾಖೆಯ ದತ್ತಾಂಶಗಳು ತಿಳಿಸಿವೆ. ಅಣೆಕಟ್ಟೆಗಳು, ಕೆರೆಗಳಿಗೆ ಯಥೇಚ್ಛ ನೀರು ಹರಿದು ಬಂದಿದೆ. ಹಲವು ಜಲಾಶಯಗಳು ತುಂಬುವ ಹಂತಕ್ಕೆ ಬಂದಿವೆ. ಆದರೆ, ಈ ಸಾಲಿನಲ್ಲಿ ಆಹಾರ ಧಾನ್ಯಗಳ ಬಿತ್ತನೆಯಲ್ಲಿ ವಿಳಂಬವಾಗಿದೆ. 2021ರ ಮುಂಗಾರು ಹಂಗಾಮಿಗೆ ಹೋಲಿಸಿದರೆ, ಈ ಸಾಲಿನ ಮುಂಗಾರು ಹಂಗಾಮಿನಲ್ಲಿ ಆಹಾರ ಧಾನ್ಯಗಳ ಬಿತ್ತನೆ ಪ್ರದೇಶದ ಗುರಿಯನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಲಾಗಿತ್ತು. ಕೃಷಿ ಇಲಾಖೆಯು ತನ್ನ ಗುರಿಯನ್ನು ಹೆಚ್ಚಿಸಿಕೊಂಡಿದ್ದರೂ, ರೈತ ಸಮುದಾಯವು ಆಹಾರ ಧಾನ್ಯಗಳ ಬಿತ್ತನೆಗೆ ಹೆಚ್ಚಿನ ಆಸಕ್ತಿಯನ್ನು ತೋರಿಸಿಲ್ಲ.

ಎಣ್ಣೆಕಾಳುಗಳು ಮತ್ತು ವಾಣಿಜ್ಯ ಬೆಳೆಗಳಾದ ಹತ್ತಿ, ಕಬ್ಬು ಬಿತ್ತನೆ ಪ್ರದೇಶದ ವ್ಯಾಪ್ತಿಯನ್ನು ಈ ಸಾಲಿನಲ್ಲಿ ಕಡಿಮೆ ಮಾಡಲಾಗಿತ್ತು.ಆದರೆ, ವಾಣಿಜ್ಯ ಬೆಳೆಗಳು ಮತ್ತು ಎಣ್ಣೆಕಾಳುಗಳ ಬಿತ್ತನೆಯಲ್ಲಿ ಗಣನೀಯ ಪ್ರಗತಿ ಸಾಧಿಸಲಾಗಿದೆ. ಈ ಸ್ವರೂಪದ ವಾಣಿಜ್ಯ ಬೆಳೆಗಳ ಬಿತ್ತನೆ ಕಾರ್ಯಕ್ಕೆ ರೈತ ಸಮುದಾಯವು ತೀವ್ರ ಆಸಕ್ತಿ ತೋರಿಸಿದೆ. ಹಿಂದಿನ ಸಾಲಿನ ಮುಂಗಾರು ಹಂಗಾಮಿಗೆ ಹೋಲಿಸಿದರೆ, ಈ ಸಾಲಿನ ಮುಂಗಾರು ಹಂಗಾಮಿನಲ್ಲಿ ಈ ಬೆಳೆಗಳ ಬಿತ್ತನೆ ಕಾರ್ಯ ಚುರುಕಾಗಿದೆ.

ಬಿತ್ತನೆ ಗುರಿ ಮತ್ತು ಪ್ರಗತಿ



114.80 ಲಕ್ಷ ಟನ್
ಈ ಸಾಲಿನ ಮುಂಗಾರು ಹಂಗಾಮಿನಲ್ಲಿ ಆಹಾರ ಧಾನ್ಯಗಳ ಇಳುವರಿ ಗುರಿ

8.70 ಲಕ್ಷ ಟನ್
ಈ ಸಾಲಿನ ಮುಂಗಾರು ಹಂಗಾಮಿನಲ್ಲಿ ಎಣ್ಣೆಕಾಳುಗಳ ಇಳುವರಿ ಗುರಿ

377.99 ಲಕ್ಷ ಟನ್
ಈ ಸಾಲಿನ ಮುಂಗಾರು ಹಂಗಾಮಿನಲ್ಲಿ ಕಬ್ಬಿನ ಇಳುವರಿ ಗುರಿ

18.42 ಲಕ್ಷ ಬೇಲ್‌ಗಳು
ಈಸಾಲಿನ ಮುಂಗಾರು ಹಂಗಾಮಿನಲ್ಲಿ ಹತ್ತಿ ಇಳುವರಿ ಗುರಿ

ರಸಗೊಬ್ಬರ

26.76 ಲಕ್ಷ ಟನ್
ಈ ಸಾಲಿನ ಮುಂಗಾರು ಹಂಗಾಮಿಗೆ ಅಗತ್ಯವಿರುವ ಒಟ್ಟು ರಸಗೊಬ್ಬರ

11.70 ಲಕ್ಷ ಟನ್
ಜುಲೈ ಮೊದಲ ವಾರದ ವೇಳೆಗೆ ರೈತರಿಗೆ ವಿತರಿಸಲಾಗಿರುವ ರಸಗೊಬ್ಬರ

6.56 ಲಕ್ಷ ಟನ್ ರಾಜ್ಯದಲ್ಲಿ ಲಭ್ಯವಿರುವ ರಸಗೊಬ್ಬರ

8.50 ಲಕ್ಷ ಟನ್
ಇನ್ನೂ ಪೂರೈಕೆಯಾಗಬೇಕಿರುವ ರಸಗೊಬ್ಬರ

ಹೊಸ ಸಂಸತ್ ಭವನದ ಮೇಲೆ ರಾಷ್ಟ್ರೀಯ ಲಾಂಛನದ ವಿನ್ಯಾಸದ ಬಗ್ಗೆ ಪ್ರತಿಪಕ್ಷಗಳು ಮೋದಿ ಸರ್ಕಾರವನ್ನು ಗುರಿಯಾಗಿಸುವುದು ಸಮರ್ಥನೀಯವೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಏಕದಳ ಧಾನ್ಯ: ತುಸು ಕಡಿಮೆ

ಈ ಬಾರಿಯ ಮುಂಗಾರು ಹಂಗಾಮಿನಲ್ಲಿ 35.98 ಲಕ್ಷ ಹೆಕ್ಟೇರ್‌ಗಳಲ್ಲಿ ಏಕದಳ ಧಾನ್ಯಗಳ ಬಿತ್ತನೆ ಆಗಬಹುದು ಎಂದು ರಾಜ್ಯ ಕೃಷಿ ಇಲಾಖೆಯು ಅಂದಾಜಿಸಿದೆ. 2021ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 31.37 ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆ ಗುರಿ ಹಾಕಿಕೊಳ್ಳಲಾಗಿತ್ತು. 2021ರ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಗುರಿಯ ಶೇ 38.23ರಷ್ಟು ಬಿತ್ತನೆ ಕಾರ್ಯ ಪೂರ್ಣಗೊಂಡಿತ್ತು. ಆದರೆ, ಈ ಸಾಲಿನ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಗುರಿಯ ಶೇ 31ರಷ್ಟನ್ನು ಮಾತ್ರ ಬಿತ್ತನೆ ಮಾಡಲಾಗಿದೆ.



ದ್ವಿದಳ ಧಾನ್ಯ: ತೀರಾ ಕಡಿಮೆ

2021ರ ಮುಂಗಾರು ಹಂಗಾಮಿಗೆ ಹೋಲಿಸಿಕೊಂಡರೆ, 2022ರ ಮುಂಗಾರು ಹಂಗಾಮಿನಲ್ಲಿ ದ್ವಿದಳ ಧಾನ್ಯಗಳ ಬಿತ್ತನೆಯ ಗುರಿಯನ್ನು ಹೆಚ್ಚಿಸಿಕೊಳ್ಳಲಾಗಿದೆ. 2021ರ ಜುಲೈ ಮೊದಲ ವಾರದ ವೇಳೆಗೆ, ಮುಂಗಾರು ಹಂಗಾಮಿನ ಒಟ್ಟು ಬಿತ್ತನೆ ಗುರಿಯಲ್ಲಿ ಶೇ 57.62ರಷ್ಟು ಬಿತ್ತನೆ ಕಾರ್ಯ ಪೂರ್ಣಗೊಂಡಿತ್ತು. ಆದರೆ, 2022ರ ಜುಲೈ ಮೊದಲನೇ ವಾರದ ವೇಳೆಗೆ ಒಟ್ಟು ಗುರಿಯ ಶೇ 43ರಷ್ಟು ಬಿತ್ತನೆ ಕಾರ್ಯ ಮಾತ್ರ ಪೂರ್ಣಗೊಂಡಿದೆ.



ಎಣ್ಣೆಕಾಳು: ಶೇ 67ರಷ್ಟು ಪೂರ್ಣ

2021ರ ಮುಂಗಾರು ಹಂಗಾಮಿಗೆ ಹೋಲಿಸಿದರೆ, 2022ರ ಮುಂಗಾರು ಹಂಗಾಮಿನಲ್ಲಿ ಎಣ್ಣೆಕಾಳುಗಳ ಬಿತ್ತನೆ ಪ್ರದೇಶದ ವ್ಯಾಪ್ತಿಯ ಗುರಿಯನ್ನು ಕಡಿಮೆ ಮಾಡಲಾಗಿದೆ. 2021ರ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಬಿತ್ತನೆ ಗುರಿಯ ಶೇ 53.41ರಷ್ಟು ಗುರಿಯನ್ನಷ್ಟೇ ಮುಟ್ಟಲಾಗಿತ್ತು. ಆದರೆ, 2022ರ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಗುರಿಯ ಶೇ 67ರಷ್ಟು ಬಿತ್ತನೆ ಕಾರ್ಯ ಪೂರ್ಣಗೊಂಡಿದೆ.



ಹತ್ತಿ ಬಿತ್ತನೆ: ಹೆಚ್ಚು ಆಸಕ್ತಿ

2022ನೇ ಸಾಲಿನ ಮುಂಗಾರಿನಲ್ಲಿ ರಾಜ್ಯದಲ್ಲಿ ಹತ್ತಿ ಬೆಳೆಯುವ ಪ್ರದೇಶದ ಗುರಿಯನ್ನು ಸ್ವಲ್ಪ ಕಡಿಮೆ ಮಾಡಿಕೊಳ್ಳಲಾಗಿದೆ. 2021ರ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಗುರಿಯ ಶೇ 37ರಷ್ಟು ಬಿತ್ತನೆ ಕಾರ್ಯ ಮಾತ್ರ ಪೂರ್ಣಗೊಂಡಿತ್ತು. ಆದರೆ, 2022ರ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಗುರಿಯ ಶೇ 47ರಷ್ಟು ಬಿತ್ತನೆ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ.



ಬಿತ್ತನೆ ಬೀಜ

ಈ ಸಾಲಿನ ಮುಂಗಾರು ಹಂಗಾಮಿಗೆ ರಾಜ್ಯದಾದ್ಯಂತ ಒಟ್ಟು 5.38 ಲಕ್ಷ ಕ್ವಿಂಟಲ್‌ಗಳಷ್ಟು ಬಿತ್ತನೆ ಬೀಜದ ಅವಶ್ಯಕತೆ ಇದೆ ಎಂದು ಅಂದಾಜಿಸಲಾಗಿದೆ. ಇದರಲ್ಲಿ 2.37 ಲಕ್ಷ ಕ್ವಿಂಟಲ್‌ಗಳಷ್ಟು ಬಿತ್ತನೆ ಬೀಜವನ್ನು ಈಗಾಗಲೇ ರೈತ ಸಂಪರ್ಕ ಕೇಂದ್ರಗಳ ಮೂಲಕ ವಿತರಣೆ ಮಾಡಲಾಗಿದೆ. ರೈತ ಸಂಪರ್ಕ ಕೇಂದ್ರಗಳಲ್ಲಿ ಇನ್ನೂ 1.53 ಲಕ್ಷ ಕ್ವಿಂಟಲ್‌ನಷ್ಟು ಬಿತ್ತನೆ ಬೀಜದ ದಾಸ್ತಾನು ಇದೆ ಎಂದು ಸರ್ಕಾರವು ತನ್ನ ವರದಿಯಲ್ಲಿ ಹೇಳಿದೆ. ಈ ಸಾಲಿನ ಮುಂಗಾರು ಹಂಗಾಮಿಗೆ ಅಗತ್ಯವಿರುವ ಬಿತ್ತನೆ ಬೀಜದಲ್ಲಿ ಇನ್ನೂ 1.48 ಲಕ್ಷ ಕ್ವಿಂಟಲ್‌ನಷ್ಟು, ರೈತ ಸಂಪರ್ಕ ಕೇಂದ್ರಗಳಿಗೆ ಪೂರೈಕೆಯಾಗಬೇಕಿದೆ.

- 2021ರ ಮುಂಗಾರು ಹಂಗಾಮಿನಲ್ಲಿ ಒಟ್ಟು 77 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ನಿರೀಕ್ಷಿಸಲಾಗಿತ್ತು. ಅದಕ್ಕಾಗಿ 6 ಲಕ್ಷ ಕ್ವಿಂಟಲ್‌ನಷ್ಟು ಬಿತ್ತನೆ ಬೀಜದ ಅವಶ್ಯಕತೆ ಇದೆ ಎಂದು ಅಂದಾಜಿಸಲಾಗಿತ್ತು
- 2022ರ ಮುಂಗಾರು ಹಂಗಾಮಿನಲ್ಲಿ ಒಟ್ಟು 82.67 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ನಿರೀಕ್ಷಿಸಲಾಗಿದೆ. ಅದಕ್ಕಾಗಿ 5.38 ಲಕ್ಷ ಕ್ವಿಂಟಲ್‌ನಷ್ಟು ಬಿತ್ತನೆ ಬೀಜದ ಅವಶ್ಯಕತೆ ಇದೆ ಎಂದು ಅಂದಾಜಿಸಲಾಗಿದೆ
- ಈ ಸಾಲಿನಲ್ಲಿ ಬಿತ್ತನೆ ಪ್ರದೇಶದ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿದ್ದರೂ, ಅಗತ್ಯವಿರುವ ಬಿತ್ತನೆ ಬೀಜದ ಪ್ರಮಾಣದ ಅಂದಾಜನ್ನು ಕಡಿಮೆ ಮಾಡಲಾಗಿದೆ. ರೈತರಿಗೆ ಪೂರೈಕೆಯಾಗಿರುವ ಬಿತ್ತನೆ ಬೀಜದ ಪ್ರಮಾಣವೂ ಕಡಿಮೆ ಇದೆ



ಆಧಾರ: ರಾಜ್ಯ ಕೃಷಿ ಇಲಾಖೆಯ ಮುಂಗಾರು ಹಂಗಾಮು ಸ್ಥಿತಿಗತಿ ವರದಿಗಳು, ಹವಾಮಾನ ಇಲಾಖೆಯ ಸಾಪ್ತಾಹಿಕ ಮಳೆ ವರದಿ

ಕಬ್ಬು ಬಿತ್ತನೆ ಶೇ 86ರಷ್ಟು

2022ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ಕಬ್ಬು ಬೆಳೆಯುವ ಪ್ರದೇಶದ ಗುರಿಯನ್ನು ಸ್ವಲ್ಪ ಹೆಚ್ಚಿಸಿಕೊಳ್ಳಲಾಗಿದೆ. 2021ರ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಗುರಿಯ ಶೇ 79.28ರಷ್ಟು ಬಿತ್ತನೆ ಕಾರ್ಯ ಮಾತ್ರ ಪೂರ್ಣಗೊಂಡಿತ್ತು. ಆದರೆ, 2022ರ ಜುಲೈ ಮೊದಲ ವಾರದ ವೇಳೆಗೆ, ಒಟ್ಟು ಗುರಿಯ ಶೇ 86ರಷ್ಟು ಬಿತ್ತನೆ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. ಮುಂದಿನ ವಾರಗಳಲ್ಲಿ ಮತ್ತಷ್ಟು ಪ್ರದೇಶದಲ್ಲಿ ಬಿತ್ತನೆ ಕಾರ್ಯ ನಡೆಯುವುದರಿಂದ, ಈ ಸಾಲಿನ ಮುಂಗಾರು ಹಂಗಾಮಿನ ಕಬ್ಬು ಇಳುವರಿ ಹೆಚ್ಚಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 172

ಕರೆಯದ ಯಜ್ಞಕ್ಕೆ ಹೊರಟ ಸತಿ

‘ಎಲೈ ನಾರದ, ದಕ್ಷಯಜ್ಞಕ್ಕೆ ದೇವತೆಗಳು ಮತ್ತು ದೇವಮುನಿಗಳು ಹೋಗುತ್ತಿರುವಾಗ ಸತೀದೇವಿಯು ಗಂಧಮಾದನ ಪರ್ವತದಲ್ಲಿರುವ ಧಾರಾಗೃಹವೆಂಬ ಜಲವಿಹಾರಗೃಹದಲ್ಲಿ ಸಖಿಯರೊಡನೆ ವಿತಾನಾದಿಗಳಿಂದ ಜಲಕೇಳೀವಿನೋದದಲ್ಲಿ ಮಗ್ನಳಾಗಿದ್ದಳು. ಹೀಗೆ ಸತಿಯು ಕ್ರೀಡಿಸುತ್ತಿರುವಾಗ ಚಂದ್ರನು ರೋಹಿಣಿಯ ಅನುಮತಿಯನ್ನು ಪಡೆದು ದಕ್ಷಯಜ್ಞಕ್ಕೆ ತ್ವರೆಯಿಂದ ಹೊರಟ. ಚಂದ್ರನು ತ್ವರೆಯಿಂದ ಹೊರಟುದನ್ನು ನೋಡಿದ ಸತೀದೇವಿ ತನ್ನ ಸಖಿಯಾದ ವಿಜಯೆಯನ್ನು ಕೇಳುತ್ತಾಳೆ. ‘ಎಲೈ ವಿಜಯೇ, ಈಗ ರೋಹಿಣಿಯಿಂದ ಬೀಳ್ಕೊಂಡ ಚಂದ್ರನು ಎಲ್ಲಿಗೆ ಹೋಗುತ್ತಿದ್ದಾನೆ’ ಎಂದಾಗ, ವಿಜಯೇ ಚಂದ್ರನಬಳಿಗೆ ಹೋಗಿ ‘ಇಷ್ಟು ಆತುರದಿಂದ ಎಲ್ಲಿಗೆ ಹೊರಟಿರುವೆ? ಅಂತಹ ಅವಶ್ಯಕವಾದ ಕೆಲಸ ಯಾವುದು?’ ಎಂದು ಕೇಳುತ್ತಾಳೆ. ಆಗ ಚಂದ್ರ ತಾನು ದಕ್ಷಯಜ್ಞಕ್ಕೆ ಹೋಗುತ್ತಲಿರುವುದಾಗಿ ತಿಳಿಸಿದ. ವಿಜಯೆ ಆಶ್ಚರ್ಯದಿಂದ ಸತೀದೇವಿಯ ಬಳಿಗೆ ಬಂದು ಚಂದ್ರನು ಹೇಳಿದುದೆಲ್ಲವನ್ನೂ ಹೇಳಿದಳು. ಕೇಳಿದ ಸತೀದೇವಿ ಆಶ್ಚರ್ಯಗೊಂಡಳು.

ತಂದೆಯಾದ ದಕ್ಷ ಮತ್ತು ತಾಯಿ ವೀರಿಣಿಯ ಮಕ್ಕಳಲ್ಲಿ ತಾನು ಪ್ರಿಯಳಾದ ಮಗಳು. ತನ್ನನ್ನೇಕೆ ಅವರು ಯಜ್ಞಕ್ಕೆ ಕರೆಯಲಿಲ್ಲ? ಕಾರಣವೇನೆಂದು ತಿಳಿಯಲು ಶಿವನ ಬಳಿಗೆ ತೆರಳಿದಳು. ಪರಮೇಶ್ವರನ ಬಳಿ ಬಂದ ಸತೀದೇವಿ ‘ಓ ಸ್ವಾಮಿ, ನನ್ನ ತಂದೆಯಾದ ದಕ್ಷನು ದೊಡ್ಡ ಯಜ್ಞವೊಂದನ್ನು ಮಾಡುತ್ತಿರುವನೆಂದು ಕೇಳಿದೆ. ದೇವದೇವನಾದ ನೀನು ನನ್ನ ತಂದೆ ಮಾಡುವ ಯಜ್ಞಕ್ಕೆ ಹೋಗದಿರಲು ಕಾರಣವೇನು?’ ಎಂದು ಕೇಳಿದಳು. ‘ಎಲೈ ದೇವಿ, ನಿನ್ನ ತಂದೆಯಾದ ದಕ್ಷಬ್ರಹ್ಮ ನನ್ನನ್ನು ದ್ವೇಷಿಸುತ್ತಲಿರುವನು. ನನ್ನನ್ನು ಯಾಗಕ್ಕೆ ಆಹ್ವಾನಿಸಿಲ್ಲ. ದುರಹಂಕಾರಿಯಾದ ಅವನ ಯಾಗಕ್ಕೆ ಹೋಗಿರುವವರು ಮೂಢರು, ತಿಳಿವಳಿಕೆಯಿಲ್ಲದವರು’ ಎಂದು ಮೂದಲಿಸಿದ. ಆಗ ಸತೀದೇವಿ ‘ನನ್ನ ತಂದೆಯ ಕಾರ್ಯಕ್ಕೆ ಕರೆಯದೇ ಇದ್ದರೇನು? ನಾವು ಹೋಗೋಣ ಬನ್ನಿ’ ಎಂದು ಶಿವನನ್ನು ಒತ್ತಾಯಿಸಿದಳು.

‘ಕರೆಯದೆ ಪರರ ಮನೆಗೆ ಹೋಗಕೂಡದು. ಹಾಗೆ ಹೋದರೆ, ಅವಮಾನವಾಗುವುದು. ಅವಮಾನವೆಂಬುದು ಮರಣಕ್ಕಿಂತಲೂ ಹೆಚ್ಚಾದುದು. ನಮ್ಮ ಬಂಧುಗಳಿಂದ ಆಗುವ ಅವಮಾನ ಶತ್ರುಗಳ ಬಾಣದ ಏಟಿಗಿಂತಲೂ ತೀಕ್ಷ್ಣವಾಗಿರುತ್ತದೆ. ಆದುದರಿಂದ ನಾವು ದಕ್ಷನ ಯಜ್ಞಕ್ಕೆ ಹೋಗಬಾರದು, ಅದು ಉಚಿತವಲ್ಲ’ ಎಂದು ತಿಳಿವಳಿಕೆ ಹೇಳುತ್ತಾನೆ. ಆದರೆ ಸತೀದೇವಿಯು ಅದನ್ನು ಆಲಿಸದೆ ಕೋಪಗೊಳ್ಳುತ್ತಾಳೆ.

‘ಓ ಶಂಕರ, ನೀನು ಯಜ್ಞಗಳ ಫಲದಾತೃ. ಇಂತಹ ನಿನ್ನನ್ನು ದುಷ್ಟನಾದ ನನ್ನ ತಂದೆ ದಕ್ಷನು ಆಹ್ವಾನಿಸಿಲ್ಲ. ಆದಕಾರಣ ಅವನಿಗೆ ಯಜ್ಞದಲ್ಲಿ ಒಳ್ಳೆಯ ಫಲವು ದೊರೆಯಲಾರದು. ಈ ವಿಷಯವನ್ನು ನನ್ನ ತಂದೆ ದಕ್ಷ ಮತ್ತು ಅಲ್ಲಿ ಸೇರಿರುವ ದೇವ ಋಷಿಗಳಿಗೆಲ್ಲ ತಿಳಿಯುವಂತೆ ಹೇಳಿ ಬರುವೆ. ನಾನು ಯಜ್ಞಶಾಲೆಗೆ ಹೋಗಲು ಅನುಮತಿಯನ್ನು ಕೊಡು’ ಎಂದು ಕೋರಿದಳು.

‘ಎಲೈ ದೇವಿ, ದಕ್ಷಯಜ್ಞಕ್ಕೆ ಹೋಗುವುದು ಅವಶ್ಯಕವೆಂದು ನಿನಗೆ ತೋರಿದರೆ ನೀನು ಹೋಗಬಹುದು. ಆದರೆ, ನಿನಗೆ ಅಲ್ಲಿ ಯೋಗ್ಯರೀತಿಯಲ್ಲಿ ಗೌರವ ಸಿಗಲಾರದು. ಆದ್ದರಿಂದ ಮತ್ತೊಮ್ಮೆ ಯೋಚಿಸು’ ಎಂದ ಶಿವ. ಆದರೆ ಸತೀದೇವಿ ದಕ್ಷನ ಯಜ್ಞಶಾಲೆಗೆ ಹೋಗುವ ನಿಲುವು ಸಡಿಲಿಸದಿದ್ದಾಗ ‘ಎಲೈ ಸತೀದೇವಿ, ರಾಜಯೋಗ್ಯವಾದಂತಹ ಅಲಂಕಾರಗಳಿಂದ ಶೋಭಿತಳಾಗಿ, ನಂದಿಕೇಶ್ವರನನ್ನೇರಿ ದಕ್ಷನ ಯಜ್ಞಶಾಲೆಗೆ ತೆರಳು’ ಎಂದು ಶಂಕರ ಕಳುಹಿಸಿಕೊಟ್ಟ. ಶಿವನ ಅಪ್ಪಣೆಯಂತೆ ಅರವತ್ತು ಸಾವಿರ ರುದ್ರಗಣಗಳು ಸತೀದೇವಿಯನ್ನು ಹಿಂಬಾಲಿಸಿದರು ಎಂಬಲ್ಲಿಗೆ ಸತೀಖಂಡದ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಅಸ್ಸಾಂನ ಸಿಲ್ಚಾರ್‌ನಲ್ಲಿ ಸಂಭವಿಸಿದ ಪ್ರವಾಹವು ‘ಮಾನವ ನಿರ್ಮಿತ’. ಮುಸ್ಲಿಂ ಸಮುದಾಯದ ಕೆಲ ದುಷ್ಕರ್ಮಿಗಳು ಈ ಕೃತ್ಯ ಎಸಗಿದ್ದಾರೆ ಎಂಬ ಮಾಹಿತಿ ಇರುವ ಪೋಸ್ಟ್ ಒಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಅಣೆಕಟ್ಟೆಗೆ ದುಷ್ಕರ್ಮಿಗಳು ಹಾನಿಯುಂಟು ಮಾಡದಿದ್ದರೆ ಈ ದುರಂತ ಸಂಭವಿಸುತ್ತಿರಲಿಲ್ಲ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಜೂನ್ 26ರಂದು ವರದಿಗಾರರ ಎದುರು ಹೇಳಿದ್ದರು. ಆ ಬಳಿಕ ಮುಸ್ಲಿಂ ಸಮುದಾಯಕ್ಕೆ ಸೇರಿದ ನಾಲ್ವರು ಆರೋಪಿಗಳನ್ನು ಅಸ್ಸಾಂ ಪೊಲೀಸರು ಬಂಧಿಸಿದ್ದಾರೆ ಎಂದು ಹಲವಾರು ಪತ್ರಿಕೆಗಳು ವರದಿ ಮಾಡಿವೆ. ಈ ಪ್ರವಾಹವನ್ನು ಹಲವು ಪತ್ರಿಕೆಗಳು ಮತ್ತು ಬಿಜೆಪಿ ಕಾರ್ಯಕರ್ತರು ‘ಫ್ಲಡ್ ಜಿಹಾದ್’ ಎಂದು ಕರೆದಿದ್ದಾರೆ.

ವೈರಲ್ ಆಗಿರುವ ಪೋಸ್ಟ್‌ನಲ್ಲಿ ಇರುವ ಮಾಹಿತಿಯು ಸತ್ಯಕ್ಕೆ ದೂರವಾಗಿದೆ ಎಂದು ‘ದಿ ಲಾಜಿಕಲ್ ಇಂಡಿಯನ್’ ಫ್ಯಾಕ್ಟ್‌ಚೆಕ್ ವೇದಿಕೆ ಪ್ರಕಟಿಸಿದೆ. ತಾವು ವಾಸವಿರುವ ಪ್ರದೇಶದಲ್ಲಿ ನೀರು ನಿಲ್ಲುವುದನ್ನು ತಪ್ಪಿಸಿ, ಆ ನೀರು ಬರಾಕ್ ನದಿಗೆ ಹರಿಯುವಂತೆ ಮಾಡುವ ಸಲುವಾಗಿ ಸ್ಥಳೀಯರು ಅಣೆಕಟ್ಟೆಯನ್ನು ಕೊರೆದು ಕಾಲುವೆ ನಿರ್ಮಿಸಿದ್ದರು. ಈ ಪ್ರಕರಣವು ಕೋಮು ಭಾವನೆಗೆ ಸಂಬಂಧಿಸಿದ್ದಲ್ಲ. ಪ್ರವಾಹವನ್ನು ‘ಫ್ಲಡ್ ಜಿಹಾದ್’ ಎಂದು ಕರೆಯುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಅಸ್ಸಾಂ ಪೊಲೀಸರು ಹೇಳಿದ್ದರು ಎಂದು ದಿ ಲಾಜಿಕಲ್ ಇಂಡಿಯನ್ ವಿವರಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಸಲ್ಲದ ಗರ್ವ

ತಿರಿದನ್ನವುಂಬಂಗೆ ಹುರುಡೇನು, ಹಟವೇನು?
ತಿರುಪೆಯಿಡುವರು ಕುಪಿಸಿ ಬಿರಿನುಡಿಯ ನುಡಿಯೆ
ದುರದುರನೆ ನೋಡಿ ನೀನೆದುರುನುಡಿ
ನುಡಿಯುವುದೆ ?
ಗರುವವೇತಕೆ ನಿನಗೆ ? – ಮಂಕುತಿಮ್ಮ || 671 ||

ಪದ-ಅರ್ಥ: ತಿರಿದನ್ನವುಂಬಂಗೆ = ತಿರಿದು(ಭಿಕ್ಷೆ ಬೇಡಿ) + ಅನ್ನ + ಉಂಬಂಗೆ(ಉಣ್ಣುವವನಿಗೆ), ಹುರುಡೇನು = ಸ್ಪರ್ಧೆಯೇನು, ತಿರುಪೆಯಿಡುವ-ರು = ತಿರುಪೆ(ಭಿಕ್ಷೆ) + ಇಡುವರು, ಕುಪಿಸಿ = ಕೋ-ಪಮಾಡಿಕೊಂಡು, ನೀನೆದುರುನುಡಿ = ನೀನು + ಎದುರುನುಡಿ.

ವಾಚ್ಯಾರ್ಥ: ಭಿಕ್ಷೆಯಿಂದ ಊಟಮಾಡುವವನಿಗೆ ಸ್ಪರ್ಧೆ, ಹಟವೇಕೆ? ಭಿಕ್ಷೆ ನೀಡುವವರು ಕೋಪದಿಂದ ಬಿರುಸು ಮಾತನಾಡಿದರೆ ನೀನು ಅವರನ್ನು ದುರುಗಟ್ಟಿ ನೋಡಿ ತಿರುಗಿ ಮಾತನಾಡುವುದೆ? ನಿನಗೆ ಯಾಕೆ ಆ ಗರ್ವ?

ವಿವರಣೆ: ಗುರುದೇವ ರವೀಂದ್ರನಾಥ ಠಾಕೂರರು ತಮ್ಮ ಪ್ರಸಿದ್ಧವಾದ ಗೀತಾಂಜಲಿಯ ಪದ್ಯವೊಂದರಲ್ಲಿ ಭಕ್ತನ ಭಾವವನ್ನು ಸುಂದರವಾಗಿ ವಿವರಿಸುತ್ತಾರೆ. ಭಕ್ತ ಹೇಳುತ್ತಾನೆ, ‘ಭಗವಂತ, ನಿನ್ನ ದರ್ಬಾರಿನಲ್ಲಿ ನಾನೊಬ್ಬ ಭಿಕ್ಷುಕನಾಗಿ ಬಂದಿದ್ದೇನೆ. ನನ್ನ ಮನದಲ್ಲಿ ಬಯಕೆಗಳ, ಬೇಡಿಕೆಗಳ ಸರಮಾಲೆಯೇ ಇದೆ. ಅದಕ್ಕೆ ಮಿತಿಯಿಲ್ಲ.

ನೀನು ದಯಾಘನ, ಕೇಳಿದ್ದನ್ನೆಲ್ಲ ಕೊಡುತ್ತೀಯಾ. ಆದರೆ ನಿನ್ನ ದರ್ಬಾರಿಗೆ ಬಂದಾಗ, ನಿನ್ನ ಮುಖಕಮಲವನ್ನು ಕಂಡಾಗ ಮಾತು ಮರೆತು ಹೋಗುತ್ತದೆ. ನನಗೊಂದು ಭಯವಿದೆ ಪ್ರಭು. ನೀನು ಕರುಣೆಯ ಸಮುದ್ರ. ಕೇಳಿದ್ದನ್ನೆಲ್ಲ ಎಲ್ಲಿ ಕೊಟ್ಟುಬಿಡುತ್ತೀಯೋ ಎಂಬ ಭಯ ನನಗೆ. ಯಾಕೆಂದರೆ ಏನು ಕೇಳಬೇಕೆಂಬ ಪ್ರಜ್ಞೆ ನನಗಿಲ್ಲ. ಕೇಳಬಾರದೆಂಬ ತಿಳುವಳಿಕೆಯೂ ಇಲ್ಲ’.

ಭಿಕ್ಷುಕನಿಗೆ ಆಯ್ಕೆಗಳಿಲ್ಲ. ನೀಡುವುದು ದಾನಿಯ ಕೆಲಸ, ಬೇಡುವುದು ಭಿಕ್ಷುಕನ ಕರ್ಮ. ಇಷ್ಟೇ ಕೊಡು, ಇದನ್ನೇ ಕೊಡು ಎಂದು ಕೇಳುವ ಅಧಿಕಾರ ಭಿಕ್ಷುಕನಿಗೆ ಇಲ್ಲ. ನೀಡುವವನು ಕೋಪದಿಂದ ತೆಗಳಿದರೆ, ಒರಟು ಮಾತನಾಡಿದರೆ ಭಿಕ್ಷುಕ ತಿರುಗಿ ಮಾತನಾಡಲಾಗುತ್ತದೆಯೆ? ವಿನಯ ಭಿಕ್ಷುಕನಿಗೆ ಅನಿವಾರ್ಯ. ಒಂದು ರೀತಿಯಲ್ಲಿ ನಾವೆಲ್ಲ ಭಿಕ್ಷುಕರೆ. ನಾವು ಮೇಲಧಿಕಾರಿಗಳನ್ನು, ಸರಕಾರವನ್ನು, ಹಿರಿಯರನ್ನು, ಜ್ಞಾನಿಗಳನ್ನು ಕೊನೆಗೆ ದೇವರನ್ನು ಬೇಡುವವರೇ. ಎಲ್ಲರದೂ ಚಾಚಿದ ಕೈ, ತೆರೆದ ಬಾಯಿ. ಭಿಕ್ಷುಕನಂತೆ ಭಕ್ತನಿಗೂ ವಿನಯಬೇಕು ಎನ್ನುತ್ತದೆ ವಚನ.

ಭಕ್ತಿಗೆ ಅನುಭಾವವೆ ಬೀಜ ಕಾಣಿರೆ,
ಭಕ್ತಿಗೆ ಅನುಭಾವವೆ ಆಚಾರ ಕಾಣಿರೆ,
ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತು.
ಅನುಭಾವವ ಮಾಡುವಲ್ಲಿ ವಿನಯದಿಂದ
ಕೇಳದಿದ್ದಡೆ,
ಕೂಡಲ ಚೆನ್ನಸಂಗಮದೇವರು ಅಘೋರನರಕ-
ದಲ್ಲಿಕ್ಕುವ

ಭಕ್ತನ ಅನುಭಾವಕ್ಕೂ ವಿನಯವೇ ಮೂಲವಸ್ತು. ಅಲ್ಲಿ ಗರ್ವಕ್ಕೆ ಸ್ಥಾನವಿಲ್ಲ, ಮರ್ಯಾದೆಯಿಲ್ಲ. ನಮ್ಮ ಬದುಕು ಭಗವಂತ ನೀಡಿದ ಪ್ರಸಾದ. ಅದನ್ನು ಕೃತಜ್ಞತೆಯಿಂದ ಸ್ವೀಕರಿಸಿ, ಒಪ್ಪವಾಗಿ ಬದುಕಬೇಕು. ಅದನ್ನು ಧಿಕ್ಕರಿಸುವುದು, ಪ್ರತಿಭಟಿಸುವುದು, ಕೊಟ್ಟಿದ್ದನ್ನು ಸರಿಯಾಗಿ ಬಳಸದಿರುವುದು ಗರ್ವದ ನಡೆಯಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಗುರುವಾರ ಜುಲೈ 14, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣಪ್ರತಿಪದ್ ಗಂ. 20-17 ನಕ್ಷತ್ರ: ಉತ್ತರಾಷಾಢ ಗಂ. 20-18 ಯೋಗ: ವೃದ್ಧಿ ಗಂ. 08-27, ವಿಷ್ಕಂಭ ಗಂ. 28-16 ಕರಣ: ಬಾಲವ ಗಂ. 10-11, ಮಿಥುನ ಮಾಸದ 29 ನೇ ದಿನ.
ರಾಹುಕಾಲ : ಮಧ್ಯಾಹ್ನ 01:30 – 03:00
ಸೂರ್ಯೋದಯ : 06-14 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 14 ಜುಲ್ ಹಿಜಾನ್
ಅದೃಷ್ಟ ಸಂಖ್ಯೆ : 2, 7

ಮೇಷ : ಸಾಕಷ್ಟು ಎಚ್ಚರ ವಹಿಸದೇ ಅತಿಯಾದ ಆತ್ಮವಿಶ್ವಾಸ, ಎಲ್ಲವೂ ತಿಳಿದಿದೆ ಎಂಬ ಅಹಂಕಾರ ಮುಂದುವರೆದರೆ ಅಧಿಕಾರಿ ವರ್ಗದವರಿಂದ ಕಷ್ಟ-ನಷ್ಟ ಸ್ಥಾನಮಾನಕ್ಕೆ ಹಾನಿಯಾಗುವ ಸನ್ನಿವೇಶ ಬರುವುದು.

ವೃಷಭ: ಬುದ್ಧಿವಂತಿಕೆ ಹಾಗೂ ಯೋಜನೆಗಳು ನಿಮ್ಮ ಸಂವಹನವನ್ನು ಸುಲಭ-ಗೊಳಿಸುತ್ತದೆ. ಅಬಕಾರಿ ಗುತ್ತಿಗೆದಾರರಿಗೆ ಆದಾಯ ಹೆಚ್ಚುವುದು. ಮಕ್ಕಳಿಂದ ಅಹಿತಕರ ಕಾರ್ಯಗಳು ನಡೆದು ಮಾನಸಿಕ ಚಿಂತೆ ಉಂಟಾಗಬಹುದು.

ಮಿಥುನ : ಗುಂಪು ಚಟುವಟಿಕೆಗಳಿಗೆ ಈ ದಿನ ನಿಮ್ಮ ಮುಂದಾಳತ್ವ ಅಗತ್ಯ. ಆಫೀಸಿನಲ್ಲಿ ನಡೆಯುವ ವಿಚಾರಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳು ನಿಮ್ಮ ಪರವಾಗಿಯೇ ಇರುತ್ತಾರೆ.

ಕರ್ಕಾಟಕ: ಕೌಟುಂಬಿಕವಾಗಿ ನೆಲೆ ನಿಂತದ್ದರಿಂದ ಮನಸ್ಸಿಗೆ ಸಮಾಧಾನ. ವೃತ್ತಿ ಬರಹಗಾರರಿಗೆ ವಿಪುಲ ಅವಕಾಶಗಳು ದೊರೆಯಲಿದೆ. ಉಳಿತಾಯ ಯೋಜನೆಯಲ್ಲಿ ಆಸಕ್ತಿ ಇದ್ದರೂ ಖರ್ಚಿನ ಅಂಶ ಅಧಿಕ.

ಸಿಂಹ : ನೀವು ಇಂದು ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಹಣಗ ಬೇಕಾಗ ಬಹುದು. ಮನೆಯನ್ನು ಅಲಂಕರಿಸಿ ಸೂಕ್ತ ಬದಲಾವಣೆ ತರಲು ಒಳ್ಳೆಯ ದಿನ. ಲೋಹ ವಸ್ತು ವ್ಯಾಪಾರಿಗಳಿಗೆ, ವಿತರಕರಿಂದ ಸಣ್ಣ-ಪುಟ್ಟ ತೊಂದರೆ.

ಕನ್ಯಾ : ಸಂಗೀತಗಾರರಿಗೆ ಪ್ರತಿಭೆ ಹೊರಹಾಕಲು ಹಾಗು ಜನಪ್ರಿಯರಾಗಲು ಉತ್ತಮ ವೇದಿಕೆ ಸಿಗಲಿದೆ. ಧಾರ್ಮಿಕ ಕೆಲಸದಲ್ಲಿ ಆಸಕ್ತಿ. ತಿರುಗಾಟದಿಂದ ಧನಹಾನಿಯಾದರೂ, ಬಂಧುಗಳ ಜೊತೆಯಲ್ಲಿನ ಸಂಭ್ರಮ ಸಿಗಲಿದೆ.

ತುಲಾ: ಜಾಗ ಖರೀದಿಸಲು ಅಥವಾ ಒಪ್ಪಂದಕ್ಕೆ ಸಹಿ ಹಾಕಲು ಇಂದು ಸರಿಯಾದ ದಿನ. ನಿಮ್ಮ ವರಮಾನದಲ್ಲಿ ಈ ದಿನ ಯಾವುದೇ ರೀತಿಯ ಕೊರತೆ ಇರುವುದಿಲ್ಲ.

ವೃಶ್ಚಿಕ : ಬಾಕಿ ಉಳಿದ ಕೆಲಸವನ್ನು ಪೂರ್ತಿಗೊಳಿಸಲು ಈ ದಿನ ಪ್ರಶಸ್ತ. ಯಾವುದೇ ರೀತಿಯ ಖರೀದಿಯಲ್ಲಿ ಎಚ್ಚರವಿರಲಿ, ಮೋಸ ಹೋಗುವ ಸಂಭವವಿದೆ. ಸಾಲದ ರೂಪದಲ್ಲಿ ಹಣವನ್ನು ಯಾರಿಗೂ ಇಂದು ನೀಡಬೇಡಿ.

ಧನು : ನೀವು ಈಗಾಗಲೇ ಒಪ್ಪಿಕೊಂಡಿರುವ ಒಪ್ಪಂದವೊಂದು ಮುರಿದು ಬೀಳದಂತೆ ಎಚ್ಚರವಹಿಸುವುದರಿಂದ ಗೌರವ ಉಳಿಯುವುದು. ವಿದೇಶ ಯಾತ್ರಿಗಳಿಗೆ ಪ್ರಯಾಣದಲ್ಲಿ ಸುಖ.

ಮಕರ : ಜೀವನದಲ್ಲಿ ಮುಂದುವರಿಯಬೇಕು, ಉನ್ನತವಾದ ಸ್ಥಾನ ಅಲಂಕರಿಸಬೇಕು ಎಂಬುವ ಉತ್ಕಟವಾದ ಅಭಿಲಾಷೆ ಈ ದಿನ ನಿಮ್ಮ ಕೆಲಸದಲ್ಲಿ ಕಾಣುವುದು. ಬುದ್ಧಿಬಲದ ತಂತ್ರಗಾರಿಕೆಯನ್ನು ಉಪಯೋಗಿಸಿ

ಕುಂಭ : ವಾಕ್ಚಾತುರ್ಯವನ್ನು ಬೆಳೆಸಿಕೊಳ್ಳುವ ಬಗ್ಗೆ ನಿಮ್ಮ ಪ್ರಯತ್ನವಿರಲಿ. ತಂತ್ರಜ್ಞಾನಿಗಳಿಗೆ ಉದ್ಯೋಗದಲ್ಲಿ ನಿಮ್ಮಿಂದ ಬಗೆಹರಿಸಲಾಗದ ಸಮಸ್ಯೆ ಎದುರಾಗಬಹುದು.

ಮೀನ : ವೈಯುಕ್ತಿಕವಾಗಿ ಎಷ್ಟು ಹಣ ಗಳಿಸಬಹುದೆಂದು ಲೆಕ್ಕಾಚಾರ ಹಾಕುವುದಕ್ಕಿಂತ ಬಂಡವಾಳ ಕಾಯ್ದುಕೊಳ್ಳುವುದರತ್ತ ಗಮನ ಹರಿಸಿ. ದೂರ ಪ್ರಯಾಣಗಳನ್ನು ಮುಂದೂಡುವಂತೆ ಮನೆಯಲ್ಲಿ ಒತ್ತಾಯ ಹೇರುವರು.

ಪದಬಂಧ 5018

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಕದಲದೇ ಇರುವಂಥದ್ದು (2)
3. ಚಿಹ್ನೆ ಇಲ್ಲಿ ಕಾಣುತ್ತಿದೆ (3)
5. ಮರದ ಸಮೀಪ ನಡೆದ ಕಾಳಗ (3)
7. ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
9. ಮಣ್ಣಿನ ಪಾತ್ರೆ (3)
10. ದೂರವೇನಿಲ್ಲ! ಬಹಳ ಹತ್ತಿರ! (3)
11. ಯುದ್ಧ ಮಾಡಲು ಸಜ್ಜಾದ ಭೂಮಿ (4)
13. ಒರಟ ಹಿಡಿರುವುದೆಲ್ಲಾ ನಿಸ್ಸಾರವಾದುದು! (3)
15. ರಮಣ ತೋರಿಸಿದ ಐಶ್ವರ್ಯ! (3)
16. ಜರೂರಾಗಿ ಹಾಕಿದ ಸಹಿ! (2)

ಮೇಲಿಂದ ಕೆಳಕ್ಕೆ
2. ಭರವಸೆ ನೀಡಿದಾಗ ಹೆಚ್ಚಿದ ವೇಗ (3)
3. ಹಾರ ಕೊನೆಗಿಟ್ಟು ಹೊಡೆಯುವಿಕೆ! (3)
4. ಮಂಗಳಾರತಿಯಲ್ಲಿ ಉರಿಸುವ ಸುಗಂಧ ದ್ರವ್ಯ (3)
6. ಕಡೆದ ಮೊಸರು (3)
8. ಇಲ್ಲಿಯೇ ವಿನಾಯಕ ಪ್ರತ್ಯಕ್ಷವಾಗಿದ್ದಾನಲ್ಲಾ! (3)
9. ಸಣ್ಣ ಸಣ್ಣ ಗೆಜ್ಜೆಗಳಿಂದ ಕೂಡಿದ ಕಾಲಿನ ಕಡಗ (3)
10. ಸಮೀಪದಲ್ಲಿ ಗಾಳಿ ಬೀಸುತ್ತಿದೆ (3)
12. ಗರ ಬಡಿದವನಿರುವ ಗವಿ! (3)
13. ಪದ್ಯಗಳ ಸಾಲು (3)
14. ಗಂಡು ಕುರಿ ಇಲ್ಲಿದೆ (3)



5017ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. ಅಪಚಾರ 3. ಪರೋಕ್ಷ
4. ವಿಸ್ಫುಲಿಂಗ 6. ರಥ
7. ಅಡಾವುಡಿ 8. ಸಹಜ
9. ಅನುಮತಿ 12. ಕಂದು
13. ಕನ್ನಡಕ 15. ರಂಜಕ
16. ಡಮರುಗ

ಮೇಲಿಂದ ಕೆಳಕ್ಕೆ:
1. ಅಕ್ಷರಜ್ಞ 2. ರವಿ
3. ಪರಿಷೆ 4. ಗರಡಿ
7. ಅಜ 8. ಸತಿ
9. ಅಳ್ಳಕ 10. ಚದುರಂಗ
11. ಭೌತಿಕ 14. ಕಡ

ಸುಡೊಕು 5404

	7			6			5	
2					5		6	
		1	2			4		9
		2		5			4	
4					6			
	1		3		2		7	
	2			1		8		
1			8					4
	8			3	7		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5403 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

ಷೇರುಪೇಟೆ ವಹಿವಾಟು

372



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16058
ಇಂದಿನ ಅಂತ್ಯ	15,966
▼	92
ದಿನದ ಕನಿಷ್ಠ	15,950

ವಿನಿಮಯ ದರ

$ ಡಾಲರ್	79.81
£ ಪೌಂಡ್	94.70
€ ಯುರೊ	79.92
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹470

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615 (1615)
ಸೋಯಾ (ರಿಫೈನ್ಡ್)	₹1260 (1270)
ಸೂರ್ಯಕಾಂತಿ (ರಿಫೈನ್ಡ್)	₹1590 (1600)
ಪಾಮೋಲಿನ್	₹1177 (1205)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹200-479
ದ್ವಿತಳಿ (ಬಿ.ವಿ)	₹150-728

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹173.50
ಆರ್‌ಎಸ್‌ಎಸ್-5	₹164
ಗುಡ್ ಲಾಟ್	₹158

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-1800
ಮಧ್ಯಮ	₹1000-1500
ಸಣ್ಣ	₹500-1000

ಹುಂಡೈ ಟಕ್ಸನ್ ಹೊಸ ಆವೃತ್ತಿ ಅನಾವರಣ

ನವದೆಹಲಿ (ಪಿಟಿಐ): ಹುಂಡೈ ಮೋಟರ್ ಇಂಡಿಯಾ ಕಂಪನಿಯು ಟಕ್ಸನ್ ಎಸ್‌ಯುವಿಯ ಹೊಸ ಆವೃತ್ತಿಯನ್ನು ಬುಧವಾರ ಅನಾವರಣಗೊಳಿಸಿದೆ.

ಮುಂದಿನ ತಿಂಗಳು ಇದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಆಲೋಚನೆಯನ್ನು ಕಂಪನಿ ಹೊಂದಿದೆ.

ನಾಲ್ಕನೇ ಪೀಳಿಗೆಯ ಈ ಆವೃತ್ತಿಯು ಪೆಟ್ರೋಲ್ ಮತ್ತು ಡೀಸೆಲ್ ಎಂಜಿನ್‌ಗಳಲ್ಲಿ ಕ್ರಮವಾಗಿ 6 ಮತ್ತು 8 ಸ್ಪೀಡ್ ಆಟೊಮೆಟಿಕ್ ಟ್ರಾನ್ಸ್‌ಮಿಷನ್‌ಗಳಲ್ಲಿ ಲಭ್ಯವಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

13-7-2022

ಜಾವಾ 70/80(ಹೊಸ)	11050-11100
ಜಾವಾ 80/90(ಹೊಸ)	10450-10500
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10850-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1625)
ಒಂದು ವಾರದ ಡೆಲಿವರಿ	1620 (1620)
ಸೋಯಾ ಕಚ್ಚಾ	1190 (1240)
ಪಾಮ್ ವಾರದ ಡೆಲಿವರಿ	1175 (1203)
ಸೂರ್ಯಕಾಂತಿ ಎಣ್ಣೆ ಕಚ್ಚಾ	1530 (1540)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

50,575 (50,675)

ಬೆಳ್ಳಿ ಕೆ.ಜಿ 56,000 (56,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಆಮದು ಸುಂಕ ವಂಚನೆ: 'ಒಪ್ಪೊ'ಗೆ ನೋಟಿಸ್

ನವದೆಹಲಿ (ಪಿಟಿಐ): ₹ 4,389 ಕೋಟಿ ಆಮದು ಸುಂಕ ವಂಚಿಸಿದ್ದಕ್ಕಾಗಿ ಚೀನಾದ ಸ್ಮಾರ್ಟ್‌ಫೋನ್ ತಯಾರಿಕಾ ಕಂಪನಿ 'ಒಪ್ಪೊ'ದ ಭಾರತದ ಘಟಕಕ್ಕೆ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಒಪ್ಪೊ ಕಂಪನಿಗೆ ಸೇರಿದ ಸ್ಥಳಗಳಲ್ಲಿ ನಡೆದ ದಾಳಿಯ ವೇಳೆ ಕೆಲವು ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಆಮದು ಮಾಡಿಕೊಂಡ ಕೆಲವು ವಸ್ತುಗಳ ವಿವರ ಸಲ್ಲಿಸುವಾಗ, ರಾಯಧನ ಪಾವತಿಸುವಾಗ, ಬಹುರಾಷ್ಟ್ರೀಯ ಕಂಪನಿಗಳಿಗೆ ಪರವಾನಗಿ ಶುಲ್ಕ ನೀಡುವಾಗ ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿ ನೀಡಿರುವುದು ಗೊತ್ತಾಗಿತ್ತು. ಹೀಗಾಗಿ ಕಂಪನಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ ಎಂದು ಸಚಿವಾಲಯವು ಹೇಳಿದೆ.

ಒಪ್ಪೊ ಮೊಬೈಲ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯು ಒಟ್ಟು ₹ 4,389 ಕೋಟಿ ಆಮದು ಸುಂಕ ವಂಚಿಸಿರುವುದು ತನಿಖೆಯ ವೇಳೆ ಗೊತ್ತಾಗಿದೆ ಎಂದು ಸಚಿವಾಲಯ ಹೇಳಿದೆ. 'ನೋಟಿಸ್‌ನಲ್ಲಿ ಉಲ್ಲೇಖಿಸಿರುವ ಆರೋಪಗಳ ವಿಚಾರವಾಗಿ ನಾವು ಭಿನ್ನ ಅಭಿಪ್ರಾಯ ಹೊಂದಿದ್ದೇವೆ. ನೋಟಿಸ್‌ಅನ್ನು ಪರಿಶೀಲಿಸಲಾಗುತ್ತಿದೆ. ಅದಕ್ಕೆ ಉತ್ತರಿಸಲಾಗುತ್ತದೆ. ನಾವು ಜವಾಬ್ದಾರಿಯುತ ಕಾರ್ಪೊರೇಟ್ ಸಂಸ್ಥೆ' ಎಂದು ಕಂಪನಿ ಹೇಳಿದೆ.

ಆಮದು ಮಾಡಿಕೊಳ್ಳುವ ಸಂದರ್ಭದಲ್ಲಿ ಸೀಮಾ ಸುಂಕ ಅಧಿಕಾರಿಗಳಿಗೆ ತಪ್ಪು ವಿವರ ನೀಡಲಾಗಿತ್ತು ಎಂಬುದನ್ನು ಒಪ್ಪೊ ಇಂಡಿಯಾದ ಹಿರಿಯ ಅಧಿಕಾರಿಗಳು ಮತ್ತು ದೇಶಿ ಪೂರೈಕೆದಾರರು ತನಿಖೆಯ ವೇಳೆ ಒಪ್ಪಿಕೊಂಡಿದ್ದಾರೆ ಎಂದು ಸಚಿವಾಲಯ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಪುತ್ತೂರು	
ಕೋಕ	11000-26000
ಹೊಸತು	30500-43500
ಶಿವಮೊಗ್ಗ	
ಬೆಟ್ಟೆ	51569-53560
ಗೊರಬಲು	17139-38199
ರಾಶಿ	46099-49799
ಸರಕು	57099-74099
ಸಿದ್ದಾಪುರ	
ಬಿಳಿಗೋಟು	26590-33199
ಚಾಲಿ	35699-38699
ಕೋಕ	24671-33400
ಕೆಂಪುಗೋಟು	31899-31899
ರಾಶಿ	45299-48399
ತಟ್ಟಿಬೆಟ್ಟೆ	46899-46899
ಶಿರಸಿ	
ಬೆಟ್ಟೆ	34399-45699
ಬಿಳಿಗೋಟು	24199-32899
ಚಾಲಿ	36119-39069
ರಾಶಿ	46099-48399

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15750	15300	15700	205.35 ಸೆಂಟ್ಸ್
ಎಸಿ	8820	8300	8550	
ಆರ್‌ಪಿ	9500	9500	9500	ಲಂಡನ್
ಆರ್‌ಸಿ	4600	4500	4550	1954ಡಾಲರ್ಸ್

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಒತ್ತಾಯ

ಧಾನ್ಯಗಳಿಗೆ ತೆರಿಗೆ ಸದ್ಯಕ್ಕೆ ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಯಾಕ್ ಮಾಡಿರುವ, ಲೇಬಲ್ ಇರುವ ಆಹಾರ ಧಾನ್ಯಗಳ ಮೇಲೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಶೇಕಡ 5ರಷ್ಟು ತೆರಿಗೆ ವಿಧಿಸುವ ಶಿಫಾರಸನ್ನು ತಕ್ಷಣಕ್ಕೆ ಅನುಷ್ಠಾನಗೊಳಿಸಬಾರದು ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಒತ್ತಾಯಿಸಿದೆ.

ಪ್ಯಾಕ್ ಮಾಡಿರುವ, ಲೇಬಲ್ ಇರುವ ಗೋಧಿ ಹಿಟ್ಟು ಸೇರಿದಂತೆ ಹಲವು ಆಹಾರ ಧಾನ್ಯಗಳನ್ನು ಶೇ 5ರ ತೆರಿಗೆ ವ್ಯಾಪ್ತಿಗೆ ತರಲು ಜಿಎಸ್‌ಟಿ ಮಂಡಳಿಯು ಈಚೆಗೆ ನಡೆದ ಸಭೆಯಲ್ಲಿ ಶಿಫಾರಸು ಮಾಡಿದೆ.

ಇದು ಸೋಮವಾರದಿಂದ (ಜುಲೈ 18) ಜಾರಿಗೆ ಬರಬೇಕಿದೆ. ಜಿಎಸ್‌ಟಿ ಅಡಿಯಲ್ಲಿ ಈವರೆಗೆ ಬ್ರ್ಯಾಂಡೆಡ್ ಆಹಾರ ವಸ್ತುಗಳಿಗೆ ಮಾತ್ರ ತೆರಿಗೆ ವಿಧಿಸಲಾಗುತ್ತಿತ್ತು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಫ್‌ಕೆಸಿಸಿಐ ಅಧ್ಯಕ್ಷ ಡಾ.ಐ.ಎಸ್. ಪ್ರಸಾದ್, 'ಪ್ಯಾಕ್ ಮಾಡಿರುವ, ಲೇಬಲ್ ಅಂಟಿಸಿರುವ ಧಾನ್ಯಗಳಿಗೆ ತೆರಿಗೆ ವಿಧಿಸುವುದರಿಂದ ರೈತರಿಗೆ ಹಾಗೂ ವರ್ತಕರಿಗೆ ಅನಗತ್ಯ ಹೊರೆಯಾಗುತ್ತದೆ. ಹೀಗಾಗಿ, ಈ ತೆರಿಗೆಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸುವುದನ್ನು ಮುಂದಕ್ಕೆ ಹಾಕಬೇಕು' ಎಂದು ಒತ್ತಾಯಿಸಿದರು.

> **ಜಿಎಸ್‌ಟಿ ವಿಧಿಸುವುದನ್ನು ವಿರೋಧಿಸಿ ರಾಜ್ಯದ ವರ್ತಕರು ಜುಲೈ 15ರಂದು ನಡೆಸುವ ಬಂದ್‌ಗೆ ಕರ್ನಾಟಕ ರಾಜ್ಯ ರೈತ ಸಂಘದ ಬೆಂಬಲವಿದೆ**
> **ಚಾಮರಸ ಮಾಲಿಪಾಟೀಲ**
> ರಾಜ್ಯ ರೈತ ಸಂಘದ ಗೌರವಾಧ್ಯಕ್ಷ

ಆಹಾರ ವಸ್ತುಗಳ ಮೇಲಿನ ಈ ತೆರಿಗೆಯ ಸಾಧಕ, ಬಾಧಕ ಅಧ್ಯಯನ ನಡೆಸಿದ ನಂತರವಷ್ಟೇ ಅನುಷ್ಠಾನಕ್ಕೆ ತರಬೇಕು ಎಂದು ಅಭಿಪ್ರಾಯಪಟ್ಟರು.

ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆ ಇದ್ದಾಗ ಆಹಾರ ವಸ್ತುಗಳಿಗೆ ತೆರಿಗೆ ವಿನಾಯಿತಿ ಇತ್ತು. ಈಗ ಧಾನ್ಯಗಳಿಗೆ ತೆರಿಗೆ ವಿಧಿಸುವುದರಿಂದ ಆಹಾರ ವಸ್ತುಗಳ ಮೇಲಿನ ಹಣದುಬ್ಬರದ ಮೇಲೆ ಯಾವ ಬಗೆಯ ಪರಿಣಾಮ ಉಂಟಾಗಬಹುದು ಎಂಬುದನ್ನು ಪರಿಶೀಲಿಸಬೇಕಿದೆ ಎಂದು ಎಫ್‌ಕೆಸಿಸಿಐ ಪದಾಧಿಕಾರಿ ಬಿ.ಟಿ. ಮನೋಹರ್ 'ಪ್ರಜಾವಾಣಿ'ಗೆ ವಿವರಿಸಿದರು.

ಪ್ಯಾಕ್ ಮಾಡಿರುವ, ಲೇಬಲ್ ಇರುವ ಎಷ್ಟು ತೂಕದ ಆಹಾರ ವಸ್ತುಗಳಿಗೆ ತೆರಿಗೆ ವಿಧಿಸಲಾಗುತ್ತದೆ, ನಿರ್ದಿಷ್ಟ ಪ್ರಮಾಣಕ್ಕಿಂತ ಕಡಿಮೆ ತೂಕದ ಪ್ಯಾಕ್‌ಗೆ ತೆರಿಗೆ ವಿನಾಯಿತಿ ಇರಲಿದೆಯೇ ಎಂಬುದು ಸ್ಪಷ್ಟವಾಗಬೇಕಿದೆ ಎಂದು ಅವರು ವಿವರಿಸಿದರು.

ಪ್ರಯಾಣಿಕ ವಾಹನ ಸಗಟು ಮಾರಾಟ ಶೇ 19ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನ ಸಗಟು ಮಾರಾಟವು 2021ರ ಜೂನ್‌ಗೆ ಹೋಲಿಸಿದರೆ 2022ರ ಜೂನ್‌ನಲ್ಲಿ ಶೇಕಡ 19ರಷ್ಟು ಏರಿಕೆ ಕಂಡಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟ (ಎಸ್‌ಐಎಎಂ) ಮಾಹಿತಿ ನೀಡಿದೆ.

2021ರ ಜೂನ್‌ನಲ್ಲಿ 2.31 ಲಕ್ಷ ವಾಹನಗಳು ಮಾರಾಟ ಆಗಿದ್ದವು. 2022ರ ಜೂನ್‌ನಲ್ಲಿ 2.75 ಲಕ್ಷಕ್ಕೆ ಏರಿಕೆ ಆಗಿದೆ.

ಸೆಮಿಕಂಡಕ್ಟರ್ ಚಿಪ್ ಪೂರೈಕೆಯಲ್ಲಿ ಸುಧಾರಣೆ ಕಂಡುಬಂದಿರುವುದರಿಂದ ಈ ಪ್ರಮಾಣದ ಬೆಳವಣಿಗೆ ಸಾಧ್ಯವಾಗಿದೆ ಎಂದು ತಿಳಿಸಿದೆ.

ಮೊದಲ ತ್ರೈಮಾಸಿಕದಲ್ಲಿ ಪ್ರಯಾಣಿಕ ವಾಹನ ಮಾರಾಟವು 6.46 ಲಕ್ಷದಿಂದ 9.10 ಲಕ್ಷಕ್ಕೆ, ಅಂದರೆ ಶೇ41ರಷ್ಟು ಹೆಚ್ಚಾಗಿದೆ

ಮಸ್ಕ್ ವಿರುದ್ಧ ಟ್ವಿಟರ್ ಕಾನೂನು ಸಮರ

ಸ್ಯಾನ್‌ಫ್ರಾನ್ಸಿಸ್ಕೊ (ಎಎಫ್‌ಪಿ): ಖರೀದಿ ಒಪ್ಪಂದದಿಂದ ಹಿಂದಕ್ಕೆ ಸರಿದಿರುವ ಉದ್ಯಮಿ, ಟೆಸ್ಲಾ ಕಂಪನಿಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ (ಸಿಇಒ) ಇಲಾನ್ ಮಸ್ಕ್ ವಿರುದ್ಧ ಟ್ವಿಟರ್ ಕಂಪನಿಯು ಕಾನೂನು ಸಮರಕ್ಕೆ ಮುಂದಾಗಿದೆ.

'ಟ್ವಿಟರ್ ಖರೀದಿ ಒಪ್ಪಂದವನ್ನು ಪೂರ್ಣಗೊಳಿಸುವಂತೆ ಮಸ್ಕ್ ಅವರಿಗೆ ಆದೇಶಿಸಬೇಕು' ಎಂದು ಟ್ವಿಟರ್ ಕಂಪನಿಯು ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿಯಲ್ಲಿ ಕೋರಲಾಗಿದೆ. ಮಸ್ಕ್ ಅವರಿಗೆ ಎಷ್ಟೇ ದಂಡ ವಿಧಿಸಿದರೂ, ಆಗಿರುವ ನಷ್ಟವನ್ನು ಸರಿಪಡಿಸಲು ಆಗುವುದಿಲ್ಲ ಎಂದು ಅದು ಹೇಳಿದೆ.

'ಖರೀದಿ ಒಪ್ಪಂದದಿಂದ ನುಣುಚಿಕೊಳ್ಳಲು ಮಸ್ಕ್ ಬಯಸುತ್ತಿದ್ದಾರೆ ಎಂಬುದನ್ನು ಅವರ ವರ್ತನೆಯು ಸ್ಪಷ್ಟಪಡಿಸುತ್ತಿದೆ. ಆ ಮೂಲಕ ಅವರು ಟ್ವಿಟರ್‌ಗೆ ಹಾನಿ ಉಂಟುಮಾಡುತ್ತಿದ್ದಾರೆ. ಮಸ್ಕ್ ಅವರ ನಡೆಯಿಂದಾಗಿ ಟ್ವಿಟರ್‌ಗೆ ನಷ್ಟವಾಗಿದೆ, ಮುಂದೆಯೂ ನಷ್ಟವಾಗಲಿದೆ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ನಕಲಿ ಖಾತೆಗಳ ಸಂಖ್ಯೆಯ ವಿಚಾರದಲ್ಲಿ ತಪ್ಪು ಹೇಳಿಕೆಗಳನ್ನು ಟ್ವಿಟರ್ ನೀಡುತ್ತಿದೆ ಎಂದು ಆರೋಪಿಸಿದ್ದ ಮಸ್ಕ್, ಟ್ವಿಟರ್ ಖರೀದಿ ಒಪ್ಪಂದದಿಂದ ತಾವು ಹೊರನಡೆಯುತ್ತಿರುವುದಾಗಿ ಕಳೆದ ವಾರ ಹೇಳಿದ್ದರು.

ಮಾರಾಟದ ಒತ್ತಡ: ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ತೈಲ, ಅನಿಲ, ಬ್ಯಾಂಕಿಂಗ್ ಮತ್ತು ಐ.ಟಿ. ಷೇರುಗಳು ಮಾರಾಟದ ಒತ್ತಡಕ್ಕೆ ಒಳಗಾಗಿದ್ದರಿಂದ ದೇಶದ ಷೇರುಪೇಟೆಗಳು ಬುಧವಾರ ನಕಾರಾತ್ಮಕವಾಗಿ ವಹಿವಾಟು ಅಂತ್ಯಗೊಳಿಸಿದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 372 ಅಂಶ ಇಳಿಕೆ ಕಂಡು 53,514 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 92 ಅಂಶ ಇಳಿಕೆಯಾಗಿ 15,966 ಅಂಶಗಳಿಗೆ ತಲುಪಿತು.

ಏಷ್ಯಾದ ಮಾರುಕಟ್ಟೆಗಳ ಗಳಿಕೆಯ ಪ್ರಭಾವದಲ್ಲಿ ಸೆನ್ಸೆಕ್ಸ್ 54,211 ಅಂಶಗಳ ಗರಿಷ್ಠ ಮಟ್ಟದಲ್ಲಿ ವಹಿವಾಟು ಆರಂಭಿಸಿತು. ಆದರೆ, ಯುರೋಪ್ ಮಾರುಕಟ್ಟೆಗಳ ವಹಿವಾಟು ಇಳಿಕೆ ಕಂಡಿದ್ದರಿಂದ ಸೆನ್ಸೆಕ್ಸ್ ನಕಾರಾತ್ಮಕ ಹಾದಿಗೆ ಹೊರಳಿತು.

'ಮಾರುಕಟ್ಟೆಯು ಒತ್ತಡದಲ್ಲಿ ವಹಿವಾಟು ನಡೆಸಿತು. ಶೇಕಡ 0.50ಕ್ಕೂ ಹೆಚ್ಚಿನ ನಷ್ಟ ಕಂಡಿತು' ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 1ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 100.5 ಡಾಲರ್‌ಗೆ ತಲುಪಿತು.

> ## 80ರ ಸನಿಹಕ್ಕೆ ರೂಪಾಯಿ
>
> ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಬುಧವಾರ 79.81ಕ್ಕೆ ತಲುಪಿದೆ. ದಿನದ ವಹಿವಾಟಿನಲ್ಲಿ ರೂಪಾಯಿಯು 22 ಪೈಸೆಯಷ್ಟು ಮೌಲ್ಯ ಕಳೆದುಕೊಂಡಿದೆ.
> ದೇಶದ ಬಂಡವಾಳ ಮಾರುಕಟ್ಟೆಗಳಿಂದ ವಿದೇಶಿ ಬಂಡವಾಳ ಹೊರಹರಿವು ಮುಂದುವರಿದಿದೆ. ವಿದೇಶಿ ಹೂಡಿಕೆದಾರರು ಬುಧವಾರ ₹ 2,839 ಕೋಟಿ ಮೌಲ್ಯದ ಷೇರು ಮಾರಾಟ ಮಾಡಿದ್ದಾರೆ. ಡಾಲರ್ ಮೌಲ್ಯವು 20 ವರ್ಷಗಳ ಗರಿಷ್ಠ ಮಟ್ಟ ತಲುಪಿದೆ.
> 'ಕಚ್ಚಾ ತೈಲದ ಬೆಲೆಯು 100 ಡಾಲರ್‌ಗಿಂತ ಕಡಿಮೆಯಾದರೆ ರೂಪಾಯಿಗೆ ಅನುಕೂಲವಾಗಬಹುದು' ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ವಿಶ್ಲೇಷಕ ಜತೀನ್ ತ್ರಿವೇದಿ ಹೇಳಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಎರಡನೇ ವರ್ಷದ ಪುಣ್ಯಸ್ಮರಣೆ

ಶ್ರೀಕಂಠಯ್ಯನವರು

ಶ್ರೀಭಾಗ್ಯಲಕ್ಷ್ಮೀ ಫೈನಾನ್ಸ್ (ರಿ),

ಹೊಸ ಗುಡ್ಡದಹಳ್ಳಿ, ಬೆಂಗಳೂರು–26

ಮರಣ: 14.7.2020

ನಮ್ಮ ಜೀವನದ ದಾರಿದೀಪವಾಗಿದ್ದ ನೀವೂ ನಮ್ಮನ್ನಗಲಿ ಎರಡು ವಸಂತ ಉರುಳಿದರೂ ತಮ್ಮ ಆದರ್ಶಗಳು ನಮಗಿಂದು ಮಾರ್ಗದರ್ಶಕವಾಗಿದೆ.

: ಸದಾ ನಿಮ್ಮ ನೆನಪಿನಲ್ಲಿ :

ಧರ್ಮಪತ್ನಿ: ಶ್ರೀಮತಿ ಸರೋಜಮ್ಮ ಮತ್ತು ಮಗನಾದ ಎಸ್. ಅನಿಲ್‌ಕುಮಾರ್ ಮತ್ತು ಕುಟುಂಬದವರು ಹಾಗೂ ಬಂಧು-ಮಿತ್ರರು.

ಪಾಕ್ ಪತ್ರಕರ್ತನಿಗೆ ಆಹ್ವಾನ • ಐಎಸ್‌ಐಗೆ ಭಾರತದ ಬಗ್ಗೆ ಮಾಹಿತಿ

ಬಿಜೆಪಿ ಆರೋಪ ನಿರಾಕರಿಸಿದ ಅನ್ಸಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಾಕಿಸ್ತಾನದ ಐಎಸ್‌ಐ ಪರ ಗೂಢಚಾರಿಕೆ ನಡೆಸಿರುವ ಅಲ್ಲಿನ ಪತ್ರಕರ್ತರನ್ನು ಭಾರತಕ್ಕೆ ಕರೆಸಿಕೊಂಡಿದ್ದಾರೆ ಎನ್ನುವ ಬಿಜೆಪಿ ವಕ್ತಾರರ ಆರೋಪವನ್ನು ಮಾಜಿ ಉಪ ರಾಷ್ಟ್ರಪತಿ ಹಮೀದ್ ಅನ್ಸಾರಿ ಅವರು ತಳ್ಳಿಹಾಕಿದ್ದು, ನನ್ನ ವಿರುದ್ಧ ಸುಳ್ಳಿನ ಸರಮಾಲೆಯನ್ನು ಹೊರಿಸಲಾಗಿದೆ ಎಂದು ಬುಧವಾರ ಅವರು ಹೇಳಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅನ್ಸಾರಿ, 'ರಾಷ್ಟ್ರೀಯ ಹಿತಾಸಕ್ತಿಯೊಂದಿಗೆ ಇರಾನ್‌ನೊಂದಿಗೆ ಭಾರತದರಾಯಭಾರಿಯಾಗಿ ರಾಜಿ ಮಾಡಿಕೊಂಡಿದ್ದಾರೆ' ಎಂಬ ಭಾರತದ 'ರಾ' ಕಾರ್ಯನಿರ್ವಾಹಕರ ಹೇಳಿಕೆಗಳನ್ನು ಉಲ್ಲೇಖಿಸಿ ತಮ್ಮ ವಿರುದ್ಧದ ಆರೋಪಗಳನ್ನು ಅವರು ತಿರಸ್ಕರಿಸಿದ್ದಾರೆ.

'ಯುಪಿಎ ಆಡಳಿತದ ಅವಧಿಯಲ್ಲಿ ಭಾರತಕ್ಕೆ ಐದು ಬಾರಿ ಭೇಟಿ ನೀಡಿದ್ದೆ. ಇಲ್ಲಿ ಸಂಗ್ರಹಿಸಿದ್ದ ಸೂಕ್ಷ್ಮ ಮಾಹಿತಿಗಳನ್ನು ಪಾಕಿಸ್ತಾನಕ್ಕೆ ನೀಡಿದ್ದೆ ಎಂದು ಐಎಸ್‌ಐ ಪರ ಗೂಢಚಾರರಾಗಿದ್ದ ಪಾಕಿಸ್ತಾನದ ಪತ್ರಕರ್ತ ನುಸ್ರತ್ ಮಿರ್ಜಾ ಅವರ ಹೇಳಿಕೆಯ ಬಗ್ಗೆ ಹಮೀದ್ ಅನ್ಸಾರಿ ಮತ್ತು ಕಾಂಗ್ರೆಸ್ ಸ್ಪಷ್ಟನೆ ನೀಡಬೇಕು' ಎಂದು ಬಿಜೆಪಿಯ ವಕ್ತಾರ ಗೌರವ್ ಭಾಟಿಯಾ ಅವರು ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದ್ದರು.



ಹಮೀದ್ ಅನ್ಸಾರಿ

'ಅನ್ಸಾರಿ ಅವರ ಆಹ್ವಾನದ ಮೇರೆಗೆ ಪತ್ರಕರ್ತ ಮಿರ್ಜಾ ಭಾರತಕ್ಕೆ ಭೇಟಿ ನೀಡಿದ್ದರು. ಅಷ್ಟೇ ಅಲ್ಲ ಅನ್ಸಾರಿ ಅವರನ್ನೂ ಭೇಟಿ ಮಾಡಿದ್ದರು' ಎಂಬಗೌರವ್ ಭಾಟಿಯಾ ಅವರ ಆರೋಪವನ್ನು ಅನ್ಸಾರಿ ಅಲ್ಲಗಳೆದಿದ್ದಾರೆ.

'ಭಾರತದ ಉಪರಾಷ್ಟ್ರಪತಿಯಿಂದ ವಿದೇಶಿ ಗಣ್ಯರಿಗೆ ಸಾಮಾನ್ಯವಾಗಿ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಮೂಲಕ ಸರ್ಕಾರದ ಸಲಹೆಯ ಮೇರೆಗೆ ಆಹ್ವಾನಗಳು ಹೋಗುತ್ತಿರುತ್ತವೆ ಎಂಬುದು ಗೊತ್ತಿರುವ ಸಂಗತಿಯಾಗಿದೆ. 2010ರ ಡಿಸೆಂಬರ್ 11ರಂದು ನಾನು ಭಯೋತ್ಪಾದನೆಗೆ ಸಂಬಂಧಿಸಿದ ವಿಚಾರ ಸಂಕಿರಣವನ್ನು ಉದ್ಘಾಟಿಸಿದ್ದೆ. ಸಾಮಾನ್ಯವಾಗಿ ಅಲ್ಲಿಗೆ ಆಹ್ವಾನಿತರನ್ನು ಆಯೋಜಕರೇ ಕರೆಸಿರುತ್ತಾರೆ. ನಾನು ಯಾವತ್ತೂ ಮಿರ್ಜಾ ಅವರನ್ನು ಆಹ್ವಾನಿಸಿಲ್ಲ' ಎಂದೂ ಅನ್ಸಾರಿ ಅವರು ವಿವರಿಸಿದ್ದಾರೆ.

'ಇರಾನ್‌ನ ರಾಯಭಾರಿಯಾಗಿ ನಾನು ಮಾಡಿದ ಎಲ್ಲಾ ಕೆಲಸವೂ ಎಲ್ಲಾ ಸಮಯದಲ್ಲೂ ಅಂದಿನ ಸರ್ಕಾರದ ಗಮನದಲ್ಲಿದೆ. ಅಂತಹ ವಿಷಯಗಳಲ್ಲಿ ನಾನು ರಾಷ್ಟ್ರೀಯ ಭದ್ರತೆಗೆ ಬದ್ಧನಾಗಿದ್ದೇನೆ ಮತ್ತು ಅವುಗಳ ಬಗ್ಗೆ ಪ್ರತಿಕ್ರಿಯಿಸುವುದನ್ನು ತಡೆದಿದ್ದೇನೆ' ಎಂದೂ ಅವರು ಹೇಳಿದ್ದಾರೆ.

'ಭಾರತ ಸರ್ಕಾರವು ಎಲ್ಲಾ ಮಾಹಿತಿಗಳನ್ನು ಅರಿತಿರುತ್ತದೆ ಮತ್ತು ಅದಕ್ಕೆ ಮಾತ್ರವೇ ಸತ್ಯವನ್ನು ಹೇಳುವ ಅಧಿಕಾರವಿರುತ್ತದೆ. ಟೆಹರಾನ್ ನಂತರ ನಾನು ವಿಶ್ವಸಂಸ್ಥೆಗೆ ಭಾರತದ ಕಾಯಂ ಪ್ರತಿನಿಧಿಯಾಗಿ ನೇಮಕವಾದೆ. ನನ್ನ ಕೆಲಸವು ದೇಶ-ವಿದೇಶಗಳಲ್ಲಿ ಪ್ರಶಂಸೆಗೆ ಪಾತ್ರವಾಗಿದೆ' ಎಂದು ಅನ್ಸಾರಿ ತಿಳಿಸಿದ್ದಾರೆ.

ಸರ್ಕಾರಿ ನೌಕರರು ಜೀನ್ಸ್, ಟಿ-ಶರ್ಟ್ ಧರಿಸುವಂತಿಲ್ಲ

ಲಖನೌ: ಸರ್ಕಾರಿ ನೌಕರರು ಕಚೇರಿಯಲ್ಲಿ ಜೀನ್ಸ್ ಮತ್ತು ಟಿ-ಶರ್ಟ್ ಧರಿಸುವಂತಿಲ್ಲ ಎಂದು ಉತ್ತರ ಪ್ರದೇಶದ ಭದೋಹಿ ಜಿಲ್ಲೆಯ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಜಿಲ್ಲೆಯ ಸರ್ಕಾರಿ ಶಾಲೆಯ ಶಿಕ್ಷಕರು ಮತ್ತು ಇತರೆ ಇಲಾಖೆಗಳ ನೌಕರರಿಗೆ ಈ ನಿಯಮ ಅನ್ವಯವಾಗಲಿದೆ. ನೌಕರರು ಫಾರ್ಮಲ್ಸ್ ಧರಿಸಬೇಕು ಎಂದು ಅವರು ತಿಳಿಸಿದ್ದಾರೆ.

ಗುರುವಾರದ ನಂತರ ಹಿರಿಯ ಅಧಿಕಾರಿಗಳು ಶಾಲೆ ಮತ್ತಿತರ ಸರ್ಕಾರಿ ಕಚೇರಿಗಳಿಗೆ ತೆರಳಿ ಪರಿಶೀಲನೆ ನಡೆಸಲಿದ್ದಾರೆ. ನಿಯಮ ಉಲ್ಲಂಘಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಈ ಆದೇಶಕ್ಕೆ ಕೆಲ ಸರ್ಕಾರಿ ನೌಕರರು ವಿರೋಧ ವ್ಯಕ್ತಪಡಿಸಿದ್ದು, 'ಸಭ್ಯವಾದ ವಸ್ತ್ರ ಧರಿಸಿದರೆ ಸಾಕು, ವಸ್ತ್ರದ ಮೇಲೆ ನಿರ್ಬಂಧ ಹೇರುವಂತಿಲ್ಲ' ಎಂದಿದ್ದಾರೆ.

ನಾಸಾದ ಜೇಮ್ಸ್ ವೆಬ್ ಸ್ಪೇಸ್ ಟೆಲಿಸ್ಕೋಪ್ ಕಳುಹಿಸಿರುವ ನೀಹಾರಿಕೆಯೊಂದರ ಚಿತ್ರವನ್ನು ನಾಸಾ ಬಿಡುಗಡೆ ಮಾಡಿದೆ –ಎಎಫ್‌ಪಿ ಚಿತ್ರ

ಜೇಮ್ಸ್ ವೆಬ್ ಸ್ಪೇಸ್ ಸೆರೆಹಿಡಿದ ಆಕಾಶಕಾಯಗಳ ಚಿತ್ರ ಬಿಡುಗಡೆ

ನಾಸಾ ಗೊಡ್ಡಾರ್ಡ್ ಗಗನನೌಕೆ ಕೇಂದ್ರ, ಅಮೆರಿಕ (ಎಎಫ್‌ಪಿ): ನಾಸಾದ ಜೇಮ್ಸ್ ವೆಬ್ ಬಾಹ್ಯಾಕಾಶ ದೂರದರ್ಶಕವು ಕೋಟ್ಯಂತರ ಮೈಲುಗಳ ದೂರದಲ್ಲಿ, ನಕ್ಷತ್ರ, ನೀಹಾರಿಕೆ ಸೇರಿದಂತೆ ವಿವಿಧ ಆಕಾಶಕಾಯಗಳ ಚಿತ್ರಗಳನ್ನು ಕಳುಹಿಸಿದೆ. ಈ ಚಿತ್ರಗಳನ್ನು ನಾಸಾ ಬಿಡುಗಡೆ ಮಾಡಿದೆ.

ಈ ಬೆಳವಣಿಗೆಯು ಖಗೋಳ ವಿಜ್ಞಾನ ಕ್ಷೇತ್ರದಲ್ಲಿನ ಅನ್ವೇಷಣೆ, ಸಂಶೋಧನೆಗೆ ನಾಂದಿ ಹಾಡಲಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಆಗ ತಾನೆ ಸೃಷ್ಟಿಯಾಗಿರುವ ನಕ್ಷತ್ರಗಳಲ್ಲಿ ಪ್ರಪಾತಗಳಂತೆ ಕಾಣುವ ರಚನೆಗಳ, ಲಯಬದ್ಧವಾಗಿ 'ನೃತ್ಯ'ದಲ್ಲಿ ತೊಡಗಿರುವಂತೆ ಕಂಡುಬರುವ ತಾರೆಗಳ ಸಮೂಹದ ಚಿತ್ರಗಳನ್ನು ನಾಸಾ ಬಿಡುಗಡೆ ಮಾಡಿದ್ದು, ಖಗೋಳ ಆಸಕ್ತರ ಕುತೂಹಲ ಹೆಚ್ಚಿಸಿದೆ.

'ಬಾಹ್ಯಾಕಾಶ ದೂರದರ್ಶಕ ಕಳಿಸಿರುವ ಪ್ರತಿ ಚಿತ್ರವೂ ಹೊಸ ಆವಿಷ್ಕಾರವೇ ಆಗಿದೆ. ಪ್ರತಿ ಚಿತ್ರವು ಮನುಷ್ಯರು ಕಾಣದ ಬ್ರಹ್ಮಾಂಡ ಕುರಿತ ಹೊಸ ನೋಟ ನೀಡುತ್ತದೆ' ಎಂದು ನಾಸಾ ಆಡಳಿತಾಧಿಕಾರಿ ಬಿಲ್ ನೆಲ್ಸನ್ ಹೇಳಿದ್ದಾರೆ.

'ಚಿತ್ರಗಳು ಸುಂದರವಾಗಿವೆ. ವಿಜ್ಞಾನ ತನ್ನ ಒಡಲಲ್ಲಿ ಅಡಗಿಸಿಟ್ಟುಕೊಂಡಿರುವ ಅಚ್ಚರಿಗಳನ್ನು ಅವು ತೋರುತ್ತವೆ. ನಾವು ಇನ್ನೂ ಗುರುತಿಸಲಾಗದ ಅನೇಕ ಸಂಗತಿಗಳನ್ನು ಈ ಚಿತ್ರಗಳು ಒಳಗೊಂಡಿವೆ' ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಬಾಹ್ಯಾಕಾಶ ವಿಜ್ಞಾನಿ ಜಾನ್ ಮಾಥರ್ ಹೇಳಿದ್ದಾರೆ.

ಆಕಾಶಕಾಯಗಳ ಅಧ್ಯಯನಕ್ಕಾಗಿ ನಾಸಾ ಈ ಜೇಮ್ಸ್ ವೆಬ್ ಸ್ಪೇಸ್ ಟೆಲಿಸ್ಕೋಪ್ ಅನ್ನು ಒಳಗೊಂಡ ಖಗೋಳ ವೀಕ್ಷಣಾಲಯವನ್ನು ₹ 79 ಸಾವಿರ ಕೋಟಿ ವೆಚ್ಚದಲ್ಲಿ ನಿರ್ಮಿಸಿದೆ. ಕೋಟ್ಯಂತರ ಜ್ಯೋತಿರ್ವರ್ಷಗಳಷ್ಟು ದೂರದಲ್ಲಿನ ಆಕಾಶಕಾಯಗಳ ವೀಕ್ಷಣೆಗೆ ಇಲ್ಲಿ ಶಕ್ತಿಶಾಲಿಯಾದ 'ಇನ್‌ಫ್ರಾರೆಡ್ ಕ್ಯಾಮೆರಾ'ಗಳನ್ನು ಬಳಸಲಾಗುತ್ತದೆ.

> ## ತಂಡದಲ್ಲಿ ಇಬ್ಬರು ಭಾರತೀಯರು
> ನವದೆಹಲಿ: ಬ್ರಹ್ಮಾಂಡವನ್ನು ಹಿಂದೆಂದೂ ಕಂಡಿರದ ಸ್ಪಷ್ಟತೆಯಲ್ಲಿ ತೋರಿಸುತ್ತಿರುವ ಜೇಮ್ಸ್ ವೆಬ್ ಬಾಹ್ಯಾಕಾಶ ದೂರ ದರ್ಶಕದಲ್ಲಿ ಆಕಾಶಕಾಯಗಳ ಉಗಮ ಪತ್ತೆಹಚ್ಚುವ ಪ್ರಪಂಚದ ನೂರಾರು ವಿಜ್ಞಾನಿಗಳ ತಂಡಕ್ಕೆ ಇಬ್ಬರು ಭಾರತೀಯ ಖಭೌತವಿಜ್ಞಾನಿಗಳು ಸೇರಿದ್ದಾರೆ.
> ಮುಂಬೈನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರೀಸರ್ಚ್‌ನ ಮನೋಜ್ ಪೂರ್ವಂಕರ ಈ ತಿಂಗಳಾಂತ್ಯಕ್ಕೆ ತಮ್ಮ ಅಧ್ಯಯನ ಆರಂಭಿಸಲಿದ್ದು, ತಿರುಪತಿಯ ಐಐಎಸ್‌ಸಿ ಶಿಕ್ಷಣ ಮತ್ತು ಸಂಶೋಧನೆಯ ಕೇಂದ್ರದ ಜೆಸ್ಸಿ ಜೋಸ್ ಅವರು 2023ರ ಏಪ್ರಿಲ್‌ನಲ್ಲಿ ಆಕಾಶಕಾಯಗಳ ಅಧ್ಯಯನ ಶುರು ಮಾಡಲಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಭವಿಷ್ಯ

Astrology

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ_ಪರಿಹಾರ. 9535088827"

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು- ಶ್ರೀಕ್ಷೇತ್ರಧರ್ಮಸ್ಥಳ: 7022443071

ಪ್ರೇಮ-ವಿಚಾರ, ವಶೀಕರಣ, ಮಾಟ-ಮಂತ್ರ, ಇನ್ನು ಮುಂತಾದ ಸಮಸ್ಯೆಗಳಿಗೆ ಚಿಂತಿಸುವ ಅವಶ್ಯಕತೆ ಇಲ್ಲ,ನಿಮ್ಮ ಸಮಸ್ಯೆ ಏನೇ ಇರಲಿ ಪರಿಹಾರ ಶತಸಿದ್ಧ: 9513707409

ಉದ್ಯೋಗಾವಕಾಶ

General

✓ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ / ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17800/-68000/-. 9513330916, 9513330914.

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Classifieds

Book Your Classifieds Ads

Online Log in to dhclassifieds.com

For More Details Call

9880856233 • 9886213331

Email: Santhoshkumar@deccanherald.co.in

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪೌಲ್ ಸೂಚಿಸಿದ ಖಾತೆಗಳಿಗೆ ₹ 1.36 ಕೋಟಿ

ಒಂದನೇ ಪುಟದಿಂದ...

ಪೌಲ್‌ಗೆ ಸೇರಿದ್ದ ಮೊಬೈಲ್ ಅನ್ನು ವಶಕ್ಕೆ ಪಡೆಯಲಾಗಿತ್ತು. ಅದರಲ್ಲಿದ್ದ ಎಲ್ಲ ದತ್ತಾಂಶ ನಾಶಪಡಿಸಲಾಗಿದ್ದು, ಇದರಿಂದ ತನಿಖೆಗೆ ಹಿನ್ನಡೆಯಾಗಿದೆ. ಮೊಬೈಲ್ ಅನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನಿಸಲಾಗಿದೆ. ಮೊಬೈಲ್‌ನಲ್ಲಿದ್ದ ದತ್ತಾಂಶವನ್ನು ತಾಂತ್ರಿಕ ಪರಿಣಿತರ ಮೂಲಕ ಹೊರ ತೆಗೆಯಲಾಗುವುದು ಎಂದು ಮೂಲಗಳು ತಿಳಿಸಿವೆ.

ಮತ್ತೆ ಮೂರು ದಿನ ಕಸ್ಟಡಿಗೆ: ಸಿಐಡಿ ಮನವಿ ಮೇರೆಗೆ ಪೌಲ್ ಅವರನ್ನು ಮತ್ತೆ ಮೂರು ದಿನಗಳ ಕಾಲ ತನಿಖಾಧಿಕಾರಿಗಳ ವಶಕ್ಕೆ ನೀಡಿ ಒಂದನೇ ಎಸಿಎಂಎಂ ನ್ಯಾಯಾಲಯವು ಬುಧವಾರ ಆದೇಶಿಸಿತು. ಜುಲೈ 4ರಂದು ಪೌಲ್ ಅವರನ್ನು ಬಂಧಿಸಿದ್ದ ಸಿಐಡಿ, 10 ದಿನಗಳ ಕಾಲ ವಿಚಾರಣೆಗಾಗಿ ವಶಕ್ಕೆ ಪಡೆದಿತ್ತು. ಅವಧಿ ಮುಗಿದ ಕಾರಣದಿಂದ ಬುಧವಾರ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು.

'ಪೌಲ್ ತನಿಖೆಗೆ ಸಹಕರಿಸುತ್ತಿಲ್ಲ. ವರ್ಗಾವಣೆಯಾಗಿರುವ ಹಣ ವಶಕ್ಕೆ ಪಡೆಯಲು, ಮೊಬೈಲ್‌ನಲ್ಲಿದ್ದ ಮಾಹಿತಿ ಸಂಗ್ರಹಿಸಲು ಕಾಲಾವಕಾಶಬೇಕಿದೆ. ಮೊಬೈಲ್ ಪಾಸ್‌ವರ್ಡ್ ಸಹ ಕೊಟ್ಟಿರಲಿಲ್ಲ. ಬುಧವಾರವಷ್ಟೇ ಪಾಸ್‌ವರ್ಡ್ ಸಿಕ್ಕಿದೆ. ತನಿಖೆಗೆ ಇನ್ನಷ್ಟು ಅವಕಾಶ ಬೇಕಿದ್ದು, 5 ದಿನಗಳ ಕಾಲ ಕಸ್ಟಡಿಗೆ ನೀಡಬೇಕು' ಎಂದು ಸಿಐಡಿ ಪರ ವಕೀಲರು ನ್ಯಾಯಾಲಯಕ್ಕೆ ಮನವಿ ಮಾಡಿದರು.

ಅದಕ್ಕೆ ಆಕ್ಷೇಪಿಸಿದ ಆರೋಪಿ ಪರ ವಕೀಲರು, 'ಪೌಲ್ ಅವರು ಸ್ವಇಚ್ಛೆಯಿಂದಲೇ ಜುಲೈ 4ರಂದು ಬೆಳಿಗ್ಗೆ ಸಿಐಡಿ ಎದುರು ವಿಚಾರಣೆಗೆ ಹಾಜರಾಗಿದ್ದರು. ಸಿಐಡಿ ದಾಖಲೆಯಲ್ಲೂ ಈ ಅಂಶ ಉಲ್ಲೇಖವಿದೆ. ಅಂದು ಮಧ್ಯಾಹ್ನ ಸಿಐಡಿಯವರು ಬಂಧಿಸಿದ್ದರು. ಅಂದೇ ಮೊಬೈಲ್ ವಶಕ್ಕೆ ಪಡೆದಿದ್ದಾರೆ. ಯಾವ ಪುರುಷಾರ್ಥಕ್ಕೆ ಮತ್ತಷ್ಟು ಸಮಯ ಕೇಳುತ್ತಿದ್ದಾರೆ' ಎಂದು ಪ್ರಶ್ನಿಸಿದರು.

'ಸಿಐಡಿಯವರು ಏನಾದರೂ ತೊಂದರೆ ನೀಡುತ್ತಿದ್ದಾರೆಯೇ' ಎಂದು ಪೌಲ್ ಅವರನ್ನು ನ್ಯಾಯಾಧೀಶರು ಪ್ರಶ್ನಿಸಿದರು. 'ತೊಂದರೆ ಕೊಡುತ್ತಿಲ್ಲ' ಎಂದು ಆರೋಪಿ ಅಧಿಕಾರಿ ಹೇಳಿದರು.

ಸಿಐಡಿ ಕಸ್ಟಡಿ ಅವಧಿಯಲ್ಲಿ ಪ್ರತಿ ದಿನ 30 ನಿಮಿಷ ಕುಟುಂಬದ ಸದಸ್ಯರೊಂದಿಗೆ ಚರ್ಚಿಸಲು ಹಾಗೂ ಆರೋಗ್ಯ ತಪಾಸಣೆಗೆ ವೈದ್ಯರ ಭೇಟಿಗೆ ನ್ಯಾಯಾಲಯವು ಅವಕಾಶ ನೀಡಿತು.

ಇದೇ ಪ್ರಕರಣದಲ್ಲಿ ಬಂಧಿತರಾಗಿ ಸಿಐಡಿ ವಶದಲ್ಲಿದ್ದ ಶಾಂತಕುಮಾರ್, ಶ್ರೀನಿವಾಸ್, ಶ್ರೀಧರ್, ಹರ್ಷ ಅವರನ್ನು ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು.

ಸಂಕ್ಷಿಪ್ತ ಸುದ್ದಿ

ಜುಬೈರ್ ವಿರುದ್ಧದ ಪ್ರಕರಣಗಳ ತನಿಖೆಗೆ ಎಸ್‌ಐಟಿ ರಚನೆ

ಲಖನೌ: ಆಲ್ಟ್‌ನ್ಯೂಸ್ ಸಹ ಸಂಸ್ಥಾಪಕ ಮೊಹಮ್ಮದ್ ಜುಬೈರ್ ಅವರ ವಿರುದ್ಧದ ಪ್ರಕರಣಗಳ ತನಿಖೆಗಾಗಿ ಉತ್ತರಪ್ರದೇಶ ಸರ್ಕಾರವು ಮಂಗಳವಾರ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿದೆ.

ಮೂಲಗಳ ಪ್ರಕಾರ, ಇಬ್ಬರು ಸದಸ್ಯರಿರುವ ಎಸ್‌ಐಟಿಗೆ ಐಜಿಪಿ ಪ್ರೀತಿಂದರ್ ಸಿಂಗ್ ಅವರು ನೇತೃತ್ವ ವಹಿಸುವರು. ಡಿಐಜಿ ಅಮಿತ್ ಕುಮಾರ್ ವರ್ಮಾ ತಂಡದ ಇತರ ಸದಸ್ಯರಾಗಿರುವರು.

'ಜುಬೈರ್ ಅವರ ವಿರುದ್ಧ ಹಲವು ಸ್ಥಳಗಳಲ್ಲಿ ಪ್ರಕರಣಗಳು ದಾಖಲಾಗಿದ್ದರಿಂದ ಎಸ್‌ಐಟಿ ತನಿಖೆಗೆ ನಿರ್ಧರಿಸಲಾಗಿದೆ. ಈ ಪ್ರಕರಣಗಳಲ್ಲಿ ಸಂಪೂರ್ಣ ತನಿಖೆ ಅತ್ಯಗತ್ಯವಾಗಿದೆ' ಎಂದು ಮೂಲಗಳು ತಿಳಿಸಿವೆ.

ಜುಬೈರ್ ವಿರುದ್ಧ ಉತ್ತರಪ್ರದೇಶದ ಸೀತಾಪುರ, ಲಖಿಂಪುರ– ಖೇರಿ, ಹಾಥರಸ್ ಮತ್ತು ಮುಜಾಫ್ಫರ್‌ನಗರ ಜಿಲ್ಲೆಗಳಲ್ಲಿ ಪ್ರಕರಣಗಳು ದಾಖಲಾಗಿವೆ.

ಕೊಲೆ ಪ್ರಕರಣ ಆರ್‌ಎಸ್‌ಎಸ್‌ನ 13 ಮಂದಿ ಖುಲಾಸೆ

ಕೊಚ್ಚಿ (ಪಿಟಿಐ): ತಿರುವನಂತಪುರದಲ್ಲಿ 2008ರಲ್ಲಿ ನಡೆದಿದ್ದ ಸಿಪಿಐ(ಎಂ) ಕಾರ್ಯಕರ್ತನ ಕೊಲೆ ಪ್ರಕರಣದಲ್ಲಿ 13 ಮಂದಿ ಆರ್‌ಎಸ್‌ಎಸ್ ಕಾರ್ಯಕರ್ತರನ್ನು ದೋಷಮುಕ್ತಗೊಳಿಸಿ ಕೇರಳ ಹೈಕೋರ್ಟ್ ಆದೇಶಿಸಿದೆ.

ಬಂಧಿತರ ವಿರುದ್ಧ ಆರೋಪ ಸಾಬೀತುಪಡಿಸುವ ಸಾಕ್ಷ್ಯ ಒದಗಿಸಲು ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಕೋರ್ಟ್ ಹೇಳಿತು. ಹೆಚ್ಚುವರಿ ಸೆಷನ್ಸ್ ಕೋರ್ಟ್ 13 ಮಂದಿಗೆ ಶಿಕ್ಷೆ ವಿಧಿಸಿ ಆದೇಶಿಸಿದ್ದು, ಇದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿತ್ತು.

ನ್ಯಾಯಮೂರ್ತಿಗಳಾದ ಕೆ.ವಿನೋದ್ ಚಂದ್ರನ್, ಸಿ.ಜಯಚಂದ್ರನ್ ಅವರಿದ್ದ ವಿಭಾಗೀಯ ಪೀಠವು ದೋಷಮುಕ್ತಗೊಳಿಸಿ ಆದೇಶಿಸಿದ್ದು, ಕೋರ್ಟ್ ಎದುರು ನಿರೂಪಿಸಿದ ಪ್ರಕರಣದ ವಿವರಗಳನ್ನು ಗಮನಿಸಿದರೆ, ಪೂರ್ವರಚಿತ ಕಥೆಯನ್ನು ಸಾಬೀತುಪಡಿಸಲು ಉದ್ದೇಶಪೂರ್ವವಾಗಿ ಸಾಕ್ಷ್ಯವನ್ನು ಸಂಗ್ರಹಿಸಿದ ಹಾಗೂ ಸಿದ್ಧಪಡಿಸಿದಂತೆ ಕಾಣುತ್ತಿದೆ ಎಂದು ಹೇಳಿತು.

ಈ ಪ್ರಕರಣದ ಸಂಬಂಧ ತಿರುವನಂತಪುರದ ಹೆಚ್ಚುವರಿ ಸೆಷನ್ಸ್ ಕೋರ್ಟ್, 13 ಮಂದಿ ಆರ್‌ಎಸ್‌ಎಸ್ ಕಾರ್ಯಕರ್ತರಿಗೆ ಜೋಡಿ ಜೀವಾವಧಿ ಸಜೆ ವಿಧಿಸಿ ಡಿಸೆಂಬರ್ 16, 2016ರಂದು ಆದೇಶ ನೀಡಿತ್ತು.

7 ವರ್ಷದ ಬಾಲಕಿಯಲ್ಲಿ ಝಿಕಾ ವೈರಸ್

ಮುಂಬೈ (ಪಿಟಿಐ): ಮಹಾರಾಷ್ಟ್ರದ ಪಾಲ್ಗರ್ ಜಿಲ್ಲೆಯಲ್ಲಿ ಏಳು ವರ್ಷದ ಬಾಲಕಿಯಲ್ಲಿ ಝಿಕಾ ವೈರಸ್ ಸೋಂಕು ಕಾಣಿಸಿಕೊಂಡಿದೆ ಎಂದು ಆರೋಗ್ಯ ಇಲಾಖೆ ಬುಧವಾರ ತಿಳಿಸಿದೆ.

ಈಡಿಸ್ ಈಜಿಪ್ಟಿ ಸೊಳ್ಳೆ ಕಡಿತದಿಂದ ಹರಡುವ ಝಿಕಾ ವೈರಸ್ ಸೋಂಕು, ರಾಜ್ಯದಲ್ಲಿ ವರ್ಷದ ನಂತರ ಕಾಣಿಸಿಕೊಂಡಿದೆ. 2021ರ ಜುಲೈನಲ್ಲಿ ಝಿಕಾ ವೈರಸ್ ಮೊದಲ ಪ್ರಕರಣ ಪುಣೆಯಲ್ಲಿ ವರದಿಯಾಗಿತ್ತು. 'ಮುಂಬೈ ಸಮೀಪದ ಪಾಲ್ಗರ್ ಜಿಲ್ಲೆಯ ತಲಸೇರಿ ತಾಲ್ಲೂಕಿನ ಆಶ್ರಮ ಶಾಲೆಯ ವಿದ್ಯಾರ್ಥಿನಿಗೆ ಝಿಕಾ ವೈರಸ್ ಸೋಂಕು ತಗುಲಿದೆ. ವಿದ್ಯಾರ್ಥಿನಿಯನ್ನು ಪರೀಕ್ಷೆಗೆ ಒಳಪಡಿಸಿದಾಗ ಸೋಂಕು ಇರುವುದು ದೃಢಪಟ್ಟಿದೆ. ಬಾಲಕಿಯಲ್ಲಿ ಬೇರೆ ಯಾವುದೇ ಲಕ್ಷಣಗಳು ಕಾಣಿಸಿಲ್ಲ. ಬಾಲಕಿ ಈಗ ಆರೋಗ್ಯವಾಗಿದ್ದಾರೆ' ಎಂದು ರಾಜ್ಯ ಆರೋಗ್ಯ ಸರ್ವೇಕ್ಷಣಾಧಿಕಾರಿ ಅಧಿಕಾರಿ ಪ್ರದೀಪ್ ಅವಟೆ ತಿಳಿಸಿದ್ದಾರೆ.

ಸಂಜೀವ್ ಭಟ್ 7 ದಿನ ಪೊಲೀಸ್ ವಶಕ್ಕೆ

ಅಹಮದಾಬಾದ್ (ಪಿಟಿಐ): 2002ರಲ್ಲಿ ನಡೆದಿದ್ದ ಕೋಮುಗಲಭೆಯಲ್ಲಿ ಅಮಾಯಕರನ್ನು ಆರೋಪಿಗಳಾಗಿಸಲು ಸಂಚು ಮಾಡಿದ್ದ ಆರೋಪದಡಿ ಗುಜರಾತ್ ಪೊಲೀಸರು ಮಂಗಳವಾರ ಬಂಧಿಸಿದ್ದ ಮಾಜಿ ಐಪಿಎಸ್ ಅಧಿಕಾರಿ ಸಂಜೀವ್ ಭಟ್ ಅವರನ್ನು ನ್ಯಾಯಾಲಯ ಬುಧವಾರ ಏಳು ದಿನ ಪೊಲೀಸ್ ಕಸ್ಟಡಿಗೆ ನೀಡಿದೆ.



ಈಗಾಗಲೇ ಮತ್ತೊಂದು ಪ್ರಕರಣ ಸಂಬಂಧ ಜೈಲಿನಲ್ಲಿದ್ದ ಸಂಜೀವ್ ಭಟ್ ಅವರನ್ನು ವಾರಂಟ್ ಹಾಜರುಪಡಿಸಿ ತನಿಖಾಧಿಕಾರಿಗಳು ಮತ್ತೆ ವಶಕ್ಕೆ ಪಡೆದಿದ್ದರು.

ಗುಜರಾತ್ ಪೊಲೀಸ್‌ನ ವಿಶೇಷ ತನಿಖಾ ತಂಡ ಈ ಪ್ರಕರಣದ ಸಂಬಂಧ ಬಂಧಿಸಿರುವ ಮೂರನೇ ಆರೋಪಿ ಸಂಜೀವ್ ಭಟ್. ಈ ಹಿಂದೆ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಮತ್ತು ಮಾಜಿ ಡಿಜಿಪಿ ಆರ್.ಬಿ.ಶ್ರೀಕುಮಾರ್ ಅವರನ್ನು ಬಂಧಿಸಲಾಗಿತ್ತು.

ಶ್ರೀಲಂಕಾದಲ್ಲಿ ಬಿಕ್ಕಟ್ಟು ತೀವ್ರ: ಪ್ರಧಾನಿ ಪದಚ್ಯುತಿಗೆ ವಿಪಕ್ಷಗಳ ಆಗ್ರಹ

ರಾನಿಲ್ ರಾಜೀನಾಮೆಗೆ ಒತ್ತಡ



ಪ್ರಧಾನಿ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ಶ್ರೀಲಂಕಾ ನಾಗರಿಕರು ಕೊಲಂಬೊದಲ್ಲಿ ಬುಧವಾರ ರಾನಿಲ್ ವಿಕ್ರಮಸಿಂಘೆ ಅವರ ಕಚೇರಿಗೆ ನುಗ್ಗಿದರು –ಎಪಿ ಚಿತ್ರ

ಕೊಲಂಬೊ (ಪಿಟಿಐ/ರಾಯಿಟರ್ಸ್/ಎಎಫ್‌ಪಿ): ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರನ್ನು ತಕ್ಷಣವೇ ವಜಾ ಮಾಡಬೇಕು ಎಂದು ಶ್ರೀಲಂಕಾದ ವಿರೋಧ ಪಕ್ಷಗಳು ಸ್ಪೀಕರ್ ಅವರನ್ನು ಒತ್ತಾಯಿಸಿವೆ. ಅಧ್ಯಕ್ಷ ಗೊಟಬಯ ಅವರು, ರಾನಿಲ್ ಅವರನ್ನು ಪ್ರಭಾರಿ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ವಿರೋಧ ಪಕ್ಷಗಳು ಖಂಡಿಸಿವೆ.

'ಗೊಟಬಯ ಅವರು ಅಧ್ಯಕ್ಷ ಹುದ್ದೆಗೆ ಬುಧವಾರ ಸಂಜೆ ರಾಜೀನಾಮೆ ನೀಡಬೇಕು ಎಂದು ಸರ್ವಪಕ್ಷಗಳ ಸಭೆಯಲ್ಲಿ ತೀರ್ಮಾನವಾಗಿತ್ತು. ಆದರೆ ಅವರು ದೇಶದಿಂದ ಪರಾರಿಯಾಗಿದ್ದು, ಸರ್ವಪಕ್ಷ ಸಭೆಯಲ್ಲಿ ತೆಗೆದುಕೊಂಡಿದ್ದ ನಿರ್ಣಯವನ್ನು ಮೀರಿದ್ದಾರೆ' ಎಂದು ಪ್ರಮುಖ ವಿರೋಧ ಪಕ್ಷ ಟಿಎನ್‌ಎ ಆರೋಪಿಸಿದೆ.

'ರಾನಿಲ್ ಅವರ ಬೆಂಬಲಕ್ಕಿರುವುದು ಒಬ್ಬ ಸಂಸದ ಮಾತ್ರ. ಹೀಗಿದ್ದೂ ಅವರು ಪ್ರಧಾನಿಯಾಗಿದ್ದಾರೆ. ಬೆಂಬಲವೇ ಇಲ್ಲದ ರಾನಿಲ್ ಅವರನ್ನೇ ಗೊಟಬಯ ಅವರು ಪ್ರಭಾರಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ. ಇದು ಪ್ರಜಾಪ್ರಭುತ್ವದ ಅಣಕ' ಎಂದು ಟಿಎನ್‌ಎ ಆರೋಪಿಸಿದೆ.

ಸಿಂಗಪುರಕ್ಕೆ ಗೊಟಬಯ?: 'ಅಧ್ಯಕ್ಷ ಗೊಟಬಯ ರಾಜಪಕ್ಷ ಅವರು ಮಾಲ್ಡೀವ್ಸ್‌ನಿಂದ ಸಿಂಗಪುರಕ್ಕೆ ಹೋಗಿದ್ದಾರೆ' ಎಂದು ಶ್ರೀಲಂಕಾ ಸರ್ಕಾರದ ಉನ್ನತ ಮೂಲಗಳು ಹೇಳಿವೆ ಎಂದು ಶ್ರೀಲಂಕಾದ ಡೈಲಿ ಮೇಲ್ ವರದಿ ಮಾಡಿದೆ. 'ಗೊಟಬಯ ಬುಧವಾರ ತಡರಾತ್ರಿ ಸಿಂಗಪುರಕ್ಕೆ ಹೋಗಲಿದ್ದಾರೆ. ಆ ನಂತರ ರಾಜೀನಾಮೆ ಸಲ್ಲಿಸಲಿದ್ದಾರೆ' ಎಂದು ರಾಯಿಟರ್ಸ್ ವರದಿ ಮಾಡಿದೆ.

ಪರಾರಿ ವ್ಯವಸ್ಥೆಪಡಿಸಿದ ವಾಯುಪಡೆ: 'ಅಧ್ಯಕ್ಷ ಗೊಟಬಯ, ಅವರ ಪತ್ನಿ ಮತ್ತು ಇಬ್ಬರು ಭದ್ರತಾ ಸಿಬ್ಬಂದಿ ಅವರನ್ನು ವಾಯುಪಡೆಯ ವಿಮಾನದ ಮೂಲಕ ಮಾಲ್ಡೀವ್ಸ್‌ನ ಮಾಲೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತಲುಪಿಸಲಾಗಿದೆ' ಎಂದು ಶ್ರೀಲಂಕಾ ವಾಯುಪಡೆಯು ಬುಧವಾರ ಬೆಳಿಗ್ಗೆ ಹೇಳಿದೆ.

ದೇಶದ ಆರ್ಥಿಕತೆಯನ್ನು ಸರಿಯಾಗಿ ನಿರ್ವಹಿಸದೆ, ದಿವಾಳಿಯಾಗಲು ಕಾರಣವಾಗಿರುವ ಕಾರಣ ಗೊಟಬಯ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ವಿರೋಧ ಪಕ್ಷಗಳು ಮತ್ತು ದೇಶದ ನಾಗರಿಕರು ಆಗ್ರಹಿಸುತ್ತಿದ್ದಾರೆ. ಗೊಟಬಯ ಅವರು ರಾಜೀನಾಮೆ ನೀಡದೇ ಇದ್ದ ಕಾರಣ, ನಾಗರಿಕರು ಕಳೆದ ವಾರ ಅಧ್ಯಕ್ಷರ ನಿವಾಸಕ್ಕೆ ಮುತ್ತಿಗೆ ಹಾಕಿದ್ದರು. ಅದಕ್ಕೂ ಮುನ್ನವೇ ಗೊಟಬಯ ತಮ್ಮ ಕುಟುಂಬದವರೊಂದಿಗೆ ಅಲ್ಲಿಂದ ಪರಾರಿಯಾಗಿದ್ದರು.

ಕೊಲಂಬೊ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಪರಾರಿಯಾಗಲು ಗೊಟಬಯ ಕುಟುಂಬ ಪ್ರಯತ್ನಿಸಿತ್ತು. ಆದರೆ ವಿಮಾನ ನಿಲ್ದಾಣದಲ್ಲಿದ್ದ ಪ್ರಯಾಣಿಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಕಾರಣ, ಗೊಟಬಯ ಕುಟುಂಬ ರಹಸ್ಯ ಸ್ಥಳಕ್ಕೆ ಪರಾರಿಯಾಗಿತ್ತು.

ಗೊಟಬಯ ಅವರು ಮಾಲ್ಡೀವ್ಸ್‌ಗೆ ತೆರಳಲು ಅಲ್ಲಿಯ ಸಂಸತ್ತಿನ ಸ್ಪೀಕರ್ ಹಾಗೂ ಮಾಜಿ ಅಧ್ಯಕ್ಷ ಮೊಹಮ್ಮದ್ ನಷೀದ್ ನೆರವು ನೀಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಗೊಟಬಯ ಹಾಗೂ ಅವರ ಪತ್ನಿ ಇದ್ದ ಶ್ರೀಲಂಕಾ ವಾಯುಪಡೆಯ ಎಎನ್32 ವಿಮಾನವು ಮಾಲ್ಡೀವ್ಸ್‌ನಲ್ಲಿ ಇಳಿಯಲು ಮೊದಲಿಗೆ ಅವಕಾಶ ನಿರಾಕರಿಸಲಾಗಿತ್ತು. ಆದರೆ ನಷೀದ್ ಅನುಮೋದನೆ ಮೇರೆಗೆ ಮಾಲೆಯಲ್ಲಿ ವಿಮಾನ ಇಳಿಯಲು ಮಾಲ್ಡೀವ್ಸ್‌ನ ನಾಗರಿಕ ವಿಮಾನಯಾನ ಪ್ರಾಧಿಕಾರದ ಅಧಿಕಾರಿಗಳು ಒಪ್ಪಿಕೊಂಡರು ಎಂದು ಮೂಲಗಳು ತಿಳಿಸಿವೆ. ಗೊಟಬಯ ಅವರು ಮಾಲ್ಡೀವ್ಸ್‌ಗೆ ಬಂದಿದ್ದಾರೆ ಎಂಬುದನ್ನು ಖಚಿತಪಡಿಸಲು ಅಲ್ಲಿನ ಅಧಿಕಾರಿಗಳು ಆರಂಭದಲ್ಲಿ ನಿರಾಕರಿಸಿದ್ದರು.

ಗೊಟಬಯ ಅವರು ಈಗಲೂ ಶ್ರೀಲಂಕಾ ಅಧ್ಯಕ್ಷ ಹುದ್ದೆಯಲ್ಲಿದ್ದು, ಅವರು ಮಾಲ್ಡೀವ್ಸ್‌ಗೆ ಬರಲು ಇಚ್ಛಿಸಿದರೆ ಅದನ್ನು ನಿರಾಕರಿಸಲಾಗದು ಎಂದು ಮಾಲ್ಡೀವ್ಸ್ ಸರ್ಕಾರ ಹೇಳಿದೆ. ಆದರೆ, ಮಾಲ್ಡೀವ್ಸ್‌ಗೆ ಬರಲು ಗೊಟಬಯ ಅವರಿಗೆ ಅವಕಾಶ ನೀಡಿದ್ದಕ್ಕೆ ಅಲ್ಲಿನ ವಿರೋಧಪಕ್ಷ ಎಂಎನ್‌ಪಿ ಅಸಮಾಧಾನ ವ್ಯಕ್ತಪಡಿಸಿದೆ. ಈ ಬಗ್ಗೆ ಸರ್ಕಾರದ ವಿವರಣೆ ಕೇಳಿ ಸಂಸತ್ತಿನಲ್ಲಿ ಗೊತ್ತುವಳಿ ಮಂಡಿಸುವುದಾಗಿ ತಿಳಿಸಿದೆ. ಗೊಟಬಯ ಅವರು ಮಾಲ್ಡೀವ್ಸ್‌ಗೆ ಬಂದಿರುವುದನ್ನು ವಿರೋಧಿಸಿ ಅಲ್ಲಿರುವ ಶ್ರೀಲಂಕಾದ ನಾಗರಿಕರು ಪ್ರತಿಭಟನೆ ನಡೆಸಿದರು. 'ಸಂಕಷ್ಟದಲ್ಲಿರುವ ದೇಶದ ಜನರನ್ನು ಕೈಬಿಟ್ಟು ಪಲಾಯನ ಮಾಡಿ ಇಲ್ಲಿಗೆ ಬಂದಿರುವ ಅಧ್ಯಕ್ಷರನ್ನು ರಕ್ಷಿಸಬಾರದು' ಎಂದು ಪ್ರತಿಭಟನಕಾರರು ಸರ್ಕಾರವನ್ನು ಆಗ್ರಹಿಸಿದರು.

ಭಾರತ ನಿರಾಕರಣೆ

ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಷ ಅವರು ಮಾಲ್ಡೀವ್ಸ್‌ಗೆ ಪ್ರಯಾಣಿಸಲು ಭಾರತ ನೆರವು ನೀಡಿದೆ ಎಂಬ ಆರೋಪವನ್ನು, ಶ್ರೀಲಂಕಾದಲ್ಲಿರುವ ಭಾರತೀಯ ಹೈಕಮಿಷನ್ ಸ್ಪಷ್ಟವಾಗಿ ತಳ್ಳಿಹಾಕಿದೆ. ಈ ಕುರಿತ ಮಾಧ್ಯಮಗಳ ವರದಿಗಳಿಗೆ ಯಾವುದೇ ಆಧಾರಗಳಿಲ್ಲ ಎಂದು ಟ್ವೀಟ್ ಮಾಡಿದೆ.

ಜಯಸೂರ್ಯ ಮನವಿ

'ರಾನಿಲ್ ವಿಕ್ರಮಸಿಂಘೆ ಅವರು ಸ್ಪೀಕರ್ ಮಹಿಂದಾ ಯಾಪ ಅಬೇವರ್ಧನ ಹಾಗೂ ಪ್ರತಿಪಕ್ಷದ ಮುಖಂಡ ಸಜಿತ್ ಪ್ರೇಮದಾಸ ಅವರ ಸಲಹೆಗಳನ್ನು ಕೇಳಬೇಕು' ಎಂದು ಮಾಜಿ ಕ್ರಿಕೆಟಿಗ ಸನತ್ ಜಯಸೂರ್ಯ ಸಲಹೆ ನೀಡಿದ್ದಾರೆ. ನಿಗದಿಯಂತೆ ಲಂಕಾದಲ್ಲೇ ಏಷ್ಯಾಕಪ್ ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶ್ರೀಲಂಕಾದಲ್ಲಿ ತುರ್ತು ಪರಿಸ್ಥಿತಿ: ಅಧ್ಯಕ್ಷ ಪರಾರಿ

ಒಂದನೇ ಪುಟದಿಂದ...

ಕೊಲಂಬೊದಲ್ಲಿ ಪ್ರಧಾನಿ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನಿಸಿದರು. ಗೊಟಬಯ ಅವರು ಪರಾರಿಯಾಗಲು ವಾಯುಪಡೆ ನೆರವು ನೀಡಿದೆ ಎಂದು ಆರೋಪಿಸಿ, ವಾಯುಪಡೆಯ ಕಮಾಂಡರ್ ಅವರ ನಿವಾಸಕ್ಕೂ ಮುತ್ತಿಗೆ ಹಾಕಲು ಯತ್ನಿಸಿದರು. ಆಗ ಸೇನೆ ಮತ್ತು ಪೊಲೀಸರು ಪ್ರತಿಭಟನಕಾರರ ಮೇಲೆ ಅಶ್ರುವಾಯು ಷೆಲ್ ಸಿಡಿಸಿ, ಜಲಫಿರಂಗಿ ಪ್ರಯೋಗಿಸಿದರು. ಆದರೂ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿರಲಿಲ್ಲ.

ದೇಶದ ಸರ್ಕಾರಿ ಸುದ್ದಿವಾಹಿನಿ 'ರೂಪವಾಹಿನಿ' ಕೇಂದ್ರಕ್ಕೂ ಪ್ರತಿಭಟನಕಾರರು ಮುತ್ತಿಗೆ ಹಾಕಿದರು. ಹೀಗಾಗಿ ವಾಹಿನಿಯು ಕೆಲಕಾಲ ಪ್ರಸಾರವನ್ನು ಸ್ಥಗಿತಗೊಳಿಸಿತ್ತು.

ಶಸ್ತ್ರಾಸ್ತ್ರ ಕೆಳಗಿಳಿಸಿದ ಸೈನಿಕರು: 'ತುರ್ತು ಪರಿಸ್ಥಿತಿ ಮತ್ತು ಕರ್ಫ್ಯೂ ಜಾರಿ ಮಾಡಲು ಏನು ಬೇಕಾದರೂ ಮಾಡಿ' ಎಂದು ಪ್ರಧಾನಿ ರಾನಿಲ್ ಅವರು ಸೇನೆ ಮತ್ತು ಪೊಲೀಸರಿಗೆ ಸೂಚಿಸಿದ್ದರು. ಆದರೆ, ಕೊಲಂಬೊದಲ್ಲಿ ನಿಯೋಜಿಸಿದ್ದ ಸೈನಿಕರು ಬುಧವಾರ ರಾತ್ರಿ ವೇಳೆಗೆ ಶಸ್ತ್ರಾಸ್ತ್ರ ಕೆಳಗಿಳಿಸಿದ್ದಾರೆ. ಕೊಲಂಬೊದಲ್ಲಿರುವ ಪ್ರಧಾನಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸುತ್ತಿದ್ದ ಪ್ರತಿಭಟನಕಾರರಿಗೆ ಒಡ್ಡಿದ್ದ ತಡೆಯನ್ನು, ರಾತ್ರಿ ವೇಳೆಗೆ ಸಡಿಲಗೊಳಿಸಿದ್ದಾರೆ. ಹೀಗಾಗಿ ಪ್ರತಿಭಟನಕಾರರು ಒಳನುಗ್ಗಿ, ಪ್ರಧಾನಿ ಕಚೇರಿ ವಶಕ್ಕೆ ಪಡೆದಿದ್ದಾರೆ.

'ದೇಶದಲ್ಲಿ ಸಾಮಾನ್ಯ ಸ್ಥಿತಿ ಮರಳುವವರೆಗೂ ಜನರು ಶಾಂತಿಯಿಂದ ವರ್ತಿಸಬೇಕು' ಎಂದು ಶ್ರೀಲಂಕಾದ ಮೂರೂ ಸೇನಾಪಡೆಗಳ ಮುಖ್ಯಸ್ಥರು ಜನರಲ್ಲಿ ಮನವಿ ಮಾಡಿದ್ದಾರೆ.

ಒಮ್ಮತದ ಪ್ರಧಾನಿ ನಾಮನಿರ್ದೇಶನ ಮಾಡಿ: ರಾನಿಲ್

ಪ್ರಭಾರಿ ಅಧ್ಯಕ್ಷ ಮತ್ತು ಪ್ರಧಾನಿ ರಾನಿಲ್ ಅವರು, 'ಆಡಳಿತ ಮತ್ತು ವಿರೋಧ ಪಕ್ಷಗಳು ಒಪ್ಪುವ ಒಮ್ಮತದ ವ್ಯಕ್ತಿಯನ್ನು ದೇಶದ ಪ್ರಧಾನಿಯನ್ನಾಗಿ ನಾಮನಿರ್ದೇಶನ ಮಾಡಿ' ಎಂದು ಸಂಸತ್ತಿನ ಸ್ಪೀಕರ್‌ಗೆ ಮನವಿ ಮಾಡಿದ್ದಾರೆ.

ಪ್ರತಿಭಟನಕಾರರು ಪ್ರಧಾನಿ ಕಚೇರಿಯನ್ನು ವಶಕ್ಕೆ ಪಡೆದ ಬೆನ್ನಲ್ಲೇ ಅವರು ಈ ಮನವಿ ಸಲ್ಲಿಸಿದ್ದಾರೆ.

ಶ್ರೀಲಂಕಾ: ದಿನದ ಬೆಳವಣಿಗೆಗಳು

- ಬಿಕ್ಕಟ್ಟು ಎದುರಿಸುತ್ತಿರುವ ಶ್ರೀಲಂಕಾಗೆ ತೆರಳಬೇಕಿದ್ದ 120ಕ್ಕೂ ಹೆಚ್ಚು ವಿಮಾನಗಳು ಕೇರಳದ ಕೊಚ್ಚಿ ಹಾಗೂ ತಿರುವನಂತರಪುರ ವಿಮಾನ ನಿಲ್ದಾಣಗಳಲ್ಲಿ ಇಳಿದಿವೆ
- ಶ್ರೀಲಂಕಾದಲ್ಲಿ ಭಾರಿ ಪ್ರತಿಭಟನೆ ನಡೆಯುತ್ತಿರುವ ಕಾರಣ, ಕಾನ್ಸುಲ್ ಸಲಹೆ–ಸೂಚನೆ ಸೇವೆಯನ್ನು ಶ್ರೀಲಂಕಾದಲ್ಲಿರುವ ಅಮೆರಿಕದ ರಾಯಭಾರ ಕಚೇರಿ ರದ್ದುಗೊಳಿಸಿದೆ. ಬುಧವಾರ ಹಾಗೂ ಗುರುವಾರ ಈ ಸೇವೆಗಳು ಇರುವುದಿಲ್ಲ ಎಂದು ಟ್ವೀಟ್ ಮಾಡಿದೆ
- ತುರ್ತು ಸೇವೆ ಒದಗಿಸುವ ಆಂಬುಲೆನ್ಸ್‌ಗಳಿಗೆ ಇಂಧನವನ್ನು ಪ್ರತ್ಯೇಕ ತೆಗೆದಿರಿಸುವಂತೆ ಶ್ರೀಲಂಕಾದಲ್ಲಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಸೂಚಿಸಿದೆ
- ಶ್ರೀಲಂಕಾದಲ್ಲಿ ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದು, ಔಷಧಗಳ ತೀವ್ರ ಕೊರತೆಯಿದೆ. ಹೀಗಾಗಿ ಅನಾರೋಗ್ಯಕ್ಕೆ ಈಡಾಗದಂತೆ ನೋಡಿಕೊಳ್ಳಿ ಎಂದು ಅಲ್ಲಿನ ವೈದ್ಯರು ನಾಗರಿಕರಿಗೆ ಸಲಹೆ ನೀಡಿದ್ದಾರೆ
- ಭಾರತ ಹಾಗೂ ಶ್ರೀಲಂಕಾ ನಡುವಿನ ವ್ಯಾಪಾರ ವಹಿವಾಟು ಸಂಪೂರ್ಣ ಸ್ಥಗಿತವಾಗಿದೆ ಎಂದು ಭಾರತದ ರಫ್ತು ಸಂಘಟನೆಗಳ ಒಕ್ಕೂಟ ಹೇಳಿದೆ

ಆರ್ಥಿಕ ಸಂಕಷ್ಟದ ಭೀತಿಯಲ್ಲಿ ಪಾಕ್

ಇಸ್ಲಾಮಾಬಾದ್ (ಪಿಟಿಐ): ಹೆಚ್ಚುತ್ತಿರುವ ಸಾಲದ ಹೊರೆ, ವಿದೇಶಿ ವಿನಿಮಯ ಮೀಸಲು ವೇಗವಾಗಿ ಕರಗುತ್ತಿರುವ ಕಾರಣ ಪಾಕಿಸ್ತಾನ ಸಹ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕುವ ಆತಂಕ ಎದುರಿಸುತ್ತಿದೆ ಎಂದು ಡಾನ್ ಪತ್ರಿಕೆ ಬುಧವಾರ ವರದಿ ಮಾಡಿವೆ.

ಕಳೆದ ತಿಂಗಳು ಚೀನಾ 2.3 ಶತ ಕೋಟಿ ಡಾಲರ್ ನೆರವು ನೀಡಿದೆ. ಆದರೂ, ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನದ ವಿದೇಶಿ ವಿನಿಮಯ ಮೀಸಲು ಒಂದಂಕಿಗೆ ಕುಸಿದಿದೆ. ಪ್ರತಿ ತ್ರೈಮಾಸಿಕದಲ್ಲಿ ವಿದೇಶಿ ಸಾಲದ ಪ್ರಮಾಣವೂ ಹೆಚ್ಚುತ್ತಿದೆ ಎಂದು ಪತ್ರಿಕೆ ತಿಳಿಸಿದೆ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿ
ಸಂಖ್ಯೆ: ಕಾಪಾಅ/ಗ್ರಾನೀಸ&ನೈ/Geo/Lab Instrument/2022–23/688 ದಿನಾಂಕ: 13–07–2022
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 08/2022–23
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿ ಇವರು WQMSP ಯೋಜನೆಯಡಿ ಸದರಿ ವಿಭಾಗ ವ್ಯಾಪ್ತಿಯ ಹೂವಿನಹಡಗಲಿ, ಕೂಡ್ಲಿಗಿ ತಾಲ್ಲೂಕು ಪ್ರಯೋಗಾಲಯದಲ್ಲಿ ಮತ್ತು ವಿಜಯನಗರ ಜಿಲ್ಲಾ ಪ್ರಯೋಗಾಲಯಕ್ಕೆ ಅವಶ್ಯಕವಿರುವ ಉಪಕರಣಗಳನ್ನು ಖರೀದಿಸುವ ಸಲುವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 1999 ನಿಯಮಗಳು 2000ರ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಅವಧಿ ದಿನಾಂಕ: 13–07–2022 ರಿಂದ 27–07–2022 ರ ಸಾಯಂಕಾಲ 5:00 ಗಂಟೆಯವರೆಗೆ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ತೆರೆಯುವ ದಿನಾಂಕ: 28–07–2022 ರಂದು ಸಂಜೆ 5:05 ಗಂಟೆ ನಂತರ. ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಗ್ರಾ.ನೀ.ಸ. & ನೈ ವಿಭಾಗ, ಹರಪನಹಳ್ಳಿ

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/03/2022–23 ದಿನಾಂಕ: 12–07–2022
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
2022–23 ನೇ ಸಾಲಿನ WQMSP ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **21–07–2022ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ.
ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು
ವಾಸಾಸಂಇ/ವಾ.ಪ್ರ/1340/ಅಡ್ವರ್ಟೋ/2022–23
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಉಗ್ರಾಣ ಮತ್ತು ಖರೀದಿ ಇಲಾಖೆ, ಶಾಂತಿನಗರ, ಬೆಂಗಳೂರು–560027
"ಇ–ಹರಾಜು ಪ್ರಕಟಣೆ"
ಕ.ರಾ.ರ.ಸಾ. ನಿಗಮದ ನಿರುಪಯುಕ್ತ ವಾಹನಗಳು ಮತ್ತು ವಸ್ತುಗಳನ್ನು ಮೆ॥ ಎಂ.ಎಸ್.ಟಿ.ಸಿ. (ಭಾರತ ಸರ್ಕಾರದ ಅಧೀನ ಸಂಸ್ಥೆ) ಇವರು ನಡೆಸುವ ಇ–ಹರಾಜು ಮೂಲಕ ಮಾರಾಟ ಮಾಡಲಾಗುವುದು.
ನಿರುಪಯುಕ್ತ ವಸ್ತುಗಳು ಇ–ಹರಾಜು ಪ್ರಾರಂಭ ದಿನಾಂಕ : 19.07.2022
ನಿರುಪಯುಕ್ತ ವಾಹನಗಳು ಇ–ಹರಾಜು ಪ್ರಾರಂಭ ದಿನಾಂಕ : 25.07.2022
ಆಸಕ್ತಿಯುಳ್ಳ ಬಿಡ್ಡುದಾರರು ವೆಬ್‌ಸೈಟ್: **www.mstcecommerce.com** ಗೆ ಲಾಗ್‌ಆನ್ ಆಗಬಹುದು ಮತ್ತು ಹೆಚ್ಚಿನ ವಿವರಗಳನ್ನು ಈ ಕೆಳಕಂಡ ವಿಳಾಸದಿಂದ ಪಡೆಯಬಹುದು.
ಕಛೇರಿ ವಿಳಾಸ:
ಮೆ॥ ಎಂ.ಎಸ್.ಟಿ.ಸಿ. ಲಿಮಿಟೆಡ್, ನಂ. 19/5, 19/6, ಮೂರನೇ ಮಹಡಿ, ಕರೀಮ್ ಟವರ್, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು–560052. ದೂರವಾಣಿ ಸಂ.: **080–22260054, 22266417, 22287356, ಫ್ಯಾಕ್ಸ್ 080–22256365.**
ಕೆ.ಎಸ್.ಆರ್.ಟಿ.ಸಿ.ರವರನ್ನು ಸಂಪರ್ಕಿಸುವ ದೂರವಾಣಿ ಸಂಖ್ಯೆ: **+91 7760990221/224** ಅಥವಾ **080–22221321 ವಿಸ್ತರಣೆ 298.**
ಸಹಿ/–,
ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿ
ವಾಸಾಸಂಇ/ವಾಪ್ರ/ಎಲ್‌ಸಿ/1344/2022–23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929
ಸಂಖ್ಯೆ: ರಾಗಾವಿ/ಪ್ರೊಕ್/ಪ್ರಾಕ್ಟಿಕಲ್/12/2022–23 ದಿನಾಂಕ: 13.07.2022
ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)
ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ 10 ಪುಟಗಳೊಳಗೊಂಡ ಪ್ರಾಕ್ಟಿಕಲ್ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರನ್ನು ಆಹ್ವಾನಿಸಲಾಗಿದೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಉಲ್ಲೇಖಿತ ಷರತ್ತುಗಳಲ್ಲಿ ನೀಡಲಾಗಿದೆ.

1.	ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	13/07/2022 ಬೆಳಿಗ್ಗೆ 10:18:09 ಗಂಟೆಗೆ
2.	ಬಿಡ್–ಪೂರ್ವಭಾವಿ ಸಭೆ	19/07/2022 11:00 ಗಂಟೆಗೆ
3.	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	28/07/2022 4:00 ಗಂಟೆಗೆ
4.	ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ	30/07/2022 4:30 ಗಂಟೆಗೆ
5.	ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.
ಸಹಿ/–
ಕುಲಸಚಿವರು
ವಾ.ಸಾ.ಸಂ.ಇ/1336/2022–23

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್‌ಗಾಗಿ ಆಹ್ವಾನ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲ ಮಂಡಳಿಯು ಕೆಳಕಂಡ ಕಾಮಗಾರಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರನ್ನು ಆಹ್ವಾನಿಸಿದೆ.
ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	ವಾಯುವ್ಯ –1	ಬೆಂಜಮಂ/ಕಾನಿಅ(ವಾ–1)/ಪಿಬಿ/1083/2022–23 ದಿನಾಂಕ : 13.07.2022	ರೂ. 13,55,989/– / ರೂ. 33,900/–	20.07.2022 ಮಧ್ಯಾಹ್ನ 5:00 ಗಂಟೆಯವರೆಗೆ	21.07.2022 ಸಂಜೆ 5:30 ಗಂಟೆಯ ನಂತರ

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು **https://eproc.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
(ವಾಯುವ್ಯ–1)
ವಾಸಾಸಂಇ/ವಾಪ್ರ/ಜಗದಾಳೆ ಅಡ್ವರ್ಟೈಸಿಂಗ್/1354/2022–23
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ ನಂ.1, ಕಡೂರು–577548, ಚಿಕ್ಕಮಗಳೂರು(ಜಿ)
Phone/Fax No:08267-295207 email ID : eeubpdvn1@gmail.com
ಸಂಖ್ಯೆ: ಕಾಇಂ/ವಿಜನಿನಿ/ಭಮೇಯೋ/ವಿ–1/ಕ/ ಟೆ.ಸಂ: 03/2022–23/325 ದಿನಾಂಕ: 11.07.2022
ಅಲ್ಪಾವಧಿ ಟೆಂಡರ್ ಪ್ರಕಟಣೆ: (ಇ– ಪ್ರೊಕ್ಯೂರ್‌ಮೆಂಟ್ ಮುಖಾಂತರ)
ವ್ಯವಸ್ಥಾಪಕರ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 4701 ಶೀರ್ಷಿಕೆಯಡಿಯಲ್ಲಿ ಅನುಮೋದನೆಯಾಗಿರುವ ಇಂಡೆಂಟ್ ನಂ.2187, 2188, 2189 ಮತ್ತು 2192 ಕಾಮಗಾರಿಗೆ ದ್ವಿ–ಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಇ–ಪ್ರೊಕ್ಯೂಟ್‌ಮೆಂಟ್‌ನ http://www.eproc.karnataka.govi.in ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ: 12.07.2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ದಿನಾಂಕ: 19.07.2022 ರ 17.30 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.
ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ/ಇ.ಎಂ.ಡಿ ಮೊತ್ತ/ ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ http://www.eproc.karnataka.govi.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ : 18.07.2022 ರ 17.30 ಗಂಟೆಯವರೆಗೆ ಸಂಪರ್ಕಿಸಬಹುದು. ಸ್ವೀಕೃತ ಟೆಂಡರ್‌ಗಳನ್ನು ದಿನಾಂಕ: 20.07.2022 ರಂದು 17.30 ಗಂಟೆಯ ನಂತರ ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಕಾರ್ಯಪಾಲಕ ಇಂಜಿನಿಯರಿಂಗ್, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.01, ಕಡೂರು ರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಸಹಿ/–
ಕಾರ್ಯಪಾಲಕ ಇಂಜಿನಿಯರ್,
ವಿ.ಜ.ನಿ.ನಿ, ಭಮೇಯೋ ವಿಭಾಗ ನಂ.1, ಕಡೂರು

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸ್ತ್ರೀಸೇವಾನಿಕೇತನ ಆವರಣ ಎಸ್.ಪಿ. ಸರ್ಕಲ್ ಹತ್ತಿರ, ಬಳ್ಳಾರಿ–583103 ದೂರವಾಣಿ ಸಂಖ್ಯೆ: 08392–266219
ಸಂಖ್ಯೆ: ಉನಿಬ/ಸು.ಸಂ/ಬಾಹ್ಯಮೂಲ/ಇ–ಪ್ರಟೆಂಡರ್/2022–22 ದಿನಾಂಕ: 12–07–2022
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಬಳ್ಳಾರಿ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಐ.ಸಿ.ಪಿ.ಎಸ್ ಯೋಜನೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 6 ಸರ್ಕಾರಿ ಸುಧಾರಣಾ ಸಂಸ್ಥೆಗಳಿಗೆ 2022–23 ಸಾಲಿನಲ್ಲಿ ಆಹಾರ ಮತ್ತಿತರೆ ಸಾಮಗ್ರಿಗಳನ್ನು ಖರೀದಿಸಲು, ಆಹಾರ ಹಾಗೂ ಇತರೆ ಸಾಮಗ್ರಿ ಸರಬರಾಜುದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಇದಕ್ಕಾಗಿ ಆಹಾರ ಸಾಮಗ್ರಿ ಪೂರೈಕೆ ಗುತ್ತಿಗೆದಾರರು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://eproc.karnataka.gov.in ವನ್ನು ಸಂಪರ್ಕಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಆಹಾರ ಮತ್ತು ಇತರೆ ಸಾಮಗ್ರಿ ಸರಬರಾಜು ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಚೇರಿಯಲ್ಲಿ ಇದೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಟೆಂಡರ್‌ಗೆ ಸೂಚಿಸಿದ ಕಾಮಗಾರಿಯ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ): 53.00
ವರ್ಕ್ ಇಂಡೆಂಟ್ ನಂ : DDB/C.I/FOOD/FT/2022-23 Call-1

ಅ)	ಟೆಂಡರ್ ಸಲ್ಲಿಕೆ ಪ್ರಾರಂಭ ದಿನಾಂಕ	14–07–2022 ರಂದು 16:00 ರಿಂದ
ಆ)	ಇ–ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	28–07–2022 ರಂದು 16:00 ಗಂಟೆಯವರೆಗೆ
ಇ)	ಟೆಕ್ನಿಕಲ್ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	29–07–2022 ರಂದು 16:00 ಗಂಟೆಗೆ
ಈ)	ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	01–08–2022 ರಂದು 11:30 ಗಂಟೆಗೆ

ಸಹಿ/– ಉಪನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಳ್ಳಾರಿ

ಕರ್ನಾಟಕ ಸರಕಾರ
ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ಮುಳಗುಂದ ರಸ್ತೆ, ಮಲ್ಲಸಮುದ್ರ, ಗದಗ – 582103
Web:http://gimsgadag.karnataka.gov.in
ದೂರವಾಣಿ/ಸಂಖ್ಯೆ : 08372-297224 Email:gimsgadag@gmail.com
ಸಂಖ್ಯೆ : ಗ.ವೈ.ವಿ.ಸಂ/ಸಿ/ಎಬಿ/154/2022–23 ದಿನಾಂಕ: 13–07–2022
ಅಧಿಸೂಚನೆ
ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗದಲ್ಲಿ ಖಾಲಿ ಇರುವ ಡೀನ್ ಕಮ್ ನಿರ್ದೇಶಕರ ಹುದ್ದೆಯ ನೇಮಕಾತಿಗಾಗಿ ಸರ್ಕಾರಿ ಆದೇಶ ಸಂಖ್ಯೆ: ಎಂಇಡಿ 288 ಎಂಪಿಎಸ್ 2022 ದಿನಾಂಕ: 12–07–2022 ರ ಪ್ರಕಾರ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಡೀನ್ ಕಮ್ ನಿರ್ದೇಶಕರ ಹುದ್ದೆಯ ನೇಮಕಾತಿಗಾಗಿ ಕನಿಷ್ಠ ವಿದ್ಯಾರ್ಹತೆ ಮತ್ತು ಅರ್ಹತಾ ಮಾನದಂಡಗಳನ್ನು ಎನ್.ಎಂ.ಸಿ/ಎಂ.ಸಿ.ಐ ನಿಯಮಾವಳಿಗಳನ್ವಯ ಹಾಗೂ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೈಲಾಗಳನ್ವಯ ಪರಿಗಣಿಸಲಾಗುವುದು.
ಸೂಚನೆ: ನಿಗದಿತ ಅರ್ಜಿ ನಮೂನೆಯನ್ನು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ http://gimsgadag.karnataka.gov.in ವೆಬ್‌ಸೈಟ್‌ನಿಂದ ಡೌನಲೋಡ್ ಮಾಡಿಕೊಂಡು, ನಿರ್ದೇಶಕರು, ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ಇವರ ಹೆಸರಿನಲ್ಲಿ ರೂ.5000/–ಗಳ ಡಿಮ್ಯಾಂಡ್ ಡ್ರಾಫ್ಟ್ ಅನ್ನು (ಹಿಂದಿರುಗಿಸಲಾಗದಿರುವ) ಪಡೆದು ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ನೋಂದಾಯಿತ ಅಂಚೆ ಮುಖಾಂತರ / ಖುದ್ದಾಗಿ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ, ನಿರ್ದೇಶಕರ ಕಛೇರಿಗೆ ಸಲ್ಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ವೆಬ್‌ಸೈಟ್‌ನ್ನು ಸಂಪರ್ಕಿಸಿ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28–07–2022. ಸಾಯಂಕಾಲ 5.00 ಗಂಟೆ.
ಸಹಿ/–ಮುಖ್ಯ ಆಡಳಿತಾಧಿಕಾರಿಗಳು,
ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಗದಗ
ವಾ.ಸಾ.ಇ/ಗದಗ/170/2022–23/ದೇಶಪಾಂಡೆಪಬ್ಲಿಸಿಟಿ

ನಗರಸಭಾ ಕಾರ್ಯಾಲಯ, ಚಿತ್ರದುರ್ಗ–577501
ಸಂ:ನಸಚಿ:ತಾಂತ್ರಿಕ(1)/ಟೆಂಡರ್:ಕಿ.ಅ./ಸಿಆರ್:07:2022–23, ದಿ: 11.07.2022
ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯು–2&3ರ ನಿಬಂಧನೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.)
ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2022–23ನೇ ಸಾಲಿನ 15ನೇ ಹಣಕಾಸು ಮೂಲ ಅನುದಾನ ಮತ್ತು 2022–23ನೇ ಸಾಲಿನ ಎಸ್.ಎಫ್.ಸಿ. ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ. ಅನುದಾನದಲ್ಲಿ ಅನುಮೋದನೆಯಾಗಿರುವ ರೂ. 148.00 ಲಕ್ಷಗಳ 2 ಕಾಮಗಾರಿಗಳನ್ನು ಚಿತ್ರದುರ್ಗ ನಗರಸಭಾ ವ್ಯಾಪ್ತಿಯಲ್ಲಿ ಕೈಗೊಳ್ಳಲು ಇ–ಪ್ರಕ್ಯೂರ್‌ಮೆಂಟ್ ಏಕ/ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆ ಗುತ್ತಿಗೆದಾರರು ಐಟಂವಾರು ಟೆಂಡರ್ ಕರೆಯಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **htt:/eproc.Karanataka.gov.in** ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. **"ಟೆಂಡರ್‌ದಾರರು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವಾಗ ಅನವಶ್ಯಕವಾದ ದಾಖಲಾತಿಗಳನ್ನು ಅಪ್‌ಲೋಡ್ ಮಾಡದೇ ಸಂಬಂಧಿಸಿದ ದಾಖಲಾತಿಯನ್ನು ಸಂಬಂಧಪಟ್ಟ ಕೋಷ್ಟಕದಲ್ಲಿ ಸ್ಪಷ್ಟವಾಗಿ ಕಾಣುವಂತೆ ಅಪಲೋಡ್ ಮಾಡತಕ್ಕದ್ದು"** ವಿವರ ಈ ಕೆಳಕಂಡಂತೆ ಇರುತ್ತವೆ. ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಾಂಕಗಳು ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ, ಮುಂದಿನ ದಿನಗಳನ್ನು ಪರಿಗಣಿಸಲಾಗುವುದು, ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ಕಾಮಗಾರಿ ವಿಭಾಗದಲ್ಲಿ ಅಭಿಯಂತರರನ್ನು ವಿಚಾರಿಸಬಹುದು ಅಥವಾ ನಗರಸಭೆಯ ಅಂತರ್‌ಜಾಲ **www.chitradurgacity.mrc.gov.in** ನಲ್ಲಿಪಡೆಯಬಹುದಾಗಿದೆ. ಜಿ.ಎಸ್.ಟಿ ಮೊತ್ತ ಪ್ರತ್ಯೇಕವಾಗಿ ಪಾವತಿಸಲಾಗುವುದು. (1) ಖಾಲಿ ಟೆಂಡರ್ ಫಾರಂಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 20.07.2022 ರ 5.30 ಸಂಜೆ ಗಂಟೆವರೆಗೆ (2) ಟೆಂಡರ್‌ನ್ನು ತೆರೆಯುವ ದಿನಾಂಕ (ತಾಂತ್ರಿಕ) 21.07.2022ರ ಸಂಜೆ 5.30 ಗಂಟೆಗೆ (3) ಟೆಂಡರ್‌ನ್ನು ತೆರೆಯುವ ದಿನಾಂಕ (ಅರ್ಥಿಕ) 22.07.2022ರ ಸಂಜೆ 5.30 ಗಂಟೆಗೆ (4) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) E-procurement ನಿಯಮಾನುಸಾರ.
DIPR/CTA/MCA/
340/2022-23
ಸಹಿ/–ಪೌರಾಯುಕ್ತರು,
ನಗರಸಭೆ, ಚಿತ್ರದುರ್ಗ

ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು–572 103,
ದೂರವಾಣಿ : 0816–2254546
ಸಂಖ್ಯೆ:TUT/Gen/UCA/LIB/2022-23/2439 Dated: 13.07.2022
ಟೆಂಡರ್ ಪ್ರಕಟಣೆ (ಇ–ಪೋರ್ಟಲ್ ಮುಖಾಂತರ)
ತುಮಕೂರು ವಿಶ್ವವಿದ್ಯಾನಿಲಯದ ಕಲಾ ಕಾಲೇಜಿನ ಗ್ರಂಥಾಲಯ ಗಣಕೀಕರಣ ಮತ್ತು ಡಿಜಿಟಲೀಕರಣ ಮಾಡುವ ಸಲುವಾಗಿ ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳನ್ನು ಖರೀದಿಸುವ ವಿಷಯಕ್ಕೆ ಸಂಬಂಧಿಸಿದಂತೆ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ದಿನಾಂಕಗಳ ವಿವರಗಳು

ಟೆಂಡರ್ ಶೀರ್ಷಿಕೆ	ಪ್ರಾರಂಭದ ದಿನಾಂಕ	ಕೊನೆಯ ದಿನಾಂಕ	ತಾಂತ್ರಿಕ &ಆರ್ಥಿಕ ಬಿಡ್ ತೆರೆಯುವ ದಿನಾಂಕ
Tender For The Supply Of Computers And Printer Equipment's For Library And Information Center, University College Of Arts	14.07.2022	13.08.2022	16.08.2022

ಟೆಂಡರ್ ಮೌಲ್ಯ ಮತ್ತು ಇ.ಎಂ.ಡಿ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ವೀಕ್ಷಿಸಿ, ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕೆಳಕಂಡ ಅಧಿಕಾರಿಯ ಕಛೇರಿಯಲ್ಲಿ ಸಂಪರ್ಕಿಸುವುದು.
ಸಹಿ/– ಕುಲಸಚಿವರು,
ತುಮಕೂರು ವಿಶ್ವವಿದ್ಯಾಲಯ, ತುಮಕೂರು

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನೊಂದಣಿ ಕಛೇರಿ : ಗುವಿಸಕಂನಿ, ಮುಖ್ಯ ರಸ್ತೆ, ಕಲಬುರಗಿ 585102
ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಗು.ವಿ.ಸ.ಕಂ.ನಿ., ಕೊಪ್ಪಳ.
ದೂರವಾಣಿ ಸಂಖ್ಯೆ: (08539) 200033
CIN: U4010KA2002SGC030436 Email: seemrbgescom@gmail.com
Website:gescom.in
ಸಂಖ್ಯೆ: ಅಇಂ(ವಿ)/ಕಾನಿಅ(ವಿ)/ಸಕಾನಿಅ(ತಾ)/ಸಅ(ತಾ)/ಕ–87/ಟಿ.ಎನ್.02/2022–23/1667–72
ದಿನಾಂಕ :08–07–2022
ಅಲ್ಪಾವಧಿಟೆಂಡರ್ ಪ್ರಕಟಣೆ
ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ಕೊಪ್ಪಳ ವೃತ್ತ ಕಛೇರಿಗೆ ಒಳಪಡುವ ಗಂಗಾವತಿ ವಿಭಾಗ ಕಛೇರಿ, ಗಂಗಾವತಿ/ಕಾರಟಗಿ/ಕುಷ್ಟಗಿ ಉಪ–ವಿಭಾಗ ಹಾಗೂ ಹನುಮಸಾಗರ ಶಾಖಾ ಕಛೇರಿಗಳಿಗೆ ಬೇಕಾಗಿರುವ ಗೃಹ ರಕ್ಷಕರು ಪ್ರತಿ ದಿನದ ಕಛೇರಿ ಕೆಲಸಕ್ಕಾಗಿ ಹೊರಗಿನ ಅರ್ಹ ಏಜೆನ್ಸಿಗಳಿಂದ ಸೇವೆಯನ್ನು ಪಡೆಯಲು ಈ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದೆ.
ಹೆಚ್ಚಿನ ವಿವರಗಳಿಗಾಗಿ www.eproc.karnataka.gov.in ಅಂತರ್ಜಾಲದಲ್ಲಿ ದಿನಾಂಕ: 13.07.2022 ರಂದು ಅಥವಾ ನಂತರ ಪಡೆಯಬಹುದು. ಬಿಡ್ ಸಲ್ಲಿಸಲು ಕೊನೆಯ ದಿನಾಂಕ : **20–07–2022 ಸಾಯಂಕಾಲ 5 ಗಂಟೆ.**
ಹೆಚ್ಚಿನ ಮಾಹಿತಿಯನ್ನು ಅಧೀಕ್ಷಕ ಅಭಿಯಂತರರು (ವಿ), ಕಾರ್ಯ ಮತ್ತು ಪಾಲನೆ ವೃತ್ತ, ಗುವಿಸಕಂನಿ., ಕೊಪ್ಪಳ ರವರ ಕಛೇರಿಯ ದೂರವಾಣಿ ಸಂಖ್ಯೆ: **08539–200022/08539–200033** ಅಥವಾ **9483043701** ಕ್ಕೆ ದೂರವಾಣಿ ಮುಖಾಂತರ ಕಛೇರಿ ಅವಧಿಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು. ಇ–ಪ್ರೋಕ್ಯೂರ್‌ಮೆಂಟ್ ಸಹಾಯಕ್ಕಾಗಿ ದೂರವಾಣಿ ಸಂಖ್ಯೆ: **080–22371090/080–22340948.**
ಸಹಿ/– ಅಧೀಕ್ಷಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನೆ ವೃತ್ತ
ಗುವಿಸಕಂನಿ., ಕೊಪ್ಪಳ
ವಾ.ಸಾ.ಇ./ಕೊಪ್ಪಳ/228/2022–23/ದೇಶಪಾಂಡೆ ಪಬ್ಲಿಸಿಟಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಹೆಬ್ಬಾಳ ವಿಭಾಗ, 2ನೇ ಮಹಡಿ, ಬೃಬೆಂಮಪಾ ಕಟ್ಟಡ, ಜೆಸಿ ನಗರ ಮುಖ್ಯರಸ್ತೆ, ಮುನಿರೆಡ್ಡಿ ಪಾಳ್ಯ, ಬೆಂಗಳೂರು–560 032.
ಸಂಖ್ಯೆ: ಕಾಅ/ಹೆವಿ/ಟೆಂಡರ್/20/2022–23 ದಿನಾಂಕ: 13–07–2022
ಟೆಂಡರ್ ಪ್ರಕಟಣೆ (ಕೆಡಬ್ಲ್ಯೂ–4)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು (ಹೆಬ್ಬಾಳ ವಿಭಾಗ), ಬೃಬೆಂಮಪಾ, ಬೆಂಗಳೂರು ರವರು ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ಸಿಪಿಡಬ್ಲ್ಯೂ.ಡಿ/ರೈಲ್ವೇಸ್/ಎಂಇಎಸ್/ಇತರೆ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ಸಾವಿರ ರೂ.ಗಳಲ್ಲಿ)
1.	ವಾರ್ಡ್ ನಂ.22ರ ವಿ. ನಾಗೇನಹಳ್ಳಿಯ ರತ್ನಮ್ಮ ಬಡಾವಣೆಯ 1ನೇ ಅಡ್ಡರಸ್ತೆ ಮತ್ತು 2ನೇ ಅಡ್ಡರಸ್ತೆಗೆ ಡಾಂಬರೀಕರಣ ಹಾಗೂ ಒಳಚರಂಡಿ ಸುಧಾರಣೆ ಮತ್ತು ಕನಕನಗರ 14ನೇ ಅಡ್ಡರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಸಿಸಿ ರಸ್ತೆ ಒದಗಿಸುವುದು.	190.00	2,85,000/-
2.	ಜೆಸಿ ನಗರ ಉಪ ವಿಭಾಗ, ಆರ್‌ಟಿ ನಗರ 2ನೇ ಬ್ಲಾಕ್‌ನಲ್ಲಿರುವ ಕುವೆಂಪು ಉದ್ಯಾನವನಕ್ಕೆ ಎಂಎಸ್ ಗ್ರಿಲ್ ಒದಗಿಸುವುದು, ಮನೋರಾಯನ ಪಾಳ್ಯಕ್ಕೆ ಕೊಳವೆಬಾವಿಗಳನ್ನು ಕೊರೆಯುವುದು ಮತ್ತು ಪೈಪ್‌ಲೈನ್‌ಗಳನ್ನು ಒದಗಿಸುವುದು ಮತ್ತು ಗಂಗೇನಹಳ್ಳಿಯ ಕೆಹೆಚ್‌ಎಂ ಬ್ಲಾಕ್‌ನಲ್ಲಿ ಸಿಸಿ ರಸ್ತೆ ಒದಗಿಸುವುದು.	170.00	2,55,000/-
3.	ಹೆಬ್ಬಾಳ ಉಪ ವಿಭಾಗ ಗಂಗಾನಗರದ ವಸಂತ ಬ್ಲಾಕ್ ಮತ್ತು ಸಂಜಯನಗರ ಆನಂದನಗರ ಹತ್ತಿರದ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿ.	140.00	2,10,000/-

ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಇ–ಪೋರ್ಟಲ್ ನಿಂದ ಡೌನ್‌ಲೋಡ್ ಮಾಡುವ ದಿನಾಂಕ: 18–07–2022ರ ಸಂಜೆ 4:00 ಗಂಟೆಯವರೆಗೆ. 2. ಪೂರ್ವ ಬಿಡ್ ಸಭೆಯ ದಿನಾಂಕ: 21–07–2022 ಸಂಜೆ 3.00 ಗಂಟೆಗೆ. 3. ಭರ್ತಿಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 28–07–2022ರ ಸಂಜೆ 4:00 ಗಂಟೆಯವರೆಗೆ. 4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29–07–2022ರ ಸಂಜೆ 4.30 ಗಂಟೆಯ ನಂತರ. 5. ಆರ್ಥಿಕ ಬಿಡ್ ತೆರೆಯುವ ದಿನಾಂಕ: 02–08–2022ರ ಬೆಳಗ್ಗೆ 11.00 ಗಂಟೆಯ ನಂತರ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಹೆಬ್ಬಾಳ ವಿಭಾಗ, ಬೃಬೆಂಮಪಾ.
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

सत्यमेव जयते
GOVERNMENT OF INDIA
PRINCIPAL CHIEF COMMISSIONER OF INCOME TAX KARNATAKA & GOA REGION, BENGALURU
Central Revenue Building, No.1, Queen's Road, Bengaluru-560 001
F.No.63A/CIT(J)/BLR/2022-23 Date: 13.07.2022
NOTICE FOR EMPANELMENT OF ADVOCATES
1. The Pr. Chief Commissioner of Income Tax, Karnataka & Goa, **proposes to engage the services of Senior and Junior Standing Counsels to represent the Department before the Hon'ble High Court of Karnataka.**
2. The terms of engagement are governed by the Instruction No.7/2016 dated 07/09/2016 of the Central Board of Direct Taxes (CBDT). The Advocates willing to be empanelled should send their application in the Prescribed Proforma A-1/A-2. The above instruction, proforma and a checklist for submitting the application can be downloaded from **www.incometaxbengaluru.org** or can be collected from the address given below. The eligibility conditions for each category of counsel is as per para 2 of Annexure-1 to the said instruction. The applicants are requested to follow the checklist before submission of their application. If any of the documents required to be filed is not enclosed with the application, such application will be treated as defective and liable to be rejected.
3. The present requirement is as follows: **(i)** 1 Senior Standing Counsel for Bengaluru Bench. **(ii)** 1 Senior Standing Counsel for extended panel for Bengaluru Bench. **(iii)** 1 Junior Standing Counsel for extended panel for Dharwad Bench.
4. The number of Standing Counsels proposed to be engaged can be increased depending upon further requirement.
5. It is preferable if the applicants are stationed at Bengaluru and Dharwad for the respective benches for the sake of mutual convenience.
6. The applicants should furnish their email-ID, Phone/Mobile numbers for contact and further communication.
7. **The applicants may contact the following Officers for any clarification in this matter.**

Sri. S. Nataraja Addl.Commissioner of Income Tax (Judicial) Room No.112, 1st Floor, C. R. Building, Bengaluru. **Phone No. 080-22860788**	**Smt. Bharathi Ramakrishnan** Income Tax Officer (HQ) (Judl.) Room No.120, 1st Floor, C.R.Building Bengaluru. **Phone No. 080-22868904**

8. **The application in duplicate in a sealed envelope should reach the following address on or before 05.08.2022 by 6.00 p.m. The application should be in hard copy only.** The application filed through any other mode like email, fax etc will not be considered as valid application.

Commissioner of Income Tax (Judicial),
Central Revenue Building, 1st Floor,
Queens Road, Bengaluru-560001, Karnataka
Email:citjudicialblr@gmail.com

ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್: ಶಿವ ನರ್ವಾಲ್ –ಪಲಕ್‌ಗೆ ಕಂಚಿನ ಪದಕ

ಚಿನ್ನ ಜಯಿಸಿದ ಮೆಹುಲಿ– ಮಾನೆ

ಚಾಂಗ್ವಾನ್, ದಕ್ಷಿಣ ಕೊರಿಯಾ (ಪಿಟಿಐ): ಮೆಹುಲಿ ಘೋಷ್ ಮತ್ತು ಶಾಹು ತುಷಾರ್ ಮಾನೆ ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನಲ್ಲಿ ಬುಧವಾರ ಚಿನ್ನದ ಪದಕಕ್ಕೆ ಗುರಿಯಿಟ್ಟರು. 10 ಮೀಟರ್ಸ್ ಏರ್ ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ಭಾರತದ ಜೋಡಿಗೆ ಪದಕ ಒಲಿಯಿತು. ಇದು ಟೂರ್ನಿಯಲ್ಲಿ ದೇಶದ ಶೂಟರ್‌ಗಳು ಗೆದ್ದ ಎರಡನೇ ಚಿನ್ನವಾಗಿದೆ.

ಅರ್ಜುನ್ ಬಬೂತಾ ಪುರುಷರ 10 ಮೀಟರ್ಸ್ ಏರ್ ರೈಫಲ್ ವೈಯಕ್ತಿಕ ವಿಭಾಗದಲ್ಲಿ ಸೋಮವಾರ ಚಿನ್ನ ಜಯಿಸಿದ್ದರು.

ಫೈನಲ್ ಹಣಾಹಣಿಯಲ್ಲಿ ಮೆಹುಲಿ ಮತ್ತು ತುಷಾರ್ 17–13ರಿಂದ ಹಂಗರಿಯ ಈಸ್ತರ್ ಮೆಸ್‌ಜರೋಸ್ ಮತ್ತು ಈಸ್ತವಾನ್ ಪೆನ್ ಅವರಿಗೆ ಸೋಲುಣಿಸಿದರು. ಇಸ್ರೇಲ್ ಮತ್ತು ಜೆಕ್ ಗಣರಾಜ್ಯದ ಶೂಟರ್‌ಗಳು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ಗಳಿಸಿದರು.

ಮುಖ್ಯಾಂಶಗಳು

- ಫೈನಲ್ ಹಣಾಹಣಿಯಲ್ಲಿ ಹಂಗರಿ ಜೋಡಿ ಎದುರು ಜಯ
- ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಎರಡನೇ ಚಿನ್ನ
- ಪದಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದ ಭಾರತ ತಂಡ

ಸೀನಿಯರ್ ವಿಭಾಗದಲ್ಲಿ ತುಷಾರ್ ಅವರಿಗೆ ಇದು ಮೊದಲ ಚಿನ್ನದ ಪದಕ. ಮೆಹುಲಿ ಅವರು 2019ರಲ್ಲಿ ನೇಪಾಳದ ಕಠ್ಮಂಡುನಲ್ಲಿ ನಡೆದ ದಕ್ಷಿಣ ಏಷ್ಯಾ ಕ್ರೀಡಾಕೂಟದಲ್ಲಿ ಚಿನ್ನ ಜಯಿಸಿದ್ದರು.

ಶಿವ–ಪಲಕ್‌ಗೆ ಕಂಚು: 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಪಲಕ್ ಮತ್ತು ಶಿವ ನರ್ವಾಲ್ ಜೋಡಿಯು ಕಂಚಿನ ಪದಕ ಗೆದ್ದುಕೊಂಡಿತು.

ಚಿನ್ನದ ಪದಕದೊಂದಿಗೆ ಸಂಭ್ರಮಿಸಿದ ಮೆಹುಲಿ ಘೋಷ್ ಮತ್ತು ಶಾಹು ತುಷಾರ್ ಮಾನೆ– ಪಿಟಿಐ ಚಿತ್ರ

ಮಿಶ್ರ ತಂಡ ವಿಭಾಗದ ಈ ಸ್ಪರ್ಧೆಯಲ್ಲಿ ಭಾರತದ ಶೂಟರ್‌ಗಳು 16–0ಯಿಂದ ಕಜಕಸ್ತಾನದ ಐರಿನಾ ಲೋಕ್ತಿನೊವಾ ಮತ್ತು ವಲೇರಿಯಾ ರಕೀಂಜಾನ್ ಅವರನ್ನು ಮಣಿಸಿದರು. ಈ ಹಣಾಹಣಿಯಲ್ಲಿ ಶಿವ– ಪಲಕ್ ಸಂಪೂರ್ಣ ಪಾರಮ್ಯ ಮೆರೆದರು.

ಭಾರತ(ಎರಡು ಚಿನ್ನ ಮತ್ತು ಒಂದು ಕಂಚು) ತಂಡವು ಸದ್ಯ ಪದಕ-ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದೆ. ಸರ್ಬಿಯಾ ಶೂಟರ್‌ಗಳು ಮೊದಲ ಸ್ಥಾನದಲ್ಲಿದ್ದಾರೆ

ಬ್ಯಾಸ್ಕೆಟ್‌ಬಾಲ್: ಕೋರಮಂಗಲ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋಕುಲ್ ಗಳಿಸಿದ 23 ಪಾಯಿಂಟ್ಸ್ ಬಲದಿಂದ ಕೋರಮಂಗಲ ಎಸ್‌ಸಿ ತಂಡವು ರಾಜ್ಯ ಬಿ ಡಿವಿಷನ್ ಲೀಗ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿ-ಪ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಬುಧವಾರ ಕೋರಮಂಗಲ 66–50ರಿಂದ ಬಿಎಸ್‌ಎನ್‌ಎಲ್ ತಂಡವನ್ನು ಸೋಲಿಸಿತು. ವಿಜೇತ ತಂಡದ ಅಭಿಷೇಕ್ ಜಾನ್ 17 ಪಾಯಿಂಟ್ಸ್ ಕಲೆಹಾಕಿದರು. ಬಿಎಸ್‌ಎನ್‌ಎಲ್ ಪರ ಹರೀಶ್ 11 ಪಾಯಿಂಟ್ಸ್ ಗಳಿಸಿದರು.

ಮತ್ತೊಂದು ಹಣಾಹಣಿಯಲ್ಲಿ ಪ್ರೊಟೆಕ್ ಅಸೋಸಿಯೇಷನ್ ಮೈಸೂರು 71–59ರಿಂದ ರಾಜ್‌ಮಹಲ್ ಬಿ.ಸಿ. ವಿರುದ್ಧ ಗೆದ್ದಿತು.

ಪ್ರೊಟೆಕ್ ಅಸೋಸಿಯೇಷನ್ ಮೈಸೂರು ತಂಡಕ್ಕಾಗಿ ಹರಿ 19 ಪಾಯಿಂಟ್ಸ್ ಗಳಿಸಿದರು. ರಾಜ್‌ಮಹಲ್ ತಂಡದ ಪರ ಶಿಶಿರ್ (30) ಅವರು ಮಿಂಚಿದರು.

ಸುದ್ದಿ 2 ನಿಮಿಷ

ಗಾಲ್ಫ್: ಪ್ರಣವಿಗೆ ಮುನ್ನಡೆ

ಬೆಂಗಳೂರು: ಮೈಸೂರಿನ ಪ್ರಣವಿ ಅರಸ್ ಅವರು ಇಲ್ಲಿ ನಡೆಯುತ್ತಿರುವ ಮಹಿಳಾ ಪ್ರೊ ಗಾಲ್ಫ್ ಟೂರ್‌ನ ಒಂಬತ್ತನೇ ಲೆಗ್ ಟೂರ್ನಿಯಲ್ಲಿ ಮೊದಲ ಸುತ್ತಿನ ಬಳಿಕ ಮುನ್ನಡೆ ಕಾಯ್ದು ಕೊಂಡಿದ್ದಾರೆ.

ಈ ವರ್ಷದಲ್ಲಿ ಮೂರು ಪ್ರಶಸ್ತಿ ಜಯಿಸಿರುವ 19 ವರ್ಷದ ಪ್ರಣವಿ, ಸೆಹೆರ್ ಅತ್ವಾಲ್ ಅವರನ್ನು ಹಿಂದಿಕ್ಕಿದ್ದರು.

ಮಹಿಳಾ ಪ್ರೊ ಗಾಲ್ಫ್ ಟೂರ್‌ನಲ್ಲಿ ಒಂದು ಬಾರಿ ಪ್ರಶಸ್ತಿ ಗೆದ್ದಿರುವ ಗೌರಿ ಕರಾಡೆ ಮೂರನೇ ಮತ್ತು ಸ್ನೇಹಾ ಸಿಂಗ್ ನಾಲ್ಕನೇ ಸ್ಥಾನದಲ್ಲಿದ್ದರು.

ಮೊದಲ ಸುತ್ತಿನ ಬಳಿಕ ವಿಧಾತ್ರಿ ಅರಸ್, ಹಿತಾಶ್ರೀ ಬಕ್ಷಿ, ಅನೀಶಾ ಅಗರವಾಲ್ ಮತ್ತು ಶ್ವೇತಾ ಮಾನಸಿಂಗ್ ಜಂಟಿ ಐದನೇ ಸ್ಥಾನದಲ್ಲಿದ್ದರು.

ಖುಷಿ ಖನಿಜಾವು, ಅಫ್ಸನ್ ಫಾತಿಮಾ, ದಿಶಾ ಕಾವೇರಿ ಮತ್ತು ಅನನ್ಯಾ ದಾತಾರ್ ಅವರು ಜಂಟಿ ಒಂಬತ್ತನೇ ಸ್ಥಾನದಲ್ಲಿದ್ದರು.

ಐಸಿಸಿ ಏಕದಿನ ರ‍್ಯಾಂಕಿಂಗ್: ಅಗ್ರಸ್ಥಾನಕ್ಕೆ ಜಸ್‌ಪ್ರೀತ್ ಬೂಮ್ರಾ

ದುಬೈ (ಪಿಟಿಐ): ಭಾರತದ ವೇಗಿ ಜಸ್‌ಪ್ರೀತ್ ಬೂಮ್ರಾ ಐಸಿಸಿ ಏಕದಿನ ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ.

ಮಂಗಳವಾರ ನಡೆದ ಇಂಗ್ಲೆಂಡ್ ಎದುರಿನ ಪಂದ್ಯದಲ್ಲಿ ಅವರು ತಮ್ಮ ಜೀವನಶ್ರೇಷ್ಠ (19ಕ್ಕೆ6) ಸಾಧನೆ ಮಾಡಿದ್ದರು.

ಈ ಹಿಂದೆ ಬೂಮ್ರಾ ಸತತ 730 ದಿನಗಳವರೆಗೆ ಅಗ್ರಸ್ಥಾನದಲ್ಲಿದ್ದರು. ಆದರೆ 2020ರ ಫೆಬ್ರುವರಿಯಲ್ಲಿ ಬೂಮ್ರಾ ಅಗ್ರಸ್ಥಾನ ಕಳೆದುಕೊಂಡಿದ್ದರು. ಇದೀಗ ಮತ್ತೆ ಅವರು ಪ್ರಥಮ ಸ್ಥಾನಕ್ಕೇರಿದ್ದಾರೆ. ಟೆಸ್ಟ್ ಕ್ರಿಕೆಟ್‌ನಲ್ಲಿ ಮೂರನೇ ಸ್ಥಾನ ಪಡೆದಿದ್ದಾರೆ.

ಕಪಿಲ್ ದೇವ್ ನಂತರ ಏಕದಿನ ಕ್ರಿಕೆಟ್‌ನಲ್ಲಿ ಅಗ್ರಸ್ಥಾನಕ್ಕೇರಿದ ಭಾರತದ ವೇಗದ ಬೌಲರ್ ಎಂಬ ಹೆಗ್ಗಳಿಕೆ ಬೂಮ್ರಾ ಅವರದ್ದಾಗಿದೆ. ಟಿ20 ಬ್ಯಾಟಿಂಗ್ ವಿಭಾಗದಲ್ಲಿ ಸೂರ್ಯಕುಮಾರ್ ಯಾದವ್ 44 ಸ್ಥಾನಗಳ ಬಡ್ತಿ ಪಡೆದು ಐದನೇ ಸ್ಥಾನ ಗಳಿಸಿದ್ದಾರೆ.

ಪಾಕ್ ಹಿಂದಿಕ್ಕಿದ ಭಾರತ: ಏಕದಿನ ಕ್ರಿಕೆಟ್ ತಂಡ ವಿಭಾಗದಲ್ಲಿ ಭಾರತವು ಪಾಕಿಸ್ತಾನವನ್ನು ಹಿಂದಿಕ್ಕಿದೆ.

108 ರೇಟಿಂಗ್ ಅಂಕಗಳನ್ನು ಗಳಿಸಿರುವ ಭಾರತ ತಂಡವು ಮೂರನೇ ಸ್ಥಾನ ಪಡೆದಿದೆ. ಪಾಕಿಸ್ತಾನವು (103 ರೇಟಿಂಗ್ ಅಂಕಗಳು) ನಾಲ್ಕನೇ ಸ್ಥಾನದಲ್ಲಿದೆ. ಹೋದ ತಿಂಗಳು ಪಾಕಿಸ್ತಾನ ತಂಡವು ಭಾರತವನ್ನು ಹಿಂದಿಕ್ಕಿತ್ತು.

ನ್ಯೂಜಿಲೆಂಡ್ (126) ಮೊದಲ ಸ್ಥಾನದಲ್ಲಿದೆ.

ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅಭಿಪ್ರಾಯ

‘ಸದ್ಯದ ಏಕದಿನ ಮಾದರಿಯಲ್ಲಿ ಎರಡು ಹೊಸ ಚೆಂಡುಗಳನ್ನು ಬಳಸಲಾಗುತ್ತಿದೆ. ಆದರೆ, ಮೊದಲಿನಂತೆ ಒಂದೇ ಚೆಂಡು ಬಳಸಿದರೆ ಒಳ್ಳೆಯದು’ ಎಂದರು.

ಅಸ್ತಿತ್ವ ಕಳೆದುಕೊಳ್ಳುತ್ತಿರುವ ಏಕದಿನ ಮಾದರಿ ಕ್ರಿಕೆಟ್

ಮುಂಬೈ (ಪಿಟಿಐ): ಟ್ವೆಂಟಿ–20 ಕ್ರಿಕೆಟ್ ಭರಾಟೆಯಲ್ಲಿ ಏಕದಿನ ಮಾದರಿಯ ಕ್ರಿಕೆಟ್ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತಿದೆ ಎಂದು ಭಾರತ ತಂಡದ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅಭಿಪ್ರಾಯಪಟ್ಟಿದ್ದಾರೆ.

ವಾನಿ ಆ್ಯಂಡ್ ಟಫರ್ಸ್ ಕ್ರಿಕೆಟ್ ಕ್ಲಬ್ ಪಾಡ್‌ಕಾಸ್ಟ್‌ನಲ್ಲಿ ಮಾತನಾಡಿರುವ ಅವರು, ‘ಏಕದಿನ ಕ್ರಿಕೆಟ್‌ನ ಸೊಬಗೆಂದರೆ ಆಟದ ಏರಿಳಿತಗಳು. ಈ ಮಾದರಿಯಲ್ಲಿ ಬೌಲರ್‌ಗಳಿಗೂ ತಮ್ಮ ಸಾಮರ್ಥ್ಯ ಪಣಕ್ಕೊಡ್ಡುವ ಸೂಕ್ತ ವೇದಿಕೆ ಇರುತ್ತದೆ. ನೋಡುಗರಿಗೂ ಕ್ರಿಕೆಟ್ ಆಟವನ್ನು ಕಡಿಮೆ ಅವಧಿಯಲ್ಲಿ ಆಳವಾಗಿ ತಿಳಿ-ದುಕೊಳ್ಳುವಂತಹ ಅವಕಾಶ ಇರುತ್ತದೆ’ ಎಂದರು.



‘ಏಕದಿನ ಮಾದರಿಯ ಕ್ರಿಕೆಟ್ ಈಗ ಟಿ20 ಮಾದರಿಯ ವಿಸ್ತೃತ ರೂಪವಾಗುತ್ತಿದೆ. 50–50 ಆಟದಲ್ಲಿ ಈ ಮುಂಚಿನ ಸೊಬಗು ಕಾಣುತ್ತಿಲ್ಲ. ಪಂದ್ಯದ ಒಂದು ಹಂತದಲ್ಲಿ ಏಕತಾನತೆ ಕಾಡುವುದರಿಂದ ಟಿವಿ ಸ್ವಿಚ್ ಆಫ್ ಮಾಡಿಬಿಡುತ್ತೇವೆ’ ಎಂದಿದ್ದಾರೆ.

ಸ್ವಿಚ್‌ಹಿಟ್‌ಗೂ ಇರಲಿ ಎಲ್‌ಬಿಡಬ್ಲ್ಯು: ಲೆಗ್‌ಸ್ಟಂಪ್ ಲೈನ್‌ನಿಂದ ಹೊರಗೆ ನೆಲಸ್ಪರ್ಶ ಮಾಡುವ ಎಸೆತವು ಬ್ಯಾಟರ್ ಸ್ವಿಚ್ ಹಿಟ್ ಮಾಡುವ ಪ್ರಯತ್ನದಲ್ಲಿ ವಿಫಲವಾಗಿ ಪ್ಯಾಡ್‌ಗೆ ಅಪ್ಪಳಿಸಿದರೆ ಎಲ್‌ಬಿಡಬ್ಲ್ಯು ನೀಡಬೇಕು ಎಂದು ಅಶ್ವಿನ್ ಹೇಳಿದ್ದಾರೆ.

‘ಬ್ಯಾಟರ್‌ಗಳು ಸ್ವಿಚ್ ಹಿಟ್ ಆಡಲಿ, ರಿವರ್ಸ್ ಸ್ವೀಪ್ ಆಡಲಿ. ಆದರೆ, ಅವರು ತಮ್ಮ ಶೈಲಿಯನ್ನು ಬದಲಿಸಿ ತಿರುಗಲು ಅವಕಾಶವಿದೆ. ಆದರೆ ಬೌಲರ್‌ಗೆ ಎಲ್‌ಬಿಡಬ್ಲ್ಯು ತೀರ್ಪು ಪಡೆಯುವ ಅವಕಾಶ ಏಕಿಲ್ಲ. ಈ ರೀತಿಯ ತಾರತಮ್ಯ ಏಕೆ? ಬ್ಯಾಟರ್ ಮತ್ತು ಬೌಲರ್ ಇಬ್ಬರಿಗೂ ಸಮಾನ ಅವಕಾಶ ನೀಡಬೇಕು’ ಎಂದು ಅಶ್ವಿನ್ ತಮ್ಮ ಯೂಟ್ಯೂಬ್ ವಾಹಿನಿಯಲ್ಲಿ ಹೇಳಿದ್ದಾರೆ.

‘ಈಚೆಗೆ ನಡೆದ ಭಾರತ ಮತ್ತು ಇಂಗ್ಲೆಂಡ್ ಟೆಸ್ಟ್ ಪಂದ್ಯದಲ್ಲಿ ಜೋ ರೂಟ್ ಸುಮಾರು 10 ಬಾರಿ ರಿವರ್ಸ್ ಸ್ವೀಪ್ ಆಡಲು ಪ್ರಯತ್ನಿಸಿದರು. ಅದರಲ್ಲಿ ಸುಮಾರು ಒಂಬತ್ತು ಸಲ ಅವರು ಯಶಸ್ವಿಯಾಗಲಿಲ್ಲ. ಆಗ ಚೆಂಡು ಪ್ಯಾಡ್‌ಗೆ ತಗುಲಿತ್ತು’ ಎಂದು ವಿಶ್ಲೇಷಿಸಿದರು.

ಇಂಗ್ಲೆಂಡ್ ಎದುರಿನ ಎರಡನೇ ಏಕದಿನ ಪಂದ್ಯ ಇಂದು

ಸರಣಿ ಕೈವಶದ ವಿಶ್ವಾಸದಲ್ಲಿ ಭಾರತ

ಲಂಡನ್ (ಪಿಟಿಐ): ಜಸ್‌ಪ್ರೀತ್ ಬೂಮ್ರಾ ದಾಳಿಗೆ ಒಲಿದ ಮೊದಲ ಪಂದ್ಯದ ಅಮೋಘ ಜಯದ ಹುಮ್ಮಸ್ಸಿನಲ್ಲಿರುವ ಭಾರತ ತಂಡವು ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಯನ್ನು ಕೈವಶ ಮಾಡಿಕೊಳ್ಳುವತ್ತ ಚಿತ್ತ ನೆಟ್ಟಿದೆ.

ಗುರುವಾರ ಲಾರ್ಡ್ಸ್ ಕ್ರೀಡಾಂಗಣದಲ್ಲಿ ನಡೆಯಲಿರುವ ಸರಣಿಯ ಎರಡನೇ ಪಂದ್ಯದಲ್ಲಿ ಜಯಿಸುವ ಛಲದಲ್ಲಿ ರೋಹಿತ್ ಶರ್ಮಾ ಬಳಗವಿದೆ. ಈಚೆಗೆ ಟಿ20 ಸರಣಿಯಲ್ಲಿ 2–1ರಿಂದ ಜಯಿಸಿದ್ದ ತಂಡವು ಮಂಗಳವಾರ ಮೊದಲ ಏಕದಿನ ಪಂದ್ಯದಲ್ಲಿ 10 ವಿಕೆಟ್‌ಗಳ ಜಯ ಸಾಧಿಸಿತ್ತು. ಆರು ವಿಕೆಟ್‌ಗಳನ್ನು ಉರುಳಿಸಿದ್ದ ಬೂಮ್ರಾ ಗೆಲುವಿನ ರೂವಾರಿಯಾಗಿದ್ದರು.

ಈ ಪಂದ್ಯದಲ್ಲಿಯೂ ಬೂಮ್ರಾ, ಶಮಿ ಮತ್ತು ಪ್ರಸಿದ್ಧ ಕೃಷ್ಣ ಅವರು ಸ್ಥಾನ ಉಳಿಸಿಕೊಳ್ಳುವುದು ಖಚಿತ. ಬ್ಯಾಟಿಂಗ್‌ನಲ್ಲಿ ಒಂದೊಮ್ಮೆ ವಿರಾಟ್ ಕೊಹ್ಲಿ ಮರಳಿದರೆ, ಶ್ರೇಯಸ್ ಅಯ್ಯರ್ ಸ್ಥಾನ ಬಿಟ್ಟುಕೊಡಬೇಕಾಗಬಹುದು. ಶ್ರೇಯಸ್ ಶಾರ್ಟ್ ಪಿಚ್ ಎಸೆತಗಳನ್ನು ಆಡುವಲ್ಲಿ ವಿಫಲರಾಗುತ್ತಿದ್ದಾರೆ. ಅಂತಹ ಎಸೆತಗಳನ್ನು ಸಮರ್ಥವಾಗಿ ಆಡಬಲ್ಲ ದೀಪಕ್ ಹೂಡಾ ಆಯ್ಕೆಯೂ ನಾಯಕನ ಮುಂದಿದೆ.

ಕಳೆದ ಕೆಲವು ಪಂದ್ಯಗಳಲ್ಲಿ ಲಯ ಕಳೆದುಕೊಂಡಿದ್ದ ರೋಹಿತ್, ಮೊದಲ ಹಣಾಹಣಿಯಲ್ಲಿ ಅಜೇಯ ಅರ್ಧಶತಕ ಗಳಿಸಿರುವುದು ಸಮಾಧಾನಕರ ಬೆಳವಣಿಗೆ. ಶಿಖರ್ ಧವನ್ ಇನ್ನೊಂದು ಅವಕಾಶ ಪಡೆಯುವುದು ಬಹುತೇಕ ದೃಢ. ಸೂರ್ಯಕುಮಾರ್ ಯಾದವ್, ಜಡೇಜ, ಹಾರ್ದಿಕ್ ಕೂಡ ಕಣಕ್ಕಿಳಿಯಲಿದ್ದಾರೆ.

ಆದರೆ, ಆತಿಥೇಯ ತಂಡವು ಬಹಳಷ್ಟು ಸುಧಾರಣೆಗಳೊಂದಿಗೆ ಕಣಕ್ಕಿಳಿಯುವ ಪ್ರಯತ್ನದಲ್ಲಿದೆ. ಪ್ರಥಮ ಪಂದ್ಯದಲ್ಲಿ ತಂಡದ ಜೇಸನ್, ರೂಟ್, ಸ್ಟೋಕ್ಸ್ ಮತ್ತು ಲಿಯಾಮ್ ಸೊನ್ನೆ ಸುತ್ತಿದ್ದರು. ಅಲ್ಲದೇ ಇನ್ನುಳಿದ ಪ್ರಮುಖ ಬ್ಯಾಟರ್‌ಗಳು ಎರಡಂಕಿ ಕೂಡ ತಲುಪಲಿಲ್ಲ. ಬ್ಯಾಟಿಂಗ್ ವೈಫಲ್ಯವನ್ನು ಸರಿಪಡಿಸಿಕೊಂಡರೆ, ಈ ಪಂದ್ಯದಲ್ಲಿ ಜಯಿಸುವ ಆಸೆ ಈಡೇರಬಹುದು. ಅದರೊಂದಿಗೆ ಇಂಗ್ಲೆಂಡ್‌ಗೆ ಸರಣಿ ಜಯದ ಕನಸು ಜೀವಂತವಾಗಿ ಉಳಿಯಬಹುದು.

ಪಂದ್ಯ ಆರಂಭ: ಸಂಜೆ 5.30ರಿಂದ
ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್, ಸೋನಿ ಲಿವ್

ಮುಖಾಮುಖಿ



ಜೋಸ್ ಬಟ್ಲರ್

ರೋಹಿತ್ ಶರ್ಮಾ

ಪಿಚ್ ಹೇಗಿದೆ?

ಲಾರ್ಡ್ಸ್ ಕ್ರೀಡಾಂಗಣದ ಪಿಚ್ ಮೊದಲಿನಿಂದಲೂ ಸ್ವಿಂಗ್ ಎಸೆತಗಳಿಗೆ ಹೆಚ್ಚು ಉತ್ತೇಜನ ನೀಡುವ ಗುಣ ಹೊಂದಿದೆ. ಇಲ್ಲಿ 70 ಏಕದಿನ ಪಂದ್ಯಗಳು ನಡೆದಿವೆ. ಅದರಲ್ಲಿ ಇಲ್ಲಿ ದಾಖಲಾದ ಗರಿಷ್ಠ ಮೊತ್ತ 238 ರನ್. ಎರಡೂ ಇನಿಂಗ್ಸ್‌ಗಳಲ್ಲಿಯೂ ಬೌಲರ್‌ಗಳಿಗೆ ಹೆಚ್ಚು ನೆರವು ದೊರಕುವ ಸ್ಥಳ ಇದಾಗಿದೆ.

ವಿರಾಟ್ ಅನುಮಾನ



ಗಾಯಗೊಂಡಿರುವ ವಿರಾಟ್ ಕೊಹ್ಲಿ ಲಾರ್ಡ್ಸ್ ಪಂದ್ಯದಲ್ಲಿಯೂ ಕಣಕ್ಕಿಳಿಯುವುದು ಖಚಿತವಾಗಿಲ್ಲ.

ತೊಡೆಯ ಸ್ನಾಯುವಿನ ನೋವಿನಿಂದಾಗಿ ಅವರು ಮೊದಲ ಏಕದಿನ ಪಂದ್ಯದಲ್ಲಿ ಆಡಿರಲಿಲ್ಲ. ಅವರು ಇನ್ನೂ ಸಂಪೂರ್ಣವಾಗಿ ಚೇತರಿಸಿಕೊಂಡಿಲ್ಲವೆನ್ನಲಾಗಿದ್ದು, ಪಂದ್ಯದ ದಿನ ಬೆಳಿಗ್ಗೆ ಅವರ ಫಿಟ್‌ನೆಸ್ ಕುರಿತು ವೈದ್ಯರ ತಂಡ ನೀಡುವ ಸಲಹೆಯ ನಂತರ ಆಡುವ ಬಗ್ಗೆ ನಿರ್ಧರಿಸಲಾಗುವುದು ಎಂದು ತಂಡದ ಮೂಲಗಳು ತಿಳಿಸಿವೆ.

ಏಕದಿನ ಸರಣಿ ಕಿವೀಸ್ ಕೈವಶ

ಮಲೈಡ್ (ಎಪಿ): ಮಿಚೆಲ್ ಬ್ರೆಸ್‌ವೆಲ್ (26ಕ್ಕೆ2 ಹಾಗೂ ಔಟಾಗದೆ 42) ಆಲ್‌ರೌಂಡ್ ಆಟದ ಬಲದಿಂದ ನ್ಯೂಜಿಲೆಂಡ್ ತಂಡವು 3 ವಿಕೆಟ್‌ಗಳಿಂದ ಐರ್ಲೆಂಡ್ ಎದುರು ಜಯಿಸಿತು. ಇದರೊಂದಿಗೆ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ 2–0 ಮುನ್ನಡೆ ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಐರ್ಲೆಂಡ್: 48 ಓವರ್‌ಗಳಲ್ಲಿ 216 (ಆ್ಯಂಡಿ ಮೆಕ್‌ಬ್ರಯನ್ 28, ಕರ್ಟಿಸ್ ಕ್ಯಾಂಪರ್ 25, ಡಾಕ್ರೆಲ್ 74, ಮಾರ್ಕ್ ಅಡೇರ್ ಔಟಾಗದೆ 27, ಮ್ಯಾಟ್ ಹೆನ್ರಿ 40ಕ್ಕೆ2, ಬ್ರೆಸ್‌ವೆಲ್ 26ಕ್ಕೆ2, ಮಿಚೆಲ್ ಸ್ಯಾಂಟನರ್ 32ಕ್ಕೆ2) ನ್ಯೂಜಿಲೆಂಡ್: 38.1 ಓವರ್‌ಗಳಲ್ಲಿ 7ಕ್ಕೆ219 (ಫಿನ್ ಅಲೆನ್ 60, ಟಾಮ್ ಲಥಾಮ್ 55, ಮಿಚೆಲ್ ಬ್ರೆಸ್‌ವೆಲ್ ಔಟಾಗದೆ 42, ಮಾರ್ಕ್ ಅಡೇರ್ 29ಕ್ಕೆ2, ಸಿಮಿ ಸಿಂಗ್ 51ಕ್ಕೆ2) ಫಲಿತಾಂಶ: ನ್ಯೂಜಿಲೆಂಡ್ ತಂಡಕ್ಕೆ 3 ವಿಕೆಟ್‌ಗಳ ಜಯ. ಸರಣಿಯಲ್ಲಿ 2–0 ಮುನ್ನಡೆ.

ಪುರುಷರ ಗುಪ್ತ ಸಮಸ್ಯೆ
ಮನ್ಸೂನ್ ಆಫರ್!
50% ಡಿಸ್ಕೌಂಟ್

ಸೆಕ್ಸ್ ಸಮಯ ಸಣ್ಣ ಇಂದ್ರಿಯ?, ಸ್ವಪ್ನದೋಷ?, ನಪುಂಸಕತೆಗೆ? ಗ್ಯಾರಂಟೀಡ್ ಆಯುರ್ವೇದಿಕ್ ಸಲಹೆ, ಲಕ್ಷಾಂತರ ಮಂದಿ ಸಂತುಷ್ಟಗೊಂಡಿದ್ದಾರೆ.
8006973372

ಲೈಂಗಿಕ ಸಮಸ್ಯೆ

ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ. ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ. ದಾಂಪತ್ಯ ಜೀವನದ ಅಸಲಿ ಆನಂದ ಪಡೆಯಿರಿ. ಇಂದೇ ಖರೀದಿಸಿದಲ್ಲಿ 50% ಡಿಸ್ಕೌಂಟ್ ಪಡೆಯಿರಿ
ನಿಮ್ಮ ಸಮಸ್ಯೆಗೆ ಸತ್ಯ ಹಾಗೂ ಆಯುರ್ವೇದಿಕ ಔಷಧಿ ಪಡೆಯಿರಿ ಮತ್ತು ಆನಂದಮಯ ಜೀವನ ನಿಮ್ಮದಾಗಿಸಿಕೊಳ್ಳಿ.
02262676816

ಕಿಕ್ ಬಾಕ್ಸಿಂಗ್ ಪಟು ನಿಖಿಲ್ ಸಾವು: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಮೈಸೂರು: ಕೆ–ಒನ್ ಅಸೋಸಿಯೇಷನ್ ಆಫ್ ಕರ್ನಾಟಕ ಆಯೋಜಿಸಿದ್ದ ಕಿಕ್ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಗಾಯಗೊಂಡಿದ್ದ ನಗರದ ಹೊಸಕೇರಿಯ ಕಿಕ್ ಬಾಕ್ಸರ್ ಎಸ್.ನಿಖಿಲ್ (23) ಚಿಕಿತ್ಸೆ ಫಲಿಸದೆ ಬುಧವಾರ ಮೃತಪಟ್ಟರು.

‘ಪಂದ್ಯದಲ್ಲಿ ನಿಖಿಲ್‌ಗೆ ಪೆಟ್ಟು ಬಿದ್ದಿರುವುದಾಗಿ ಸಹಾಯಕ ಕೋಚ್‌ಗಳು ಭಾನುವಾರ ಸಂಜೆ ತಿಳಿಸಿದ್ದರು. ನಿಖಿಲ್ ತಂದೆ ಸುರೇಶ್ ಅವರೊಂದಿಗೆ ಅಂದು ರಾತ್ರಿಯೇ ಬೆಂಗಳೂರಿಗೆ ತೆರಳುವಷ್ಟರಲ್ಲಿ ನಾಗರಬಾವಿಯ ಜಿ.ಎಂ.ಆಸ್ಪತ್ರೆಗೆ ದಾಖ-ಲಿಸಲಾಗಿತ್ತು. ಪ್ರಜ್ಞೆ ಕಳೆದುಕೊಂಡಿದ್ದ ನಿಖಿಲ್‌ಗೆ ಪ್ರಾರಂಭದ 30 ನಿಮಿಷ ಆಮ್ಲಜನಕ ವ್ಯವಸ್ಥೆ ಇರಲಿಲ್ಲವೆಂದು ವೈದ್ಯರು ಹೇಳಿದ್ದರು’ ಎಂದು ಕೋಚ್ ವಿಕ್ರಂ ‘ಪ್ರಜಾವಾಣಿ’ಗೆ ತಿಳಿಸಿದರು.

‘ಆಯೋಜಕರು ಯಾವುದೇ ಆಂಬುಲೆನ್ಸ್, ಸ್ಟ್ರೆಚರ್ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿರ-ಲಿಲ್ಲ. ಘಟನೆಯು 5ನೇ ಮಹಡಿಯಲ್ಲಿ ನಡೆದಿದ್ದು, ಸ್ಟ್ರೆಚರ್ ಕೂಡ ಇಲ್ಲದೆ ಕೆಳಮಹಡಿಗೆ ಹೊತ್ತು ತಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು.

ನಿಖಿಲ್

ಆಮ್ಲಜನಕದ ಸೌಲಭ್ಯ ಸಿಗದಿದ್ದರಿಂದ ಶ್ವಾಸಕೋಶಕ್ಕೆ ಹೆಚ್ಚು ಹಾನಿಯಾಗಿತ್ತು. ರಕ್ತಸ್ರಾವವೂ ಹೆಚ್ಚಾಗಿತ್ತು. ಸೋಮವಾರ ಸಿ.ಟಿ ಸ್ಕ್ಯಾನ್‌ನಲ್ಲೂ ಸ್ಥಿತಿ ಗಂಭೀರವಾಗಿ ಕಂಡು ಬಂದಿತ್ತು’ ಎಂದರು.

‘ಮಣಿಪಾಲ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ದಾಖಲಿಸಿದರೂ ಸ್ಪಂದಿಸಲಿಲ್ಲ. ಆಯೋಜಕರ ನಿರ್ಲಕ್ಷ್ಯದಿಂದಲೇ ಉತ್ತಮ ಕ್ರೀಡಾಪಟುವನ್ನು ಕಳೆದು-ಕೊಂಡಂತಾಗಿದೆ. ಮಾರ್ಷಲ್ ಆರ್ಟ್ಸ್ ಕುಟುಂಬದ ನಿಖಿಲ್ ಉತ್ತಮ ಅಥ್ಲೀಟ್ ಆಗುವ ಕನಸು ಕಂಡಿದ್ದರು’ ಎಂದರು.

ಕಿಕ್ ಬಾಕ್ಸಿಂಗ್ ಆಯೋಜಕರಿಗೆ ಕರೆ ಮಾಡಿದಾಗ ಮೊಬೈಲ್ ಸ್ವಿಚ್ಡ್ ಆಫ್ ಆಗಿತ್ತು. ಬೆಂಗಳೂರಿನ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೊ ಫರಾ

ನಾನೀಗ ನಿರಾಳ: ಮೊ ಫರಾ

ಲಂಡನ್ (ಎಎಫ್‌ಪಿ): ಒಲಿಂಪಿಯನ್ ಮೊ ಫರಾ ಈಗ ನಿರಾಳರಾಗಿದ್ದಾರೆ. ಬ್ರಿಟಿಷ್ ಸರ್ಕಾರವು ಅವರಿಗೆ ಸಂಪೂರ್ಣವಾಗಿ ಬೆಂಬಲ ನೀಡುವುದಾಗಿ ತಿಳಿಸಿರುವುದೇ ಇದಕ್ಕೆ ಕಾರಣ.

ಮಾನವ ಕಳ್ಳಸಾಗಣೆ ಮಾಫಿಯಾವು ತಮ್ಮನ್ನು ಬಾಲ್ಯದಲ್ಲಿ ಯುನೈಟೆಡ್ ಕಿಂಗ್‌ಡಮ್‌ಗೆ ಅಕ್ರಮವಾಗಿ ಕರೆತಂದಿತ್ತು ಎಂದು ಮೊ ಫರಾ ಬಿಬಿಸಿ ವಾಹಿನಿಯ ಸಾಕ್ಷ್ಯ ಚಿತ್ರದಲ್ಲಿ ಹೇಳಿಕೊಂಡಿದ್ದರು. ಇದರಿಂದಾಗಿ ಬ್ರಿಟಿಷ್ ಸರ್ಕಾರವು ಅವರ ನಾಗರಿಕ-ತ್ವವನ್ನು ಮುಂದುವರಿಸುವುದೇ ಎಂಬ ಚರ್ಚೆಗಳು ನಡೆದಿದ್ದವು.

ಈ ಕುರಿತು ಪ್ರತಿಕ್ರಿಯಿಸಿರುವ ಪ್ರಧಾನಿಗಳ ವಕ್ತಾರ, ‘ಮೊ ಫರಾ ಕ್ರೀಡಾ ತಾರೆ. ಅವರು ದೇಶದ ಹಲವಾರು ಜನರಿಗೆ ಸ್ಫೂರ್ತಿಯಾಗಿದ್ದಾರೆ. ಈ ರೀತಿ ಮಾಫಿಯಾಗಳಿಂದ ಮಾನವ ಕಳ್ಳಸಾಗ-ಣೆಯಲ್ಲಿ ಸಿಲುಕಿಕೊಂಡವರು ಬಹಳಷ್ಟು ಯಾತನೆಗಳನ್ನು ಅನುಭವಿಸುತ್ತಾರೆ. ಇಂತಹ ಕ್ರೂರ ಮಾಫಿಯಾಗಳನ್ನು ಮಟ್ಟ ಹಾಕಲು ನಮ್ಮ ಸರ್ಕಾರ ಕಟಿಬ-ದ್ಧವಾಗಿದೆ’ ಎಂದಿದ್ದಾರೆ.

‘ನಾನೀಗ ನಿರಾಳನಾಗಿದ್ದೇನೆ. ಬ್ರಿಟನ್ ಸರ್ಕಾರವು ತೋರಿರುವ ಗೌರವ ಮತ್ತು ನೀಡಿರುವ ಅವಕಾಶಕ್ಕೆ ಋಣಿಯಾಗಿರುವೆ’ ಎಂದು ಫರಾ ಹೇಳಿದ್ದಾರೆ.

ಬ್ಯಾಡ್ಮಿಂಟನ್: ಅಸ್ಮಿತಾ, ಸಿಂಧು, ಪ್ರಣಯ್ ಜಯಭೇರಿ

ಮಿಥುನ್‌ಗೆ ಮಣಿದ ಶ್ರೀಕಾಂತ್

ಸಿಂಗಪುರ (ಪಿಟಿಐ): ಭಾರತದ ಮಿಥುನ್ ಮಂಜುನಾಥ್ ಮತ್ತು ಅಸ್ಮಿತಾ ಚಲಿಹಾ ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಅಚ್ಚರಿಯ ಜಯ ಸಂಪಾದಿಸಿದರು. ಇಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಪಿ.ವಿ. ಸಿಂಧು, ಎಚ್.ಎಸ್.ಪ್ರಣಯ್ ಮತ್ತು ಸೈನಾ ನೆಹ್ವಾಲ್ ಕೂಡ ಶುಭಾರಂಭ ಮಾಡಿದರು.

ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಕರ್ನಾಟಕದ ಮಿಥುನ್ 21-17, 15-21, 21-18ರಿಂದ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ, ಭಾರತದ ಕಿದಂಬಿ ಶ್ರೀಕಾಂತ್ ಅವರನ್ನು ಮಣಿಸಿದರು. ಅಸ್ಮಿತಾ 21-16, 21-11ರಿಂದ ಥಾಯ್ಲೆಂಡ್ ಆಟಗಾರ್ತಿ, ವಿಶ್ವ ರ‍್ಯಾಂಕಿಂಗ್‌ನಲ್ಲಿ 12ನೇ ಸ್ಥಾನದಲ್ಲಿ-ರುವ ಬುಸನನ್ ಒಂಗ್‌ಬಮ್ರುಂಗ್‌ಪನ್ ಅವರಿಗೆ ಸೋಲುಣಿಸಿದರು.

ಮಿಥುನ್– ಟ್ವಿಟರ್ ಚಿತ್ರ

ಶ್ರೀಕಾಂತ್ ಎದುರಿನ ಪಂದ್ಯದ ಆರಂಭದಲ್ಲಿ 6–2ರಿಂದ ಮುನ್ನಡೆ ಸಾಧಿಸಿದ ಮಿಥುನ್, ಅದೇ ಲಯದೊಂದಿಗೆ ಮೊದಲ ಗೇಮ್ ತಮ್ಮದಾ-ಗಿಸಿಕೊಂಡರು. ಎರಡನೇ ಗೇಮ್‌ನಲ್ಲಿ ತಿರುಗೇಟು ನೀಡಿದ ಶ್ರೀಕಾಂತ್, ವಿರಾಮದ ವೇಳೆಗೆ 11–8ರಿಂದ ಮುಂದಿದ್ದರು. ಗೇಮ್‌ನ ಅಂತ್ಯದವರೆಗೆ ಮೇಲುಗೈ ಕಾಯ್ದುಕೊಂಡರು. ನಿರ್ಣಾಯಕ ಮೂರನೇ ಗೇಮ್ ರಂಗೇರಿತು. ಆರಂಭದಲ್ಲಿ ಮಿಥುನ್ ಮುನ್ನಡೆ ಸಾಧಿಸಿದರೂ, ಒಂದು ಹಂತದಲ್ಲಿ ಶ್ರೀಕಾಂತ್ 16–15ಕ್ಕೆ ತಲುಪಿದ್ದರು. ಆದರೆ ಕೊನೆ ಕ್ಷಣಗಳ ಒತ್ತಡ ಮೀರುವಲ್ಲಿ ಮಿಥುನ್ ಯಶಸ್ವಿಯಾಗಿ ಗೆಲುವಿನ ಸಂಭ್ರಮದಲ್ಲಿ ಮಿಂದರು.

ಸಿಂಧು 21-15, 21-11ರಿಂದ ಬೆಲ್ಜಿಯಂನ ಲಿಯೆನ್ ಟಾನ್ ಸವಾಲು ಮೀರಿದರೆ, ಪ್ರಣಯ್ 21-13, 21-16ರಿಂದ ಥಾಯ್ಲೆಂಡ್‌ನ ಸಿತ್ತಿಕೋಮ್ ತಮ್ಮಾಸಿನ್ ಅವರನ್ನು ಮಣಿಸಿದರು. ಸೈನಾ ನೆಹ್ವಾಲ್ ಕೂಡ ಮೊದಲ ತಡೆ ದಾಟುವಲ್ಲಿ ಯಶಸ್ವಿಯಾದರು. ಅವರು 21-18, 21-14ರಿಂದ ಭಾರತದವರೇ ಆದ ಮಾಳವಿಕಾ ಬನ್ಸೋದ್ ವಿರುದ್ಧ ಪಾರಮ್ಯ ಮೆರೆದರು.

ಪೂಜಾ ದಂಡು– ಆರತಿ ಸಾರಾ ಸುನಿಲ್ ಮಹಿಳಾ ಡಬಲ್ಸ್‌ನಲ್ಲಿ ಎರಡನೇ ಸುತ್ತು ತಲುಪಿದರು. ಚೀನಾ ತೈಪೆಯ ಹು ಲಿಂಗ್ ಫಾಂಗ್ ಮತ್ತು ಲಿನ್ ಕ್ಸಿಯಾವೊ ಹಿಂದೆ ಸರಿದ ಕಾರಣ ಭಾರತದ ಜೋಡಿಗೆ ವಾಕ್‌ಓವರ್ ಲಭಿಸಿತು.

ಮಹಿಳಾ ವಿಶ್ವಕಪ್ ಹಾಕಿ: ಭಾರತಕ್ಕೆ 9ನೇ ಸ್ಥಾನ

ಟೆರಸ್ಸಾ, ಸ್ಪೇನ್ (ಪಿಟಿಐ): ನವನೀತ್ ಕೌರ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಭಾರತ ಮಹಿಳಾ ತಂಡವು ವಿಶ್ವಕಪ್ ಹಾಕಿ ಟೂರ್ನಿಯ ತನ್ನ ಕೊನೆಯ ಪಂದ್ಯದಲ್ಲಿ ಜಪಾನ್ ಎದುರು ಗೆದ್ದಿತು. ಇದರೊಂದಿಗೆ ಟೂರ್ನಿಯನ್ನು 9ನೇ ಸ್ಥಾನದೊಂದಿಗೆ ಕೊನೆಗೊಳಿಸಿತು.

ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ ಸವಿತಾ ಪೂನಿಯಾ ನಾಯಕತ್ವದ ತಂಡ 3–1ರಿಂದ ಜಯ ಸಾಧಿಸಿತು. ನವನೀತ್ 30 ಮತ್ತು 45ನೇ ನಿಮಿಷಗಳಲ್ಲಿ ಗೋಲು ಹೊಡೆದರು. ದೀಪ್ ಗ್ರೇಸ್ ಎಕ್ಕಾ (38ನೇ ನಿ.)ಕೂಡ ಮಿಂಚಿದರು. ಜಪಾನ್‌ನ ಏಕೈಕ ಗೋಲು 20ನೇ ನಿಮಿಷದಲ್ಲಿ ಯು ಅಸಾಯಿ ಗಳಿಸಿದರು.

ಸಂಕ್ಷಿಪ್ತ ಸುದ್ದಿ

ಗೋವಾಗೆ ಗೌರಮಾಂಗಿ ಸಹಾಯಕ ಕೋಚ್

ಪಣಜಿ (ಪಿಟಿಐ): ಭಾರತ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಗೌರಮಾಂಗಿ ಸಿಂಗ್ ಅವರು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫ್ರಾಂಚೈಸ್ ಎಫ್‌ಸಿ ಗೋವಾಕ್ಕೆ ಸಹಾಯಕ ಕೋಚ್ ಆಗಿ ನೇಮಕ-ಗೊಂಡಿದ್ದಾರೆ.ರಾಷ್ಟ್ರೀಯ ತಂಡದ ಪರ ಗೌರಮಾಂಗಿ 70 ಪಂದ್ಯಗಳನ್ನು ಅವರು ಆಡಿದ್ದಾರೆ.

ಗೌರಮಾಂಗಿ

ಬರೋಡಾ ತಂಡಕ್ಕೆ ಅಂಬಟಿ ರಾಯುಡು

ವಡೋದರಾ (ಪಿಟಿಐ): ಅನುಭವಿ ಬ್ಯಾಟರ್ ಅಂಬಟಿ ರಾಯುಡು ಮುಂಬರುವ ದೇಶಿ ಕ್ರಿಕೆಟ್ ಋತುವಿನಲ್ಲಿ ಆಡುವ ಸಿದ್ಧತೆಗಾಗಿ ಬರೋಡಾ ತಂಡಕ್ಕೆ ಮರಳಿದ್ದಾರೆ.

ಈ ಹಿಂದೆಯೂ ರಾಯುಡು ಬರೋಡಾ ತಂಡವನ್ನು ಪ್ರತಿನಿಧಿ-ಸಿದ್ದರು. ಅವರು ಇದುವರೆಗೆ ಒಟ್ಟು 97 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ.

55 ಅಂತರರಾಷ್ಟ್ರೀಯ ಏಕದಿನ ಪಂದ್ಯ ಮತ್ತು ಆರು ಟಿ20 ಪಂದ್ಯಗಳಲ್ಲಿ ಆಡಿದ್ದಾರೆ.

ಆಯುರ್ವೇದಿಕ ಔಷಧಿ
ಚತುರ್ಭುಜ®
ತೈಲ ಮತ್ತು ಟ್ಯಾಬ್ಲೆಟ್
ಎರಡನ್ನೂ ಬಳಸುವ ಮೂಲಕ ಜನರು ತ್ವರಿತವಾಗಿ ಮತ್ತು ವೇಗವಾಗಿ ಪರಿಹಾರ ಪಡೆಯುತ್ತಿದ್ದಾರೆ



ಕೌಶಲ್ ಕಿಶೋರ್ ಆನಂದ್ (ವ್ಯಾಪಾರಿ)

ಕಳೆದ 15 ವರ್ಷಗಳಿಂದ ನನಗೆ ಮಂಡಿ ನೋವು ಪೀಡಿಸುತ್ತಲಿತ್ತು. ಹಲವಾರು ಚಿಕಿತ್ಸೆ ಪಡೆದುಕೊಂಡು, ತೈಲ ಇತ್ಯಾದಿಗಳನ್ನು ಬಳಸಿದರು ಕೂಡ ನಡೆದಾಡಲು ಮತ್ತು ಮೆಟ್ಟಿಲು ಏರಲು ಕಷ್ಟವಾಗುತ್ತಿತ್ತು. ನಾನು ಎಲ್ಲಿಯೂ ತಿರುಗಾಡಲು ಸಾಧ್ಯವಾಗುತ್ತಿರಲಿಲ್ಲ. ನಂತರದ ದಿನಗಳಲ್ಲಿ ಚತುರ್ಭುಜ ತೈಲ ಮತ್ತು ಚತುರ್ಭುಜ ಟ್ಯಾಬ್ಲೆಟ್ ಕುರಿತ ಮಾಹಿತಿ ಸಿಕ್ಕ ಬಳಿಕ, ದಿನಕ್ಕೆ ಎರಡು ಬಾರಿ (ಬೆಳಗ್ಗೆ 1 ಮತ್ತು ರಾತ್ರಿ 1) ಚತುರ್ಭುಜ ಟ್ಯಾಬ್ಲೆಟ್ ಸೇವಿಸಲು ಪ್ರಾರಂಭಿಸಿದೆ ಹಾಗೂ ದಿನಕ್ಕೆ ಮೂರು ಬಾರಿ 8 ರಿಂದ 10 ಎಂ.ಎಲ್ ಚತುರ್ಭುಜ ತೈಲ ಹಾಕಿಕೊಂಡು 15 – 20 ನಿಮಿಷ ಚನ್ನಾಗಿ ಮಾಲಿಷ್ ಮಾಡಿಕೊಂಡೆ. ಮುಲಾಜಿಲ್ಲದೆ ಸಾಕಷ್ಟು ತೈಲದಿಂದ ಮಾಲಿಷ್ ಮಾಡಿಕೊಂಡೆ, ಏಕೆಂದರೆ ನನ್ನ ನೋವು ಚರ್ಮದ ಮೇಲೆ ಇಲ್ಲ ಕೀಲು, ಸ್ನಾಯು ಮತ್ತು ಮೂಳೆಗಳ ಆಳದಲ್ಲಿದೆ ಎಂದು ನನಗೆ ತಿಳಿದಿತ್ತು. ಆದ್ದರಿಂದ, ನಾನು ಸಾಕಷ್ಟು ಪ್ರಮಾಣದ ತೈಲದಿಂದ ಮಾಲಿಷ್ ಮಾಡಿಕೊಂಡೆ ಹೀಗಾಗಿ, ತೈಲವು ಆಳದವರೆಗೂ ತಲುಪಿತು ಮತ್ತು ಬಹು ಬೇಗನೆಯೇ ನನಗೆ ಪ್ರಯೋಜನವಾಯಿತು. ಈಗ ನಾನು ಓಡುತ್ತಲೇ ಮನೆಯ ಮೆಟ್ಟಿಲುಗಳನ್ನು ಏರಬಲ್ಲವನಾಗಿದ್ದೇನೆ ಮತ್ತು ನನಗೆ ಎಲ್ಲಿಗೆ ಬೇಕೊ ಅಲ್ಲಿಗೆ ನಡೆದಾಡಿಕೊಂಡೇ ಹೋಗಬಲ್ಲವನಾಗಿದ್ದೇನೆ. ನನ್ನ ಕುಟುಂಬ ಸದಸ್ಯರು ಈ ಚತುರ್ಭುಜ ತೈಲ ಮತ್ತು ಚತುರ್ಭುಜ ಟ್ಯಾಬ್ಲೆಟ್‌ಗಳನ್ನು ಇನ್ನೂ ಅನೇಕ ನೋವುಗಳಿಗಾಗಿ ಉಪಯೋಗಿಸುತ್ತಿದ್ದಾರೆ ಮತ್ತು ಗುಣಮುಖರಾಗುತ್ತಿದ್ದಾರೆ. ನನಗಂತೂ ಇದರ ಫಲಿತಾಂಶವು ಸಾಕಷ್ಟು ತೃಪ್ತಿ ನೀಡಿದೆ. ಈ ನನ್ನ ವ್ಯಕ್ತಿಗತ ಅನುಭವವನ್ನು ಎಲ್ಲ ಜನರೂ ನೋವುನಿಂದ ಮುಕ್ತರಾಗಲಿ ಎಂಬ ಏಕೈಕ ಸದುದ್ದೇಶದಿಂದ ನೀಡುತ್ತಿದ್ದೇನೆ.

ಸೂಚನೆ: ಸಾರ್ವಜನಿಕ ಹಿತಾಸಕ್ತಿ ಮಾಹಿತಿ. ಕೀಲುನೋವಿನಿಂದ ಪರಿಹಾರ ಪಡೆಯಿರಿ.
ಎಲ್ಲಾ ಮೆಡಿಕಲ್ ಮತ್ತು ಆಯುರ್ವೇದಿಕ ಮಳಿಗೆಗಳಲ್ಲಿ ಲಭ್ಯ.